ಶುಕ್ರವಾರ, ನವೆಂಬರ್ 3, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂಭ್ರಮ

ಉತ್ತರಪ್ರದೇಶದ ಮೊರಾದಾಬಾದ್‌ನಲ್ಲಿ ನಡೆದ 'ಒನ್ ಡೇ ಫಾರ್ ಚಿಲ್ಡ್ರನ್' ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರು ಮುಖಕ್ಕೆ ಬಣ್ಣಹಚ್ಚಿಕೊಂಡು ಪಾಲ್ಗೊಂಡಿದ್ದರು

ಕರ್ನಾಟಕ ಸಂಭ್ರಮ–50 ಜ್ಯೋತಿ ರಥಯಾತ್ರೆಗೆ ಚಾಲನೆ ನೀಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ

ವಿಜಯನಗರ ವೈಭವ ಮರಳಿಸುವುದು ಆದ್ಯತೆ

ಪ್ರಜಾವಾಣಿ ವಾರ್ತೆ

ಹಂಪಿಯಲ್ಲಿ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೀಪಸ್ತಂಭದಲ್ಲಿ ಜ್ಯೋತಿ ಬೆಳಗಿಸುವ ಮೂಲಕ ಕರ್ನಾಟಕ ಸಂಭ್ರಮ–50 ಜ್ಯೋತಿ ರಥಯಾತ್ರೆಗೆ ಚಾಲನೆ ನೀಡಿದರು. ಸಚಿವರಾದ ಎಚ್‌.ಕೆ.ಪಾಟೀಲ, ಜಮೀರ್ ಅಹ್ಮದ್ ಖಾನ್ ಇದ್ದರು (ಮೊದಲ ಚಿತ್ರ). ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಥಯಾತ್ರೆಗೆ ಚಾಲನೆ ನೀಡಿದ ಬಳಿಕ ಸಿದ್ದರಾಮನ ಹುಂಡಿಯ ಕಲಾವಿದರೊಂದಿಗೆ ವೀರ ಮಕ್ಕಳ ಕುಣಿತದಲ್ಲಿ ಪಾಲ್ಗೊಂಡು ಹೆಜ್ಜೆ ಹಾಕಿದರು – ಪ್ರಜಾವಾಣಿ ಚಿತ್ರಗಳು/ ಲವ ಕೆ., ಸತೀಶ್ ಮುರಾಳ್

ಹೊಸಪೇಟೆ (ವಿಜಯನಗರ): 'ಯಾವ ಮೌಢ್ಯವನ್ನೂ ನಂಬುವವ ನಾನಲ್ಲ. ಜನರು ಐದು ವರ್ಷ ಅಧಿಕಾರ ನಡೆಸಲು ಆದೇಶ ನೀಡಿದ್ದಾರೆ. ವಿಜಯನಗರ ಅರಸರ ಕಾಲದ ವೈಭವ ಮತ್ತು ಅಭಿವೃದ್ಧಿ ರಾಜ್ಯದಲ್ಲಿ ಮರಳಿಸುವುದು ನಮ್ಮ ಆದ್ಯತೆಯಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ರಾಜ್ಯಕ್ಕೆ ಕರ್ನಾಟಕ ಎಂಬ ನಾಮಕರಣ ಮಾಡಿ 50 ವರ್ಷ ತುಂಬಿದ ಪ್ರಯುಕ್ತ ಗುರುವಾರ ಹಂಪಿಯ ವಿರೂಪಾಕ್ಷ ದೇವಸ್ಥಾನದ ಎದುರು ಬಸವಣ್ಣ ಮಂಟಪ ಸಮೀಪ ಜ್ಯೋತಿ ರಥಯಾತ್ರೆಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಬಸವಣ್ಣನವರೂ ಸೇರಿ ಶರಣರು ಮೌಢ್ಯದ ವಿರುದ್ಧ ಹೋರಾಡಿ, ಜಾಗೃತಿ ಮೂಡಿಸಿದ್ದರು. ನಾನೂ ಕೂಡ ಮೌಢ್ಯವನ್ನು ಧಿಕ್ಕರಿಸಿ ಈ ನಾಡಿನ ಜನರ ಮೇಲೆ ನಂಬಿಕೆ ಇಟ್ಟಿದ್ದೇನೆ. ದೇವರಲ್ಲಿ, ದೇವರು ಎನ್ನುವ ಶಕ್ತಿಯಲ್ಲಿ ನನಗೆ ನಂಬಿಕೆ ಇದೆ' ಎಂದು ಸ್ಪಷ್ಟಪಡಿಸಿದರು.

₹ 3000 ಕೋಟಿ ಅನುದಾನ ನೀಡಿದ್ದೇನೆ: 'ಇದು ಬಸವಣ್ಣನ ನಾಡು. ಕಲ್ಯಾಣ ಕರ್ನಾಟಕ ಎಂದು ಕೇವಲ ಹೆಸರಿಟ್ಟರೆ ಸಾಲದು. ನಿಜವಾದ ಅರ್ಥದಲ್ಲಿ ಈ ಭಾಗದ ಜನರು ಕಲ್ಯಾಣ ಕಾಣಬೇಕು ಎನ್ನುವ ಗುರಿ ಇಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ. ಈ ಉದ್ದೇಶದಿಂದಲೇ 371 (ಜೆ) ಜಾರಿ ಮಾಡಿದೆವು. ಇದರಿಂದ ಈ ಭಾಗಕ್ಕೆ ಹೆಚ್ಚು ಹೆಚ್ಚು ಅನುದಾನ ಹಾಗೂ ಅವಕಾಶಗಳು ಸೃಷ್ಟಿಯಾಗಿವೆ. ನಾನು ಮುಖ್ಯಮಂತ್ರಿ ಆದ ಬಳಿಕ ಬಾಕಿ ಇದ್ದ ಅನುದಾನದ ಜತೆಗೆ ಹೆಚ್ಚುವರಿಯಾಗಿ ಈ ಭಾಗಕ್ಕೆ ₹ 3000 ಕೋಟಿ ಅನುದಾನ ನೀಡಿದ್ದೇನೆ' ಎಂದರು.

'ಕನ್ನಡ ಬದುಕನ್ನು ಉನ್ನತೀಕರಿಸುವ ಆಶಯದಿಂದ ಏಕೀಕರಣ ಚಳವಳಿ ನಡೆದು ಹಲವರ ಪ್ರಾಣ ತ್ಯಾಗವನ್ನೂ ಪಡೆದು ವಿಶಾಲ ಕನ್ನಡ ನಾಡು ಉದಯವಾಗಿದೆ. ಕರ್ನಾಟಕ ನಾಮಕರಣಗೊಂಡು 50ನೇ ವರ್ಷಕ್ಕೆ ಬಿಜೆಪಿ ಇಡೀ ವರ್ಷ ಕನ್ನಡ ಸಂಭ್ರಮವನ್ನು ಆಚರಿಸಬೇಕಿತ್ತು. ಅವರು ಆಚರಿಸಲಿಲ್ಲ. ಆದರೆ ನಮ್ಮ ಸರ್ಕಾರ ಬಂದ ತಕ್ಷಣ ಮೊದಲ ಬಜೆಟ್ ನಲ್ಲೇ 'ಕನ್ನಡ ಸಂಭ್ರಮ-50' ಅನ್ನು ಘೋಷಿಸಿದೆ. ನಾವು ಕರ್ತವ್ಯಲೋಪ ಮಾಡಲಿಲ್ಲ' ಎಂದರು.

ಕನ್ನಡ ಕಾವಲು ಸಮಿತಿಯ ಮೊದಲ ಅಧ್ಯಕ್ಷನಾಗಿ ಆಡಳಿತದಲ್ಲಿ ಕನ್ನಡ ಪರಿಣಾಮಕಾರಿಯಾಗಿ ಜಾರಿ ಆಗಲು ರಾಜ್ಯದಾದ್ಯಂತ ಸುತ್ತಾಡಿದೆ. ಎಲ್ಲಾ ಕಚೇರಿಗಳಿಗೆ ಕನ್ನಡ ಟೈಪಿಂಗ್ ಯಂತ್ರವನ್ನು ನೀಡಿ ಐಎಎಸ್ ಅಧಿಕಾರಿಗಳೂ ಕೂಡ ಕನ್ನಡವನ್ನು ಆಡಳಿತ ಭಾಷೆಯಾಗಿ ಬಳಸಲು ಪ್ರೇರಣೆ ನೀಡಿದ್ದೆ ಎಂದು ಸ್ಮರಿಸಿದರು.

'ಇತರೆ ಭಾಷೆಗಳನ್ನು ಕಲಿಯಿರಿ, ಗೌರವಿಸಿರಿ. ಆದರೆ ಕನ್ನಡದಲ್ಲೇ ವ್ಯವಹರಿಸಿರಿ ಎಂದು ಕರೆ ನೀಡಿದ ಅವರು, ಕನ್ನಡ ಜ್ಯೋತಿಯನ್ನು ರಾಜ್ಯದಾದ್ಯಂತ ಸಂಭ್ರಮದಿಂದ ಸ್ವಾಗತಿಸಿ' ಎಂದು ಸೂಚನೆ ನೀಡಿದರು.

ಶಾಸಕ ಎಚ್‌.ಆರ್‌.ಗವಿಯಪ್ಪ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ, ಪ್ರವಾಸೋದ್ಯಮ ಸಚಿವ ಎಚ್‌.ಕೆ.ಪಾಟೀಲ, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಹಲವು ಶಾಸಕರು ಇದ್ದರು.

ವೀರಮಕ್ಕಳ ಜತೆ ಸಿ.ಎಂ ಹೆಜ್ಜೆ

ಸಂಜೆ ವಿರೂಪಾಕ್ಷ ದೇವಸ್ಥಾನಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರೂಪಾಕ್ಷನ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ತಾಯಿ ಭುವನೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಸುಮಾರು 50 ಜಾನಪದ ತಂಡಗಳನ್ನು ಒಳಗೊಂಡ ಮೆರವಣಿಗೆಗೆ ಚಾಲನೆ ನೀಡಿ, ಅದರೊಂದಿಗೆ ಹೆಜ್ಜೆ ಹಾಕುತ್ತ ಎದುರು ಬಸವಣ್ಣ ಮಂಟಪದ ಬಳಿಗೆ ಬಂದರು.

ದೇವರಾಜ ಅರಸು ಅವರು 50 ವರ್ಷಗಳ ಹಿಂದೆ ಉರಿಸಿದ್ದು ಎನ್ನಲಾದ ದೀಪ-ಸ್ತಂಭದಲ್ಲೇ ಮುಖ್ಯಮಂತ್ರಿ ಅವರು ಜ್ಯೋತಿ ಬೆಳಗಿದರು ಹಾಗೂ ಇಡೀ ರಾಜ್ಯದಾದ್ಯಂತ ಸಂಚರಿಸಲಿರುವ ಜ್ಯೋತಿ ರಥಯಾತ್ರೆಗೆ ಈ ಮೂಲಕ ಚಾಲನೆ ನೀಡಿದರು. ಕೊನೆಯಲ್ಲಿ ಸಿದ್ದರಾಮಯ್ಯ ಹುಂಡಿಯ ಕಲಾವಿದರಿಂದ ನಡೆದ ವೀರ ಮಕ್ಕಳ ಕುಣಿತದಲ್ಲಿ ತಾವೂ ಪಾಲ್ಗೊಂಡು ಸಂಭ್ರಮಪಟ್ಟರು.

ಹಾಸನಾಂಬ ದೇಗುಲದ ಗರ್ಭಗುಡಿಯ ಬಾಗಿಲು ತೆರೆದ ಸಂದರ್ಭದಲ್ಲಿ ಉರಿಯುತ್ತಿದ್ದ ದೀಪಗಳು

ದರ್ಶನ ನೀಡಿದ ಹಾಸನಾಂಬೆ

ಹಾಸನ: ನಗರದ ಹಾಸನಾಂಬ ದೇಗುಲದ ಗರ್ಭಗುಡಿಯ ಬಾಗಿಲನ್ನು ಗುರುವಾರ ಮಧ್ಯಾಹ್ನ 12.22ಕ್ಕೆ ತೆರೆಯಲಾಯಿತು. ದೇವಿ ದರ್ಶನೋತ್ಸವಕ್ಕೆ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ ನೀಡಿದರು.

ಪುಷ್ಪಾಲಂಕಾರದಿಂದ ಕಂಗೊಳಿಸುತ್ತಿದ್ದ ದೇಗುಲದಲ್ಲಿ ಬೆಳಿಗ್ಗೆಯಿಂದಲೇ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾದವು. ಮಧ್ಯಾಹ್ನ 12 ಗಂಟೆಗೆ ದೇಗುಲ ಬಳಿ ನೆರೆದಿದ್ದ ಭಕ್ತರು ದೇವಿಗೆ ಜಯಘೋಷ ಹಾಕಿದರು. ಅಶ್ವಿಜ ಮಾಸದ ಹುಣ್ಣಿಮೆಯ ನಂತರ ಬರುವ ಮೊದಲ ಗುರುವಾರ ದೇಗುಲದ ಬಾಗಿಲನ್ನು ತೆರೆಯಲಾ-ಗುತ್ತದೆ. ಸಂಪ್ರದಾಯದಂತೆ ತಳವಾರ ವಂಶದ ನರಸಿಂಹರಾಜ್ ಅರಸ್ ಅವರು, ಬಾಳೆ ಕಂದು ಕಡಿದು ಬಾಗಿಲು ತೆರೆಯಲು ಅನುವು ಮಾಡಿಕೊಟ್ಟರು. ನಂತರ ಅರ್ಚಕರು ಗರ್ಭಗುಡಿಯ ಬೀಗ ತೆಗೆದು, ದೇವಿಯ ದರ್ಶನಕ್ಕೆ ಅವಕಾಶ ಕಲ್ಪಿಸಿದರು.

ಮೊದಲ ದಿನ ದೇವಿಯ ಗರ್ಭಗುಡಿ ಸ್ವಚ್ಛತೆ, ಸುಣ್ಣ ಧಾರಣೆ ಮತ್ತು ಜಿಲ್ಲಾ ಖಜಾನೆಯಿಂದ ಪಡೆದಿದ್ದ ಆಭರಣ ಧಾರಣೆ, ನಂತರ ಪೂಜಾ ಕಾರ್ಯ ನಡೆಯಿತು. ಇದೇ ಕಾರಣಕ್ಕೆ ಮೊದಲ ದಿನ ಸಾರ್ವಜನಿಕರಿಗೆ ದರ್ಶನ ಅವಕಾಶವಿರಲಿಲ್ಲ. ಆದರೂ ಬಾಗಿಲು ತೆರೆದ ತಕ್ಷಣ, 'ದೇವಿ ದರ್ಶನದಿಂದ ಪುಣ್ಯ ಲಭಿಸುತ್ತದೆ' ಎಂಬ ನಂಬಿಕೆಯಿಂದ ಭಕ್ತರು ಮುಗಿಬಿದ್ದರು.

ನ.2ರಿಂದ 15ರವರೆಗೆ ದೇಗುಲದ ಬಾಗಿಲು ತೆರೆಯಲಿದ್ದು, 12 ದಿನಗಳ ಕಾಲ 24 ಗಂಟೆ ಹಾಸನಾಂಬೆ ದೇವಿ ದರ್ಶನಕ್ಕೆ ಅವಕಾಶ ನೀಡಲಾಗಿದೆ. ದರ್ಶನದ ಬಳಿಕ ಮಾತನಾಡಿದ ಜಿಲ್ಲಾ ಉಸ್ತುವಾರಿ ಕೆ.ಎನ್. ರಾಜಣ್ಣ, 'ಹಾಸನಾಂಬೆಯ ದರ್ಶನೋತ್ಸವಕ್ಕೆ ವಿಧ್ಯುಕ್ತವಾಗಿ ಚಾಲನೆ ದೊರೆತಿದೆ. ಗರ್ಭಗುಡಿಯ ಬಾಗಿಲು ತೆರೆದ ವೇಳೆ ದೀಪ ಉರಿಯುತ್ತಿತ್ತು. ಈ ಬಗ್ಗೆ ಪರ–ವಿರೋಧ ಮಾತುಗಳು ನಡೆಯುತ್ತಿವೆ. ಆದರೆ, ನೋಡಿದ್ದನ್ನು ಹೇಳಿದ್ದೇನೆ' ಎಂದರು.

'ಜಾತಿ ಗಣತಿ' ವಿರೋಧಕ್ಕೆ ಡಿಕೆಶಿ ಸಹಮತ

ಪ್ರಜಾವಾಣಿ ವಾರ್ತೆ

ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿಯೊಂದಿಗೆ ಚರ್ಚೆ ನಡೆಸಿದರು

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ವರದಿಯನ್ನು ಸ್ವೀಕರಿಸಬೇಕು ಎಂಬ ಬೇಡಿಕೆ ಪ್ರಬಲವಾಗುತ್ತಿರುವ ಮಧ್ಯೆಯೇ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಒಕ್ಕಲಿಗ ಸಮುದಾಯದ ಸ್ವಾಮೀಜಿಗಳು, ಶಾಸಕರ ಸಭೆಯಲ್ಲಿ ವರದಿಯನ್ನು ಯಾವುದೇ ಕಾರಣಕ್ಕೆ ಒಪ್ಪದಿರುವ ತೀರ್ಮಾನಕ್ಕೆ ಬರಲಾಗಿದೆ.

ರಾಜ್ಯ ಒಕ್ಕಲಿಗರ ಸಂಘ ಗುರುವಾರ ಇಲ್ಲಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಪಟ್ಟ-ನಾಯಕನಹಳ್ಳಿ ಮಠದ ನಂಜಾವಧೂತ ಸ್ವಾಮೀಜಿ ಮತ್ತು ವಿಶ್ವ ಒಕ್ಕಲಿಗರ ಮಹಾಸಂಸ್ಥಾನದ ಕುಮಾರ ಚಂದ್ರ ಶೇಖರನಾಥ ಸ್ವಾಮೀಜಿ ಭಾಗಿಯಾಗಿದ್ದರು. ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಶಾಸಕರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ, ಎಂ.ಕೃಷ್ಣಪ್ಪ, ಎಸ್‌.ಟಿ.ಸೋಮಶೇಖರ್, ಎಚ್‌.ಟಿ. ಮಂಜು, ರವಿಕುಮಾರ್ ಗಣಿಗ, ಶರತ್ ಬಚ್ಚೇಗೌಡ, ಡಾ.ರಂಗನಾಥ್, ಡಾ.ಮಂಥರ್ ಗೌಡ, ಎಸ್. ರವಿ, ಅ.ದೇವೇಗೌಡ, ದಿನೇಶ್ ಗೂಳಿಗೌಡ, ವೈ.ಎ.ನಾರಾಯಣಸ್ವಾಮಿ, ಕೆ.ಗೋವಿಂದರಾಜು ಹಾಜರಿದ್ದರು.

ಸುದೀರ್ಘ ಹೊತ್ತು ಸಮಾಲೋಚನೆ ನಡೆಸಿದ ಸಭೆಯು, ಸಮುದಾಯದ ಸ್ವಾಮೀಜಿಗಳ ನೇತೃತ್ವದ ನಿಯೋಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಜಾತಿ ಗಣತಿ ವರದಿಯನ್ನು ಸರ್ಕಾರ ತಿರಸ್ಕರಿಸಬೇಕು ಎಂದು ಒತ್ತಾಯಿಸಲು ತೀರ್ಮಾನಕ್ಕೆ ಬರಲಾಯಿತು ಎಂದು ಮೂಲಗಳು ಹೇಳಿವೆ.

ಜಾತಿ ಗಣತಿ ವರದಿಯನ್ನು ಸರ್ಕಾರ ಅನುಷ್ಠಾನ ಮಾಡುವ ಮುನ್ನ ನಮ್ಮ ಅಭಿಪ್ರಾಯ ಕೇಳಬೇಕು. ಸಮುದಾಯದ ಮೀಸಲಾತಿ ವಿಚಾರದ ಬಗ್ಗೆ ಸ್ಪಷ್ಟ ನಿಲುವು ಹೇಳಬೇಕು. ಶೇ 4 ರಿಂದ ಶೇ 16ಕ್ಕೆ ಮೀಸಲಾತಿ ಏರಿಕೆ ಮಾಡಬೇಕು ಎಂಬುದು ನಮ್ಮ ಆಗ್ರಹ' ಎಂದು ನಂಜಾವಧೂತ ಸ್ವಾಮೀಜಿ ಹೇಳಿದರು. 'ಜಾತಿ ಗಣತಿ ವರದಿ ಬಗ್ಗೆ ಸಮುದಾಯದ ಶ್ರೀಗಳು, ಮುಖಂಡರು ಚರ್ಚೆ ಮಾಡಿದ್ದಾರೆ. ವರದಿ ಸಿದ್ಧ ಪಡಿಸುವಲ್ಲಿ ಕೆಲವೊಂದು ಲೋಪ ಇವೆ. ಸಮುದಾಯದ ಅಭಿಪ್ರಾಯವನ್ನು ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇವೆ' ಎಂದು ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಡಿ.ಹನುಮಂತಯ್ಯ, ಗೌರವಾಧ್ಯಕ್ಷ ಬಿ.ಕೆಂಚಪ್ಪಗೌಡ, ಉಪಾಧ್ಯಕ್ಷ-ರಾದ ಸಿ.ದೇವರಾಜು, ಎಲ್. ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಎಚ್‌.ಸಿ.ಜಯಮುತ್ತು, ಸಹಾಯಕ ಕಾರ್ಯದರ್ಶಿ ವೆಂಕಟರಾಮೇಗೌಡ, ಖಜಾಂಚಿ ಸಿ.ಎಂ.ಮಾರೇಗೌಡ ಸಭೆಯಲ್ಲಿದ್ದರು.

ಕಚ್ಚಾಡುತ್ತಿರುವ 'ಕೈ' ನಾಯಕರು: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಯಡಿಯೂರಪ್ಪ

ಬೆಂಗಳೂರು: 'ಕಾಂಗ್ರೆಸ್ ಪಕ್ಷದ ನಾಯಕರು ನಾಯಿ–ನರಿಗಳಂತೆ ಕಚ್ಚಾಡುತ್ತಿದ್ದು, ಅದನ್ನು ನಿಲ್ಲಿಸಿ, ಆಡಳಿತದ ಕಡೆ ಗಮನಕೊಡಿ ಎಂದು ಕಿವಿ ಹಿಂಡಲು ಅವರ ಪಕ್ಷದ ನಾಯಕರಾದ ಕೆ.ಸಿ. ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲಾ ಬಂದಿದ್ದರು' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಬಿಜೆಪಿ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ತಮ್ಮ ಪಕ್ಷದ ಹುಳುಕುಗಳನ್ನು ಮುಚ್ಚಿಕೊಳ್ಳಲು ಮತ್ತು ಜನರ ಗಮನ ಬೇರೆಡೆ ಸೆಳೆಯಲು ಸರ್ಕಾರವನ್ನು ಅಸ್ಥಿರಗೊಳಿಸಲಾಗುತ್ತಿದೆ ಎಂಬ ನಾಟಕ ಆಡುತ್ತಿದ್ದಾರೆ. ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ನಿಂತು ಹೋಗಿವೆ' ಎಂದು ವಾಗ್ದಾಳಿ ನಡೆಸಿದರು.

'ಮುಖ್ಯಮಂತ್ರಿ ಬೇಜವಾಬ್ದಾರಿ-ಯಿಂದ ವರ್ತಿಸುತ್ತಿದ್ದಾರೆ. ದಿನ ಬೆಳಿಗ್ಗೆ ಎದ್ದರೆ ಸಾಮಾಜಿಕ ಜಾಲತಾಣದ ಮೂಲಕ ಪ್ರಧಾನಿ ಮೋದಿಯವರ ಬಗ್ಗೆ ಬಾಯಿಗೆ ಬಂದಂತೆ ಟೀಕಿಸುತ್ತಿ-ದ್ದಾರೆ. ನಿತ್ಯವೂ ಕೀಳುಮಟ್ಟದ ಹೇಳಿಕೆ ನೀಡುತ್ತಾ ಅಗೌರವದಿಂದ ನಡೆದು ಕೊಂಡರೆ ಭೇಟಿಗೆ ಯಾರು ತಾನೆ ಅವಕಾಶ ಕೊಡುತ್ತಾರೆ. ಮೊದಲು ಗೌರವ ದಿಂದ ನಡೆದುಕೊಳ್ಳಲಿ. ಭೇಟಿಗೆ ಸಮಯ ಕೇಳಿ ಎರಡು ದಿನ ಕಾಯಿರಿ, ಅವಕಾಶ ಕೊಟ್ಟೇ ಕೊಡುತ್ತಾರೆ' ಎಂದು ಯಡಿಯೂರಪ್ಪ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಕಾಂಗ್ರೆಸ್ ಅಧಿಕಾರಕ್ಕೆ ಬಂದು ಆರು ತಿಂಗಳಾಯಿತು. ಇವರ ಚಕ್ರ ದಲ್ಲಿ ಗಾಳಿ ಇಲ್ಲದೇ ಗಾಡಿ ಮುಂದಕ್ಕೇ ಚಲಿಸುತ್ತಿಲ್ಲ. ಯಾವುದೇ ಕಾಮಗಾರಿಗೂ ಒಂದು ಪೈಸೆ ಬಿಡುಗಡೆ ಮಾಡಿಲ್ಲ. ಗ್ಯಾರಂಟಿಗಳಿಗೆ ಹಣ ಹೊಂದಾಣಿಕೆ ಮಾಡಲು ಸಾಧ್ಯವಾಗದೇ ಒದ್ದಾಡುತ್ತಿದ್ದಾರೆ. ಇನ್ನು ಅಭಿವೃದ್ಧಿಗೆ ಎಲ್ಲಿಂದ ಹಣ ಸಿಗುತ್ತದೆ. ಭ್ರಷ್ಟಾಚಾರ, ವರ್ಗಾವಣೆ ದಂಧೆ ಮಿತಿ ಮೀರಿದೆ' ಎಂದು ಅವರು ಹೇಳಿದರು.

ರಾಜ್ಯದಲ್ಲಿ ಬರ ಕಾಣಿಸಿಕೊಂಡಿದ್ದು, ರೈತರು ಸಂಕಷ್ಟದಲ್ಲಿದ್ದಾರೆ. ಕೃಷಿ ಪಂಪ್‌ಸೆಟ್‌ಗೆ ಟ್ರಾನ್ಸ್‌ಫಾರ್ಮರ್ ಸಹಿತ ಇತರ ಮೂಲ ಸೌಕರ್ಯವನ್ನು ಉಚಿತವಾಗಿ ನೀಡುವ ಸೌಲಭ್ಯವನ್ನು ಕೈಬಿಟ್ಟು ರೈತರ ಜತೆ ಚೆಲ್ಲಾಟವಾಡುತ್ತಿದೆ. ರೈತರೇ ಸಂಪೂರ್ಣ ವೆಚ್ಚ ಭರಿಸಬೇಕು ಎಂದು ಆದೇಶ ಹೊರಡಿಸಿರುವುದು ಸರಿಯಲ್ಲ. ರೈತರ ಬಗ್ಗೆ ಕಾಳಜಿ ಇದ್ದರೆ ಕೂಡಲೇ ಆದೇಶವನ್ನು ರದ್ದುಪಡಿಸಬೇಕು. ಹಿಂದಿನಂತೆಯೇ ಎಲ್ಲ ಮೂಲಸೌಕರ್ಯ ಗಳನ್ನು ಉಚಿತವಾಗಿ ನೀಡಬೇಕು ಎಂದು ಗೋವಿಂದ ಕಾರಜೋಳ ಅವರು ಆಗ್ರಹಿಸಿದರು.

'ಕೇಂದ್ರದಿಂದ ₹5.23 ಲಕ್ಷ ಕೋಟಿ ಅನುದಾನ'

ಕೇಂದ್ರ ಸರ್ಕಾರ ರಾಜ್ಯಕ್ಕೆ ಹಣ ನೀಡುತ್ತಿಲ್ಲ ಎಂದು ಸಿದ್ದರಾಮಯ್ಯ ಅಪಪ್ರಚಾರ ಮಾಡುತ್ತಿದ್ದಾರೆ. ಬಹುಶಃ ಅವರಿಗೆ ಮಾಹಿತಿ ಕೊರತೆ ಇರಬಹುದು. 2015 ರಿಂದ 2024 ರವರೆಗೆ ₹5.23 ಲಕ್ಷ ಕೋಟಿ ನೇರ ಅನುದಾನ ನೀಡಿದೆ ಎಂದು ಯಡಿಯೂರಪ್ಪ ತಿಳಿಸಿದರು.

ಕೇಂದ್ರ ಸರ್ಕಾರವು ಎನ್‌ಡಿಆರ್‌ಎಫ್ ಅಡಿ ಕಳೆದ 9 ವರ್ಷಗಳಲ್ಲಿ ₹12,784 ಕೋಟಿ, ಎಸ್‌ಡಿಆರ್‌ಎಫ್ ಅಡಿ 9 ವರ್ಷಗಳಲ್ಲಿ ₹3,377 ಕೋಟಿ ಬಿಡುಗಡೆ ಮಾಡಿದೆ. ರಾಷ್ಟ್ರೀಯ ಹೆದ್ದಾರಿ ಯೋಜನೆಗಳಿಗೆ ₹37,510 ಕೋಟಿ ವೆಚ್ಚ ಮಾಡುತ್ತಿದೆ. ರಾಜ್ಯದಲ್ಲಿ ಸದ್ಯ 54 ಯೋಜನೆಗಳ 2,431 ಕಿ.ಮೀ ಉದ್ದದ ಹೆದ್ದಾರಿ ಕಾಮಗಾರಿಗಳು ₹42,266 ಕೋಟಿ ಅನುದಾನದಲ್ಲಿ ನಡೆಯುತ್ತಿದೆ. ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ ಮುಂದಿನ ಮಾರ್ಚ್ ವೇಳೆಗೆ ಸಿದ್ಧ ಆಗಲಿದೆ ಎಂದು ವಿವರಿಸಿದರು.

ಸರ್ವಪಕ್ಷ ನಿಯೋಗ ಒಯ್ಯುವುದಾದರೆ ನಾನೂ ಬರುವೆ: ಮುಖ್ಯಮಂತ್ರಿ

'ಬರ ಪರಿಹಾರ ಬಿಡುಗಡೆಗಾಗಿ ಒತ್ತಾಯಿಸಲು ಕೇಂದ್ರಕ್ಕೆ ಸರ್ವಪಕ್ಷ ನಿಯೋಗ ಕೊಂಡೊ-ಯ್ಯುವುದಾದರೆ ನಾನು ನಿಮ್ಮೊಂದಿಗೆ ಬರಲು ಸಿದ್ಧ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಈಗಾಗಲೇ ಕೇಂದ್ರಕ್ಕೆ ಪರಿಹಾರಕ್ಕಾಗಿ ಮನವಿ ಸಲ್ಲಿಸಲಾಗಿದೆ. ಕೇಂದ್ರದ ಬರ ಅಧ್ಯಯನ ತಂಡ ಆಗಮಿಸಿದ್ದ ಸಂದರ್ಭದಲ್ಲಿ ಹಸಿರು ಬರವೂ ಸೇರಿದಂತೆ ಬರ ಪರಿಸ್ಥಿತಿಯ ಕುರಿತು ಮನವರಿಕೆ ಮಾಡಿಕೊಡಲಾಗಿದೆ. ಸಚಿವರಾದ ಎನ್‌.ಚಲುವರಾಯಸ್ವಾಮಿ, ಪ್ರಿಯಾಂಕ್ ಖರ್ಗೆ ಮತ್ತು ಕೃಷ್ಣ ಬೈರೇಗೌಡ ಅವರು ಕೇಂದ್ರದ ಕೃಷಿ ಸಚಿವರನ್ನು ಭೇಟಿ ಮಾಡಿ ಬರ ಪರಿಸ್ಥಿತಿಯ ಮಾಹಿತಿ ನೀಡಿದ್ದಾರೆ. ಆದರೂ ಕೇಂದ್ರ ಸ್ಪಂದನೆ ಮಾಡಿಲ್ಲ ಎಂದರು.

'ಎನ್‌ಡಿಆರ್‌ಎಫ್ ನಿಯಮಾನುಸಾರ ಬರ ಪರಿಹಾರ ಬಿಡುಗಡೆ ಮಾಡಬೇಕಿದ್ದ ಕೇಂದ್ರ ಅನಗತ್ಯ ವಿಳಂಬ ಮಾಡುತ್ತಿದೆ. ಈ ಸಂಬಂಧ ತಾವೇ ಸರ್ವಪಕ್ಷ ನಿಯೋಗ ಕೊಂಡೊಯ್ಯು-ವುದಾದರೆ ನಾನು ನಿಮ್ಮ ಜೊತೆ ಬರುವುದಾಗಿ ಹೇಳಿದ್ದೆ. ಈಗಲೂ ಕಾಲ ಮಿಂಚಿಲ್ಲ. ತಾವು ರಾಜ್ಯದಲ್ಲಿ ಬರ ಅಧ್ಯಯನಕ್ಕಾಗಿ ಪ್ರವಾಸ ಹೋಗುವ ಬದಲು ಸರ್ವಪಕ್ಷ ನಿಯೋಗವನ್ನು ದೆಹಲಿಗೆ ಕೊಂಡೊಯ್ಯುವುದೇ ಸೂಕ್ತ' ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಝೀಕಾ: 33 ಮಂದಿ ರಕ್ತದ ಮಾದರಿ ಎನ್‌ಐವಿಗೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಶಿಡ್ಲಘಟ್ಟ ತಾಲ್ಲೂಕಿನ ತಲಕಾಯಲಬೆಟ್ಟ ಗ್ರಾಮದ ಸೊಳ್ಳೆಗಳಲ್ಲಿ ಝೀಕಾ ವೈರಸ್ ಪತ್ತೆಯಾದ ಕಾರಣ 33 ಮಂದಿ ರಕ್ತದ ಮಾದರಿಗಳನ್ನು ಪರೀಕ್ಷೆಗಾಗಿ ಪುಣೆ ರಾಷ್ಟ್ರೀಯ ವೈರಾಣು ಸಂಸ್ಥೆಗೆ (ಎನ್‌ಐವಿ) ಕಳುಹಿಸಲಾಗಿದೆ.

ತಲಕಾಯಲಬೆಟ್ಟ ಹಾಗೂ ಸುತ್ತಲಿನ ವಡ್ಡಹಳ್ಳಿ, ಬಚ್ಚನಹಳ್ಳಿ, ವೆಂಕಟಾಪುರ, ದಿಬ್ಬೂರಹಳ್ಳಿ ಗ್ರಾಮದ 29 ಗರ್ಭಿಣಿಯರು ಮತ್ತು ನಾಲ್ಕು ಮಂದಿ ಜ್ವರ ಪೀಡಿತರ ರಕ್ತದ ಮಾದರಿಗಳನ್ನು ಎನ್‌ಐವಿಗೆ ರವಾನಿಸಲಾಗಿದೆ.

ಕಳೆದ ಆಗಸ್ಟ್‌ನಲ್ಲಿ ಕೀಟ ವಿಜ್ಞಾನಿ ಗಳು ಜಿಲ್ಲೆಯಲ್ಲಿ ಸೊಳ್ಳೆಗಳನ್ನು ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಿದ್ದರು. ತಲಕಾಯಲಬೆ-ಟ್ಟದಲ್ಲಿ ಸಂಗ್ರಹಿಸಿದ್ದ ಸೊಳ್ಳೆಗಳಲ್ಲಿ ಝೀಕಾ ವೈರಸ್ ಇರುವುದಾಗಿ ಅ.24ರಂದು ತಾಲ್ಲೂಕು ಆರೋಗ್ಯ ಇಲಾಖೆಗೆ ಮಾಹಿತಿ ದೊರೆತಿದೆ.

ಝೀಕಾ ವೈರಸ್ ಪತ್ತೆಯಾದ ಬೆನ್ನಲ್ಲಿಯೇ ಈ ಗ್ರಾಮಗಳಲ್ಲಿ ಆತಂಕ ಮನೆ ಮಾಡಿದೆ. ಇದರ ನಿವಾರಣೆಗೆ ಆರೋಗ್ಯ ಇಲಾಖೆ ಸಿಬ್ಬಂದಿ ಮುಂದಾಗಿದ್ದಾರೆ. ಪ್ರತಿ ಮನೆಗೆ ಭೇಟಿ ನೀಡಿ ತಪಾಸಣೆ ನಡೆಸಿದ್ದಾರೆ.

'ಜಿಲ್ಲೆಯ ಆರು ಕಡೆಗಳಲ್ಲಿ ಸೊಳ್ಳೆಗಳನ್ನು ಹಿಡಿದುಕೊಂಡು ಹೋಗಿ ಬೆಂಗಳೂರಿನಲ್ಲಿ ಪರೀಕ್ಷೆಗೆ ಒಳಪಡಿಸಲಾಗಿತ್ತು. ಇದರಲ್ಲಿ ತಲಕಾಯಲ-ಬೆಟ್ಟದ ಸೊಳ್ಳೆಗಳಲ್ಲಿ ಝೀಕಾ ವೈರಸ್ ಪತ್ತೆ ಆಗಿದೆ. ಈ ಕಾರಣದಿಂದ ಆ ಸುತ್ತಲಿನ ಐದು ಕಿ.ಮೀ ವ್ಯಾಪ್ತಿಯ ಹಳ್ಳಿಗಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಗರ್ಭಿಣಿಯರು, ಜ್ವರಪೀಡಿತರನ್ನು ತಪಾಸಣೆಗೆ ಒಳಪಡಿಸ-ಲಾಗುತ್ತಿದೆ. ನಾಲ್ಕು ಮಂದಿ ಜ್ವರಪೀಡಿತರು ಆರೋಗ್ಯವಾಗಿ ಇದ್ದಾರೆ' ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್‌.ಎಸ್‌.ಮಹೇಶ್ ಕುಮಾರ್ ತಿಳಿಸಿದ್ದಾರೆ.

'ಮನುಷ್ಯರಲ್ಲಿ ಝೀಕಾ ವೈರಾಣು ಪತ್ತೆಯಾಗಿಲ್ಲ'

ದಿನೇಶ್ ಗುಂಡೂರಾವ್

ಬೆಂಗಳೂರು: 'ರಾಜ್ಯದ ಯಾವುದೇ ವ್ಯಕ್ತಿಯಲ್ಲಿ ಈವರೆಗೂ ಝೀಕಾ ವೈರಾಣು ಪತ್ತೆಯಾಗಿಲ್ಲ. ಚಿಕ್ಕಬಳ್ಳಾಪುರದಲ್ಲಿ ಸೊಳ್ಳೆಗಳಲ್ಲಿ ಮಾತ್ರ ಝೀಕಾ ವೈರಾಣು ದೃಢಪಟ್ಟಿದ್ದು, ಆತಂಕಪಡಬೇಕಾಗಿಲ್ಲ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಗುರುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಚಿಕ್ಕಬಳ್ಳಾಪುರದಲ್ಲಿನ ಸೊಳ್ಳೆಗಳಲ್ಲಿ ಝೀಕಾ ವೈರಾಣು ಇರುವ ಬಗ್ಗೆ 10 ದಿನಗಳ ಹಿಂದೆ ಪ್ರಯೋಗಾಲಯದ ವರದಿ ಬಂದಿದೆ. ಆ ಭಾಗದಲ್ಲಿ ಜ್ವರ ಕಾಣಿಸಿಕೊಂಡು, ಆಸ್ಪತ್ರೆಗೆ ದಾಖಲಾದವರ ಮಾದರಿಯನ್ನು ಎನ್‌ಐವಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಮೂರು ದಿನಗಳಲ್ಲಿ ವರದಿ ಬರುವ ಸಾಧ್ಯತೆಯಿದೆ. ವೈರಾಣು ತಡೆಗೆ ಸಂಬಂಧಿಸಿದಂತೆ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆ ವತಿಯಿಂದ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ' ಎಂದು ಹೇಳಿದರು.

'ಈ ಸೋಂಕಿಗೆ ಒಳಗಾದವರಿಗೆ ಜ್ವರ, ದದ್ದು, ಕೀಲುನೋವು ಸೇರಿದಂತೆ ವಿವಿಧ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಗರ್ಭಿಣಿಯರು ಹಾಗೂ ಬಾಣಂತಿಯರು ಈ ಜ್ವರದ ಬಗ್ಗೆ ಎಚ್ಚರ ವಹಿಸಬೇಕು' ಎಂದು ತಿಳಿಸಿದರು.

ಮುನ್ನೆಚ್ಚರಿಕೆ: ಆರೋಗ್ಯ ಇಲಾಖೆ ಸೂಚನೆ

ಬೆಂಗಳೂರು: ಚಿಕ್ಕಬಳ್ಳಾಪುರದಲ್ಲಿ ಸೊಳ್ಳೆಗಳಲ್ಲಿ ಝೀಕಾ ವೈರಾಣು ದೃಢಪಟ್ಟಿ-ರುವುದರಿಂದ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವಂತೆ ಸೂಚಿಸಿರುವ ಆರೋಗ್ಯ ಇಲಾಖೆ, ರೋಗ ಲಕ್ಷಣಗಳು ಕಾಣಿಸಿಕೊಂಡಲ್ಲಿ ಹತ್ತಿರದ ಸರ್ಕಾರಿ ಆಸ್ಪತ್ರೆ ಸಂಪರ್ಕಿಸುವಂತೆ ತಿಳಿಸಿದೆ.

ಈ ಬಗ್ಗೆ ಇಲಾಖೆ ಆಯುಕ್ತ ಡಿ. ರಂದೀಪ್ ಸುತ್ತೋಲೆ ಹೊರಡಿಸಿದ್ದಾರೆ. 'ರೋಗದ ಬಗ್ಗೆ ಅನಗತ್ಯ ಭಯ ಬೇಡ. ಜ್ವರ ಪೀಡಿತರಿಗೆ ಕಣ್ಣು ಕೆಂಪಾಗುವಿಕೆ, ಕೀಲುಗಳಲ್ಲಿ ನೋವು, ತಲೆನೋವು, ದದ್ದುಗಳು, ಸ್ನಾಯುಗಳಲ್ಲಿ ನೋವು ಕಂಡುಬಂದಲ್ಲಿ ವೈದ್ಯರನ್ನು ಸಂಪರ್ಕಿಸಬೇಕು. ಈ ಜ್ವರ 2 ದಿನಗಳಿಂದ 7 ದಿನ ಗಳವರೆಗೆ ಇರುತ್ತದೆ. ರೋಗಲಕ್ಷಣ ಅನುಸಾರ ಚಿಕಿತ್ಸೆ ನೀಡಲಾಗುತ್ತದೆ. ಗರ್ಭಿಣಿಯರು ಈ ವೈರಾಣುವಿನ ಬಗ್ಗೆ ಹೆಚ್ಚಿನ ಎಚ್ಚರ ವಹಿಸಬೇಕು' ಎಂದು ಹೇಳಿದ್ದಾರೆ.

'ಈ ವೈರಾಣು ಈಡಿಸ್ ಸೊಳ್ಳೆಗಳ ಮೂಲಕ ಹರಡುತ್ತದೆ. ಮಳೆಗಾಲದಲ್ಲಿ ಇದು ಹೆಚ್ಚಾಗಿ ಕಾಣಿಸಿಕೊಳ್ಳುವುದರಿಂದ ಇನ್ನಷ್ಟು ದಿನ ಮುನ್ನೆಚ್ಚರಿಕೆ ವಹಿಸಬೇಕು. ಇದೇ ಸೊಳ್ಳೆಯು ಡೆಂಗಿ ಹಾಗೂ ಚಿಕೂನ್‌ಗುನ್ಯಾವನ್ನೂ ಹರಡುತ್ತದೆ. ಈಡಿಸ್ ಸೊಳ್ಳೆಯ ಸಂತಾನೋತ್ಪತ್ತಿ ತಡೆಗಟ್ಟಲು ಘನತ್ಯಾಜ್ಯ ವನ್ನು ಪರಿಣಾಮಕಾರಿಯಾಗಿ ವಿಲೇವಾರಿ ಮಾಡಬೇಕು. ಸೋಂಕು ಶಂಕಿತ ವ್ಯಕ್ತಿಯ ಮಾದರಿ ಸಂಗ್ರಹಿಸಿ, ಬೆಂಗಳೂರಿನ ಎನ್‌ಐವಿ ಪ್ರಯೋಗಾಲಯಕ್ಕೆ ಕಳುಹಿಸಬೇಕು' ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದ್ದಾರೆ.

ಸಾಲ ವಸೂಲಿಗೆ ಕಿರುಕುಳ ಆರೋಪ; ರೈತ ಸಾವು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನವಲಗುಂದ ತಾಲ್ಲೂಕಿನ ಕೆವಿಜಿ ಬ್ಯಾಂಕ್ ಮೊರಬ ಶಾಖೆಯ ಅಧಿಕಾರಿಗಳು ಸಾಲ ಮರು ಪಾವತಿಸು ವಂತೆ ನೋಟಿಸ್ ನೀಡಿದ್ದರಿಂದ ಮೂರ್ಛೆ ಹೋಗಿ ಅಸ್ವಸ್ಥಗೊಂಡಿದ್ದ ಗುಮ್ಮಗೋಳದ ರೈತ ಮಹಾದೇವಪ್ಪ ಜಾವೂರ (75) ಚಿಕಿತ್ಸೆಗೆ ಸ್ಪಂದಿಸದೆ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಗುರುವಾರ ಮೃತಪಟ್ಟಿದ್ದಾರೆ.

'ಅವರ ಸಾವಿಗೆ ಕೆವಿಜಿ ಬ್ಯಾಂಕ್ ಅಧಿಕಾರಿಗಳ ಕಿರುಕುಳವೇ ಕಾರಣ' ಎಂದು ಆರೋಪಿಸಿ ಮೃತರ ಕುಟುಂಬಸ್ಥರು, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಘಟಕದ ನೇತೃತ್ವದಲ್ಲಿ ರೈತರು ಆಸ್ಪತ್ರೆಯ ಶವಾಗಾರದ ಎದುರು ಪ್ರತಿಭಟನೆ ನಡೆಸಿದರು.

'ಮೃತರ ಕುಟುಂಬದ ಬ್ಯಾಂಕ್ ಸಾಲ ಮನ್ನಾ ಮಾಡಬೇಕು ಮತ್ತು ಅವರ ಕುಟುಂಬಕ್ಕೆ ಪರಿಹಾರ ನೀಡಬೇಕು' ಎಂದು ಪ್ರತಿಭಟನಾ-ಕಾರರು ಪಟ್ಟು ಹಿಡಿದರು. ಬ್ಯಾಂಕ್‌ನ ಉನ್ನತ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗು-ವುದು ಎಂದು ಅಧಿಕಾರಿಗಳು ಲಿಖಿತ ಭರವಸೆ ನೀಡಿದ್ದರಿಂದ ಪ್ರತಿಭಟನೆ ಕೈಬಿಡಲಾಯಿತು.

ಪ್ರಕರಣದ ಹಿನ್ನೆಲೆ: ಮಹಾದೇವಪ್ಪ ಜಾವೂರ್ 2015 ರಲ್ಲಿ ಮೊರಬ ಗ್ರಾಮದ ಕೆವಿಜಿ ಬ್ಯಾಂಕ್ ಶಾಖೆಯಲ್ಲಿ ₹14.50 ಲಕ್ಷ ಬೆಳೆ ಸಾಲ ತೆಗೆದು-ಕೊಂಡಿದ್ದರು. ಬ್ಯಾಂಕ್ ಸಿಬ್ಬಂದಿ ರೈತನ ಮನೆಗೆ ಭೇಟಿ ನೀಡಿ ಅವರ ಸಹಿ ಪಡೆದು ಅವರ ಖಾತೆಯಲ್ಲಿದ್ದ ₹1.40 ಲಕ್ಷವನ್ನು ಜಮಾ ಮಾಡಿಕೊಂಡಿದ್ದರು.

ಇದರಿಂದ ಆಕ್ರೋಶಗೊಂಡಿದ್ದ ಮಹಾದೇವಪ್ಪ ಅವರ ಪುತ್ರರು ಅ. 7ರಂದು ಸಿಬ್ಬಂದಿ ಜತೆ ಜಗಳವಾ-ಡಿದ್ದರು. ಆಗ ಮಹಾದೇವಪ್ಪ ಮೂರ್ಛೆ ಬಂದು ಬಿದ್ದಿದ್ದರು.

ನವಲಗುಂದ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಕೆವಿಜಿ ಬ್ಯಾಂಕ್ ಮೊರಬ ಶಾಖೆಯ ವ್ಯವಸ್ಥಾಪಕ ಅಶ್ವಿನ್ ವಾಸನ್ ಅವರನ್ನು ಪೊಲೀಸರು ಬಂಧಿಸಿದ್ದರು.

ರಾಜ್ಯೋತ್ಸವ: ರಾಣಿ ಚನ್ನಮ್ಮ ವೃತ್ತದಲ್ಲಿ 2 ಟನ್ ಪ್ಲಾಸ್ಟಿಕ್ ಬಾಟಲಿ ಸಂಗ್ರಹ

₹20 ಸಾವಿರ ಗಳಿಸಿದ ಚಿಂದಿ ಆಯುವವರು!

ಪ್ರಜಾವಾಣಿ ವಾರ್ತೆ

ಬೆಳಗಾವಿಯ ರಾಣಿ ಚನ್ನಮ್ಮ ವೃತ್ತದಲ್ಲಿ ಗುರುವಾರ ಚಿಂದಿ ಆಯುವವರು ಸಂಗ್ರಹಿಸಿದ ನೀರಿನ ಪ್ಲಾಸ್ಟಿಕ್ ಬಾಟಲಿಗಳನ್ನು ಪಾಲಿಕೆ ವಾಹನದಲ್ಲಿ ಸಾಗಿಸಲಾಯಿತು

ಬೆಳಗಾವಿ: ಇಲ್ಲಿನ ರಾಣಿ ಚನ್ನಮ್ಮ ವೃತ್ತದಲ್ಲಿ ಗುರುವಾರ, ಚಿಂದಿ ಆಯುವ 10 ಮಂದಿ ಐದೇ ತಾಸಿನಲ್ಲಿ ₹20 ಸಾವಿರ ಗಳಿಸಿದರು.

ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಬುಧವಾರ ರಾಣಿ ಚನ್ನಮ್ಮ ವೃತ್ತದಲ್ಲಿ ಲಕ್ಷಾಂತರ ಜನ ಸೇರಿದ್ದರು. ಅವರು ನೀರು ಕುಡಿದು ಬಿಸಾಡಿದ ಪ್ಲಾಸ್ಟಿಕ್ ಬಾಟಲಿಗಳನ್ನು ಗುರುವಾರ 10 ಮಂದಿ ಚಿಂದಿ ಆಯುವವರು ಸಂಗ್ರಹಿಸಿದರು. ನಸುಕಿನ 3ರಿಂದ ಬೆಳಿಗ್ಗೆ 8ರವರೆಗೆ ಎರಡು ಟನ್‌ಗೂ ಅಧಿಕ ಪ್ಲಾಸ್ಟಿಕ್ ಬಾಟಲಿಗಳು ಸಂಗ್ರಹವಾದವು.

ಪ್ರತಿ ಕೆ.ಜಿ.ಗೆ ಮಹಾನಗರ ಪಾಲಿಕೆ ₹10 ದರ ನೀಡುತ್ತದೆ. 2,000 ಕೆ.ಜಿ ಬಾಟಲಿಗಳನ್ನು ನೀಡಿ ₹20 ಸಾವಿರ ಗಳಿಸಿದರು. ಎಲ್ಲ ಹತ್ತೂ ಮಂದಿಗೆ ತಲಾ ₹2,000 ಹಂಚಿದ್ದಾಗಿ ಪಾಲಿಕೆ ಪರಿಸರ ಎಂಜಿನಿಯರ್ ಹಣಮಂತ ಕಲಾದಗಿ 'ಪ್ರಜಾವಾಣಿ'ಗೆ ತಿಳಿಸಿದರು.

'ಮಹಾನಗರ ಪಾಲಿಕೆಯಿಂದ 475 ಮಂದಿಗೆ ಚಿಂದಿ ಆಯುವ ಗುರುತಿನ ಚೀಟಿ ನೀಡಲಾಗಿದೆ. ಸಾಮಾನ್ಯವಾಗಿ ಪ್ರತಿಯೊಬ್ಬರೂ ಪ್ರತಿದಿನ ಗರಿಷ್ಠ ₹200 ಗಳಿಸುತ್ತಾರೆ. ಆದರೆ, ರಾಜ್ಯೋತ್ಸವಕ್ಕೆ ಬಂದ ಜನರು ಬಿಸಾಡಿದ ತ್ಯಾಜ್ಯ ಅಧಿಕ ಪ್ರಮಾಣದಲ್ಲಿತ್ತು' ಎಂದರು.

'ಪಾಲಿಕೆ ಆಯುಕ್ತ ಅಶೋಕ ದುಡಗುಂಟಿ ಅವರ ನಿರ್ದೇಶನದಂತೆ, ರಾಜ್ಯೋತ್ಸವ ಮೆರವಣಿಗೆ ನಡೆದ ಮಾರ್ಗಗಳಲ್ಲಿ 100 ಕೆ.ಜಿ.ಯಷ್ಟು ತ್ಯಾಜ್ಯ ಪದಾರ್ಥಗಳನ್ನು ಸಂಗ್ರಹಿಸುವ ದೊಡ್ಡ ತೊಟ್ಟಿಗಳನ್ನು ಇಡಲಾಗಿತ್ತು. ಇದರಿಂದ ಮಾಲಿನ್ಯವಾಗದಂತೆ, ತ್ಯಾಜ್ಯದಿಂದ ನಗರದ ಸೌಂದರ್ಯ ಹಾಳಾಗದಂತೆ ಕಾಪಾಡಲಾಯಿತು' ಎಂದು ತಿಳಿಸಿದರು.

ಉಳಿದಂತೆ, 200 ಕೆ.ಜಿಯಷ್ಟು ವಿವಿಧ ಬಗೆಯ ಹೂವು, 100 ಕೆ.ಜಿ.ಗೂ ಅಧಿಕ ಹರಿದ ಚಪ್ಪಲಿಗಳು, ಪ್ಲಾಸ್ಟಿಕ್ ಚೀಲಗಳು, ತಿಂಡಿ ತಿಂದು ಬಿಸಾಡಿದ ವ್ಯರ್ಥ ಪದಾರ್ಥಗಳು ಹೀಗೆ ಅಪಾರ ಪ್ರಮಾಣದ ತ್ಯಾಜ್ಯವನ್ನು ಪಾಲಿಕೆ ವಾಹನಗಳಲ್ಲಿ ಸಾಗಿಸಲಾಯಿತು.

> **ವೃತ್ತದಲ್ಲಿ ನಿಯೋಜನೆ ಮಾಡಿದ ಹತ್ತೂ ಜನ ಚಿಂದಿ ಆಯುವವರಿಗೆ ನಾಡ ಹಬ್ಬದ ಕಾಣಿಕೆ ಸಿಕ್ಕಂತಾಗಿದೆ**
> **ಹಣಮಂತ ಕಲಾದಗಿ,** ಪಾಲಿಕೆ ಪರಿಸರ ಎಂಜಿನಿಯರ್

ಲಾರಿ ಡಿಕ್ಕಿ: ಗರ್ಭಿಣಿ ಸೇರಿ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ಬೊಮ್ಮಸಂದ್ರದ ನಾರಾಯಣ ಹೃದಯಾಲಯ ಸಮೀಪ ರಸ್ತೆ ದಾಟುವಾಗ ಸಂಭವಿಸಿದ ಅಪಘಾತದಲ್ಲಿ ಎಂಟು ತಿಂಗಳ ಗರ್ಭಿಣಿ ಸೇರಿ ಇಬ್ಬರು ಮಹಿಳೆಯರು ಗುರುವಾರ ಸ್ಥಳದಲ್ಲಿಯೇ ಮೃತಪಟ್ಟಿ-ದ್ದಾರೆ.

ಮೃತರು ಆಂಧ್ರಪ್ರದೇಶದ ಮದನಪಲ್ಲಿ ಮೂಲದ ಪಿ.ರುಕಿಯಾ (28) ಮತ್ತು ಬೆಂಗಳೂರಿನ ವರ್ತೂರು ನಿವಾಸಿ ಲಕ್ಷ್ಮಮ್ಮ(50).

ರುಕಿಯಾ ಅವರ ಗರ್ಭದಲ್ಲಿ ಬೆಳೆಯುತ್ತಿದ್ದ ಮಗುವಿಗೆ ಹೃದಯದಲ್ಲಿ ರಂಧ್ರವಿದೆ ಎಂದು ವೈದ್ಯರು ತಿಳಿಸಿದ್ದರು. ಹಾಗಾಗಿ, ಅವರು ಅಕ್ಕ ರಾಬಿಯಾ ಜತೆ ಮದನಪಲ್ಲಿಯಿಂದ ವರ್ತೂರಿಗೆ ಬಂದು, ತಮ್ಮ ಪರಿಚಿತರಾದ ಲಕ್ಷ್ಮಮ್ಮ ಜತೆ ನಾರಾಯಣ ಹೃದಯಾಲಯಕ್ಕೆ ಬಂದಿದ್ದರು. ಸ್ಕೈವಾಕ್ ಹತ್ತಲಾಗದೆ ರುಕಿಯಾ, ಲಕ್ಷ್ಮಮ್ಮ ರಸ್ತೆ ದಾಟುತ್ತಿದ್ದಾಗ ಲಾರಿ ಹರಿದಿದೆ. ಹೆಬ್ಬಗೋಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪಘಾತ: 8 ಜನ ದುರ್ಮರಣ

ಪ್ರಜಾವಾಣಿ ವಾರ್ತೆ

ರೋಷನ್

ಲಖನ್, ಅಸ್ಮಿತಾ

ಸ್ವಸ್ತಿಕಾ

ಕಲಬುರಗಿ/ಯಾದಗಿರಿ: ಕಲ್ಯಾಣ ಕರ್ನಾಟಕ ಭಾಗದಲ್ಲಿ ಗುರುವಾರ ಸಂಭವಿಸಿದ ಎರಡು ಪ್ರತ್ಯೇಕ ಅಪಘಾ-ತಗಳಲ್ಲಿ ನಾಲ್ವರು ಮಕ್ಕಳು ಸೇರಿ ಎಂಟು ಮಂದಿ ಮೃತಪಟ್ಟಿದ್ದಾರೆ.

ಅಫಜಲಪುರ ತಾಲ್ಲೂಕಿನ ಬಳ್ಳೂರಗಿ ಸಮೀಪದ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೈಕ್ ಮತ್ತು ಲಾರಿ ಮುಖಾಮುಖಿ ಡಿಕ್ಕಿಯಾಗಿವೆ. ಬೈಕ್ ಮೇಲೆ ಪ್ರಯಾ-ಣಿಸುತ್ತಿದ್ದ ಒಂದೇ ಕುಟುಂಬದವರಾದ ರೋಷನ್(ರತನ್) (25), ಪತ್ನಿ ಅಸ್ಮಿತಾ (23), ಮಕ್ಕಳಾದ ಮಿಲ್ಲನ್ (5) ಮತ್ತು ಲಖನ್ (2), ಅಸ್ಮಿತಾ ತಂಗಿ ಸ್ವಸ್ತಿಕಾ (19) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ನೇಪಾಳದಿಂದ ಬಂದಿದ್ದ ರೋಷನ್ ಅವರು ಕುಟುಂಬದೊಂದಿಗೆ ಅಫಜಲ-ಪುರದಲ್ಲಿ ಫಾಸ್ಟ್ ಫುಡ್ ಮಳಿಗೆ ನಡೆಸುತ್ತಿ-ದ್ದರು. ಮಹಾರಾಷ್ಟ್ರದ ದುಧನಿಯಲ್ಲಿದ್ದ ಅನಾರೋಗ್ಯ ಪೀಡಿತ ಸಹೋದರಿಯನ್ನು ಮಾತನಾಡಿಸಿಕೊಂಡು ಸಂಜೆ ಕುಟುಂಬ ಸಮೇತ ಬೈಕ್ ಮೇಲೆ ವಾಪಸ್ ಬರುತ್ತಿದ್ದರು. ಸೋಲಾಪುರದತ್ತ ಹೊರಟ್ಟಿದ್ದ ಲಾರಿ ಬಳ್ಳೂರಗಿ ಸಮೀಪ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಗಂಭೀರವಾಗಿ ಗಾಯಗೊಂಡ ಐವರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ನೇಪಾಳದಿಂದ ಬಂದು ಬೆಂಗಳೂರಿನ ವಿಳಾಸದ ಆಧಾರ್ ಕಾರ್ಡ್ ಹೊಂದಿರಬಹುದು ಎನ್ನುತ್ತಾರೆ ಪ್ರಕರಣ ದಾಖಲಿಸಿಕೊಂಡ ಅಫಜಲಪುರ ಠಾಣೆಯ ಪೊಲೀಸರು.

ಯಾದಗಿರಿಯಲ್ಲಿ ಮೂವರ ಸಾವು: ಯಾದಗಿರಿ ಜಿಲ್ಲೆಯ ವಡಗೇರಾ ತಾಲ್ಲೂಕಿನ ಶಿವಪುರ ಗ್ರಾಮದಲ್ಲಿ ಕೆಕೆಆರ್‌ಟಿಸಿ ಬಸ್–ಬೈಕ್ ನಡುವೆ ಡಿಕ್ಕಿ ಸಂಭವಿಸಿದೆ. ಸ್ಥಳದಲ್ಲೇ ಸಾಬಣ್ಣ(42), ಮಕ್ಕಳಾದ ಮನೋಜ್(8) ಹಾಗೂ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ರಂಜಿತಾ(10) ಮೃತಪಟ್ಟಿದ್ದಾರೆ. ಗಂಭೀರ ಗಾಯಗೊಂಡ ಚೈತ್ರಾಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಸಾಬಣ್ಣ ಅವರು ಮೂವರು ಮಕ್ಕಳನ್ನು ಬೈಕ್ ಮೇಲೆ ಕೂರಿಸಿಕೊಂಡು ತಮ್ಮ ಜಮೀನಿನತ್ತ ಹೋಗುತ್ತಿದ್ದರು. ಯಾದಗಿರಿಯಿಂದ ಸಂಗಮ ಗ್ರಾಮಕ್ಕೆ ಬಸ್ ತೆರಳುತ್ತಿತ್ತು. ರಸ್ತೆ ಬದಿಯಲ್ಲಿ ಜಾಲಿ ಗಿಡ ಬೆಳೆದಿದ್ದು, ತಿರುವಿನಲ್ಲಿ ಬೈಕ್ ಮತ್ತು ಬಸ್ ನಡುವೆ ಡಿಕ್ಕಿ ಸಂಭವಿಸಿ ತೀವ್ರವಾಗಿ ಗಾಯಗೊಂಡು ಮೂವರು ಮೃತಪಟ್ಟಿ-ದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಶುಕ್ರವಾರ, ನವೆಂಬರ್ 3, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 304 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಬಿಗ್‌ಬಾಸ್ ಸ್ಪರ್ಧಿಯಾಗಿದ್ದ ಅರವಿಂದ್ ಕೆ.ಪಿ ಬೆಳ್ಳಿತೆರೆಯಲ್ಲಿ ತಮ್ಮ ಅದೃಷ್ಟ ಪರೀಕ್ಷೆಗೆ ಸಜ್ಜಾಗುತ್ತಿದ್ದಾರೆ

ಸಂಖ್ಯೆ-ಸುದ್ದಿ ಚಾಲಕರ ಲೋಪದಿಂದಲೇ ಹೆಚ್ಚಿನ ಅಪಘಾತಗಳು...

ಚುನಾವಣಾ ಬಾಂಡ್: ತೀರ್ಪು ಕಾಯ್ದಿರಿಸಿದ ಸುಪ್ರೀಂ 10

ಪ್ಯಾಲೆಸ್ಟೀನ್: 3,760 ಮಕ್ಕಳ ಸಾವು 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
64,080 ▲	19,133 ▲	₹62,880 (ಬೆಂಗಳೂರು) ▲	₹73,600 (ಬೆಂಗಳೂರು) ▲	83.22 ▲

ಎದುರಾಳಿಗಳಿಗೆ ಸಿದ್ದರಾಮಯ್ಯ 'ಸಂದೇಶ' • ಹೈಕಮಾಂಡ್ ಎಚ್ಚರಿಕೆ ಮರುದಿನವೇ ಹೇಳಿಕೆ

'5 ವರ್ಷ ನಾನೇ ಮುಖ್ಯಮಂತ್ರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು/ಹೊಸಪೇಟೆ : 'ನಾಯಕತ್ವ ಬದಲಾವಣೆ, ಸಂಪುಟ ಪುನಾರಚನೆ ಕುರಿತು ಬಹಿರಂಗವಾಗಿ ಮಾತನಾಡಿದರೆ ಶಿಸ್ತುಕ್ರಮ ಖಚಿತ' ಎಂದು ಕಾಂಗ್ರೆಸ್ ಹೈಕಮಾಂಡ್ ಬುಧವಾರವಷ್ಟೇ ಎಚ್ಚರಿಕೆ ನೀಡಿತ್ತು. ಅದರ ಮರುದಿನವೇ, 'ಮುಂದಿನ ಐದು ವರ್ಷ ನಮ್ಮದೇ ಸರ್ಕಾರ, ನಾನೇ ಮುಖ್ಯಮಂತ್ರಿಯಾಗಿ ಮುಂದುವರಿಯುವೆ' ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಈ ಮೂಲಕ ಪಕ್ಷದೊಳಗಿನ ತಮ್ಮ ಎದುರಾಳಿಗಳಿಗೆ ಸ್ಪಷ್ಟ ಸಂದೇಶ ನೀಡಿದ್ದಾರೆ.

ಗುರುವಾರ ಹೊಸಪೇಟೆಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಮುಖ್ಯಮಂತ್ರಿ ಬದಲಾವಣೆ ವಿಷಯ ಪ್ರಸ್ತಾಪಿಸಿದೊಡನೆ ತುಸು ಏರಿದ ಧ್ವನಿಯಲ್ಲಿಯೇ ಪ್ರತಿಕ್ರಿಯಿಸಿದರು.

'ಕೆಲಸ ಇಲ್ಲದೇ ಇರುವವರು ಮುಖ್ಯಮಂತ್ರಿ ಬದಲಾವಣೆ ವಿಚಾರ ಮಾತನಾಡುತ್ತಾರೆ, ಅವರಿಗೆ ಮಾಡಲು ಬೇರೆ ಕೆಲಸ ಇಲ್ಲ, ಹೀಗಾಗಿ ಮಾತನಾಡುತ್ತಾರೆ' ಎಂದು ಸ್ವಪಕ್ಷೀಯ ಶಾಸಕರ ವಿರುದ್ಧವೇ ಹರಿಹಾಯ್ದರು.

'ಉಪಮುಖ್ಯಮಂತ್ರಿಗಳ ವಿಚಾರ ತೀರ್ಮಾನ ಮಾಡುವುದು ಪಕ್ಷದ ಹೈಕಮಾಂಡ್. ನಮ್ಮದು ರಾಷ್ಟ್ರೀಯ ಪಕ್ಷ, ಏನೇ ತೀರ್ಮಾನ ಆದರೂ ಹೈಕಮಾಂಡ್ ಜೊತೆ ಚರ್ಚೆ ಮಾಡಿಯೇ ಆಗುವುದು' ಎಂದೂ ಅವರು ಹೇಳಿದರು.

ಏಕಾಏಕಿ ಸಿದ್ದರಾಮಯ್ಯ ನೀಡಿದ ಈ ಹೇಳಿಕೆ, ಕಾಂಗ್ರೆಸ್‌ನಲ್ಲಿ ನಾನಾ ರೀತಿಯ ಚರ್ಚೆಗೆ ದಾರಿ ಮಾಡಿಕೊಟ್ಟಿದೆ.

5ನೇ ಪುಟ ನೋಡಿ

ಹೈಕಮಾಂಡ್ ಮಾತು ಕೇಳುವೆ: ಡಿಕೆಶಿ

'ನಾವು ಪಕ್ಷದ ಶಿಸ್ತಿನ ಸಿಪಾಯಿಗಳು. ಹೈಕಮಾಂಡ್ ಏನು ಹೇಳುತ್ತದೆಯೋ ಅದನ್ನು ಕೇಳುತ್ತೇವೆ ಅಷ್ಟೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ನಾನೇ ಐದು ವರ್ಷ ಮುಖ್ಯಮಂತ್ರಿ' ಎಂಬ ಸಿದ್ದರಾಮಯ್ಯ ಹೇಳಿಕೆ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ನಾನು ಯಾವತ್ತೂ ಏನೂ ಮಾತನಾಡಿಲ್ಲ. ಮಾತನಾಡುವುದೂ ಇಲ್ಲ. ಪಕ್ಷ ಏನು ಹೇಳುತ್ತದೆಯೋ ಅದನ್ನು ಕೇಳುತ್ತೇನೆ' ಎಂದರು.

'ವಿಪಕ್ಷ ನಾಯಕರ ನೇಮಕಕ್ಕೆ ಒತ್ತಡ ಹಾಕುವೆ'



ವಿರೋಧ ಪಕ್ಷ ನಾಯಕರ ನೇಮಕ ತಡವಾಗಿರುವುದನ್ನು ಒಪ್ಪಿಕೊಂಡಿರುವ ಬಿಜೆಪಿ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್.ಯಡಿಯೂರಪ್ಪ, ಆದಷ್ಟು ಬೇಗ ನೇಮಕ ಮಾಡುವಂತೆ ವರಿಷ್ಠರ ಮೇಲೆ ಒತ್ತಡ ಹಾಕುವುದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ವಿರೋಧ ಪಕ್ಷದ ನಾಯಕರ ನೇಮಕ ತಡವಾಗಿದೆ. ಆದಷ್ಟು ಬೇಗ ನೇಮಕ ಮಾಡಿ ಎಂದು ಈ ಹಿಂದೆಯೂ ನಾನು ವರಿಷ್ಠರಿಗೆ ಮನವಿ ಮಾಡಿದ್ದೇನೆ. ಡಿಸೆಂಬರ್ ಅಧಿವೇಶನದೊಳಗೆ ನೇಮಕ ಮಾಡಲು ಮತ್ತೊಮ್ಮೆ ಒತ್ತಡ ಹೇರುತ್ತೇನೆ' ಎಂದರು.

ಕಲಾಪಕ್ಕೆ ಹಾಜರಿ ಕಷ್ಟ: 'ವಿರೋಧ ಪಕ್ಷದ ನಾಯಕರನ್ನು ನೇಮಕ ಮಾಡದೇ ಇದ್ದರೆ ಕಲಾಪಕ್ಕೆ ಹಾಜರಾಗುವುದು ಕಷ್ಟವಾಗುತ್ತದೆ' ಎಂದು ಬೆಂಗಳೂರಿನ ಕೆಲವು ಶಾಸಕರು ಯಡಿಯೂರಪ್ಪನವರ ಮುಂದೆ ಹೇಳಿಕೊಂಡಿದ್ದಾರೆ.

ಬೆಂಗಳೂರು ನಗರದ ಶಾಸಕರ ಸಭೆಯನ್ನು ಇತ್ತೀಚೆಗೆ ಯಡಿಯೂರಪ್ಪ ಕರೆದಿದ್ದರು. ಈ ಸಭೆಯಲ್ಲಿ ಮಾತನಾಡಿದ ಶಾಸಕರು, 'ನಾವು ಯಾವುದೇ ಪ್ರಶ್ನೆ ಕೇಳಿದರೂ ನಿಮ್ಮ ನಾಯಕರು ಯಾರು ಎಂದು ಆಡಳಿತ ಪಕ್ಷದವರು ಕಾಲೆಳೆಯುತ್ತಾರೆ. ಇದರಿಂದ ನಮಗೆ ಮುಜುಗರವಾಗುತ್ತದೆ. ಕಲಾಪಕ್ಕೆ ಹೋಗುವುದೇ ಕಷ್ಟವಾಗುತ್ತದೆ. ಆದರಿಂದ, ವರಿಷ್ಠರ ಮೇಲೆ ಒತ್ತಡ ಹೇರಿ ಮೊದಲಿಗೆ ವಿರೋಧ ಪಕ್ಷದ ನಾಯಕರ ನೇಮಕ ಮಾಡಿಸಿ. ಪಕ್ಷದ ಅಧ್ಯಕ್ಷರ ನೇಮಕ ತಡವಾದರೂ ಪರವಾಗಿಲ್ಲ' ಎಂದು ಹೇಳಿದ್ದಾಗಿ ಮೂಲಗಳು ತಿಳಿಸಿವೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಇ.ಡಿ. ವಿಚಾರಣೆಗೆ ಕೇಜ್ರಿವಾಲ್ ಗೈರು

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆಗೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳ ಎದುರು ಗುರುವಾರ ಹಾಜರಾಗಲಿಲ್ಲ. ಬಿಜೆಪಿಯ ಚಿತಾವಣೆಯಿಂದ, ಬಾಹ್ಯ ಕಾರಣಗಳಿಂದಾಗಿ ಇ.ಡಿ. ಈ ಸಮನ್ಸ್ ಕಳುಹಿಸಿದೆ ಎಂದು ಕೇಜ್ರಿವಾಲ್ ಆರೋಪಿಸಿದ್ದಾರೆ. 7

ನಾಲ್ಕರ ಘಟ್ಟಕ್ಕೆ ಭಾರತ ಲಗ್ಗೆ



ಮುಂಬೈ: ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟಿತು. ಗುರುವಾರ ನಡೆದ ರೌಂಡ್ ರಾಬಿನ್ ಲೀಗ್ ಸುತ್ತಿನ ಏಳನೇ ಪಂದ್ಯದಲ್ಲಿ 302 ರನ್‌ಗಳಿಂದ ಶ್ರೀಲಂಕಾ ವಿರುದ್ಧ ಜಯಿಸಿತು. ಟೂರ್ನಿಯಲ್ಲಿ ಇದುವರೆಗೆ ಆತಿಥೇಯರು ಒಂದೂ ಪಂದ್ಯ ಸೋತಿಲ್ಲ.

ಸ್ಕೋರ್

ಭಾರತ
8ಕ್ಕೆ357 (50 ಓವರ್‌ಗಳಲ್ಲಿ)
(ಶುಭಮನ್ ಗಿಲ್ **92**, ವಿರಾಟ್ ಕೊಹ್ಲಿ **88** ಮತ್ತು ಶ್ರೇಯಸ್ ಅಯ್ಯರ್ **82**, ಮಧುಶಂಕಾ **80ಕ್ಕೆ5**)

ಶ್ರೀಲಂಕಾ
55 (19.4 ಓವರ್‌ಗಳಲ್ಲಿ)
ಮೊಹಮ್ಮದ್ ಶಮಿ **5-1-18-5** 11

ಸಭೆಯಿಂದ ಹೊರನಡೆದ ಮಹುವಾ

ನವದೆಹಲಿ: ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ವಿರುದ್ಧದ ಆರೋಪಗಳ ಕುರಿತು ತನಿಖೆ ನಡೆಸುತ್ತಿರುವ 'ನೀತಿ ಸಮಿತಿ'ಯ ಸಭೆಯು ಗುರುವಾರ ನಾಟಕೀಯ ವಿದ್ಯಮಾನಗಳಿಗೆ ಸಾಕ್ಷಿಯಾಯಿತು. ಸಮಿತಿ ಅಧ್ಯಕ್ಷ ವಿನೋದ್ ಸೋನಕರ್ ಅವರು ಮಹುವಾ ಅವರಿಗೆ ವೈಯಕ್ತಿಕ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ ಎಂದು ಆರೋಪಿಸಿ ವಿರೋಧ ಪಕ್ಷಗಳ ಸದಸ್ಯರು ಹಾಗೂ ಮಹುವಾ ಸಮಿತಿ ಸಭೆಯಿಂದ ಹೊರನಡೆದರು. 7

ಅಡಿಕೆ ವ್ಯಾಪಾರಿಗೆ ಸೇರಿದ್ದ ಹಣ • ಬೈಕ್‌ನಲ್ಲಿ ಹಿಂಬಾಲಿಸಿ ಕೃತ್ಯ, ನಾಲ್ವರು ಸೆರೆ • ಮಹಿಳೆಯಿಂದ ಸಂಚು

₹ 1 ಕೋಟಿ ಕಳವು: ಚಾಲಕ ಆರೋಪಿ

ಪ್ರಜಾವಾಣಿ ವಾರ್ತೆ


ಕಾರ್ತಿಕ್

ಸ್ವಾಮಿ

ಪವನ್

ಅನುಪಮಾ

ಅಪರಾಧ ಸುದ್ದಿ

ಬೆಂಗಳೂರು: ಚಿತ್ರದುರ್ಗ ಜಿಲ್ಲೆಯ ಭೀಮಸಮುದ್ರದ ಅಡಿಕೆ ವ್ಯಾಪಾರಿ ಎಚ್‌.ಎಸ್‌. ಉಮೇಶ್ ಅವರಿಗೆ ಸೇರಿದ್ದ ₹ 1 ಕೋಟಿ ನಗದು ಕಳ್ಳತನ ಪ್ರಕರಣ ಭೇದಿಸಿರುವ ಉಪ್ಪಾರಪೇಟೆ ಠಾಣೆ ಪೊಲೀಸರು, ಕಾರಿನ ಚಾಲಕ ಸೇರಿ ನಾಲ್ವರನ್ನು ಬಂಧಿಸಿದ್ದಾರೆ.

ಹೊಳಲ್ಕೆರೆ ತಾಲ್ಲೂಕಿನ ತಾಳ್ಯ ಗ್ರಾಮದ ಸ್ವಾಮಿ ಪಿ.ಬಿ. (34), ಬೆಂಗಳೂರು ಮಹದೇವಪುರ ಲಕ್ಷ್ಮಿಸಾಗರ ಬಡಾವಣೆಯ ಅನುಪಮ ಎನ್‌.ಎಂ. (38), ಚಿತ್ರದುರ್ಗ ಜಿಲ್ಲೆಯ ಕೆಳಗೋಟೆಯ ಪವನ್ ಎನ್‌. (30) ಹಾಗೂ ಸಕಲೇಶಪುರ ಮಹೇಶ್ವರಿ-ನಗರದ ಎಸ್‌.ಆರ್‌. ಕಾರ್ತಿಕ್ (27) ಬಂಧಿತರು.

‘ಅ. 7ರಂದು ನಡೆದಿದ್ದ ಕಳ್ಳತನ ಸಂಬಂಧ ಉಮೇಶ್ ದೂರು ನೀಡಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳು ಹಾಗೂ ಇತರೆ ಪುರಾವೆಗಳನ್ನು ಸಂಗ್ರಹಿಸಿ ತನಿಖೆ ನಡೆಸಿದಾಗ, ಉಮೇಶ್ ಸ್ನೇಹಿತನಾಗಿದ್ದ ಕಾರಿನ ಚಾಲಕ ಸ್ವಾಮಿಯೇ ಆರೋಪಿ ಎಂಬುದು ಗೊತ್ತಾಯಿತು. ಆತನನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ಇತರರೂ ಸಿಕ್ಕಿಬಿದ್ದರು’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳಿಂದ ₹ 90.19 ಲಕ್ಷ ನಗದು, ₹ 6.49 ಲಕ್ಷ ಮೌಲ್ಯದ 2 ಐ-ಫೋನ್, 2 ವಾಚ್, 61 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ತಿಳಿಸಿದರು.

ಮಹಿಳೆಯಿಂದ ಸಂಚು: ‘ದೂರುದಾರ ಉಮೇಶ್, ಭೀಮಸಮುದ್ರದ ಶ್ರೀ ಮರುಳಸಿದ್ದೇಶ್ವರ ಟ್ರೇಡರ್ಸ್’ ಪಾಲುದಾರ. ರೈತರಿಂದ ಅಡಿಕೆ ಖರೀದಿಸಿ, ಹೊರ ರಾಜ್ಯಗಳಿಗೆ ರಫ್ತು ಮಾಡುತ್ತಿದ್ದರು. ಅಡಿಕೆ ಖರೀದಿಸಲು ಸ್ನೇಹಿತ ಸ್ವಾಮಿ ಜೊತೆಗೆ ಆಗಾಗ ಹೋಗಿ ಬರುತ್ತಿದ್ದರು. ಬ್ಯೂಟಿಷಿಯನ್ ಆಗಿದ್ದ ಆರೋಪಿ ಅನುಪಮಾ ಜೊತೆ ವಿವಾಹಿತ ಸ್ವಾಮಿ ಸಲುಗೆ ಇಟ್ಟುಕೊಂಡಿದ್ದನೆಂದು ಹೇಳಲಾಗುತ್ತಿದೆ. ಉಮೇಶ್ ಜೊತೆ ಹಣದ ಸಮೇತ ಸುತ್ತಾಡುವ ವಿಷಯವನ್ನು ಸ್ವಾಮಿ, ಅನುಪಮಾಗೆ ಹೇಳುತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ಉಮೇಶ್ ಅವರ ಹಣ ಕಳವು ಮಾಡಲು ಯೋಚಿಸಿದ್ದ ಮಹಿಳೆ, ಇತರೆ ಆರೋಪಿಗಳ ಜೊತೆ ಸೇರಿ ತಿಂಗಳ ಹಿಂದೆಯೇ ಸಂಚು ರೂಪಿಸಿದ್ದರು’ ಎಂದು ತಿಳಿಸಿದರು.

‘ಶಿರಾ ಹಾಗೂ ತುಮಕೂರಿನ ರೈತರಿಂದ ಅಡಿಕೆ ಖರೀದಿಸಲೆಂದು ₹ 1 ಕೋಟಿ ಸಮೇತ ಸ್ನೇಹಿತ ಸ್ವಾಮಿ ಕಾರಿನಲ್ಲಿ ಅ. 7ರಂದು ಮನೆಯಿಂದ ಹೊರಟಿದ್ದರು. ಕಾರಿನ ಡಿಕ್ಕಿಯಲ್ಲಿ ಹಣದ ಬ್ಯಾಗ್ ಇತ್ತು. ಅಡಿಕೆ ಸಿಕ್ಕಿರಲಿಲ್ಲ. ನಂತರ ಚಂದ್ರಾಲೇಔಟ್‌ನಲ್ಲಿರುವ ಮಗಳನ್ನು ಭೇಟಿಯಾಗಲು ಬೆಂಗಳೂರಿಗೆ ಬಂದಿದ್ದರು. ಬೆಂಗಳೂರಿಗೆ ಬರುತ್ತಿದ್ದಂತೆ ಅನುಪಮಾಗೆ ಕರೆ ಮಾಡಿ ‘ಬೆಂಗಳೂರಿಗೆ ಬಂದಿದ್ದೇನೆ. ₹ 1 ಕೋಟಿ ಹಣ ನನ್ನ ಕಾರಿನ ಡಿಕ್ಕಿಯಲ್ಲಿದೆ’ ಎಂದಿದ್ದ. ಮಹಿಳೆ, ಹಣ ಕಳವು ಮಾಡಲು ಪವನ್ ಹಾಗೂ ಕಾರ್ತಿಕ್‌ಗೆ ತಿಳಿಸಿದ್ದರು’ ಎಂದು ಪೊಲೀಸರು ವಿವರಿಸಿದರು.

ಬೈಕ್‌ನಲ್ಲಿ ಹಿಂಬಾಲಿಸಿ ಬ್ಯಾಗ್ ಕಳವು: ‘ಗಾಂಧಿನಗರದಲ್ಲಿ ಊಟ ಮುಗಿಸಿದ್ದ ಉಮೇಶ್ ಹಾಗೂ ಸ್ವಾಮಿ, ಚಂದ್ರಾಲೇಔಟ್‌ಗೆ ಹೋಗಿ ಅಲ್ಲಿಂದ ಚಿತ್ರದುರ್ಗದತ್ತ ಹೊರಟಿದ್ದರು. ಆರೋಪಿಗಳಾದ ಪವನ್ ಹಾಗೂ ಕಾರ್ತಿಕ್, ಬೈಕ್‌ನಲ್ಲಿ ಕಾರು ಹಿಂಬಾಲಿಸಿದ್ದರು. ಡಾಬಸ್‌ಪೇಟೆ ಬಳಿ ಕಾರು ನಿಲ್ಲಿಸಿದ್ದ ಸ್ವಾಮಿ, ಆರೋಪಿಗಳಿಗೆ ಸಂದೇಶ ಕಳುಹಿಸಿದ್ದ. ನಂತರ, ಉಮೇಶ್ ಜೊತೆ ಚಹಾ ಕುಡಿಯಲು ಹೋಟೆಲ್‌ವೊಂದಕ್ಕೆ ಹೋಗಿದ್ದ. ಸ್ಥಳಕ್ಕೆ ಬಂದಿದ್ದ ಆರೋಪಿಗಳು, ನಕಲಿ ಕೀ ಬಳಸಿ ಕಾರಿನ ಡಿಕ್ಕಿ ತೆರೆದು ಹಣದ ಬ್ಯಾಗ್ ಕದ್ದುಕೊಂಡು ಪರಾರಿಯಾಗಿದ್ದರು.’

‘ಚಹಾ ಕುಡಿದ ನಂತರ, ಉಮೇಶ್ ಹಾಗೂ ಸ್ವಾಮಿ ಭೀಮಸಮುದ್ರಕ್ಕೆ ಹೋಗಿದ್ದರು. ಕಾರಿನ ಡಿಕ್ಕಿ ನೋಡಿದಾಗ ಹಣವಿರಲಿಲ್ಲ. ತಮಗೆ ಗೊತ್ತಿಲ್ಲವೆಂದು ಸ್ವಾಮಿ ವಾದಿಸಿದ್ದರು. ಆದರೆ, ಸ್ವಾಮಿ ಮೇಲೆಯೇ ಅನುಮಾನ ವ್ಯಕ್ತಪಡಿಸಿ ಉಮೇಶ್ ದೂರು ನೀಡಿದ್ದರು’ ಎಂದು ತಿಳಿಸಿದರು.

ಸಾಲ ತೀರಿಸಲು ಕಳ್ಳತನ: ‘ಆರೋಪಿಗಳು ಹಲವರ ಬಳಿ ಸಾಲ ಮಾಡಿಕೊಂಡಿದ್ದರು. ಜೊತೆಗೆ, ಐಷಾರಾಮಿ ಜೀವನ ನಡೆಸಲು ಇಚ್ಛಿಸಿದ್ದರು. ಇದೇ ಕಾರಣಕ್ಕೆ ಕಳ್ಳತನ ಮಾಡಿದ್ದಾಗಿ ಅವರು ಹೇಳಿಕೆ ನೀಡಿದ್ದಾರೆ’ ಎಂದು ಪೊಲೀಸರು ಹೇಳಿದರು.

ಅಣ್ಣನ ಹೆಸರಿನಲ್ಲಿ ನಕಲಿ ದಾಖಲೆ: ತಮ್ಮನಿಗೆ 3 ವರ್ಷ ಜೈಲು

ಬೆಂಗಳೂರು: ಅಣ್ಣನ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಆಸ್ತಿಯನ್ನು ತನ್ನ ಹೆಸರಿಗೆ ನೋಂದಣಿ ಮಾಡಿಕೊಂಡಿದ್ದ ಪ್ರಕರಣದಲ್ಲಿ ತಮ್ಮನಿಗೆ 3 ವರ್ಷಗಳ ಜೈಲು ಶಿಕ್ಷೆ ವಿಧಿಸಿ ನಗರದ 10ನೇ ಎಸಿಎಂಎಂ ನ್ಯಾಯಾಲಯ ಆದೇಶ ಹೊರಡಿಸಿದೆ.

ವಿವೇಕನಗರದ ನಿವಾಸಿ ಓಂಪ್ರಕಾಶ್ ನಕಲಿ ದಾಖಲೆ ಸೃಷ್ಟಿಸಿದ್ದ ಸಂಬಂಧ 2007ರಲ್ಲಿ ಹಲಸೂರು ಠಾಣೆಗೆ ದೂರು ನೀಡಿದ್ದರು. ಇದೇ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ಅಂಜಲಿ ಶರ್ಮ ವಿ.ಎಸ್‌. ಅವರು ನಡೆಸಿದ್ದರು. ಹಿರಿಯ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳಾದ ಬಿ.ವೈ. ಕೆಂಬಾವಿ ಹಾಗೂ ವಿ. ವಸಂತಾ ವಾದಿಸಿದ್ದರು.

ಏನಿದು ಪ್ರಕರಣ: ‘ದೂರುದಾರ ಓಂಪ್ರಕಾಶ್ ಹಾಗೂ ಆರೋಪಿ ಜೈಶೀಲ್, ಅಣ್ಣ-ತಮ್ಮ. ತಂದೆಯ ಹೆಸರಿನಲ್ಲಿ ಆಸ್ಟಿನ್ ಟೌನ್‌ನಲ್ಲಿ ಮನೆ ಇತ್ತು. ತಂದೆ ಮಾಡಿಟ್ಟಿದ್ದ ವಿಲ್ ಪ್ರಕಾರ ಮನೆಯಲ್ಲಿ ಇಬ್ಬರೂ ಸಮಪಾಲು ಪಡೆಯಬೇಕಿತ್ತು. ಮನೆಯನ್ನು ಪೂರ್ತಿಯಾಗಿ ತನ್ನದಾಗಿಸಿಕೊಳ್ಳಲು ತಮ್ಮ ಯೋಚಿಸಿದ್ದ’ ಎಂದು ಪೊಲೀಸರು ಹೇಳಿದರು.

‘ಸಂಬಂಧಿ ವೇಲು ಹಾಗೂ ಬಾಮೈದ ರಾಜೇಂದ್ರ ಜೊತೆ ಸೇರಿ ಜೈಶೀಲ್ ಸಂಚು ರೂಪಿಸಿದ್ದ. ಬಾಮೈದನನ್ನೇ ತನ್ನ ಅಣ್ಣನೆಂದು ಹೇಳಿಕೊಂಡು ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದ. ನೋಂದಣಾಧಿಕಾರಿ ಕಚೇರಿಗೂ ಬಾಮೈದನನ್ನು ಕರೆದೊಯ್ದು ಮನೆಯನ್ನು ತನ್ನ ಹೆಸರಿಗೆ ನೋಂದಣಿ ಮಾಡಿಸಿಕೊಂಡಿದ್ದ.’

‘ಮನೆಯ ಸೇಲ್‌ಡೀಡ್‌ನಲ್ಲಿದ್ದ ಅಣ್ಣನ ಹೆಸರಿನ ಮುಂದೆ ಬಾಮೈದನ ಫೋಟೊ ಇತ್ತು. ಕೆಲ ದಿನಗಳ ನಂತರ, ನಕಲಿ ದಾಖಲೆ ಸೃಷ್ಟಿಸಿದ್ದ ವಿಷಯ ದೂರುದಾರರಿಗೆ ಗೊತ್ತಾಗಿತ್ತು. ಅವಾಗಲೇ ಅವರು ಠಾಣೆಗೆ ದೂರು ನೀಡಿದ್ದರು. ತನಿಖೆ ನಡೆಸಿದ್ದ ಹಲಸೂರು ಠಾಣೆಯ ಅಂದಿನ ಪಿಎಸ್‌ಐ ಮಹಮ್ಮದ್, ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಆರೋಪಿ ವೇಲು ಈಗಾಗಲೇ ತೀರಿಕೊಂಡಿದ್ದಾರೆ. ಪ್ರಕರಣದಲ್ಲಿ ಜೈಶೀಲ್ ಹಾಗೂ ಬಾಮೈದ ರಾಜೇಂದ್ರನಿಗೆ ಇದೀಗ 3 ವರ್ಷಗಳ ಜೈಲು ಶಿಕ್ಷೆ ಆಗಿದೆ’ ಎಂದು ಹೇಳಿದರು.

ರೈಲ್ವೆ ಮಂಡಳಿ ನಿರ್ದೇಶಕ ಹುದ್ದೆ: ₹ 31.40 ಲಕ್ಷ ವಂಚನೆ

ಬೆಂಗಳೂರು: ರೈಲ್ವೆ ಮಂಡಳಿ ಅಥವಾ ಕೇಂದ್ರ ಸರ್ಕಾರದ ಎಸ್‌.ಸಿ ಆಯೋಗದಲ್ಲಿ ನಿರ್ದೇಶಕ ಹುದ್ದೆ ಕೊಡಿಸುವುದಾಗಿ ಹೇಳಿ ₹ 31.40 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ನಗರದ ನಿವಾಸಿಯಾಗಿರುವ 58 ವರ್ಷದ ವ್ಯಕ್ತಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿಗಳಾದ ದೆಹಲಿಯ ಅನೂಪ್ ಚೌಧರಿ ಹಾಗೂ ಸರಿತಾ ಶೆಟ್ಟಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ದಾಖಲೆಗಳ ಪರಿಶೀಲನೆ ನಡೆಸಿ, ಆರೋಪಿಗಳ ವಿಚಾರಣೆ ನಡೆಸಬೇಕಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ಸರಿತಾ, ಸನ್‌ಪ್ಲೇಸ್ ಸಾಫ್ಟ್‌ವೇರ್ ಟೆಕ್ನಾಲಜೀಸ್ ಕಂಪನಿ ವ್ಯವಸ್ಥಾಪಕ ನಿರ್ದೇಶಕರೆಂದು ಗೊತ್ತಾಗಿದೆ. ಸಮಾಜ ಕಲ್ಯಾಣ ಅಧಿಕಾರಿಯೊಬ್ಬರು ಮೂಲಕ 2022ರಲ್ಲಿ ದೂರುದಾರರಿಗೆ ಸವಿತಾ ಪರಿಚಯವಾಗಿತ್ತು. ಕೇಂದ್ರ ಸರ್ಕಾರದ ಆಹಾರ ನಿಗಮ ಮಂಡಳಿ ಸದಸ್ಯರೆಂದು ಹೇಳಿಕೊಂಡಿದ್ದ ಅವರು, ‘ದೆಹಲಿಯ ಅನೂಪ್ ಚೌಧರಿ ನನ್ನನ್ನು ಹುದ್ದೆಗೆ ಶಿಫಾರಸು ಮಾಡಿದ್ದರು. ನಿಮಗೂ ಸರ್ಕಾರದ ಯಾವುದಾದರೂ ನಿಗಮ ಮಂಡಳಿಯಲ್ಲಿ ಹುದ್ದೆ ಕೊಡಿಸುತ್ತೇನೆ’ ಎಂದಿದ್ದರು.’ ‘ಆರೋಪಿ ಮಾತು ನಂಬಿದ್ದ ದೂರುದಾರ, ₹ 30 ಲಕ್ಷ ನೀಡಿದ್ದರು. ಹಲವು ದಿನವಾದರೂ ಹುದ್ದೆ ಕೊಡಿಸಿರಲಿಲ್ಲ. ಹಣ ನೀಡುವಂತೆ ದೂರುದಾರರು ಒತ್ತಾಯಿಸಿದ್ದರು. 8 ತಿಂಗಳ ನಂತರ ಆರೋಪಿ ಹಣ ವಾಪಸು ಕೊಟ್ಟಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎರಡನೇ ಬಾರಿ ವಂಚನೆ: ‘ನಿಗಮಮಂಡಳಿ ನಿರ್ದೇಶಕ ಹುದ್ದೆ ಕೊಡಿಸುವುದಾಗಿ ಪುನಃ ಹೇಳಿದ್ದ ಸರಿತಾ, ದೆಹಲಿಗೆ ಹೋಗಿ ಅನೂಪ್ ಚೌಧರಿಯನ್ನು ಭೇಟಿಯಾಗೋಣವೆಂದಿದ್ದರು. ಅದನ್ನು ನಂಬಿದ್ದ ದೂರುದಾರ, 2023ರ ಮಾರ್ಚ್ 15ರಂದು ದೆಹಲಿಗೆ ಹೋಗಿದ್ದರು’ ಎಂದು ಮೂಲಗಳು ಹೇಳಿವೆ.

‘ಕೇಂದ್ರ ಸರ್ಕಾರದ ಎಸ್‌.ಸಿ ಆಯೋಗ ಅಥವಾ ರೈಲ್ವೆ ಮಂಡಳಿಯಲ್ಲಿ ನಾಮ ನಿರ್ದೇಶಕ ಹುದ್ದೆ ಕೊಡಿಸುವುದಾಗಿ ಹೇಳಿದ್ದ ಅನೂಪ್, ಹಂತ ಹಂತವಾಗಿ ₹ 31.40 ಲಕ್ಷ ಪಡೆದಿದ್ದರು. ಇದಾಗಿ ಹಲವು ದಿನವಾದರೂ ಯಾವುದೇ ಹುದ್ದೆ ಕೊಡಿಸಿಲ್ಲ. ಹಣವನ್ನು ವಾಪಸು ನೀಡಿಲ್ಲ’ ಎಂದಿವೆ.

ಕೆರೆಕತ್ತಿಗನೂರು: ಚಿರತೆ ಕುಳಿತಿರುವ ದೃಶ್ಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆ

ಆತಂಕ ಮೂಡಿಸಿದ ಚಿರತೆ ಓಡಾಟ!

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಸೋಂಪುರ ಹೋಬಳಿಯ ಕೆರೆಕತ್ತಿಗನೂರು ಗ್ರಾಮದ ಮಾರುತಿನಗರ, ಇಂದಿರಾನಗರ ಭಾಗದಲ್ಲಿ ಮಂಗಳವಾರ (ಅ.31) ರಾತ್ರಿ 9 ಗಂಟೆ ಸುಮಾರಿಗೆ ಚಿರತೆ ಕಾಣಿಸಿಕೊಂಡು ಸಾರ್ವಜನಿಕರಲ್ಲಿ ಆತಂಕ ಹುಟ್ಟಿಸಿದೆ.

ಗ್ರಾಮದಲ್ಲಿರುವ ಖಾಸಗಿ ಗೋದಾಮಿನ ಕಾಂಪೌಂಡ್ ಮೇಲೆ ಚಿರತೆ ಕುಳಿತಿರುವ ದೃಶ್ಯ ಸಮೀಪದಲ್ಲಿದ್ದ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಕಾಂಪೌಂಡ್ ಮೇಲೆ ಚಿರತೆ ಕುಳಿತಿರುವುದು

ಚಿರತೆ ಓಡಾಟದ ಸುದ್ದಿ ತಿಳಿಯುತ್ತಿದ್ದಂತೆ ಕುಲುವನಹಳ್ಳಿ ಪಂಚಾಯತಿ ವತಿಯಿಂದ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಧ್ವನಿವರ್ಧಕದ ಮೂಲಕ ಸಾರ್ವಜನಿಕರಿಗೆ ಮಾಹಿತಿ ನೀಡಿ, ’ಚಿರತೆ ಕಂಡರೆ ಅರಣ್ಯಾಧಿಕಾರಿಗಳಿಗೆ ತಿಳಿಸಬೇಕು. ರಾತ್ರಿ ವೇಳೆ ಬ್ಯಾಟರಿ, ಕೋಲು, ಹಿಡಿದು ಎಚ್ಚರಿಕೆಯಿಂದ ಸಂಚರಿಸಬೇಕು’ ಎಂದು ಜಾಗೃತಿ ಮೂಡಿಸಲಾಗಿದೆ.

ರಾಷ್ಟ್ರೀಯ ಹೆದ್ದಾರಿ 48 ರಿಂದ ಶಿವಗಂಗೆ ಹಾದು ಹೋಗುವ ರಸ್ತೆಯಲ್ಲಿ, ತಡ ರಾತ್ರಿ ಸಂಚರಿಸುವವರು ಎಚ್ಚರವಹಿಸಬೇಕು. ಗೆದ್ದಲಹಳ್ಳಿ, ಆಲದಹಳ್ಳಿ, ಕೆರೆ-ಕತ್ತಿಗನೂರು, ಹನುಮಂತಪುರ, ಇಂದಿರಾನಗರ, ಮಹಿಮಾಪುರ ಗ್ರಾಮದ ಜನತೆ ಎಚ್ಚರಿಕೆಯಿಂದ ಇರಬೇಕು. ಅದಷ್ಟೂ ಬೇಗ ಬೋನ್ ಇಡುತ್ತೇವೆ ಎಂದು ಅರಣ್ಯಾಧಿಕಾರಿ ಮಲ್ಲಿಕಾರ್ಜುನ ಕಣವಿ ತಿಳಿಸಿದ್ದಾರೆ.

ಆಲದಹಳ್ಳಿ-ಮಹಿಮರಂಗ ಬೆಟ್ಟ, ರಾಕ್ಷಸಿ ಬಂಡೆ, ಬೆಟ್ಟದ ತಪ್ಪಲಿನ ವ್ಯಾಪ್ತಿಯಲ್ಲಿರುವ ಅರಣ್ಯ ಪ್ರದೇಶ ಚಿರತೆ ಆವಾಸಸ್ಥಾನವಾಗಿದ್ದು, ಎರಡು-ಮೂರು ಮರಿಗಳೊಂದಿಗೆ ತಾಯಿ ಚಿರತೆ ಸಂಚರಿಸುತ್ತಿದೆ ಎಂದು ಸ್ಥಳೀಯರಾದ ನಟರಾಜು ತಿಳಿಸಿದ್ದಾರೆ.

’ಚಿರತೆ ಹಿಡಿಯಲು ಬೋನ್ ಇಡುವಂತೆ ಅರಣ್ಯ ಇಲಾಖೆಗೆ ಮನವಿ ಮಾಡಿದ್ದೇವೆ. ಚಿರತೆ ಓಡಾಟದ ಕುರಿತು ಧ್ವನಿ ವರ್ಧಕದ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಿದ್ದೇವೆ’ ಎಂದು ಕುಲುವನಹಳ್ಳಿ ಗ್ರಾಮ ಪಂಚಾಯತಿ ಪಿಡಿಒ ಮೋಹನ್ ಕುಮಾರ್ ತಿಳಿಸಿದ್ದಾರೆ.

ಸ್ಫೋಟಕ್ಕೆ ಸಂಚು: ಎನ್‌ಐಎಗೆ ಕಡತ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಂಬ್ ಸ್ಫೋಟಕ್ಕೆ ಸಂಚು ರೂಪಿಸಿದ್ದ ಬಗ್ಗೆ ಹೆಬ್ಬಾಳ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಕೈಗೆತ್ತಿಕೊಂಡಿದ್ದು, ಬಂಧಿತ ಶಂಕಿತರನ್ನು ಸದ್ಯದಲ್ಲೇ ಕಸ್ಟಡಿಗೆ ಪಡೆದು ವಿಚಾರಣೆ ನಡೆಸುವ ಸಾಧ್ಯತೆ ಇದೆ.

‘ನಗರದ ಹಲವು ಸ್ಥಳಗಳಲ್ಲಿ ಬಾಂಬ್ ಸ್ಫೋಟಕ್ಕೆ ಸಂಚು ರೂಪಿಸುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಹೆಬ್ಬಾಳ ಠಾಣೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿ, ಶಂಕಿತರಾದ ಸೈಯದ್ ಸುಹೇಲ್ ಖಾನ್, ಜಾಹೀದ್ ತಬ್ರೇಜ್, ಸೈಯದ್ ಮುದಾಸೀರ್ ಪಾಷಾ, ಮಹಮ್ಮದ್ ಫೈಜಲ್ ರಬ್ಬಾನಿ, ಹಾಗೂ ಮೊಹಮ್ಮದ್ ಉಮರ್‌ನನ್ನು ಬಂಧಿಸಲಾಗಿತ್ತು’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ಕಾನೂನು ಬಾಹಿರ ಚಟುವಟಿಕೆಗಳ ತಡೆ (ಯುಎಪಿಎ) ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಆರೋಪಿಗಳನ್ನು ಕಸ್ಟಡಿಗೆ ಪಡೆದು ತನಿಖೆ ಮುಂದುವರಿಸ-ಲಾಗಿತ್ತು. ಸದ್ಯ ಪ್ರಕರಣದ ತನಿಖೆಯನ್ನು ಎನ್‌ಐಎ ಕೈಗೆತ್ತಿಕೊಂಡಿದೆ. ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲ ಕಡತಗಳನ್ನು ಈಗಾಗಲೇ ಎನ್‌ಐಎ ಅಧಿಕಾರಿಗಳಿಗೆ ಹಸ್ತಾಂತರಿಸಲಾಗಿದೆ’ ಎಂದು ತಿಳಿಸಿವೆ.

ಗ್ರೆನೇಡ್ ನಾಶ: ‘ಶಂಕಿತ ಜಾಹೀದ್ ತಬ್ರೇಜ್ ವಾಸವಿದ್ದ ಕೊಡಿಗೇಹಳ್ಳಿಯ ಭದ್ರಪ್ಪ ಬಡಾವಣೆಯಲ್ಲಿರುವ ಮನೆಯಲ್ಲಿ 4 ಗ್ರೆನೇಡ್‌ಗಳು ಪತ್ತೆಯಾಗಿದ್ದವು. ನ್ಯಾಯಾಲಯದ ಅನುಮತಿಯಂತೆ ಗ್ರೆನೇಡ್‌ಗಳನ್ನು ಈಗಾಗಲೇ ನಾಶಪಡಿಸಲಾಗಿದೆ’ ಎಂದು ಸಿಸಿಬಿ ಮೂಲಗಳು ಹೇಳಿವೆ. ‘7 ನಾಡ ಪಿಸ್ತೂಲ್, 45 ಗುಂಡುಗಳು, 12 ಮೊಬೈಲ್, ಡ್ಯಾಗರ್ ಹಾಗೂ 4 ವಾಕಿಟಾಕಿ ಮಾದರಿ ಉಪಕರಣಗಳನ್ನು ಆರೋಪಿಗಳಿಂದ ಜಪ್ತಿ ಮಾಡಲಾಗಿತ್ತು’ ಎಂದು ತಿಳಿಸಿವೆ.

ಬಿಜೆಪಿ ಟಿಕೆಟ್ ವಂಚನೆ: ವಾರದೊಳಗೆ ಚಾರ್ಜ್‌ಶೀಟ್

ಬೆಂಗಳೂರು: ಬಿಜೆಪಿ ಟಿಕೆಟ್ ವಂಚನೆ ಪ್ರಕರಣದ ದೋಷಾರೋಪ ಪಟ್ಟಿ ಸಿದ್ಧತೆ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ವಾರದೊಳಗೆ ನ್ಯಾಯಾಲಯಕ್ಕೆ ಸಲ್ಲಿಕೆಯಾಗುವ ಸಾಧ್ಯತೆ ಇದೆ.

ಉಡುಪಿಯ ಉದ್ಯಮಿ ಗೋವಿಂದ ಬಾಬು ಪೂಜಾರಿ ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಂಡಿದ್ದ ಸಿಸಿಬಿ ಪೊಲೀಸರು, ಪ್ರಮುಖ ಆರೋಪಿ ಚೈತ್ರಾ ಕುಂದಾಪುರ, ಹಿರೇಹಡಗಲಿ ಹಾಲಸ್ವಾಮಿ ಮಠದ ಹಾಲವೀರಪ್ಪ ಸ್ವಾಮೀಜಿ ಹಾಗೂ ಇತರರನ್ನು ಈಗಾಗಲೇ ಬಂಧಿಸಿದ್ದಾರೆ.

‘ಬಂಡೆಪಾಳ್ಯ ಠಾಣೆಯಲ್ಲಿ ದಾಖಲಾಗಿದ್ದ ದೂರಿನಲ್ಲಿದ್ದ ಸಂಗತಿಗಳಿಗೆ ತಕ್ಕಂತೆ ತನಿಖೆ ನಡೆಸಲಾಗಿದೆ. ದೂರುದಾರರು ಹಾಗೂ 68 ಸಾಕ್ಷಿದಾರರ ಹೇಳಿಕೆ ಪಡೆಯಲಾಗಿದೆ. ಅದಕ್ಕೆ ಸಂಬಂಧಪಟ್ಟ ಪೂರಕ ಪುರಾವೆಗಳನ್ನು ಸಂಗ್ರಹಿಸಲಾಗಿದೆ. ಆರೋಪಿಗಳ ಮೊಬೈಲ್ ಜಪ್ತಿ ಮಾಡಿ ವಿಧಿವಿಜ್ಞಾನ ಪ್ರಯೋ-ಗಾಲಯಕ್ಕೆ ಕಳುಹಿಸಲಾಗಿದ್ದು, ಕೆಲವೇ ದಿನಗಳಲ್ಲಿ ವರದಿ ಬರಲಿದೆ. ಇದಾದ ನಂತರ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲಾಗುವುದು’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ಚೈತ್ರಾ, ಹಾಲವೀರಪ್ಪ ಸ್ವಾಮೀಜಿ ಸೇರಿ 7 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಿದ್ಧಪಡಿಸಲಾಗುತ್ತಿದೆ. ಆರೋಪಿಗಳಿಂದ ಈಗಾಗಲೇ ₹ 4.11 ಕೋಟಿ ಜಪ್ತಿ ಮಾಡಲಾಗಿದೆ. ಟಿಕೆಟ್ ಸಂಬಂಧ ನಡೆದಿದ್ದ ಮಾತುಕತೆಗೆ ಸಂಬಂಧಪಟ್ಟಂತೆ 10 ವಿಡಿಯೊಗಳು ಸಿಕ್ಕಿದ್ದು, ಅವುಗಳ ಪರಿಶೀಲನೆಯೂ ಮುಗಿದಿದೆ’ ಎಂದು ತಿಳಿಸಿವೆ.

ಸುದ್ದಿ 2 ನಿಮಿಷ

ಮಾಲ್‌ನಲ್ಲಿ ಲೈಂಗಿಕ ದೌರ್ಜನ್ಯ: ನ್ಯಾಯಾಲಯಕ್ಕೆ ಶರಣಾದ ನಿವೃತ್ತ ಶಿಕ್ಷಕ

ಬೆಂಗಳೂರು: ರಾಜಾಜಿನಗರದ ಲುಲು ಶಾಪಿಂಗ್ ಮಾಲ್‌ನಲ್ಲಿ ಯುವತಿಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿ ಅಶ್ವತ್ಥನಾರಾಯಣ (63) ಅವರು ನ್ಯಾಯಾಲಯಕ್ಕೆ ಗುರುವಾರ ಶರಣಾಗಿದ್ದಾರೆ.

ಅ. 29ರಂದು ಲುಲು ಮಾಲ್‌ನಲ್ಲಿ ನಡೆದಿದ್ದ ಲೈಂಗಿಕ ದೌರ್ಜನ್ಯದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಮಾಗಡಿ ರಸ್ತೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

‘ನಿವೃತ್ತ ಶಿಕ್ಷಕ ಅಶ್ವತ್ಥನಾರಾಯಣ ಅವರಿಗಾಗಿ ಹುಡುಕಾಟ ನಡೆಸ-ಲಾಗುತ್ತಿತ್ತು. ವಿಳಾಸ ಪತ್ತೆ ಮಾಡಿ ನೋಟಿಸ್ ನೀಡಿದರೂ ಆರೋಪಿ ವಿಚಾರಣೆಗೆ ಬಂದಿರಲಿಲ್ಲ. ಗುರುವಾರ ಮಧ್ಯಾಹ್ನ ವಕೀಲರ ಸಮೇತ ಎಸಿಎಂಎಂ ನ್ಯಾಯಾಲಯಕ್ಕೆ ಆರೋಪಿ ಶರಣಾಗಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ಪರ ವಕೀಲರು, ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಅವರ ಮನವಿ ಪುರಸ್ಕರಿಸಿರುವ ನ್ಯಾಯಾಲಯ, ಆರೋಪಿಗೆ ಜಾಮೀನು ನೀಡಿದೆ. ಸದ್ಯ ಆರೋಪಿ ಮನೆಗೆ ಹೋಗಿದ್ದಾರೆ. ಕಾನೂನು ತಜ್ಞರ ಸಲಹೆ ಪಡೆದು ಮುಂದಿನ ಕ್ರಮ ಜರುಗಿಸಲಾಗುವುದು’ ಎಂದು ತಿಳಿಸಿವೆ.

ಕೆಎಸ್‌ಆರ್‌ಟಿಸಿ–ಜಯದೇವ ಆಸ್ಪತ್ರೆ ಒಡಂಬಡಿಕೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ತನ್ನ ಸಿಬ್ಬಂದಿಗೆ ಹತ್ತು ಮಾದರಿಯ ಹೃದಯ ಸಂಬಂಧಿತ ಕಾಯಿಲೆಗಳ ತಪಾಸಣೆಗಾಗಿ ಐದು ವರ್ಷಗಳ ಅವಧಿಗೆ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯೊಂದಿಗೆ ಗುರುವಾರ ಒಡಂಬಡಿಕೆ ಮಾಡಿಕೊಂಡಿದೆ.

ನಿಗಮದಲ್ಲಿ ಒಟ್ಟು 34,000 ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದು, ಆ ಪೈಕಿ 24,686 ಚಾಲಕ ಮತ್ತು ನಿರ್ವಾಹಕರಾಗಿದ್ದಾರೆ. ವಿವಿಧ ಕಾರಣಗಳಿಂದಾಗಿ ನೌಕರರಲ್ಲಿ ಹೃದಯ ಸಂಬಂಧಿ ಕಾಯಿಲೆಗಳು ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾಗಿದೆ. ಹೀಗಾಗಿ, ಮುಂದಿನ ಐದು ವರ್ಷಗಳವರೆಗೆ ನಿಯಮಿತವಾಗಿ ಹೃದಯ ತಪಾಸಣೆ ನಡೆಸಲು ಒಪ್ಪಂದ ಮಾಡಿಕೊಳ್ಳಲಾಯಿತು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾಹಿತಿ ನೀಡಿದರು.

ಜಯದೇವ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಮಾತನಾಡಿ, ‘ಕೆಎಸ್‌ಆರ್‌ಟಿಸಿಯೊಂದಿಗಿನ ಒಪ್ಪಂದದ ಪ್ರಕಾರ 40 ವರ್ಷ ದಾಟಿದ ಎಲ್ಲ ಸಿಬ್ಬಂದಿಯೂ ತಪಾಸಣೆ ಮಾಡಿಸಿಕೊಳ್ಳಬಹುದು’ ಎಂದರು.

ನಿಗಮದ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಮಾತನಾಡಿ, ‘ತಪಾಸಣೆಗೆ ಒಳಗಾಗುವ ಪ್ರತಿ ನೌಕರರ ಪರವಾಗಿ ನಿಗಮವು ₹ 1200 ಅನ್ನು ಜಯದೇವ ಆಸ್ಪತ್ರೆಗೆ ಪಾವತಿಸಲಾಗುತ್ತದೆ. ಅಂದರೆ ವರ್ಷಕ್ಕೆ ₹ 2.55 ಕೋಟಿ ಪಾವತಿ ಮಾಡಲಾಗುತ್ತದೆ’ ಎಂದು ವಿವರಿಸಿದರು.

ಕನ್ನಡ ಸಂಘರ್ಷ ಸಮಿತಿ ಇತ್ತೀಚೆಗೆ ಆಯೋಜಿಸಿದ್ದ 45ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಎಚ್‌.ಎಲ್‌. ಯಮುನಾ ಅವರಿಗೆ ‘ನಿಸ್ಸೀಮ ಕನ್ನಡತಿ’, ಎಲ್‌. ಶಿವಶಂಕರ್ ಅವರಿಗೆ ‘ಕನ್ನಡ ಕಟ್ಟಾಳು’ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. (ಎಡದಿಂದ) ಸಾಹಿತಿಗಳಾದ ಗಾಯತ್ರಿ ರಾಮಣ್ಣ, ವಸುಂಧರಾ ಭೂಪತಿ, ಸಮಿತಿಯ ಪದಾಧಿಕಾರಿ ಶಾಂತಲಾ ಸುರೇಶ್, ಕನ್ನಡಪರ ಚಿಂತಕ ರಾಮಣ್ಣ ಎಚ್‌. ಕೋಡಿಹೊಸಹಳ್ಳಿ, ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲದೇಶಿಕೇಂದ್ರ ಸ್ವಾಮೀಜಿ ಇದ್ದರು –ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಪುರಂದರದಾಸರ ಜಯಂತಿ: ಗಣಪತಿ ಹೋಮ, ಅಷ್ಟಪದಿ: ರಾಜಮಣಿ ಭಾಗವತ, ಪಂಚಪದಿ: ಅವಿಕೆ ರಾಜಸಿಂಹನ್ ಭಾಗವತ, ‘ಪುರಂದರದಾಸರ’ ಕೀರ್ತನ ಉಪನ್ಯಾಸ: ವಿಜಯಕೃಷ್ಣ ಭಾಗವತ, ಬಾಲಾಜಿ ಭಾಗವತ, ಆಯೋಜನೆ: ನಮ್ಮಸಮರಣ, ಸ್ಥಳ: ಸೌರಭಾರತಿ ಸಂಸ್ಕೃತಿ ಕಲ್ಚರ್ ಫೌಂಡೇಷನ್, ಕಲ್ಯಾಣ ನಗರ, ಬೆಳಿಗ್ಗೆ 5ರಿಂದ

ಓಪನ್ ಸೈನ್ಸ್ ಡೇ–2023: ಆಯೋಜನೆ: ಬ್ರೇಕ್ ಥ್ರೂ ಸೈನ್ಸ್ ಸೊಸೈಟಿ, ಸ್ಥಳ: ಮಹಾಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರ, ಬೆಳಿಗ್ಗೆ 9

‘ಕಂಪ್ಯುಟೇಷನಲ್ ಸಿಸ್ಟಮ್ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಸಮಸ್ಯೆಗೆ ಸುಸ್ಥಿರ ಪರಿಹಾರ’ ಕುರಿತು ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಎಸ್‌.ಎಸ್‌. ಅಯ್ಯಂಗಾರ್, ವೆಂಕಟ ಕೊಡವಟಿ, ಯು.ಬಿ. ರೆಡ್ಡಿ, ದೀಪಾ ಶಣೈ, ಅಧ್ಯಕ್ಷತೆ: ಎಂ.ಪಿ. ಶ್ಯಾಮ್, ಆಯೋಜನೆ ಮತ್ತು ಸ್ಥಳ: ಆರ್‌.ವಿ. ತಾಂತ್ರಿಕ ಮಹಾವಿದ್ಯಾಲಯ, ಮೈಸೂರು ರಸ್ತೆ, ಬೆಳಿಗ್ಗೆ 9

‘ಶಾಸಕರ ರಾಜ್ಯೋತ್ಸವ’ ಪ್ರಶಸ್ತಿ ಪ್ರದಾನ: ಅತಿಥಿ: ಎಸ್‌.ಟಿ. ಸೋಮಶೇಖರ್, ಆಯೋಜನೆ: ಎಸ್‌.ಟಿ. ಸೋಮಶೇಖರ್ ರಾಜ್ಯೋತ್ಸವ ಸಮಿತಿ, ಸ್ಥಳ: ಬಂಡೇಮಠ ಕಲ್ಯಾಣಮಂಟಪ, ಕೊಮ್ಮಘಟ್ಟ ರಸ್ತೆ, ಕೆಂಗೇರಿ ಉಪನಗರ, ಬೆಳಿಗ್ಗೆ 10

‘ರಾಜಪ್ಪ ದಳವಾಯಿ ಅವರ ಸಾಂಸ್ಕೃತಿಕ ಚಿಂತನೆ’ ಕುರಿತು ರಾಜ್ಯಮಟ್ಟದ ವಿಚಾರಸಂಕಿರಣ: ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಎಲ್‌. ಹನುಮಂತಯ್ಯ, ಅತಿಥಿ: ಎಚ್‌.ಎಲ್‌. ಪುಷ್ಪ, ಆಯೋಜನೆ: ಪದ, ಸ್ಥಳ: ನಯನ ರಂಗಮಂದಿರ, ಜೆ.ಸಿ. ರಸ್ತೆ, ಬೆಳಿಗ್ಗೆ 10ರಿಂದ

ಬರಗೂರು ರಾಮಚಂದ್ರಪ್ಪ

‘ಕೆಂಗಲ್ ಹನುಮಂತಯ್ಯ ಸಂಸ್ಕೃತಿ ದತ್ತಿ’ ಪ್ರಶಸ್ತಿ ಪ್ರದಾನ: ಸಿ.ಎನ್‌.ಆರ್‌. ರಾವ್, ಪ್ರಶಸ್ತಿ ಪುರಸ್ಕೃತರು: ಶಿವರಾಜ ವಿ. ಪಾಟೀಲ, ಅಧ್ಯಕ್ಷತೆ: ಮಹೇಶ ಜೋಶಿ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಜವಾಹರಲಾಲ್ ನೆಹರು ಉನ್ನತ ವಿಜ್ಞಾನ ಸಂಶೋಧನಾ ಕೇಂದ್ರ, ಜಕ್ಕೂರು, ಬೆಳಿಗ್ಗೆ 10.30

‘ಹರಿಪುರ ಪ್ಯಾನಲ್ಸ್’ ಪ್ರದರ್ಶನದ ಉದ್ಘಾಟನೆ: ಥಾವರಚಂದ್ ಗೆಹಲೋತ್, ಉಪಸ್ಥಿತಿ: ಎಂ.ಜೆ. ಕಮಲಾಕ್ಷಿ, ಚಿರಂಜೀವಿ ಸಿಂಘ್, ಸುಧಾಕರ್ ರಾವ್, ನಜನೀನ್ ಬಾನು, ಸ್ಥಳ: ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್, ಅರಮನೆ ರಸ್ತೆ, ಮಧ್ಯಾಹ್ನ 3.30

ದತ್ತಿ ಉಪನ್ಯಾಸ: ಪ್ರೇಮಾ ಸಿದ್ಧರಾಜ್, ಅಧ್ಯಕ್ಷತೆ: ಪ್ರಮೀಳಾ ಗರಡಿ, ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ಎಸ್‌.ವಿ. ಮಂಜುಳಾ ಕಿರಣ್, ಆಯೋಜನೆ: ದಿಬ್ಬೂರ್ ವೀರಪ್ಪ ನಂಜಮ್ಮ ಸ್ಮಾರಕ, ಬೆಂಗಳೂರು ನಗರ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಸ್ಥಳ: ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, ಸಂಜೆ 4

ಹೈಕೋರ್ಟ್‌ಗೆ ರಾಜ್ಯ ಸರ್ಕಾರದ ಪ್ರಮಾಣಪತ್ರ

ಸಾರ್ವಜನಿಕ ಶೌಚಾಲಯ: ಕ್ರಿಯಾಯೋಜನೆ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಂದಿನ ಎರಡು ವರ್ಷಗಳಲ್ಲಿ ಏರಿಕೆಯಾಗಬಹು-ದಾದ ಅಂದಾಜು ಜನಸಂಖ್ಯೆಯ ಪ್ರಮಾಣವನ್ನು ಅಧರಿಸಿ ಅದರಲ್ಲಿನ ಶೇ 5ರಷ್ಟು ‘ಬಂದು ಹೋಗುವ ಜನಸಂಖ್ಯೆ’ಗೆ (ಫ್ಲೋಟಿಂಗ್ ಪಾಪುಲೇಷನ್) ಅನುಗುಣವಾಗಿ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಶೌಚಾಲಯ ಮತ್ತು ಮೂತ್ರಾಲಯಗಳನ್ನು ನಿರ್ಮಿಸಲು ಸೂಕ್ತ ಕ್ರಿಯಾ ಯೋಜನೆ ಸಿದ್ಧಪಡಿ-ಸಲಾಗಿದೆ‘ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ಸಾರ್ವಜನಿಕ ಶೌಚಾಲಯಗಳ ಸ್ಥಿತಿಗತಿ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ, 'ಲೆಟ್ಸ್ ಕಿಟ್ ಫೌಂಡೇಷನ್' ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು ಈ ಕುರಿತಂತೆ ನಗರಾಭಿವೃದ್ಧಿ ಇಲಾಖೆಯ ಪ್ರಮಾಣ ಪತ್ರವನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, ಅರ್ಜಿಯಲ್ಲಿ ಕಾನೂನು ಸೇವಾ ಪ್ರಾಧಿಕಾರವನ್ನು ಪ್ರತಿವಾದಿಯನ್ನಾಗಿಸಿತು. ‘ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಮತ್ತು ತಾಲ್ಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿಯು ಕ್ರಿಯಾ ಯೋಜನೆ ಬಗ್ಗೆ ಸ್ಥಳಕ್ಕೆ ಭೇಟಿ ನೀಡಿ ಸ್ವತಂತ್ರ ಪರಿಶೀಲನಾ ವರದಿ ಸಲ್ಲಿಸಬೇಕು‘ ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿತು.

‘ಕ್ರಿಯಾ ಯೋಜನೆಗೆ ಕೇಂದ್ರ ಸರ್ಕಾರದ ಹಣವೆಷ್ಟು? ರಾಜ್ಯದ ಪಾಲಿನ ಅನುದಾನ ಎಷ್ಟು? ಅದನ್ನು ಹೇಗೆ ಬಳಸಲಾಗುತ್ತಿದೆ. ಕ್ರಿಯಾ ಯೋಜನೆಯ ಅನುಷ್ಠಾನ ಹೇಗೆ ಎಂಬ ವಿವರಗಳನ್ನು ಸಲ್ಲಿಸಬೇಕು‘ ಎಂದು ನಿರ್ದೇಶಿಸಿ ವಿಚಾರಣೆಯನ್ನು 2024ರ ಜನವರಿ 11ಕ್ಕೆ ಮುಂದೂಡಿತು.

ದಂಡ ರದ್ದು: ‘ಪ್ರಕರಣಕ್ಕೆ ಸಂಬಂಧಿಸಿದಂತೆ ವಿವರವಾದ ಹೇಳಿಕೆ ಸಲ್ಲಿಸುವಂತೆ ನೀಡಲಾಗಿದ್ದ ಆದೇಶವನ್ನು ಪಾಲನೆ ಮಾಡಿಲ್ಲ. ರಾಜ್ಯ ಸರ್ಕಾರಕ್ಕೆ ಸೌಜನ್ಯದ ಭಾಷೆ ಅರ್ಥವಾಗುವುದಿಲ್ಲ‘ ಎಂದು ಕಳೆದ ವಿಚಾರಣೆ ವೇಳೆ ಕಿಡಿ ಕಾರಿದ್ದ ನ್ಯಾಯಪೀಠ ರಾಜ್ಯ ಸರ್ಕಾರಕ್ಕೆ ₹ 5 ಲಕ್ಷ ದಂಡ ವಿಧಿಸಿತ್ತು. ಆದರೆ, ಸರ್ಕಾರದ ಪರ ವಕೀಲರ ಮನವಿ ಮೇರೆಗೆ ಈ ಆದೇಶವನ್ನು ನ್ಯಾಯಪೀಠ ಇದೇ ವೇಳೆ ಹಿಂಪಡೆಯಿತು.

ಪ್ರಮಾಣ ಪತ್ರದಲ್ಲೇನಿದೆ?: ‘ಕ್ರಿಯಾ ಯೋಜನೆಗೆ ಸ್ವಚ್ಛ ಭಾರತ್ ಮಿಷನ್‌ನ 3ನೇ ರಾಜ್ಯ ಮಟ್ಟದ ತಾಂತ್ರಿಕ ಸಮಿತಿ ಅನುಮೋದನೆ ನೀಡಿದ್ದು, ಕೇಂದ್ರ ವಸತಿ ಮತ್ತು ನಗರ ವ್ಯವಹಾರ ಸಚಿವಾಲಯದ 9ನೇ ರಾಷ್ಟ್ರೀಯ ಸಲಹಾ ಹಾಗೂ ಪರಿಶೀಲನಾ ಸಮಿತಿಯ ಒಪ್ಪಿಗೆಯೂ ದೊರಕಿದೆ. ಈ ಕ್ರಿಯಾ ಯೋಜನೆಯಡಿ ಬಿಬಿಎಂಪಿ ವ್ಯಾಪ್ತಿಯಲ್ಲಿ ₹ 9 ಕೋಟಿ ವೆಚ್ಚದಲ್ಲಿ 600 ಶೌಚಾಲಯಗಳ ನಿರ್ಮಾಣಕ್ಕೆ ಒಪ್ಪಿಗೆ ನೀಡಲಾಗಿದೆ‘ ಎಂದು ಪ್ರಮಾಣ ಪತ್ರದಲ್ಲಿ ವಿವರಿಸಲಾಗಿದೆ.

‘ಶೌಚಾಲಯ, ಮೂತ್ರಾಲಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಅಕ್ಟೋಬರ್ 3ರಂದು ಸುತ್ತೋಲೆ ಹೊರಡಿಸಲಾಗಿದೆ. ಇದಕ್ಕಾಗಿ ಪಾಲಿಕೆ ಆಯುಕ್ತರು, ಮುಖ್ಯಾಧಿಕಾರಿ ಅಧ್ಯಕ್ಷತೆಯಲ್ಲಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಮಿತಿ ರಚಿಸುವಂತೆ ಅಕ್ಟೋಬರ್ 5ರಂದು ಆದೇಶಿಸಲಾಗಿದೆ ಎಂದು‘ ತಿಳಿಸಲಾಗಿದೆ.

ಕೌನ್ಸೆಲಿಂಗ್ ನಾಳೆ

ಬೆಂಗಳೂರು: ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗೆ ಆಯ್ಕೆಯಾದ ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲೆಗಳ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಶನಿವಾರ(ನ.4) ಬೆಳಿಗ್ಗೆ 10ಕ್ಕೆ ಕೌನ್ಸೆಲಿಂಗ್ ನಡೆಯಲಿದೆ.

ಅಂತಿಮ ಆಯ್ಕೆ ಪಟ್ಟಿಯಲ್ಲಿರುವ ಬೆಂಗಳೂರು ಉತ್ತರ ಜಿಲ್ಲೆಯ ಅಭ್ಯರ್ಥಿಗಳಿಗೆ ಕೆ.ಜಿ. ರಸ್ತೆಯ ಶಿಕ್ಷಕರ ಸದನದಲ್ಲಿ, ಬೆಂಗಳೂರು ದಕ್ಷಿಣ ಜಿಲ್ಲೆಯ ಅಭ್ಯರ್ಥಿಗಳಿಗೆ ಗಾಂಧಿ ಬಜಾರ್‌ನ ಟಿನ್ ಶಾಲೆಯ ಬಿ.ಆರ್.ಸಿ ಕಚೇರಿಯಲ್ಲಿ ಕೌನ್ಸೆಲಿಂಗ್ ನಡೆಯಲಿದೆ. ಅಭ್ಯರ್ಥಿಗಳು ಗುರುತಿನ ಚೀಟಿ, ದಾಖಲೆಗಳೊಂದಿಗೆ ಹಾಜರಾಗಬೇಕು ಎಂದು ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲೆಯ ಉಪ ನಿರ್ದೇಶಕರು (ಆಡಳಿತ) ತಿಳಿಸಿದ್ದಾರೆ.

ಯಲಹಂಕ: 4ರಿಂದ ಕಡಲೆಕಾಯಿ ಪರಿಷೆ

ಇಂದಿನಿಂದ ವೆಂಕಟಾಲದ ಅಭಯ ಮಹಾಗಣಪತಿ ದೇವಾಲಯದ 11ನೇ ವಾರ್ಷಿಕೋತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: ವೆಂಕಟಾಲದ ಅಭಯ ಮಹಾಗಣಪತಿ ದೇಗುಲದ 11ನೇ ವಾರ್ಷಿಕೋತ್ಸವದ ಪ್ರಯುಕ್ತ ನ. 4, 5 ರಂದು ಕಡಲೆಕಾಯಿ ಪರಿಷೆ ನಡೆಯಲಿದೆ.

ಶುಕ್ರವಾರ ಬೆಳಿಗ್ಗೆ 7 ಗಂಟೆಗೆ ಗಣಪತಿ ಪ್ರಾರ್ಥನೆ, ಕಲಶ ಸ್ಥಾಪನೆ ಆರಾಧನಾ ಪೂರ್ವಕ ಮಹಾಗಣಪತಿ ಸಹಸ್ರ ಮೋದಕ ಹೋಮ, ಮಹಾಪೂರ್ಣಾಹುತಿ ನಂತರ ಸ್ವಾಮಿಗೆ ಪಂಚಾಮೃತ ಅಭಿಷೇಕ, ಕುಂಭಾಭಿಷೇಕ, ವಿಶೇಷ ರಜತ ಅಲಂಕಾರ ಹಾಗೂ ಮಹಾಮಂಗಳಾರತಿ ನೆರವೇರಲಿದೆ.

ಶನಿವಾರ ಬೆಳಿಗ್ಗೆ ಗಣಪತಿಗೆ ವಿವಿಧ ರೀತಿಯ

ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಗುತ್ತದೆ. ನಂತರ, ದೇವಾಲಯದ ಅಕ್ಕಪಕ್ಕದ ಬೀದಿಗಳಲ್ಲಿ ನಡೆಯುವ ಕಡಲೆಕಾಯಿ ಪರಿಷೆಗೆ ಚಾಲನೆ ದೊರೆಯಲಿದೆ.

ಹತ್ತು ವರ್ಷಗಳಿಂದ ಕಡಲೆಕಾಯಿಪರಿಷೆ ನಡೆಸಲಾಗುತ್ತಿದೆ. ಗ್ರಾಹಕರು ಮತ್ತು ವರ್ತಕರಿಂದ ಉತ್ತಮ ಸ್ಪಂದನೆ ದೊರೆಯುತ್ತಿದೆ ಎಂದು ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಕೆಂಪೇಗೌಡ ತಿಳಿಸಿದರು.

ಈಗಾಗಲೆ ವಿವಿಧ ತಾಲ್ಲೂಕುಗಳು ಹಾಗೂ ಮಂಡಿಗಳಿಗೆ ತೆರಳಿ ವರ್ತಕರು ಮತ್ತು ಕಡಲೆಕಾಯಿ ಮಾರಾಟಗಾರರನ್ನು ಆಹ್ವಾನಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಪ್ರೋತ್ಸಾಹಧನ:ರಾಶಿ ಹಾಕಿ ಕಡಲೆಕಾಯಿ ವ್ಯಾಪಾರ ಮಾಡುವವರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ದೇವಸ್ಥಾನದ ವತಿಯಿಂದ ಪ್ರತಿಯೊಬ್ಬರಿಗೂ ₹500 ಪ್ರೋತ್ಸಾಹಧನ ನೀಡಲಾಗುವುದು. ಅಲ್ಲದೆ ಎರಡು ದಿನಗಳಕಾಲ ಕಾಫಿ, ಉಪಾಹಾರ ಮತ್ತು ಊಟದ ವ್ಯವಸ್ಥೆ ಮಾಡಲಾಗುವುದು ಎಂದು ಆಡಳಿತ ಮಂಡಳಿ ಪ್ರಕಟಣೆ ತಿಳಿಸಿದೆ.

ಪರಿಷೆಯಲ್ಲಿ ಗೃಹೋಪಯೋಗಿ ವಸ್ತುಗಳು, ತಿಂಡಿ-ತಿನಿಸುಗಳು, ಮಕ್ಕಳ ಆಟಿಕೆಗಳು ಸೇರಿದಂತೆ ವಿವಿಧ ಮಳಿಗೆಗಳಿಗಳನ್ನು ತೆರೆಯಲು ಅವಕಾಶ ನೀಡಲಾಗಿದೆ. ಅಲ್ಲದೆ ರಸ್ತೆಯ ಇಕ್ಕೆಲಗಳಲ್ಲಿ ಮನೋರಂಜನಾ ಚಟುವಟಿಕೆಗಳು ನಡೆಯಲಿವೆ.

ಪರಿಷೆಯಲ್ಲಿ ಭಾಗವಹಿಸಲಿಚ್ಛಿಸುವ ರೈತರು 99801 96440 ಸಂಖ್ಯೆಗೆ ಕರೆಮಾಡಿ ತಮ್ಮ ಹೆಸರು ನೋಂದಾಯಿಸಲು ಕೋರಲಾಗಿದೆ.

‘ವ್ಯಸನದಿಂದ ಪಾರ್ಶ್ವವಾಯು’

ಬೆಂಗಳೂರು: ‘ಧೂಮಪಾನ, ಡ್ರಗ್ಸ್ ಮದ್ಯಪಾನ ವ್ಯಸನದಿಂದ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾರ್ಶ್ವವಾಯುವಿಗೆ ಒಳಗಾಗುತ್ತಿದ್ದಾರೆ’ ಎಂದು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ತಿಳಿಸಿದೆ.

ವಿಶ್ವಪಾರ್ಶ್ವವಾಯು ದಿನ ನಿಮಿತ್ತ ಸಂಸ್ಥೆ ಹೇಳಿಕೆ ನೀಡಿದ್ದು, ‘ದೇಶದಲ್ಲಿ ವಾರ್ಷಿಕ ಪಾರ್ಶ್ವವಾಯು ಪೀಡಿತರಲ್ಲಿ ಶೇ 14ರಷ್ಟು ಮಂದಿ ಯುವಜನರು. ಪಾರ್ಶ್ವವಾಯು ಸಮಸ್ಯೆಯು ಪ್ರಮುಖ ಮರಣ ಕಾರಣದಲ್ಲಿ ನಾಲ್ಕನೇ ಸ್ಥಾನ ಹಾಗೂ ಅಂಗವಿಕಲತೆಯಲ್ಲಿ ಐದನೇ ಸ್ಥಾನದಲ್ಲಿದೆ. ಲಕ್ಷ ಜನರಲ್ಲಿ 119 ರಿಂದ 145 ಜನರು ಈ ಕಾಯಿಲೆಗೆ ತುತ್ತಾಗುತ್ತಿದ್ದಾರೆ. ವಾರ್ಷಿಕ 1 ಲಕ್ಷ ಪಾರ್ಶ್ವವಾಯು ರೋಗಿಗಳಲ್ಲಿ 73 ಜನರು ಮರಣ ಹೊಂದುತ್ತಿದ್ದಾರೆ’ ಎಂದು ತಿಳಿಸಿದೆ.

‘ಪಾರ್ಶ್ವವಾಯು ಆದವರಿಗೆ ಆರೈಕೆ ಹಾಗೂ ಸೂಕ್ತ ಚಿಕಿತ್ಸೆಯು ದೊರೆತರೆ ಅವರು ಬೇಗ ಗುಣಮುಖ ಆಗಬಹುದು. ಮಧುಮೇಹ, ಧೂಮಪಾನ, ಮದ್ಯಪಾನ, ಕಳಪೆ ಆಹಾರ ಪದ್ಧತಿ, ಕಡಿಮೆ ದೈಹಿಕ ಚಟುವಟಿಕೆ, ಒತ್ತಡ, ಖಿನ್ನತೆ ವಿವಿಧ ಕಾರಣಗಳಿಂದ ಪಾರ್ಶ್ವವಾಯು ಸಂಭವಿಸುತ್ತಿದೆ’ ಎಂದು ಹೇಳಿದೆ.

‘ತೋಳಿನ ದೌರ್ಬಲ್ಯ, ಮಾತು ತೊದಲುವಿಕೆ ಸೇರಿ ವಿವಿಧ ಲಕ್ಷಣಗಳು ಕಾಣಿಸಿಕೊಂಡಾಗ ತುರ್ತುಚಿಕಿತ್ಸೆ ಒದಗಿಸಬೇಕು. ಸಂಸ್ಥೆಯಲ್ಲಿ ಪಾರ್ಶ್ವವಾಯು ಪೀಡಿತರ ಆರೈಕೆಗೆ 24 ಹಾಸಿಗೆಗಳನ್ನು ಮೀಸಲಿಡಲಾಗಿದೆ’ ಎಂದು ತಿಳಿಸಿದೆ.

Terms and conditions apply. *Benefits up to differs from model to model and is inclusive of consumer offer, offer valid till 15 OCT 23, exchange bonus and maximum corporate offer. ^Warranty cover for 3 years/ 1 Lakh km, whichever ends earlier. Images and illustrations are indicative and for information purposes only. All features/specifications are not available in all variants and may vary for different variants. Specifications/features are subject to change without prior information. Colours may vary due to printing limitations. Local taxes and octroi extra. *Lower EMI would only be if existing car is traded for new car and is the value given by our channel partner if agreed by the customer is used as a downpayment for new car purchase, thereby reducing the loan amount and hence EMI. **Fair Value is a value as determined by our channel partner through a free & fair assessment of existing car given for evaluation.** The price offered is dependent on multiple factors such as condition of existing car, age, mileage, color, market dynamics, statutory taxes etc.

KHT MOTORS	KROPEX AUTO	PRERANA MOTORS	CAUVERY MOTORS:	ADISHAKTI CARS	KEY MOTORS	SREE AUTO
Whitefield: 7506023988; **Domlur:** 7506024006, **Kolar:** 8291028427	**Hosur Road:** 7506024016, **Koramangala:** 9167395364, **Sarjapur road:** 8291202713, **Mahadevapura:** 8291052641	**Lalbagh Road:** 7506024020; **BTM Layout:** 7506024118; **Rajajinagar:** 7506024039; **Yelahanka:** 9619489334	**Avalahalli:** 8879156068; **Mekhri Circle:** 8422849049; **Devanahalli:** 8879078454	**Hebbal:** 7506023837; **Dasarahalli:** 9167982568; **Kalyana Nagar:** 9167163087	**Kanakapura Road:** 7506023980, **Mysore Road:** 9167395034, **Kanakapura City:** 8879145649, **BG Road:** 9167395164, **Sunkadakatte Magadi Road:** 9167882027, **Nelamangala:** 9167881890	**Tumkur:** 7506024318, **Tiptur:** 9619050469, **Chitradurga:** 9619033465, **Kunigal:** 8879046819, **Chikkaballapur:** 8879046290, **Chintamani:** 8291927028

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda2wheelersindia.com

*Terms and Condition apply. Product shown in the picture may vary from the actual product available in the market. Accessories shown in the product are not part of the standard equipment. Features may vary with colours & variants.

Honda Exclusive Authorised Dealerships: Ananda Honda - BOMMANAHALLI: 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda - ANEKAL:** 080-27830234, 9880417779; **City Honda - ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; **Haiku Honda - DOMLUR:** 49656565, 9342432156; **INDIRANAGAR:** 9844478636; **Dhruvdesh Honda - MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **Planet Honda - RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; **Raja Honda - KORAMANGALA:** 08067329000,9035310055; **Prime Honda - VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; **Silicon Honda - RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; **Saphire Honda - JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda - KR PURAM:** 9071858885, 9071858881; **HENNUR ROAD:** 9108989817, 9108989818; **Tansi Honda - HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; **Turbo Honda - DODDABALLAPURA:** 7022620885; **NELAMANAGALA:** 080-27722333, 7022008894; **Wings Honda - HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda - KOLAR:** 9900018515, 9900018516;; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; **Namma Honda - CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; **Shankar Honda - GOWRIBIDANUR:** 9900007422/33; **SIDLAGHATTA:** 9611596113; **Century Honda - TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; **Shantinath Honda - TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; **Honey Honda - PAVAGADA:** 9535941215; **Annapoorna Honda - MADHUGIRI:** 9886627429; **Vignesh Honda - TIPTUR:** 9886711161; **TURUVEKERE:** 9448214014; **Sri Srinivasa Honda - CHIKKANAYAKANAHALLI:** 8722522221; **Prestige Honda - RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; **ART Honda - BIDADI:** 9945966771, 9164871007; **Springs Honda - KENGERI:** 9513771114; **Nideesh Honda - DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com

‘ಬೈಕ್ ಸ್ಟಂಟ್‌ನಷ್ಟು ಸುಲಭವಿಲ್ಲ ನಟನೆ’

ಅರವಿಂದ್‌ಕೆ.ಪಿ.

ಬಿಗ್‌ಬಾಸ್ ಸ್ಪರ್ಧಿಗಳಾಗಿದ್ದ ಅರವಿಂದ್ ಕೆ.ಪಿ. ಹಾಗೂ ದಿವ್ಯಾ ಉರುಡುಗ ಬೆಳ್ಳಿತೆರೆಯ ಮೇಲೆ ಜೋಡಿಯಾಗಿ ಕಾಣಿಸಿಕೊಳ್ಳಲು ಸಿದ್ಧರಾಗಿದ್ದಾರೆ. ಅರವಿಂದ್ ಕೌಶಿಕ್ ನಿರ್ದೇಶನದ ‘ಅರ್ದಂಬರ್ಧ ಪ್ರೇಮಕಥೆ’ ಇದೇ ತಿಂಗಳಲ್ಲಿ ರಿಲೀಸ್ ಆಗಲಿದೆ. ಈ ಹೊಸ್ತಿಲಲ್ಲಿ ನಟ ಅರವಿಂದ್ ಕೆ.ಪಿ. ಜೊತೆಗೊಂದು ಮಾತುಕತೆ...

ಅಭಿಲಾಷ್ ಪಿ.ಎಸ್.

• ಬಣ್ಣದ ಪ್ರಪಂಚಕ್ಕೆ ಹೆಜ್ಜೆ ಇಟ್ಟಿದ್ದು ಎಷ್ಟು ಆಕಸ್ಮಿಕ? ಈ ಪರಿವರ್ತನೆಯನ್ನು ನೀವು ಹೇಗೆ ನೋಡುತ್ತೀರಿ?

ಅದೊಂದು ಆಕಸ್ಮಿಕ ಹೆಜ್ಜೆ. ಆದರೆ ಈ ಬದಲಾವಣೆ ವೈಯಕ್ತಿಕವಾಗಿ ಸಹಕಾರಿಯಾಗಿದೆ. ಕೋವಿಡ್ ಬಂದ ಸಂದರ್ಭದಲ್ಲಿ ಬಹಳಷ್ಟು ಜನರ ಜೀವನವೇ ಅಸ್ತವ್ಯಸ್ತವಾಗಿತ್ತು. ನನ್ನ ಬದುಕಿನ ಭಾಗವೇ ಆಗಿದ್ದ ಬೈಕ್ ರೇಸ್‌ಗಳ ಆಯೋಜನೆಯೇ ಸ್ಥಗಿತವಾಗಿತ್ತು. ಆ ಸಂದರ್ಭದಲ್ಲಿ ‘ಬಿಗ್‌ಬಾಸ್’ ರಿಯಾಲಿಟಿ ಶೋ ಅವಕಾಶ ದೊರೆಯಿತು. ನನ್ನ ಕ್ರೀಡೆಗೆ ಒಂದು ಜನಪ್ರಿಯತೆ ದೊರಕಿಸಿಕೊಡಬೇಕು ಎನ್ನುವ ಉದ್ದೇಶದಿಂದ ನಾನು ಬಿಗ್‌ಬಾಸ್ ಮನೆ ಪ್ರವೇಶಿಸಿದ್ದೆ. ಇದರ ಮುಖಾಂತರ ನನಗೆ ಹೆಚ್ಚಿನ ಜನಪ್ರಿಯತೆ, ಪ್ರೀತಿ ದೊರೆಯಿತು. ನನಗೆ ಅಭಿಮಾನಿ ಬಳಗ ಹುಟ್ಟಿಕೊಂಡಿತು. ಎಲ್ಲರ ಮನೆ, ಮನ ಸೇರುವಲ್ಲಿ ದೊಡ್ಡ ವೇದಿಕೆಯಾಗಿ ಈ ಕಾರ್ಯಕ್ರಮ ನನಗೆ ದೊರಕಿತು. ಈ ವೇದಿಕೆ ಇಲ್ಲದೇ ಇದ್ದರೆ ನಾನು ಇಷ್ಟೊಂದು ಗುರುತಿಸಿಕೊಳ್ಳುತ್ತಿರಲಿಲ್ಲ. ಬಣ್ಣದ ಲೋಕದಲ್ಲಿ ಇದು ನನ್ನ ಮೊದಲ ಹೆಜ್ಜೆ.

ಕಳೆದ 17-18 ವರ್ಷ ಈ ರೇಸಿಂಗ್ ಫೀಲ್ಡ್‌ನಲ್ಲಿ ನಾನಿದ್ದೇನೆ. ಈ ಅವಧಿಯಲ್ಲಿ ಜನರನ್ನು ತಲುಪಲು ನಾನು ಬಹಳ ಕಷ್ಟಪಟ್ಟಿದ್ದೇನೆ. ಆದರೆ ಬಿಗ್‌ಬಾಸ್ ಪ್ರವೇಶದ ಬಳಿಕ ಕೇವಲ ನೂರಾ ಇಪ್ಪತ್ತು ದಿನಗಳಲ್ಲಿ ನಾನು ದುಪ್ಪಟ್ಟು ಹೆಸರು ಗಳಿಸಿಕೊಂಡೆ. ನನ್ನ ಕ್ರೀಡೆಯ ಬಗ್ಗೆ, ನನ್ನ ಬಗ್ಗೆ ಜನರ ಬಳಿ ತೆರೆದುಕೊಂಡೆ. ಇದೊಂದು ಜೀವನದ ದಿಕ್ಕನ್ನೇ ಬದಲಾಯಿಸಿದ ಘಟನೆ. ಇಲ್ಲಿಂದ ಸಿನಿಮಾದತ್ತ ಹೊರಳಿದ್ದು ನನ್ನ ಅದೃಷ್ಟ ಎಂದೇ ಹೇಳಬಹುದು.

• ‘ಅರ್ದಂಬರ್ಧ ಪ್ರೇಮಕಥೆ’ ದೊರಕಿದ್ದು ಹೇಗೆ?

ನನಗೆ ಕಾಫಿ ಕುಡಿಯಬೇಕಿತ್ತು. ದಿವ್ಯಾ ಉರುಡುಗ ಅವರಿಗೆ ಅರವಿಂದ್ ಕೌಶಿಕ್ ಅವರು ಕಥೆಯೊಂದನ್ನು ಹೇಳಬೇಕಿತ್ತು. ಹೀಗಾಗಿ ನಾನು ಕೂಡ ದಿವ್ಯಾ ಜೊತೆಗೆ ಕಾಫಿ ಹೌಸ್‌ಗೆ ಹೋಗಿದ್ದೆ. ಕೌಶಿಕ್ ಅವರು ಕಥೆ ವಿವರಿಸುತ್ತಿರಬೇಕಾದರೆ ನಾನು ಪಕ್ಕದಲ್ಲಿ ಕಾಫಿ ಕುಡಿಯುತ್ತಿದ್ದೆ. ಅರವಿಂದ್ ಕೌಶಿಕ್ ಅವರ ಕಥೆಯ ನಿರೂಪಣೆ ಶೈಲಿ ಬಹಳ ಪರಿಣಾಮಕಾರಿ. ಕಥೆ ಕೇಳುತ್ತ ನನಗೆ ಅರಿವಿಲ್ಲದಂತೆ ನಾನೂ ಅದರಲ್ಲಿ ಕಳೆದುಹೋಗಿದ್ದೆ. ಹೀಗೆ, ನನ್ನ ಹಾಗೂ ದಿವ್ಯಾ ಅವರ ಕೆಮಿಸ್ಟ್ರಿ ನೋಡಿ, ನಾಯಕನ ಪಾತ್ರದ ಆಫರ್ ಮುಂದಿಟ್ಟರು. ಹೀಗೆ ಆದದ್ದು ‘ಅರ್ದಂಬರ್ಧ ಪ್ರೇಮಕಥೆ’.

ನಟಿಸುವ ನಿರ್ಧಾರ ಏಕಾಏಕಿ ತೆಗೆದುಕೊಂಡಿದ್ದಲ್ಲ. ಎರಡು ದಿನ ಸಮಯಾವಕಾಶ ಕೇಳಿದ್ದೆ. ನನಗೆ ಸವಾಲುಗಳೆಂದರೆ ಹೆದರಿಕೆ ಇಲ್ಲ. ಈ ಮನೋಭಾವ ಹುಟ್ಟಲು ಕ್ರೀಡೆಯೇ ಕಾರಣ. ಯಾವುದೇ ಕೆಲಸ ಒಪ್ಪಿಕೊಂಡರೂ ಅರ್ಧಂಬರ್ಧ ಮಾಡುವುದು ಸರಿಯಲ್ಲ. ಶಾಲಾ-ಕಾಲೇಜು ದಿನಗಳಲ್ಲಿ ನಾಟಕಗಳಲ್ಲಿ ನಟಿಸಿದ್ದೆ. ಇದನ್ನು ಹೊರತುಪಡಿಸಿ ನಟನೆಯ ಯಾವ ಹಿನ್ನೆಲೆಯೂ ನನಗಿರಲಿಲ್ಲ. ಹೀಗಾಗಿ ಓರ್ವ ವಿದ್ಯಾರ್ಥಿಯಾಗಿ ಅರವಿಂದ್ ಕೌಶಿಕ್ ಅವರ ಎದುರಿಗೆ ನಿಂತೆ.

• ಸಿನಿಮಾ ಜೊತೆಗೆ ಬೈಕ್ ರೇಸಿಂಗ್ ಚಟುವಟಿಕೆ ಹೇಗಿದೆ?

ಸದ್ಯಕ್ಕೆ ನಾನು ತರಬೇತಿಯಲ್ಲಿ ತೊಡಗಿಸಿಕೊಂಡಿದ್ದೇನೆ. 2019ರಲ್ಲಿ ನಡೆದ ಅಪಘಾತವೊಂದರಲ್ಲಿ ನನ್ನ ಕಾಲಿಗೆ ಏಟು ಬಿದ್ದಿತ್ತು. ಅದಕ್ಕೆ ರಾಡ್ ಹಾಕಿದ್ದರು. ಇದನ್ನು ಎರಡು ವರ್ಷಗಳಲ್ಲಿ ತೆಗೆಯಬೇಕಿತ್ತು. ಆದರೆ ಈ ಅವಧಿಯಲ್ಲಿ ಕೋವಿಡ್ ಲಾಕ್‌ಡೌನ್, ಸಿನಿಮಾ ಶೂಟಿಂಗ್‌ನಲ್ಲಿ ನಾನು ತೊಡಗಿಸಿಕೊಂಡಿದ್ದೆ. ‘ಅರ್ದಂಬರ್ಧ..’ ಬಿಡುಗಡೆಯಾದ ಬಳಿಕ ಮತ್ತೊಮ್ಮೆ ಶಸ್ತ್ರಚಿಕಿತ್ಸೆಗೆ ಒಳಪಡಬೇಕಾಗಿದೆ. ನಂತರವಷ್ಟೇ ಮತ್ತೆ ರೇಸಿಂಗ್ ಟ್ರ್ಯಾಕ್‌ಗೆ ಇಳಿಯಲು ಸಾಧ್ಯ.

• ‘ಅರ್ದಂಬರ್ಧ..’ ಕಥೆಯಲ್ಲಿ ನಿಮ್ಮ ಪಾತ್ರ ಹಾಗೂ ನಟನೆಯ ಅನುಭವದ ಬಗೆಗೆ ಹೇಳಿ.

ನಾನು ಹೆಚ್ಚು ಹೇಳಿಕೊಳ್ಳುವಂತಹ ವ್ಯಕ್ತಿಯಲ್ಲ. ನಮ್ಮ ರೇಸ್ ಫೀಲ್ಡ್‌ನಲ್ಲಿ ಭಾವನೆಗಳಿಗೆ ಅವಕಾಶ ಕಡಿಮೆ. ಹೀಗಾಗಿ ನಟನೆ ಸವಾಲಿನದ್ದಾಗಿತ್ತು. ಈ ನಟನೆ ಎನ್ನುವುದು ಬೈಕ್ ಸ್ಟಂಟ್‌ನಷ್ಟು ಸುಲಭವಲ್ಲ ಎಂದು ನನಗೆ ಆಗ ಅರಿವಾಯಿತು. ನಮ್ಮ ಭಾವನೆಗಳು ಬಹಳ ಫ್ಲ್ಯಾಟ್ ಆಗಿರುತ್ತವೆ. ಕ್ಯಾಮೆರಾ ಮುಂದೆ ಬಂದ ಸಂದರ್ಭದಲ್ಲಿ ಒತ್ತಡವಿತ್ತು. ದಿನ ಕಳೆದಂತೆ ಎಲ್ಲರೊಂದಿಗೆ ಹೊಂದಾಣಿಕೆ ಸಾಧ್ಯವಾಯಿತು. ನಿರ್ದೇಶಕರಾದ ಅರವಿಂದ್ ಕೌಶಿಕ್ ಅವರೊಳಗೆ ಒಂದು ಮಗುವಿದೆ, ಒಬ್ಬ ರೌಡಿ ಇದ್ದಾನೆ, ಕಲಾವಿದನಿದ್ದಾನೆ, ಸಂಭಾಷಣೆಗಾರನಿದ್ದಾನೆ...ಅವರ ಸಾಮರ್ಥ್ಯವನ್ನು ತೆರೆಯ ಮೇಲೆಯೇ ಕಾಣಬೇಕು.

ಚಿತ್ರದಲ್ಲಿ ನನ್ನ ಪಾತ್ರಕ್ಕೆ ಹಲವು ಶೇಡ್ಸ್ ಇವೆ. ವೀಕ್ಷಕರು ನನ್ನ ಪಾತ್ರ ಹೀಗೆ ಇರಲಿದೆ ಎಂದು ಊಹಿಸುವಾಗ ಅದಕ್ಕೊಂದು ಬದಲಾವಣೆ ತರುವಂತಹ ಚಿತ್ರಕಥೆ ಸಿನಿಮಾದಲ್ಲಿದೆ. ಸಿನಿಮಾದಲ್ಲಿ ನಾನೊಬ್ಬ ಪ್ರಾಕ್ಟಿಕಲ್ ಮನುಷ್ಯ. ಬೈಕ್ ರೇಸಿಂಗ್‌ನ ಸಣ್ಣ ಝಲಕ್ ಕೂಡ ಸಿನಿಮಾದಲ್ಲಿದೆ.

• ದಿವ್ಯಾ-ನಿಮ್ಮ ಪ್ರೇಮಕಥೆಯ ಭವಿಷ್ಯ ಏನು?

ಕೆಲವೊಂದು ಜವಾಬ್ದಾರಿಗಳು ನಮ್ಮ ಮೇಲೆ ಇರುತ್ತವೆ. ಕುಟುಂಬದ ಮೌಲ್ಯಗಳನ್ನು ಇಟ್ಟುಕೊಂಡು ಹೆಜ್ಜೆ ಇಡಬೇಕಾಗುತ್ತದೆ. ಸುಳ್ಳು ಭರವಸೆಗಳನ್ನು ನೀಡಬಾರದು ಅಲ್ಲವೇ? ಎಲ್ಲವೂ ಸಕಾರಾತ್ಮಕವಾಗಿದೆ. ಮುಂದಿನ ದಿನಗಳಲ್ಲಿ ತಿಳಿಯಲಿದೆ. ಯಾರ ಕಣ್ತಪ್ಪಿಸಿ ಏನೂ ಮಾಡಲು ಸಾಧ್ಯವಿಲ್ಲ. ❖

ಪ್ರಜಾವಾಣಿ ನೋಡಿಯೊ
ಸಿನಿಮಾತು
ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


ರಕ್ಷಿತ್ ಶೆಟ್ಟಿ ಹಾಗು ರುಕ್ಮಿಣಿ ವಸಂತ್

ನಾಲ್ಕು ಭಾಷೆಗಳಲ್ಲಿ ಏಕಕಾಲದಲ್ಲಿ ‘SSE-2’

ಚಂದನವನದ ಸಿಂಪಲ್ ಸ್ಟಾರ್ ರಕ್ಷಿತ್ ಶೆಟ್ಟಿ ನಟನೆಯ ‘ಸಪ್ತ ಸಾಗರದಾಚೆ ಎಲ್ಲೋ’(**SSE**)ಸಿನಿಮಾದ ಎರಡನೇ ಭಾಗ ರಿಲೀಸ್‌ಗೆ ಸಜ್ಜಾಗುತ್ತಿದೆ. ನ.17ರಂದು ಸಿನಿಮಾದ ಸೈಡ್-ಬಿ ಬಿಡುಗಡೆಯಾಗುತ್ತಿದ್ದು, ತೆಲುಗು ಪ್ರಾಂತ್ಯಗಳಿಂದ ಸಿನಿಮಾಗೆ ಭಾರಿ ಬೇಡಿಕೆ ಬಂದಿದೆ.

ಹೇಮಂತ್ ಎಂ.ರಾವ್ ನಿರ್ದೇಶನದ ‘ಸಪ್ತ ಸಾಗರದಾಚೆ ಎಲ್ಲೋ’ ಸಿನಿಮಾದ ಮೊದಲ ಭಾಗ(ಸೈಡ್-ಎ) ಸೆಪ್ಟೆಂಬರ್ 1ರಂದು ತೆರೆಕಂಡಿತ್ತು. ಈ ಸಿನಿಮಾ ಪ್ರೇಕ್ಷಕರನ್ನು ಸೆಳೆಯುವಲ್ಲಿ ಯಶಸ್ವಿಯಾಗಿತ್ತು. ರಕ್ಷಿತ್ ಶೆಟ್ಟಿ-ರುಕ್ಮಿಣಿ ವಸಂತ್ ಜೋಡಿ ತೆರೆಯಲ್ಲಿ ಮೋಡಿ ಮಾಡಿತ್ತು. ಕನ್ನಡದಲ್ಲಷ್ಟೇ ಮೊದಲು ಬಿಡುಗಡೆಗೊಂಡ ಈ ಸಿನಿಮಾ ನಂತರದ ದಿನಗಳಲ್ಲಿ ತೆಲುಗು, ತಮಿಳು ಭಾಷೆಗೆ ಡಬ್ ಆಗಿ ಕೊನೆಯಲ್ಲಿ ಪ್ರೈಂನಲ್ಲಿ ಎಲ್ಲ ಭಾಷೆಗಳಲ್ಲೂ ರಿಲೀಸ್ ಆಯಿತು. ಇದೀಗ ಸಿನಿಮಾದ ಎರಡನೇ ಭಾಗವನ್ನು ಏಕಕಾಲದಲ್ಲಿ ನಾಲ್ಕು ಭಾಷೆಗಳಲ್ಲಿ ರಿಲೀಸ್ ಮಾಡಲು ತಂಡ ಸಜ್ಜಾಗಿದೆ. ಈ ಭಾಗದಲ್ಲಿ ನಟಿ ಚೈತ್ರಾ ಜೆ. ಆಚಾರ್ ‘ಸುರಭಿ’ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಹೀಗಾಗಿಯೇ ಎರಡನೇ ಭಾಗದ ಟೀಸರ್‌ನಲ್ಲಿ ಹೊಸ ಪ್ರಯೋಗವೊಂದನ್ನು ಮಾಡಲಾಗಿದೆ. ಕನ್ನಡ ಸೇರಿದಂತೆ ತೆಲುಗು, ತಮಿಳು ಹಾಗೂ ಮಲಯಾಳಂ ಭಾಷೆಯಲ್ಲಿ ಸಂಭಾಷಣೆಗಳನ್ನು ಟೀಸರ್‌ನಲ್ಲಿ ಬಳಸಿಕೊಳ್ಳಲಾಗಿದೆ.

ಸಿನಿಮಾ ಬಿಡುಗಡೆ ಎರಡು ಬಾರಿ ಮುಂದಕ್ಕೆ ಹೋದ ಕುರಿತು ಮಾಹಿತಿ ನೀಡಿದ ನಿರ್ದೇಶಕ ಹೇಮಂತ್, ‘ಸಿನಿಮಾದ ಮೊದಲ ಭಾಗ ಒಟಿಟಿಯಲ್ಲಿ ಬಿಡುಗಡೆಯಾದ ಬಳಿಕ ಬೇರೆ ಭಾಷೆಗಳಿಂದ ಸಿನಿಮಾದ ಎರಡನೇ ಭಾಗಕ್ಕೆ ಹೆಚ್ಚಿನ ಬೇಡಿಕೆ ಬಂತು. ಇದರ ಸಿದ್ಧತೆಗಾಗಿಯೇ ಸೈಡ್-ಬಿ ಬಿಡುಗಡೆ ಮುಂದಕ್ಕೆ ಹಾಕಿದೆವು. ತೆಲುಗು ಮಾರುಕಟ್ಟೆಯಿಂದ ಬೇಡಿಕೆ ಹೆಚ್ಚಿತ್ತು. ಅಲ್ಲಿಯೂ ಚಿತ್ರಮಂದಿರಗಳಲ್ಲಿ ಸಿನಿಮಾ ಬಿಡುಗಡೆಗೆ ಬೇಡಿಕೆ ಬಂದವು. ಇದೀಗ ತೆಲುಗಿನಲ್ಲಿ ಸೈಡ್-ಬಿ 200ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿದೆ. ತಮಿಳು ಮತ್ತು ಮಲಯಾಳಂನಲ್ಲಿ ಸಿನಿಮಾ ಮಲ್ಟಿಪ್ಲೆಕ್ಸ್‌ಗಳಲ್ಲಿ ಬಿಡುಗಡೆಯಾಗಲಿದೆ. ಹಿಂದಿ ಮಾರುಕಟ್ಟೆ ಒಂದು ರೀತಿ ವಿಚಿತ್ರವಾಗಿದೆ. ಅಲ್ಲಿ ದೊಡ್ಡ ಮಟ್ಟದಲ್ಲಿ ಮಾರ್ಕೆಟಿಂಗ್ ಮಾಡಬೇಕು. ಹೀಗಾಗಿ ಹಿಂದಿಯಲ್ಲಿ ಬಿಡುಗಡೆ ಮಾಡುತ್ತಿಲ್ಲ. ಬೇಡಿಕೆ ಬಂದರೆ ನಂತರದಲ್ಲಿ ಯೋಚನೆ ಮಾಡುತ್ತೇವೆ. ಆರಂಭದಲ್ಲೇ, ಮೊದಲ ಭಾಗ ಬಿಡುಗಡೆಯಾಗಿ 7-12 ವಾರಗಳ ಅಂತರದಲ್ಲಿ ಎರಡನೇ ಭಾಗ ಬಿಡುಗಡೆ ಮಾಡುವ ನಿರ್ಧಾರ ಮಾಡಿದ್ದೆವು’ ಎನ್ನುತ್ತಾರೆ. ❖

ತೆರೆಗೆ ಬರುತ್ತಿದೆ ‘ಭಾವಪೂರ್ಣ’, ‘TRP ರಾಮ’

ಈ ಶುಕ್ರವಾರ(ನ.3) ಹೊಸಬರ ಸಿನಿಮಾಗಳು ತೆರೆಕಂಡಿವೆ. ರಾಜ್ಯೋತ್ಸವದ ಆರಂಭವಾದರೂ ಸ್ಟಾರ್ಸ್ ಸಿನಿಮಾಗಳು ಯಾವುವೂ ಈ ವಾರದಲ್ಲಿ ಚಿತ್ರಮಂದಿರಗಳ ಕದ ತಟ್ಟಿಲ್ಲ.

‘ಟಿ.ಆರ್.ಪಿ ರಾಮ’: ಅಶುತೋಶ್ ಪಿಕ್ಚರ್ಸ್ ಬ್ಯಾನರ್‌ನಡಿ ನಿರ್ಮಾಣವಾಗಿರುವ ಸಿನಿಮಾ ‘TRP ರಾಮ’. ಈ ಸಿನಿಮಾದಲ್ಲಿ ರವಿಪ್ರಸಾದ್ ನಟಿಸಿ, ಆ್ಯಕ್ಷನ್ ಕಟ್ ಹೇಳಿದ್ದು, ಇದು ಇವರ ಚೊಚ್ಚಲ ಪ್ರಯತ್ನ. ಕನ್ನಡದ ಖ್ಯಾತ ನಟಿ ಮಹಾಲಕ್ಷ್ಮೀ ಅವರು ಈ ಚಿತ್ರದ ಮೂಲಕ ಬೆಳ್ಳಿತೆರೆಗೆ ಮರಳುತ್ತಿದ್ದಾರೆ. ವೇಗದ ಯುಗದಲ್ಲಿ ಚಿಕ್ಕಪುಟ್ಟ ತಪ್ಪುಗಳಿಂದ ಎಷ್ಟು ದೊಡ್ಡ ಪ್ರಮಾದವಾಗುತ್ತದೆ ಅನ್ನೋದು ಚಿತ್ರದ ಒಂದು ಎಳೆ ಎಂದಿದೆ ಚಿತ್ರತಂಡ. ಚಿತ್ರದಲ್ಲಿ ನಟಿ ಸ್ಪರ್ಶ ಅವರು ಪತ್ರಕರ್ತೆಯಾಗಿ ಕಾಣಿಸಿಕೊಂಡಿದ್ದು, ಅವರ ತಾಯಿ ಪಾತ್ರದಲ್ಲಿ ಮಹಾಲಕ್ಷ್ಮೀ ನಟಿಸಿದ್ದಾರೆ. ಓಂ ಸಾಯಿ ಪ್ರಕಾಶ್ ತಾರಾಬಳಗದಲ್ಲಿದ್ದಾರೆ. ಪ್ರವೀಣ್ ಸೂಡಾ ಸಂಭಾಷಣೆ, ರಾಜ್ ಗುರು ಹೊಸಕೋಟೆ ಸಂಗೀತ, ಸುನಿಲ್ ಕಶ್ಯಪ್ ಸಂಕಲನ, ಗುರುಪ್ರಸಾದ್ ಛಾಯಾಚಿತ್ರಗ್ರಹಣ ಸಿನಿಮಾಕ್ಕಿದೆ. ಸತ್ಯ ಘಟನೆಗಳನ್ನ ಆಧರಿಸಿ ಈ ಸಿನಿಮಾ ಬರುತ್ತಿದೆ.

ಸ್ಪರ್ಶ

‘ಗರುಡ ಪುರಾಣ’: ಮಂಜುನಾಥ್ ಬಿ.ಎನ್. ನಿರ್ದೇಶಿಸಿರುವ ಸಿನಿಮಾ ಇದಾಗಿದ್ದು, ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರವನ್ನು ಒಳಗೊಂಡಿದೆ. 27 ಫ್ರೇಮ್ ಕ್ರಿಯೇಷನ್ಸ್ ಲಾಂಛನದಲ್ಲಿ ಸಿಂಧು ಕೆ.ಎಂ ಮತ್ತು ಬಿ.ಎಲ್ ಯೋಗೇಶ್ ಕುಮಾರ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಮಂಜುನಾಥ್ ಅವರೇ ಕಥೆ, ಚಿತ್ರಕಥೆ ಬರೆದು ಸಂಕಲನ ಮಾಡಿ ನಿರ್ದೇಶಿಸಿರುವ ಈ ಚಿತ್ರದ ಒಂದು ಭಾಗಕ್ಕೆ ಗರುಡ ಪುರಾಣದ ಕೆಲವು ಅಂಶಗಳು ಹೊಂದಿಕೆಯಾಗುತ್ತದೆ. ಹಾಗಾಗಿ ‘ಗರುಡ ಪುರಾಣ’ ಎಂಬ ಶೀರ್ಷಿಕೆ ಇಡಲಾಗಿದೆ ಎಂದಿದೆ ಚಿತ್ರತಂಡ. ಚಿತ್ರದ ನಾಯಕನಾಗಿಯೂ ಮಂಜುನಾಥ್ ನಟಿಸಿದ್ದಾರೆ. ದಿಶಾ ಶೆಟ್ಟಿ ನಾಯಕಿಯಾಗಿ ಅಭಿನಯಿಸಿದ್ದಾರೆ. ‘ಭಜರಂಗಿ’ ಖ್ಯಾತಿಯ ಚೆಲುವರಾಜು, ಸಂತೋಷ್ ಕರ್ಕಿ, ಕೆಂಚಣ್ಣ, ರಾಜಕುಮಾರ್, ಮಹೇಂದ್ರ ಗೌಡ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಈ ವಾರ ತೆರೆಗೆ

ಚೇತನ್ ಮುಂಡಾಡಿ

ರಮೇಶ್ ಪಂಡಿತ್

‘ಭಾವಪೂರ್ಣ’: ಚೇತನ್ ಮುಂಡಾಡಿ ನಿರ್ದೇಶನದ, ಪ್ರಶಾಂತ್ ಅಂಜನಪ್ಪ ನಿರ್ಮಾಣದ ಹಾಗೂ ರಮೇಶ್ ಪಂಡಿತ್ ನಾಯಕರಾಗಿ ನಟಿಸಿರುವ ಸಿನಿಮಾ ‘ಭಾವಪೂರ್ಣ’. ಈ ಸಿನಿಮಾ ಒಬ್ಬ ಮಧ್ಯವಯಸ್ಸು ಮೀರಿದ ಮುಗ್ಧನ ಭಾವ ತೀರ ಯಾನ. ಇನ್ನೊಬ್ಬ ಯುವಕ. ಕನಸುಗಳಿಗೆ ಬಣ್ಣ ಹಚ್ಚಿ ಬದುಕನ್ನು ಬಲೂನ್‌ನಂತೆ ಹಾರಿ ಬಿಡುವೆ ಎನ್ನುವ ಹುಮ್ಮಸ್ಸು ಇರುವಾತ. ತನಗೆ ಬೇಕಾದಂತೆ ತನ್ನ ಬದುಕು ರೂಪಿಸಿಕೊಳ್ಳಬಹುದು ಎನ್ನುವ ಕಿಚ್ಚಿನಿಂದ ಹೊರಟವನು. ಇವರ ಬದುಕೇ ‘ಭಾವಪೂರ್ಣ’ ಎಂದಿದೆ ಚಿತ್ರತಂಡ.

‘ಸೈಕಲ್‌ಸವಾರಿ’: ಹಳ್ಳಿಯಲ್ಲಿ ಮಿಠಾಯಿ ಮಾರಿಕೊಂಡು ಜೀವನ ನಡೆಸುತ್ತಿದ್ದ ಯುವಕನೊಬ್ಬನನ್ನು ಶ್ರೀಮಂತ ಮನೆತನದ ಯುವತಿಯು ಪ್ರೀತಿಸಿದಾಗ ಏನಾಗಬಹುದು ಎಂಬುವುದು ‘ಸೈಕಲ್ ಸವಾರಿ’ ಚಿತ್ರದ ಎಳೆ. ದೇವು ಕೆ.ಅಂಬಿಗ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಸುರೇಶ್ ಶಿವೂರ ಹಾಗೂ ಲೋಕೇಶ್ ಸವದಿ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ❖

‘ನೆಲ್ಸನ್’ ಆದ ಮರಿ ಟೈಗರ್



‘ರಾಬರ್ಟ್’ ಸಿನಿಮಾ ಬಳಿಕ ನಟ ವಿನೋದ್ ಪ್ರಭಾಕರ್ ಚಂದನವನದಲ್ಲಿ ಸಾಲು ಸಾಲು ಸಿನಿಮಾಗಳನ್ನು ಮಾಡುತ್ತಿದ್ದಾರೆ. ‘ಗೊಂಬೆಗಳ ಲವ್’ ಸಿನಿಮಾ ಮೂಲಕ ಚಂದನವನದಲ್ಲಿ ಗುರುತಿಸಿಕೊಂಡಿರುವ ನಟ ಅರುಣ್ ಕುಮಾರ್ ಇದೀಗ ಮರಿ ಟೈಗರ್‌ಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ.

ಅವರ ಚೊಚ್ಚಲ ಹೆಜ್ಜೆಗೆ ‘ನೆಲ್ಸನ್’ ಎಂಬ ಶೀರ್ಷಿಕೆ ಇಡಲಾಗಿದ್ದು, ‘ರಕ್ತದಲ್ಲಿ ನೆಂದ ದೇವರಕಾಡು’ ಎಂಬ ಅಡಿ ಬರಹ ಚಿತ್ರಕ್ಕಿದೆ. ಮಾಸ್ ಆಗಿ ಮೂಡಿಬಂದಿರುವ ಚಿತ್ರದ ಟೀಸರ್‌ನಲ್ಲಿ ವಿನೋದ್ ಪ್ರಭಾಕರ್ ವಿಭಿನ್ನವಾದ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಇತ್ತೀಚೆಗೆ ನಟ ಉಪೇಂದ್ರ ಅವರು ಚಿತ್ರದ ಟೀಸರ್ ಬಿಡುಗಡೆಗೊಳಿಸಿದರು.

‘ಈ ರೀತಿಯ ಒಂದು ಸಿನಿಮಾ ಮಾಡಲು ಧೈರ್ಯ ಬೇಕು. ಅರುಣ್ ಕುಮಾರ್ ಸಿನಿಮಾ ಮೇಲೆ ಬಹಳಷ್ಟು ಪ್ರೀತಿ ಇರುವ ವ್ಯಕ್ತಿ. ಅವರು ಈ ಸಿನಿಮಾವನ್ನು ಅದ್ಭುತವಾಗಿ ರೂಪಿಸಲಿದ್ದಾರೆ ಎನ್ನುವ ಭರವಸೆ ಇದೆ’ ಎನ್ನುತ್ತಾರೆ ವಿನೋದ್ ಪ್ರಭಾಕರ್.

ಅರುಣ್ ಕುಮಾರ್ ಮಾತನಾಡಿ, ‘60 ರಿಂದ 90ರ ದಶಕದಲ್ಲಿ ಚಾಮರಾಜನಗರದಲ್ಲಿ ನಡೆಯುವ ನೈಜ ಕಥೆ ಇದು. ಚಿತ್ರದ ಸ್ಕ್ರೀನ್ ಪ್ಲೇ, ಕಥೆ ಮೇಲೆ ನನಗೆ ನಂಬಿಕೆ ಜಾಸ್ತಿ. ಚಾಮರಾಜನಗರ ಜಿಲ್ಲೆಯ ಗ್ಯಾಂಗ್‌ಸ್ಟರ್‌ನ ಕಥೆ ಹೊತ್ತಿರುವ ಈ ಚಿತ್ರದಲ್ಲಿ ಅಲ್ಲಿನ ಭಾಷೆ, ಸಂಸ್ಕೃತಿ, ಬುಡಕಟ್ಟು ಜನಾಂಗದ ಸಂಘರ್ಷ ಸೇರಿದಂತೆ ಒಂದಷ್ಟು ಅಂಶಗಳನ್ನು ಕಟ್ಟಿಕೊಟ್ಟಿದ್ದೇನೆ. ವಿನೋದ್ ಪ್ರಭಾಕರ್ ಅವರು ಹಿಂದೆಂದೂ ಕಾಣದ ಅವತಾರದಲ್ಲಿ ಕಾಣಿಸಿಕೊಳ್ಳಲಿದ್ದಾರೆ’ ಎಂದರು.

ಚಿತ್ರಕ್ಕೆ ದೀಪ ಫಿಲ್ಮ್ಸ್ ಬ್ಯಾನರ್‌ನಲ್ಲಿ ಬಿ.ಎಂ. ಶ್ರೀರಾಮ್ (ಕೋಲಾರ) ಹಣ ಹೂಡಿದ್ದಾರೆ. ಪ್ರಜ್ವಲ್ ಗೌಡ ಛಾಯಾಚಿತ್ರಗ್ರಹಣ ಮತ್ತು ಭರತ್ ಬಿ.ಜಿ. ಸಂಗೀತ, ವಿಜಯ್ ರಾಜ್ ಸಂಕಲನ ಚಿತ್ರಕ್ಕಿದೆ. ಇದೇ ತಿಂಗಳು ಶೂಟಿಂಗ್ ಅಖಾಡಕ್ಕೆ ಚಿತ್ರತಂಡ ಇಳಿಯಲಿದೆ. ❖

ಅಧ್ಯಕ್ಷ ಸ್ಥಾನ: ವಿಜಯೇಂದ್ರ ಹೆಸರು ಮತ್ತೆ ಮುನ್ನೆಲೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಹಿಂದೇಟು ಹಾಕುತ್ತಿರುವುದರಿಂದ ಉಪಾಧ್ಯಕ್ಷ ಹಾಗೂ ಶಾಸಕ ಬಿ.ವೈ.ವಿಜಯೇಂದ್ರ ಅವರ ಹೆಸರು ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ.

ತಾವು ರಾಜ್ಯ ರಾಜಕಾರಣಕ್ಕೆ ಬರುವುದಿಲ್ಲ ಎಂದು ಶೋಭಾ ಇತ್ತೀಚೆಗೆ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ವಿಜಯೇಂದ್ರ ಅವರನ್ನು ನೇಮಿಸುವ ಬಗ್ಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಒಲವು ಹೊಂದಿದ್ದಾರೆ. ಆದರೆ ಇದಕ್ಕೆ ಪ್ರಧಾನಿ ಮೋದಿ ಅವರ ಒಪ್ಪಿಗೆಯ ಅಗತ್ಯವಿದೆ ಎಂದು ಮೂಲಗಳು ತಿಳಿಸಿವೆ.

ಯಾರನ್ನಾದರೂ ಮಾಡಲಿ

‘ಅಧ್ಯಕ್ಷ ಸ್ಥಾನಕ್ಕೆ ಯಾರನ್ನು ಆಯ್ಕೆ ಮಾಡಲಾಗುತ್ತದೆ? ಶೋಭಾ ಅವರ ಹೆಸರು ಕೇಳಿ ಬರುತ್ತಿದೆಯಲ್ಲ’ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದಾಗ, ‘ಯಾರನ್ನಾದರೂ ಮಾಡಲಿ, ಯಾರಾದರೂ ಒಬ್ಬರು ಸದ್ಯವೇ ನೇಮಕಗೊಳ್ಳಲಿದ್ದಾರೆ’ ಎಂದು ಯಡಿಯೂರಪ್ಪ ಹೇಳಿದರು.

ಜನಪ್ರಿಯತೆ, ಹಣ ಖರ್ಚು ಮಾಡುವ ಹಾಗೂ ಪಕ್ಷವನ್ನು ಸಂಘಟಿಸುವ ಸಾಮರ್ಥ್ಯ ವಿಜಯೇಂದ್ರ ಅವರಿಗಿದೆ. ರಾಜ್ಯದ ಉದ್ದಗಲಕ್ಕೂ ಓಡಾಡಿ ಪಕ್ಷವನ್ನು ಕಟ್ಟಬಲ್ಲರು. ಯಡಿಯೂರಪ್ಪ ಅವರೂ ಪೂರ್ಣ ಮನಸ್ಸಿನಿಂದ ಕೆಲಸ ಮಾಡಬಲ್ಲರು ಎಂಬ ಚರ್ಚೆಯೂ ಪಕ್ಷದಲ್ಲಿ ನಡೆದಿದೆ.

ಶಾಸಕ ಬಸವರಾಜ ಬೊಮ್ಮಾಯಿ ಇತ್ತೀಚೆಗೆ ತೆರೆದ ಹೃದಯದ ಶಸ್ತ್ರ-ಚಿಕಿತ್ಸೆಗೆ ಒಳಗಾಗಿರುವ ಕಾರಣ ಅವರಿಗೆ ವಿಶ್ರಾಂತಿಯ ಅಗತ್ಯ ಇದೆ. ಹೀಗಾಗಿ ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಬಸನಗೌಡ ಪಾಟೀಲ ಯತ್ನಾಳ ಮತ್ತು ವಿ.ಸುನಿಲ್ ಕುಮಾರ್ ಹೆಸರುಗಳು ಮುನ್ನೆಲೆಗೆ ಬಂದಿದೆ. ಅಧ್ಯಕ್ಷ ಸ್ಥಾನಕ್ಕೆ ಲಿಂಗಾಯತರ ನೇಮಕಗೊಂಡರೆ ವಿರೋಧ ಪಕ್ಷದ ಸ್ಥಾನ ಹಿಂದುಳಿದ ವರ್ಗಕ್ಕೆ ಹೋಗುತ್ತದೆ. ಅಧ್ಯಕ್ಷ ಸ್ಥಾನಕ್ಕೆ ಲಿಂಗಾಯಿತರೇತರು ನೇಮಕಗೊಂಡರೆ ಆಗ ಯತ್ನಾಳ ಅವರಿಗೆ ಅವಕಾಶ ಸಿಗಬಹುದು ಎಂಬ ಚರ್ಚೆ ಪಕ್ಷದ ವಲಯದಲ್ಲಿ ನಡೆದಿದೆ.

ಮಲೆನಾಡು ಕೆರೆ– ಕಾನು ಸಂರಕ್ಷಣಾ ಸಮಾವೇಶ ಇಂದು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಕೆರೆ ಅತಿಕ್ರಮಣ ತೆರವು ಕಾರ್ಯಾಚರಣೆ ಹಕ್ಕೊತ್ತಾಯಕ್ಕಾಗಿ ರಾಜ್ಯಮಟ್ಟದ ಮಲೆನಾಡು ಕೆರೆ– ಕಾನು ಸಂರಕ್ಷಣಾ ಸಮಾವೇಶ ನ. 3ರಂದು ಜಿಲ್ಲೆಯ ಸೊರಬ ತಾಲ್ಲೂಕಿನ ಉದ್ರಿ ಗ್ರಾಮದ ಕೋಟೆ ಕೆರೆ ಬಳಿ ನಡೆಯಲಿದೆ.

ಬರಗಾಲದ ಗಂಭೀರ ಸ್ಥಿತಿಯಲ್ಲಿ ಕೆರೆ–ಕಾನು ಉಳಿಸಿ ಅಭಿಯಾನ ಬಲಗೊಳಿಸುವ ಬಗ್ಗೆ ಈ ವಿಶೇಷ ಸಮಾಲೋಚನಾ ಸಮಾವೇಶವನ್ನು ವೃಕ್ಷಲಕ್ಷ ಆಂದೋಲನ, ಪರಿಸರ ಜಾಗೃತಿ ಸಂಸ್ಥೆ ಹಾಗೂ ಜೀವವೈವಿಧ್ಯ ಸಮಿತಿಗಳು ಜಂಟಿಯಾಗಿ ಸಂಘಟಿಸಿವೆ.

ಅರಣ್ಯ–ಪರಿಸರ ವಿಜ್ಞಾನಿಗಳಾದ ಟಿ.ವಿ. ರಾಮಚಂದ್ರ, ಡಾ.ಕೇಶವ ಎಚ್. ಕೊರ್ಸೆ, ರಾಜ್ಯ ಕೆರೆ ನಿರ್ವಹಣಾ ಸಂಘಗಳ ಒಕ್ಕೂಟದ ಅಧ್ಯಕ್ಷ ನಾಗರಾಜಯ್ಯ, ಪ್ರಾಚ್ಯವಸ್ತು ಇಲಾಖೆ ನಿರ್ದೇಶಕ ಡಾ.ಶೇಜೇಶ್ವರ, ಅರಣ್ಯ ಇಲಾಖೆ ಪಿಸಿಸಿಎಫ್ ಬ್ರಿಜೇಶಕುಮಾರ್, ಜೀವವೈವಿಧ್ಯ ಮಂಡಳಿ ಮುಖ್ಯಸ್ಥ ಡಾ.ಜಗತ್‌ರಾಮ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ವೃಕ್ಷಲಕ್ಷ ಆಂದೋಲನದ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಅಧ್ಯಕ್ಷತೆ ವಹಿಸಲಿದ್ದಾರೆ. ಆಸಕ್ತರು ಈ ಸಮಾವೇಶಕ್ಕೆ ಬರುವಂತೆ ಸಂಘಟಕರು ಕೋರಿದ್ದಾರೆ. ಸಂಪರ್ಕ ಸಂಖ್ಯೆ: 8197553400.

‘ನಮ್ಮಲ್ಲಲ್ಲ, ಬಿಜೆಪಿಯಲ್ಲಿ ಕಚ್ಚಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ಪಕ್ಷದಲ್ಲಿ ಕಿತ್ತಾಟ ಇಲ್ಲ. ಕಿತ್ತಾಟ ಇರುವುದು ಬಿಜೆಪಿಯಲ್ಲಿ. ಹೀಗಾಗಿ ವಿರೋಧ ಪಕ್ಷದ ನಾಯಕರ ಆಯ್ಕೆ ಮಾಡಲು ಬಿಜೆಪಿಯವರಿಗೆ ಆಗಿಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದರು.

‘ಕಾಂಗ್ರೆಸ್ ನಾಯಕರು ಕಚ್ಚಾಡುತ್ತಿದ್ದಾರೆ’ ಎಂಬ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ನಮ್ಮಲ್ಲಿ ಯಾವುದೇ ಜಗಳ ಇಲ್ಲ. ಬಿಜೆಪಿ ಮುಖಂಡರು ತಮ್ಮ ವೈಫಲ್ಯ ಮುಚ್ಚಿಡಲು ಈ ರೀತಿ ಮಾತನಾಡುತ್ತಾರೆ. ನಮ್ಮ ಶಾಸಕರಿಗೆ ಚಾಕೊಲೇಟ್ ನೀಡಲು ಪ್ರಯತ್ನಿಸುತ್ತಿದ್ದಾರೆ’ ಎಂದರು.

‘ಆಪರೇಷನ್ ಕಮಲ ಮಾಡುತ್ತಿಲ್ಲ, ಬೇಕಾದರೆ ಅವರೇ ತನಿಖೆ ಮಾಡಿಸಲಿ‘ ಎಂಬ ಯಡಿಯೂರಪ್ಪ ಹೇಳಿಕೆ ಬಗ್ಗೆ ಕೇಳಿದಾಗ, ‘ಯಡಿಯೂರಪ್ಪ ಅವರ ಸಲಹೆ ಗಮನದಲ್ಲಿ ಇಟ್ಟುಕೊಳ್ಳುತ್ತೇವೆ’ ಎಂದರು.

‘5 ವರ್ಷ ನಾನೇ ಮುಖ್ಯಮಂತ್ರಿ’

ಒಂದನೇ ಪುಟದಿಂದ

‘ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಜತೆಗೆ ಮಂಗಳವಾರ (ನ.1) ನಡೆಸಿದ್ದ ಸಭೆಯಲ್ಲಿ, ಅಧಿಕಾರ ಹಂಚಿಕೆ, ಪಕ್ಷ, ಸರ್ಕಾರದ ಬಗ್ಗೆ ಯಾರೊಬ್ಬರೂ ಮಾತನಾಡದಂತೆ ನೋಡಿಕೊಳ್ಳುವ ಹೊಣೆಯನ್ನು ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗೆ ವಹಿಸಲಾಗಿತ್ತು. ನಾಯಕತ್ವ ಬದಲಾವಣೆ, ಸಂಪುಟ ಪುನಾರಚನೆ ಎಲ್ಲ ವಿಷಯವನ್ನೂ ಹೈಕಮಾಂಡ್ ನೋಡಿಕೊಳ್ಳುತ್ತದೆ. ಲೋಕಸಭೆ ಚುನಾವಣೆಯಲ್ಲಿ 20ರಿಂದ 25 ಸ್ಥಾನ ಗೆಲ್ಲಿಸಲು ಒಗ್ಗೂಡಿ ಕೆಲಸ ಮಾಡಿ ಎಂದೂ ವೇಣುಗೋಪಾಲ್ ಸಲಹೆ ನೀಡಿದ್ದರು’ ಎಂದು ಮೂಲಗಳು ಹೇಳಿದ್ದವು.

ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷದ ಬಳಿಕ ನಾಯಕತ್ವ ಬದಲಾವಣೆಯಾಗುತ್ತದೆ ಎಂಬ ಚರ್ಚೆಯನ್ನು ಜೀವಂತವಾಗಿಡಲು ಡಿಕೆಶಿ ಬಣ ತನ್ನ ಯತ್ನವನ್ನು ಮುಂದುವರಿಸಿತ್ತು. ಈ ವಿಷಯದ ಬಗ್ಗೆ ಇಲ್ಲಿಯವರೆಗೆ ಪ್ರತಿಕ್ರಿಯಿಸದೇ ಇದ್ದ ಸಿದ್ದರಾಮಯ್ಯ ಅವರು, ಮೊದಲ ಬಾರಿಗೆ ‘ನಾನೇ ಐದು ವರ್ಷ ಮುಖ್ಯಮಂತ್ರಿ’ ಎಂದು ಹೇಳುವ ಮೂಲಕ 30 ತಿಂಗಳ ಅಧಿಕಾರ ಕಸಿಯಲು ತಂತ್ರ ಹೆಣೆಯುತ್ತಿರುವವರಿಗೆ ಎದಿರೇಟು ನೀಡಿದ್ದಾರೆಯೇ? ಮುಖ್ಯಮಂತ್ರಿ ಸ್ಥಾನದ ಮೇಲೆ ತಮ್ಮ ಹಿಡಿತ ಬಲಗೊಳಿಸುವ ಜತೆಗೆ, ಹೈಕಮಾಂಡ್ ಕೂಡ ತಮ್ಮ ಬೆಂಬಲಕ್ಕಿದೆ ಎಂಬ ಸಂದೇಶವನ್ನು ತಮ್ಮ ಎದುರಾಳಿ ಗುಂಪಿಗೆ ರವಾನಿಸುವ ಕೆಲಸವನ್ನೂ ಮಾಡಿದ್ದಾರೆಯೇ ಎಂಬ ಚರ್ಚೆ ಪಕ್ಷದ ಪಡಸಾಲೆಯಲ್ಲಿ ಶುರುವಾಗಿದೆ.

‘ಮುಖ್ಯಮಂತ್ರಿ ಬದಲಾವಣೆ, ಮತ್ತೆ ಮೂವರಿಗೆ ಉಪಮುಖ್ಯಮಂತ್ರಿ ಹುದ್ದೆ’ ಇಂತಹ ವಿಷಯಗಳು ಕಳೆದ ಒಂದು ತಿಂಗಳಿನಿಂದ ರಾಜಕೀಯ ವಲಯದಲ್ಲಿ ಸದ್ದು ಮಾಡುತ್ತಲೇ ಇವೆ. ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿಯ ಕುರಿತ ವಿವಾದ ತಾರಕಕ್ಕೇರಿದಾಗ, ‘ಪಕ್ಷ–ಸರ್ಕಾರದ ವಿಷಯದಲ್ಲಿ ಯಾರೊಬ್ಬರೂ ಮಾತನಾಡಕೂಡದು’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಎಚ್ಚರಿಕೆಯ ಮಾತುಗಳನ್ನು ಆಡಿದ್ದರು. ಆ ಬಳಿಕ, ಕೆಲದಿನ ಈ ವಿಚಾರಗಳು ಮುನ್ನೆಲೆಗೆ ಬಂದಿರಲಿಲ್ಲ.

ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಪ್ತವಲಯದಲ್ಲಿ ಗುರುತಿಸಿಕೊಂಡಿರುವ ಮಂಡ್ಯ ಶಾಸಕ ರವಿಕುಮಾರ್ ಗಣಿಗ ಅವರು, ‘ಎರಡು ವರ್ಷಗಳ ಬಳಿಕ ಶಿವಕುಮಾರ್ ಮು ಖ್ಯ ಮ ಂ ತ್ರಿ ಯಾ ಗು ವು ದು ಗ್ಯಾರಂಟಿ’ ಎಂದು ಹೇಳುವ ಮೂಲಕ ಮತ್ತೊಂದು ದಾಳ ಉರುಳಿಸಿದ್ದರು. ಇದರ ಬೆನ್ನಲ್ಲೇ, ಗೃಹ ಸಚಿವ ಜಿ. ಪರಮೇಶ್ವರ ಅವರ ಮನೆಯಲ್ಲಿ ಭೋಜನ ಕೂಟದ ಹೆಸರಿನಲ್ಲಿ ನಡೆದ ರಹಸ್ಯ ಸಭೆಯಲ್ಲಿ ಸಿದ್ದರಾಮಯ್ಯ ಭಾಗವಹಿಸಿದ್ದರು. ಸಚಿವರಾದ ಸತೀಶ ಜಾರಕಿಹೊಳಿ, ಎಚ್.ಸಿ. ಮಹದೇವಪ್ಪ ಭಾಗಿಯಾಗಿದ್ದರು. ಮುಖ್ಯಮಂತ್ರಿ ಗಾದಿಗೆ ಶಿವಕುಮಾರ್ ಪಟ್ಟು ಹೆಚ್ಚಾದರೆ, ದಲಿತ ಮುಖ್ಯಮಂತ್ರಿಯ ಪ್ರತಿದಾಳ ಉರುಳಿಸುವ ಬಗ್ಗೆ ತಂತ್ರಗಾರಿಕೆ ಹೆಣೆಯುವುದು ರಹಸ್ಯ ಸಭೆಯ ಕಾರ್ಯಸೂಚಿ ಎಂದೂ ಹೇಳಲಾಗಿತ್ತು.

ಏಕೆಂದರೆ, ಅದೇ ದಿನ ಮಧ್ಯಾಹ್ನ ಸಿದ್ದರಾಮಯ್ಯ ಮತ್ತು ಡಿಕೆಶಿ ಇಬ್ಬರೇ ಮೂರು ತಾಸಿಗೂ ಹೆಚ್ಚು ಹೊತ್ತು ಸಭೆ ನಡೆಸಿದ್ದರು. ಈ ಸಭೆಯ ವೇಳೆ, ಭೋಜನ ಕೂಟದ ಸುಳಿವೇ ಇರಲಿಲ್ಲ. ಅಂದು ಬೆಂಗಳೂರಿನಲ್ಲೇ ಶಿವಕುಮಾರ್ ಇದ್ದರೂ ಭೋಜನಕೂಟಕ್ಕೆ ಅವರಿಗೆ ಆಹ್ವಾನ ಇರಲಿಲ್ಲ. ಕೆಪಿಸಿಸಿ ಅಧ್ಯಕ್ಷರನ್ನೇ ಹೊರಗಿಟ್ಟು ಸಭೆ ನಡೆಸಿರುವುದು, ನಾನಾ ರೀತಿಯ ಚರ್ಚೆಗೆ ಕಾರಣವಾಗಿತ್ತು. ಸರ್ಕಾರ ಮತ್ತು ಪಕ್ಷದೊಳಗೆ ಉಲ್ಬಣಗೊಳ್ಳುತ್ತಿರುವ ‘ಬಣ ಪೈಪೋಟಿ’ ವರ್ಚಸ್ಸಿಗೆ ಧಕ್ಕೆ ತರುತ್ತದೆ ಎಂಬುದು ಖಚಿತವಾಗುತ್ತಿದ್ದಂತೆ ಕಾಂಗ್ರೆಸ್ ಹೈಕಮಾಂಡ್ ಮಧ್ಯ ಪ್ರವೇಶಿಸಿತು. ಸೋಮವಾರ ರಾತ್ರಿ ಬೆಂಗಳೂರಿಗೆ ದೌಡಾಯಿಸಿದ ವೇಣುಗೋಪಾಲ್ ಹಾಗೂ ಸುರ್ಜೇವಾಲಾ, ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಇಬ್ಬರನ್ನೇ ಕೂರಿಸಿಕೊಂಡು ಸಮಾಲೋಚನೆ ನಡೆಸಿದರು. ಬಹಿರಂಗವಾಗಿ ಮಾತನಾಡದಂತೆ ಸಚಿವರು, ಶಾಸಕರಿಗೆ ನೀವೇ ಸೂಚಿಸಿ, ಅವರ ಮಾತಿನ ಮೇಲೆ ಕಡಿವಾಣ ಹಾಕುವಂತೆ ನೋಡಿಕೊಳ್ಳದಿದ್ದರೆ ವರ್ಚಸ್ಸಿಗೆ ಧಕ್ಕೆಯಾಗುತ್ತದೆ ಎಂದು ಮನವರಿಕೆ ಮಾಡಿಕೊಟ್ಟಿದ್ದರು.

‘ಗಣಪತಿ ಪೂಜೆ, ಪ್ರಾರ್ಥನೆ ನಮ್ಮ ಸಂಸ್ಕೃತಿಯಲ್ಲ’

ಪ್ರಜಾವಾಣಿ ವಾರ್ತೆ

ಹೊಸದುರ್ಗ (ಚಿತ್ರದುರ್ಗ ಜಿಲ್ಲೆ): ‘ವೇದಿಕೆ ಕಾರ್ಯಕ್ರಮಗಳಲ್ಲಿ ಅಥವಾ ಮನೆಗಳಲ್ಲಿ ಗಣಪತಿಯನ್ನು ವಿಘ್ನ ನಿವಾರಕನನ್ನಾಗಿ ಪೂಜಿಸುವುದು, ಪ್ರಾರ್ಥನೆ ಸಲ್ಲಿಸುವುದು ನಮ್ಮ ಸಂಸ್ಕೃತಿಯಲ್ಲ. ಅದರ ಬದಲು ವಾಸ್ತವಕ್ಕೆ ತಕ್ಕುದಾದ ವಚನಗಳನ್ನು ಪಠಿಸಬೇಕು’ ಎಂದು ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಸಾಣೇಹಳ್ಳಿಯಲ್ಲಿ ಗುರುವಾರ ಆರಂಭವಾದ ರಾಷ್ಟ್ರೀಯ ನಾಟಕೋತ್ಸವದ ಉದ್ಘಾಟನೆ ಸಮಾರಂಭದಲ್ಲಿ ಶಿವ ಧ್ವಜಾರೋಹಣ ನೆರವೇರಿಸಿದ ಬಳಿಕ ಅವರು ಆಶೀರ್ವಚನ ನೀಡಿದರು.

ಗಣಪತಿಯನ್ನು ಸ್ತುತಿಸುವುದು ಮೌಢ್ಯದ ಆಚರಣೆ. ವಚನಗಳನ್ನು ಪ್ರಸ್ತುತಪಡಿಸುವುದು ನಿಜವಾದ ಪ್ರಾರ್ಥನೆ. ಕಾರ್ಯಕ್ರಮಗಳ ಆರಂಭದಲ್ಲಿ ವಚನಗಳನ್ನೂ ಹಾಡಬಹುದು ಎಂದು ತೋರಿಸಿದವರು ಶಿವಕುಮಾರ ಸ್ವಾಮೀಜಿ’ ಎಂದು ಅವರು ತಿಳಿಸಿದರು.

‘ಗಣಪತಿ ಕಾಲ್ಪನಿಕ ದೇವರು. ಸ್ವಾತಂತ್ರ್ಯ ಚಳವಳಿ ಸಂದರ್ಭದಲ್ಲಿ ನೆಪಮಾತ್ರಕ್ಕೆ ಹುಟ್ಟಿಕೊಂಡ ದೇವರದು. ಬಾಹ್ಯ ವಸ್ತುಗಳಿಂದ ಮಾಡಿದ ದೇವರುಗಳು ದೇವರಲ್ಲ. ಮನೆಗಳಲ್ಲಿ ಅಥವಾ ಯಾವುದೇ ಸಮಾರಂಭಗಳಲ್ಲಿ ಮೊದಲು ಗಣಪತಿ ಪೂಜೆ, ಸ್ತೋತ್ರ ಹಾಗೂ ಶ್ಲೋಕ ಪಠಿಸಬೇಕು ಎಂಬುದು ಹಲವರ ನಂಬಿಕೆಯಾಗಿದೆ. ಅದರ ಬದಲು ವಚನಗಳನ್ನೇ ಪ್ರಾರ್ಥನೆಯಂತೆ ಪಠಿಸಬೇಕು’ ಎಂದು ಸಲಹೆ ನೀಡಿದರು.

‘ಶರಣರ ಪ್ರಕಾರ ಸ್ವಸಾಮರ್ಥ್ಯ, ಉತ್ತಮ ನಡವಳಿಕೆ ಹೊಂದಿದವರೇ ನಿಜವಾದ ದೇವರು. ನಮ್ಮನ್ನು ನಾವು ನಂಬಬೇಕು. ಶರಣರ ಆಶಯಗಳಂತೆ ಬದುಕಬೇಕು. ಈ ನಿಟ್ಟಿನಲ್ಲಿ ಆತ್ಮಾವಲೋಕನ ಅಗತ್ಯ’ ಎಂದರು.

ಮಯೂರ, ಸುಧಾ ಓದಿರಿ

ಸಿ.ಎಂ ಪಿಣರಾಯಿಗೆ ಬೆದರಿಕೆ ಕರೆ

ತಿರುವನಂತಪುರ (ಪಿಟಿಐ): ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಅನಾಮಧೆಯ ವ್ಯಕ್ತಿಯೊಬ್ಬ ಪ್ರಾಣ ಬೆದರಿಕೆಯೊಡ್ಡಿ ಬುಧವಾರ ಸಂಜೆ ರಾಜ್ಯ ಪೊಲೀಸ್ ಪ್ರಧಾನ ಕಚೇರಿಗೆ ದೂರವಾಣಿ ಕರೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕನೊಬ್ಬ ಈ ಕರೆ ಮಾಡಿದ್ದಾನೆ ಎನ್ನಲಾದ ಮಾಧ್ಯಮ ವರದಿಗಳ ಬಗ್ಗೆ ಕೇಳಿದಾಗ, ಎಲ್ಲ ಆಯಾಮಗಳಿಂದಲೂ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ಗುರುವಾರ ಸ್ಪಷ್ಟಪಡಿಸಿದ್ದಾರೆ.





ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವದಲ್ಲಿ ಥಾವರ್‌ಚಂದ್ ಗೆಹಲೋತ್

ಮಹಿಳೆಯರಿಗೂ ಸಮಾನ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ರಂಗಗಳಲ್ಲಿ ಮಹಿಳೆಯರಿಗೆ ಸಮಾನ ಅವಕಾಶಗಳು ಸಿಗುತ್ತಿವೆ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಹೇಳಿದರು.

ಗುರುವಾರ ಇಲ್ಲಿ ನಡೆದ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು. ಸರ್ಕಾರವು ಮಹಿಳೆಯರಿಗೆ ಉತ್ತೇಜನ ನೀಡಲು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಎಂದರು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಮಾತನಾಡಿ, ಉನ್ನತ ಶಿಕ್ಷಣ ಪಡೆಯುತ್ತಿರುವವರಲ್ಲಿ ಶೇ 49ರಷ್ಟು ವಿದ್ಯಾರ್ಥಿನಿಯರಿದ್ದಾರೆ. ಮಹಿಳೆಯರ ಸಾಧನೆಯ ಹಾದಿಯನ್ನು ಇದು ತೋರಿಸುತ್ತದೆ' ಎಂದರು.

ಗೌರವ ಡಾಕ್ಟರೇಟ್ ಪದವಿ ಸ್ವೀಕರಿಸಿದ ಭಾರತೀಯ ವಿಜ್ಞಾನ ಸಂಸ್ಥೆ ಮಾಜಿ ನಿರ್ದೇಶಕ ಪಿ. ಬಲರಾಂ, 'ಖಾಸಗೀಕರಣ ಹೆಚ್ಚುತ್ತಿರುವ ಈ ಕಾಲದಲ್ಲಿ ಸಂಶೋಧನಾ ಕ್ಷೇತ್ರವೂ ಹಿರಿದಾಗುತ್ತಿದೆ. ಮಹಿಳೆಯರು ಸಂಶೋಧನೆ ಕಡೆಗೆ ಹೆಚ್ಚು ಗಮನ ಹರಿಸಬೇಕು' ಎಂದು ಸಲಹೆ ನೀಡಿದರು.

ಗೌರವ ಡಾಕ್ಟರೇಟ್ ಪದವಿ ಸ್ವೀಕರಿಸಿದ ಇನ್ಫೊಸಿಸ್ ಫೌಂಡೇಶನ್ ಅಧ್ಯಕ್ಷೆ ಸುಧಾಮೂರ್ತಿ ಮಾತನಾಡಿ, 'ಹಣದ ಹಿಂದೆ ಓಡುವ ಬದಲು ಸಾಧನೆಯ ಹಿಂದೆ ಓಡಬೇಕು. ಯಾವುದೇ ಕ್ಷೇತ್ರದಲ್ಲಿ ಮನಸ್ಸಿಟ್ಟು ಶ್ರಮ ವಹಿಸಿದರೆ ಫಲ ಸಿಕ್ಕಿಯೇ ಸಿಗುತ್ತದೆ' ಎಂದು ಹೇಳಿದರು.

ವಿ.ವಿ. ಕುಲಪತಿ ಎಲ್. ಗೋಮತಿ ದೇವಿ, ಕುಲಸಚಿವರಾದ ಅನುರಾಧ ವಿ., ಸಂಗಪ್ಪ ಇದ್ದರು.

ಮಹಾರಾಣಿ ಕ್ಲಸ್ಟರ್ ವಿ.ವಿ. ಪ್ರಥಮ ಘಟಿಕೋತ್ಸವದಲ್ಲಿ ಇನ್ಫೊಸಿಸ್ ಫೌಂಡೇಶನ್ ಅಧ್ಯಕ್ಷೆ ಸುಧಾಮೂರ್ತಿ ಮತ್ತು ಐಐಎಸ್‌ಸಿ ಮಾಜಿ ಅಧ್ಯಕ್ಷ ಪ್ರೊ. ಪದ್ಮನಾಭನ್ ಬಲರಾಂ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಯಿತು (ಎಡಚಿತ್ರ). ಘಟಿಕೋತ್ಸವದಲ್ಲಿ ಚಿನ್ನದ ಪದಕಗಳನ್ನು ಪಡೆದ ವಿದ್ಯಾರ್ಥಿನಿಯರು ಪ್ರಜಾವಾಣಿ ಚಿತ್ರ/

ರ‍್ಯಾಂಕ್ ವಿಜೇತರ ಸಂಭ್ರಮ

ನನ್ನ ತಂದೆ ಕೇಬಲ್ ಆಪರೇಟರ್. ಅಪ್ಪ, ಅಮ್ಮ ಇಬ್ಬರೂ ಓದಿಲ್ಲ. ನಾವು ಐವರು ಮಕ್ಕಳು, ಐವರಿಗೂ ಓದಿಸಿದ್ದಾರೆ. ನನ್ನ ಪತಿ ಕೂಡ ಪ್ರೋತ್ಸಾಹ ನೀಡಿದ್ದಾರೆ. ನನಗೆ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿ ಉದ್ಯೋಗ ಸಿಕ್ಕಿದ್ದು, ಇವತ್ತೇ ನೇಮಕಾತಿ ಆದೇಶ ಪತ್ರ ಪಡೆಯಲು ಹೋಗಬೇಕು. ಇಂದೇ ಚಿನ್ನದ ಪದಕ ಸಿಕ್ಕಿರುವುದರಿಂದ ಎರಡರಡು ಸಂತಸ ನನಗೆ.

ತಸ್ಮಿಯಾ ಕೌಸರ್, ಎಂಎಸ್‌ಸಿ (ಗಣಿತ) ಪ್ರಥಮ ರ‍್ಯಾಂಕ್ ವಿಜೇತೆ

ಕಾಲೇಜಿನಲ್ಲಿ ಅಧ್ಯಾಪಕರು ಉತ್ತಮ ಪ್ರೋತ್ಸಾಹ ನೀಡಿದರು. ಕಲಿಕೆ ಮಾತ್ರವಲ್ಲ, ಇತರ ಚಟುವಟಿಕೆಯಲ್ಲಿ ಕೂಡ ಇದ್ದೆ. ಅಪ್ಪ ಬ್ಯುಸಿನೆಸ್ ಮ್ಯಾನ್. ಅವರ ನಿರೀಕ್ಷೆ ಹುಸಿಯಾಗದಂತೆ ಓದಿದ್ದೇನೆ. ಬಹಳ ಸಂತೋಷವಾಗಿದೆ.

ಅನ್ನಪೂರ್ಣ ಕೆ.ಎಂ. ಎಂಎ (ಅರ್ಥಶಾಸ್ತ್ರ) ಪ್ರಥಮ ರ‍್ಯಾಂಕ್ ವಿಜೇತೆ

ತಂದೆ ಅಟೊ ಓಡಿಸುತ್ತಾರೆ. ತಾಯಿ ಗಾರ್ಮೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಮಧ್ಯಮ ವರ್ಗದ ಕುಟುಂಬ ನಮ್ಮದು. ಜೀವನ ನಡೆಸುವುದು ಕಷ್ಟ ಇರುವ ಕುಟುಂಬ. ಹೆತ್ತವರ ಪ್ರೋತ್ಸಾಹದಿಂದ ಕಲಿಯಲು ಸಾಧ್ಯವಾಗಿದೆ.

ಕಾವೇರಿ, ಎಂಎ (ಅರ್ಥಶಾಸ್ತ್ರ) ಪ್ರಥಮ ರ‍್ಯಾಂಕ್ ವಿಜೇತೆ

ರ‍್ಯಾಂಕ್ ಬರುತ್ತೆ ಎಂಬ ನಿರೀಕ್ಷೆ ಇರಲಿಲ್ಲ. ಉಪನ್ಯಾಸಕರ, ಸಹೋದ್ಯೋಗಿಗಳ ಮತ್ತು ಹೆತ್ತವರ ಪ್ರೋತ್ಸಾಹದಿಂದ ರ‍್ಯಾಂಕ್ ಪಡೆಯಲು ಸಾಧ್ಯವಾಗಿದೆ.

ಪ್ರಗತಿ ಎಂ.ಎಸ್. ಎಂ.ಎಸ್‌ಸಿ (ಭೌತ ವಿಜ್ಞಾನ) ಪ್ರಥಮ ರ‍್ಯಾಂಕ್ ವಿಜೇತೆ

ನಾನು ತಂದೆಯನ್ನು ಸಣ್ಣವಳಿದ್ದಾಗಲೇ ಕಳೆದುಕೊಂಡಿದ್ದೆ. ತಾಯಿ ಗಾರ್ಮೆಂಟ್ಸ್‌ಗೆ ಹೋಗಿ ಮಾಡಿ ಸಾಕಿ, ಓದಿಸಿದ್ದಾರೆ. ಮುಂದೆ ಕೆಪಿಎಸ್‌ಸಿ ಪರೀಕ್ಷೆ ಬರೆಯಬೇಕು. ಬಿಇಡಿ ಕೂಡಾ ಮಾಡುತ್ತಿದ್ದೇನೆ. ಏನಾದರೂ ಸಾಧನೆ ಮಾಡುತ್ತಿದ್ದಾರೆ.

ರಮ್ಯಾಶ್ರೀ ಬಿ.ಎಂ., ಬಿಎ (ಸಮಾಜ ವಿಜ್ಞಾನ) ರ‍್ಯಾಂಕ್ ವಿಜೇತೆ

ಮತ್ತೆ ಅಧಿಕಾರ ಸಂಘರ್ಷ

ಮಾಲಿನ್ಯ ನಿಯಂತ್ರಣ ಮಂಡಳಿ: ಸುತ್ತೋಲೆ ರದ್ದು

● ಆರ್. ಮಂಜುನಾಥ್

ಬೆಂಗಳೂರು: ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಅಧ್ಯಕ್ಷ ಮತ್ತು ಸದಸ್ಯ ಕಾರ್ಯದರ್ಶಿ ನಡುವೆ ಮತ್ತೆ ಅಧಿಕಾರ ಸಂಘರ್ಷ ಉಂಟಾಗಿದೆ.

ಹೈಕೋರ್ಟ್ ಆದೇಶದಂತೆ ಅಧ್ಯಕ್ಷರಾಗಿ ಮುಂದುವರಿದಿರುವ ಅಧ್ಯಕ್ಷ ಶಾಂತ್ ಎ. ತಿಮ್ಮಯ್ಯ ಅವರು, ಸದಸ್ಯ ಕಾರ್ಯದರ್ಶಿ ಪಿ.ಸಿ. ರೇ ಅ.27ರಂದು ಹೊರಡಿಸಿದ್ದ 242ನೇ ಸಭೆಯ ಸುತ್ತೋಲೆಯನ್ನು ಅ.30ರಂದು ರದ್ದು ಮಾಡಿದ್ದಾರೆ.

'ಮಂಡಳಿ ಮುಂದೆ 400ಕ್ಕೂ ಹೆಚ್ಚು ಅರ್ಜಿಗಳು ಸಮ್ಮತಿಗಾಗಿ ಬಾಕಿ ಉಳಿದಿವೆ. ಅರಣ್ಯ ಸಚಿವರ ನೇತೃತ್ವದಲ್ಲಿ ಈ ವಿಚಾರವನ್ನು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಸದಸ್ಯ ಕಾರ್ಯದರ್ಶಿಯವರು ಪರಾಮರ್ಶಿಸಿದರು. ಈ ಎಲ್ಲ ಅರ್ಜಿಗಳನ್ನು ಮಂಡಳಿ ಮೂಲಕ ಶೀಘ್ರವೇ ವಿಲೇವಾರಿ ಮಾಡಲು ನಿರ್ಧರಿಸಲಾಯಿತು. ಇದನ್ನು ಸುತ್ತೋಲೆ ಮೂಲಕ ಸಮ್ಮತಿ ನೀಡಬೇಕು' ಎಂದು ಅ.27ರಂದು ಸದಸ್ಯ ಕಾರ್ಯದರ್ಶಿಯವರು ರಾಜ್ಯಮಟ್ಟದ ಜಾರಿ ಸಮಿತಿಯ ಸದಸ್ಯರಿಗೆ '242ನೇ ಮಂಡಳಿ ಸಭೆ ಕಾರ್ಯಸೂಚಿಯ ಪ್ರಸರಣ'ವನ್ನು ಕಳುಹಿಸಿದ್ದಾರೆ.

'ಸದಸ್ಯ ಕಾರ್ಯದರ್ಶಿಯವರಿಗೆ ಮಂಡಳಿಯ ರಾಜ್ಯಮಟ್ಟದ ಜಾರಿ ಸಮಿತಿ ಸದಸ್ಯರ ಸಭೆ ಕರೆಯುವ ಅಧಿಕಾರ ಇಲ್ಲ. ಹೀಗಿದ್ದರೂ, ಅಧ್ಯಕ್ಷರ ಸಮ್ಮತಿ ಇಲ್ಲದೆ ಅ.13ರಂದು ಸಭೆ ನಡೆಸಿದ್ದಾರೆ.

ಅಧ್ಯಕ್ಷರ ಸೂಚನೆಯ ನಂತರವೂ ಸದಸ್ಯ ಕಾರ್ಯದರ್ಶಿಯವರು ಸೆ.16, ಅ.5, ಅ.6, ಅ.7 ಮತ್ತು ಅ.10ರಂದು ಸಭೆ ನಡೆಸುವ ವೇಳಾಪಟ್ಟಿ ಹೊರಡಿಸಿದ್ದರು. ಇದೆಲ್ಲವೂ ಕಾನೂನು ಬಾಹಿರ' ಎಂದು ಅಧ್ಯಕ್ಷ ಶಾಂತ್ ತಮ್ಮಯ್ಯ ಅವರು ರಾಜ್ಯಮಟ್ಟದ ಜಾರಿ ಸಮಿತಿಯ ಸದಸ್ಯರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

'ಮಂಡಳಿ ಮುಂದೆ ಬಾಕಿ ಉಳಿದಿರುವ ಕಡತಗಳಿಗೆ ಸಮ್ಮತಿ ನೀಡಿ ವಿಲೇವಾರಿ ಮಾಡಲು ಸದಸ್ಯ ಕಾರ್ಯದರ್ಶಿಯವರು ಅ.27ರಂದು ಸುತ್ತೋಲೆ ಹೊರಡಿಸಿರುವುದು ಕೂಡ ಜಲ ಕಾಯ್ದೆ ಹಾಗೂ ಜಲ ಮಾಲಿನ್ಯ ನಿಷೇಧ ಮತ್ತು ನಿಯಂತ್ರಣ ನಿಯಮಗಳಿಗೆ ವಿರುದ್ಧವಾಗಿದೆ. ಅಧ್ಯಕ್ಷರ ಸಮ್ಮತಿ ಇಲ್ಲದೆ ಇಂತಹ ಕ್ರಮ ಕೈಗೊಳ್ಳಲಾಗಿದೆ. ಹೀಗಾಗಿ 242ನೇ ಮಂಡಳಿ ಸಭೆಯ ವಿಷಯಗಳಿಗೆ ಸಮ್ಮತಿ ನೀಡಬೇಕೆಂದು ಹೊರಡಿಸಿರುವ ಸುತ್ತೋಲೆಯನ್ನು ರದ್ದುಪಡಿಸಲಾಗಿದೆ. ಹೈಕೋರ್ಟ್ ಸಮ್ಮತಿ ಪಡೆದುಕೊಂಡು ಮುಂದಿನ ಸಭೆಯ ದಿನಾಂಕವನ್ನು ತಿಳಿಸಲಾಗುತ್ತದೆ' ಎಂದು ಶಾಂತ್ ತಮ್ಮಯ್ಯ ಹೇಳಿದ್ದಾರೆ.

'ಸಮಸ್ಯೆಗಳು ಸೃಷ್ಟಿಯಾಗಿವೆ, ಈ ಬಗ್ಗೆ ನಾವು ಹೋರಾಟ ನಡೆಸುತ್ತೇವೆ' ಎಂದು ಸದಸ್ಯ ಕಾರ್ಯದರ್ಶಿ ಪಿ.ಸಿ. ರೇ ಪ್ರತಿಕ್ರಿಯಿಸಿದರು.

ಮುಖ್ಯ ಕಾರ್ಯದರ್ಶಿಗೆ ಪತ್ರ

'ಅರಣ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಬಿ.ಪಿ ರವಿ ಅವರು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವಲಯ ಪರಿಸರ ಅಧಿಕಾರಿಗಳ ಸಭೆ ನಡೆಸಿದ್ದಾರೆ. ಮಂಡಳಿಯ ಅಧಿಕಾರಿಗಳೊಂದಿಗೆ ಕುಂಬಳಗೋಡು, ಕೆಂಗೇರಿ, ಶಿವಮೊಗ್ಗ, ಚಿತ್ರದುರ್ಗಗಳಲ್ಲಿ ಕಂಪನಿಗಳ ಪರಿಶೀಲನೆ ನಡೆಸಿದ್ದಾರೆ. ಇದು ಕಾನೂನು-ಬಾಹಿರವಾಗಿದ್ದು, ಮಂಡಳಿಯ ಆಡಳಿತದಲ್ಲಿ ಅವರು ಮಧ್ಯಪ್ರವೇಶಿಸದಂತೆ ಆದೇಶಿಸಬೇಕು' ಎಂದು ಮುಖ್ಯ ಕಾರ್ಯದರ್ಶಿ ಅವರಿಗೆ ಶಾಂತ್ ತಮ್ಮಯ್ಯ ಪತ್ರ ಬರೆದಿದ್ದಾರೆ.

'ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ಬಗ್ಗೆ ಯಾವುದೇ ರೀತಿಯ ಪ್ರತಿಕ್ರಿಯೆ ನೀಡುವುದಿಲ್ಲ' ಎಂದು ಬಿ.ಪಿ. ರವಿ ಪ್ರತಿಕ್ರಿಯಿಸಿದರು.

ರಸ್ತೆ ಮೂಲಸೌಕರ್ಯ ಕನ್ಸಲ್ಟೆನ್ಸಿ ಸೇವೆಗೆ ಟೆಂಡರ್

ಬೆಂಗಳೂರು: ನಗರದ ರಸ್ತೆ ಮೂಲಸೌಕರ್ಯದ ಸಮಗ್ರ ಯೋಜನೆ ರೂಪಿಸಲು ಕನ್ಸಲ್ಟೆನ್ಸಿ ಸೇವೆ ಒದಗಿಸಲು ಬಿಬಿಎಂಪಿ ಟೆಂಡರ್ ಆಹ್ವಾನಿಸಿದೆ.

ನ.15ರಂದು ಟೆಂಡರ್ ಸಲ್ಲಿಸಲು ಅಂತಿಮ ದಿನವಾಗಿದೆ. ಗುತ್ತಿಗೆ ನೀಡಿದ 8 ವಾರಗಳಲ್ಲಿ ಸಮಗ್ರ ವರದಿ ಯನ್ನು ನೀಡಬೇಕಾಗಿದೆ. ಬಳ್ಳಾರಿ ರಸ್ತೆ, ಹಳೆ ಮದ್ರಾಸ್ ರಸ್ತೆ, ಹಳೆ ವಿಮಾನ ನಿಲ್ದಾಣ ರಸ್ತೆ, ಸರ್ಜಾಪುರ ರಸ್ತೆ, ಹೊಸೂರು ರಸ್ತೆ, ಕನಕಪುರ ರಸ್ತೆ, ಬನ್ನೇರುಘಟ್ಟ ರಸ್ತೆ, ಮೈಸೂರು ರಸ್ತೆ, ಮಾಗಡಿ ರಸ್ತೆ, ತುಮಕೂರು ರಸ್ತೆ ಮತ್ತು ಹೊರ ವರ್ತುಲ ರಸ್ತೆಗಳಾದ ಗೊರಗುಂಟೆಪಾಳ್ಯ ದಿಂದ ಕೆ.ಆರ್. ಪುರ, ಕೆ.ಆರ್. ಪುರದಿಂದ ರೇಷ್ಮೆ ಮಂಡಳಿ, ರೇಷ್ಮೆ ಮಂಡಳಿ ಯಿಂದ ಮೈಸೂರು ರಸ್ತೆಯ 190 ಕಿ.ಮೀ ರಸ್ತೆಯ ವಾಹನ ದಟ್ಟಣೆ ನಿಯಂತ್ರಣಕ್ಕೆ ವರದಿಯನ್ನು ಕನ್ಸಲ್ಟೆನ್ಸಿ ಸಂಸ್ಥೆ ಸಲ್ಲಿಸಬೇಕಿದೆ.

'ಹಸಿರು ಪಟಾಕಿಗಷ್ಟೇ ಅವಕಾಶ'

ಬೆಂಗಳೂರು: ದೀಪಾವಳಿಗೆ ಹಸಿರು ಪಟಾಕಿ ಮಾತ್ರ ಬಳಸಬೇಕು ಎಂದು ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ.

ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿಯನ್ನು ಉಲ್ಲೇಖಿಸಿ ಈ ಸುತ್ತೋಲೆ ಹೊರಡಿಸಿರುವ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರು, ಎಲ್ಲ ಮಹಾನಗರ ಪಾಲಿಕೆ, ಸ್ಥಳೀಯ ಸಂಸ್ಥೆಗಳು ಕಡ್ಡಾಯವಾಗಿ ಅನುಸರಿಸಬೇಕು ಎಂದಿದೆ.

ಸುಪ್ರೀಂ ಕೋರ್ಟ್ ಆದೇಶಗಳನ್ನು ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ತಮ್ಮ ವ್ಯಾಪ್ತಿಯ ಅಧೀನ ಅಧಿಕಾರಿಗಳ ಗಮನಕ್ಕೆ ತಂದು, ಆದೇಶ ಪಾಲಿಸಲು ಕ್ರಮ ತೆಗೆದುಕೊಳ್ಳಬೇಕು. ಜಿಲ್ಲಾಧಿಕಾರಿಗಳು ಕಾರ್ಯಪಡೆಗಳನ್ನು ರಚಿಸಿ ಪಟಾಕಿ ಮಾರಾಟಗಾರರ ಗೋದಾಮುಗಳನ್ನು ಪರಿಶೀಲಿಸಬೇಕು. ಹಸಿರು ಪಟಾಕಿ ಹೊರತುಪಡಿಸಿ ಇತರ ಯಾವುದೇ ನಿಷೇಧಿತ ಪಟಾಕಿಗಳನ್ನು ದಾಸ್ತಾನು ಮಾಡಿದ್ದರೆ ಗೋದಾಮು ಮುಟ್ಟಗೋಲು ಹಾಕಬೇಕು. ಸಂಬಂಧಿಸಿದ ವ್ಯಕ್ತಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬೇಕು ಎಂದೂ ಸುತ್ತೋಲೆಯಲ್ಲಿ ವಿವರಿಸಲಾಗಿದೆ.

ಎಲ್ಲ ಹಸಿರು ಪಟಾಕಿಗಳ ಮೇಲೆ ಮತ್ತು ಅವುಗಳ ಪ್ಯಾಕೆಟಿನ ಮೇಲೆ ಹಸಿರು ಪಟಾಕಿಯ ಚಿಹ್ನೆ ಮತ್ತು ಕ್ಯೂಆರ್ ಕೋಡ್ ಇರುತ್ತದೆ. ಸಂಬಂಧಪಟ್ಟ ಜಿಲ್ಲೆಯ ಪರಿಸರ ಅಧಿಕಾರಿಗಳಿಂದ ಈ ಚಿಹ್ನೆಯ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಚಿಹ್ನೆ ಇಲ್ಲದ ಯಾವುದೇ ಪಟಾಕಿ ಹಸಿರು ಪಟಾಕಿ ಆಗಿರುವುದಿಲ್ಲ. ಅವುಗಳನ್ನು ಮುಟ್ಟಗೋಲು ಹಾಕಬೇಕು. ಯಾವುದೇ ಹಸಿರು ಪಟಾಕಿಗಳ ಪ್ಯಾಕೆಟ್‌ಗಳನ್ನು ರ‍್ಯಾಂಡಮ್ ಆಗಿ ಸಂಗ್ರಹಿಸಿ ನಿಗದಿತ ವಿಧಿ ವಿಧಾನಗಳ ಮೂಲಕ ಅವುಗಳ ಶಬ್ದದ ಮಟ್ಟ ಮಾಪನಕ್ಕೆ ಸೂಚಿಸಲಾಗಿದೆ.

ಹೊರ ರಾಜ್ಯಗಳಿಂದ ನಿಷೇಧಿತ ಪಟಾಕಿ ಗಳನ್ನು ಸಾಗಣೆ ಮಾಡುತ್ತಿದ್ದರೆ ವಾಣಿಜ್ಯ ಇಲಾಖೆ ಮುಟ್ಟಗೋಲು ಹಾಕಿಕೊಳ್ಳಬೇಕು. ಪರಿಸರ ಸ್ನೇಹಿ ದೀಪಾವಳಿ ಆಚರಣೆಯ ಬಗ್ಗೆ ಜಾಗೃತಿ ಮೂಡಿಸಬೇಕು ಎಂದೂ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಬಿಡಿಎ ಫ್ಲ್ಯಾಟ್‌ಗೆ ಉತ್ತಮ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋನದಾಸನಪುರದಲ್ಲಿ ಬಿಡಿಎ ವಸತಿ ಯೋಜನೆ– 2ನೇ ಹಂತದ 'ಸಿ' ಬ್ಲಾಕ್‌ನ ಫ್ಲ್ಯಾಟ್‌ಗಳನ್ನು ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಮಾರಾಟಕ್ಕೆ ಬಿಡುಗಡೆ ಮಾಡಲಾಗಿದ್ದು, ಪ್ರಥಮ ದಿನವೇ 18 ಫ್ಲ್ಯಾಟ್‌ಗಳು ಮಾರಾಟವಾಗಿವೆ.

ಕೋನದಾಸಪುರ ವಸತಿ ಯೋಜನೆ–2ರಲ್ಲಿ 672 ಫ್ಲ್ಯಾಟ್‌ಗಳಿವೆ. ಪ್ರತಿ ಪ್ಲಾಟ್ 14 ಅಂತಸ್ತುಗಳಿರುತ್ತವೆ. ಆರು ಬ್ಲಾಕ್‌ಗಳಲ್ಲಿರುವ ಫ್ಲ್ಯಾಟ್‌ಗಳನ್ನು ಎ, ಬಿ, ಸಿ, ಡಿ, ಇ, ಎಫ್ ಎಂದು ವರ್ಗೀಕರಿಸಲಾಗಿದೆ.

ಎ ಮತ್ತು ಬಿ ಬ್ಲಾಕ್‌ನ ತಲಾ 112 ಫ್ಲ್ಯಾಟ್‌ಗಳು ಈಗಾಗಲೇ ಮಾರಾಟಕ್ಕೆ ಲಭ್ಯವಿದ್ದು, ಇದರಲ್ಲಿ ಒಟ್ಟು 135 ಫ್ಲ್ಯಾಟ್‌ಗಳು ಮಾರಾಟವಾಗಿವೆ.

ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಸಿ ಬ್ಲಾಕ್‌ನ ಫ್ಲ್ಯಾಟ್‌ಗಳನ್ನು ಮಾರಾಟಕ್ಕೆ ಬಿಡುಗಡೆ ಮಾಡಲಾಗಿತ್ತು. ಆನ್‌ಲೈನ್‌ನಲ್ಲಿ ಆಯ್ಕೆ, ಖರೀದಿ ಪ್ರಕ್ರಿಯೆ ನಡೆಯುತ್ತಿದ್ದು, ಒಂದೇ ದಿನದಲ್ಲಿ ಈ ಬ್ಲಾಕ್‌ನ 18 ಫ್ಲ್ಯಾಟ್‌ಗಳು ಮಾರಾಟವಾಗಿ, ಮತ್ತಷ್ಟು ಬೇಡಿಕೆ ಬಂದಿದೆ ಎಂದು ಬಿಡಿಎ ಎಂಜಿನಿಯರ್‌ಗಳು ತಿಳಿಸಿದರು.

806 ಚದರಡಿ ಕಾರ್ಪೆಟ್ ಏರಿಯಾ, 904 ಚದರಡಿ ಬಿಲ್ಟ್–ಅಪ್– ಏರಿಯಾ, 1040 ಚದರಡಿ ಸೂಪರ್ ಬಿಲ್ಟ್ ಅಪ್ ಏರಿಯಾದ ಫ್ಲ್ಯಾಟ್‌ಗಳು ₹48 ಲಕ್ಷದಿಂದ ₹52.65 ಲಕ್ಷವರೆಗೆ ಲಭ್ಯವಿವೆ. ಇನ್ನೂ ಮೂರು ಬ್ಲಾಕ್‌ಗಳಲ್ಲಿರುವ ಫ್ಲ್ಯಾಟ್‌ಗಳಲ್ಲಿ ದೀಪಾವಳಿ ಸಂದರ್ಭದಲ್ಲಿ ಕೆಲವನ್ನು ಮಾರಾಟಕ್ಕೆ ಬಿಡುಗಡೆ ಮಾಡಲು ಯೋಜಿಸಲಾಗಿದೆ ಎಂದು ಹೇಳಿದರು.

ಪೂರ್ವ ತಾಲ್ಲೂಕು ಬಿದರಹಳ್ಳಿ ಹೋಬಳಿ ಕೋನದಾಸಪುರ ವಸತಿ ಯೋಜನೆ–2ರಲ್ಲಿ ಬೇಸ್‌ಮೆಂಟ್ ಹಾಗೂ ಸ್ಟಿಲ್ಟ್ ಅಂತಸ್ತುಗಳನ್ನು ವಾಹನ ನಿಲುಗಡೆಗೆ ಮೀಸಲಿಡಲಾಗಿದೆ. ಮೊದಲು ಅರ್ಜಿ ಸಲ್ಲಿಸಿದವರಿಗೆ ಮೊದಲ ಆದ್ಯತೆ ಮೇರೆಗೆ ಫ್ಲ್ಯಾಟ್‌ಗಳನ್ನು ಹಂಚಿಕೆ ಮಾಡಲಾಗುತ್ತಿದೆ ಎಂದು ಬಿಡಿಎ ಅಧಿಕಾರಿಗಳು ಮಾಹಿತಿ ನೀಡಿದರು. ಮುಂದಿನ 3 ವರ್ಷಗಳಲ್ಲಿ ಸುಮಾರು ಆರು ಸಾವಿರ ಫ್ಲ್ಯಾಟ್‌ಗಳನ್ನು ಮಾರಲು ಬಿಡಿಎ ಯೋಜನೆ ಹೊಂದಿದೆ.

ಪ್ರಕಾಶ್ ಮಂಟೇದ ವಿರುದ್ಧದ ಎಫ್‌ಐಆರ್ ಕೈಬಿಡಲು ಒತ್ತಾಯ

ಬೆಂಗಳೂರು: ಲೇಖಕ ಪ್ರಕಾಶ್ ಮಂಟೇದ ವಿರುದ್ಧ ರಾಮನಗರ ಗ್ರಾಮಾಂತರ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಕೈಬಿಡಬೇಕು ಎಂದು ಕೆಪಿಸಿಸಿ ಸಾಮಾಜಿಕ ನ್ಯಾಯ ವಿಭಾಗದ ಅಧ್ಯಕ್ಷ ಸಿ.ಎಸ್.ದ್ವಾರಕನಾಥ್ ಒತ್ತಾಯಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಜಿ. ಪರಮೇಶ್ವರ ಅವರಿಗೆ ಪತ್ರ ಬರೆದಿದ್ದಾರೆ. ವೆಬ್‌ಸೈಟ್‌ವೊಂದಕ್ಕೆ ಬರೆದ ಅಂಕಣದ ನೆಪ ಇಟ್ಟುಕೊಂಡು ಸೂಕ್ಷ್ಮ ಮನಸ್ಸಿನ ಸಂವೇದನಾಶೀಲ ಯುವ ಬರಹಗಾರನ ಮೇಲೆ ಕಾನೂನು ಬಾಹಿರವಾಗಿ ಪ್ರಕರಣ ದಾಖಲಿಸಿರುವುದು ಸಮಾಜಕ್ಕೆ ತಪ್ಪು ಸಂದೇಶ ರವಾನಿಸಿದಂತಾಗಿದೆ ಎಂದಿದ್ದಾರೆ.

ಪ್ರಕಾಶ್ ಅವರು ತಮ್ಮ ಬಾಲ್ಯದಲ್ಲಿ ಅನುಭವಿಸಿದ ನೋವಿನ ವಿಷಯಗಳನ್ನು ಅಂಕಣದಲ್ಲಿ ಬರೆದಿದ್ದಾರೆ. ಊರಿನಲ್ಲಿ ಜರುಗಿದ ಘಟನೆಗಳ ಚಿತ್ರಣ ದಾಖಲಿಸಿದ್ದಾರೆ. ಅದು ಯಾವುದೆ ಜಾತಿ, ವ್ಯಕ್ತಿಗಳನ್ನು ಅವಮಾನ ಮಾಡುವ ದುರುದ್ದೇಶವಿಲ್ಲದ ಬರಹ. ಹತ್ತಾರು ವರ್ಷಗಳ ಹಿಂದೆ ನಡೆದ ಘಟನೆ ವಿವರಿಸುವುದು ಈ ಕಾಲಘಟ್ಟದಲ್ಲಿ ಯಾರಿಗೋ ಕೇಡು, ಅವಮಾನ ಆಗದು. ಪೊಲೀಸ್ ಅಧಿಕಾರಿ ವಿವೇಚನೆ ಮಾಡದೆ ಅ. 28ರಂದು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಪೊಲೀಸ್ ಅಧಿಕಾರಿಗಳು ಹಿಂದಿನ ಸರ್ಕಾರದ ಅವಧಿಯ ಮನೋಸ್ಥಿತಿಯಲ್ಲೇ ಇದ್ದಾರೆ. ಆತನಿಗೆ ನ್ಯಾಯ ದೊರಕಿಸಬೇಕಿದೆ ಎಂದು ಅವರು ಕೋರಿದ್ದಾರೆ.

WEEKEND CORNER ಕ್ಲಾಸಿಫೈಡ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Part-Time Jobs

RETIRED/ VRS Persons And Age above 45 Years Earn 2nd Income 35K to 40K PM: 9886641282/ 7019215243

WANTED COMPUTER TRAINER (Basic, Excel,zoom etc) Near Cantonment Station area. For Senior Citizen, Contact: 9341018766

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

General

JOB OPPORTUNITY for Retired, Homemaker, Defence Banker's, Business People Fixed Salary 75K Per Month & Incentives. Locations:- Koramangala, Jayanagar, Rajajinagar. Contact:- 9108282236, 9108282237

REAL ESTATE SELLING

Commerical

Marathahalli

SALE: 5700 Sqft, Commercial Site FOR SALE, Near Varthur, WEST Facing, 'B' Khatha in BBMP limit. Contact- 9353532040

Sites

Chikkaballapura

CHIKKABALLAPUR SITES 30x40 with 1800 sft constructed villas, 40' Roads Approved by Chikkaballapur Town Planning Authority, 70 Lakhs. Vamshadhara Projects- 9342247637.

REAL ESTATE BUYING

Industrial & Factory

General

WANTED TO Buy INDUSTRIAL/ COMMERCIAL converted land 10000 Sft to 5 acres from YELAHANKA to DEVANAHALLI main road or side road. Call-8050779019.

BUILDERS ESSENTIAL

Water Proofing

WE FIX LEAKING ROOF,TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY,CIVIL WORKS. Call:9448572697

BUSINESS

Business to Business

Business

OPPORTUNITY TO Earn 1.5 lakh above Per Month. Trade mark, Fssai, MSME and GST registered Branded Dry Fruits Company Wishes to appoint Franchise outlets throughout Bangalore and all districts of Karnataka. Reasonable Investment: 8095059460/ 6360940295

STUCKUP? ANY Central Government work, we assist you with high level contacts. Vamshadhara Project Services: 9342247637

Finance

MORTGAGE, HOME, Business, Personal Loans, only Bangalore within 7 days, Genuine enquiries only. Contact: 7795369732.

Business Offers

Finance

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

NRI'S INVESTMENT& Finance Available On Low Interest Against Properties, Land& Building,Sites,Flats,Converted& Agriculture Lands Call:7204995189

PERSONAL

Lost

DOCUMENT LOST

I, **ANANTHARAJU,** R/at # 27/6, Opp. Vidya Vahini School, Eranapalya Srigandakavalu, Bangalore-91,have lost my original **Rectification Deed Document No./ Identification No. NGB-1-04883-2013-14,** while shifting house. *Finders please Contact:* **9731329986 / 9972377998**

Change of Name

RAJEEV KUMAR, 6496114Y, NK, Vill- Maholiya, Kailai, Bhognipur, Kanpur Dehat, Uttar Pradesh changed Son's name DIPENDRA YADAV to DEEPENDRA YADAV, 01/11/2023, Notary K.V. Mani, Bangalore

CHANGE OF NAME

I, **LAVANYA ARUL** R/at # 609, 4C Main, OMBR Layout, Banaswadi, Bangalore- 560043 have changed my name to **LAVANYA REDDY** vide affidavit dated 2-11-2023, before Notary A. Gerard, Bangalore. Henceforth I shall be called **LAVANYA REDDY** only.

CHANGE OF NAME

We, **ARUL NARAYANAN & LAVANYA REDDY,** R/at # 609, 4C Main, OMBR Layout, Banaswadi, Bangalore- 560043, have changed our minor son's name from **PRITHVI ARUL** to **PRITHVI REDDY** vide affidavit dated 2-11-2023, before Notary A. Gerard, Bangalore. Henceforth he shall be called **PRITHVI REDDY** only.

CHANGE OF NAME

We, **ARUL NARAYANAN & LAVANYA REDDY,** R/at # 609, 4C Main, OMBR Layout, Banaswadi, Bangalore- 560043, have changed our minor daughter's name from **DIYA ARUL** to **DIYA REDDY** vide affidavit dated 2-11-2023, before Notary A. Gerard, Bangalore. Henceforth she shall be called **DIYA REDDY** only.

CHANGE OF NAME

I, **KANTHAMMA** Residing at No.2, 116/1, BKL Nivas, 9th Main, Bommanahalli, BKL Colony, Hosur Main Road, Bangalore-560068 have changed my name to **KANTHAMMA LAKSHMAIAH** vide affidavit dated 27.10.2023 before Notary S. Jayanth Bangalore. Henceforth I shall be known as **KANTHAMMA LAKSHMAIAH** only.

CHANGE OF NAME

I, **MUNISWAMY SHANMUGAM** Residing at 14, Nandavanam 'G' Street, Jogupalyam, Ulsoor, Bengaluru-560008 have changed my name to **SHANMUGAM MUNUSWAMY** vide affidavit dated 2.11.2023 before Notary B.V. Nagabhushana. Bengaluru. Henceforth I shall be known as **SHANMUGAM MUNUSWAMY** only.

I JAYALAKSHMI Mudugundur Harshavardhan D/O, Somasekhar Nanjundappa Shankarappa R/o #37, 2nd Floor Annadanappa Lane, Avenue Road Cross Bangalore-560002 have changed my name to Jayalakshmi Nanjundappa Somasekhar

I, SUBBURAJ .A, have changed my name to A. SUBBAREDDY vide affidavit dated 02.11.2023 sworn before Notary Rajanna. S.M. Bengaluru

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager The Printers (Mysore) Pvt. Ltd. Bengaluru

ಸಂಕ್ಷಿಪ್ತ ಸುದ್ದಿ

ಬರ: ಇಂದಿನಿಂದ ಬಿಜೆಪಿ ಅಧ್ಯಯನ

ಬೆಂಗಳೂರು: ಬಿಜೆಪಿಯ ವಿವಿಧ ನಾಯಕರ ನೇತೃತ್ವದಲ್ಲಿ ಬರ ಅಧ್ಯಯನ ಕೆಲವು ಜಿಲ್ಲೆಗಳಲ್ಲಿ ಶುಕ್ರವಾರದಿಂದ ಆರಂಭವಾಗಲಿದೆ.

ಬಿ.ಎಸ್.ಯಡಿಯೂರಪ್ಪ ನೇತೃತ್ವದ ತಂಡ ಇದೇ 6 ಮತ್ತು 7 ರಂದು ತುಮಕೂರು ಜಿಲ್ಲೆಯಲ್ಲಿ ಬರ ಅಧ್ಯಯನ, 8 ರಿಂದ 10 ರವರೆಗೆ ಬೆಂಗಳೂರಿನ ಸಮಸ್ಯೆಗಳ ಬಗ್ಗೆ ಅಧ್ಯಯನ ಪ್ರವಾಸ ನಡೆಸಲಿದೆ. ಶುಕ್ರವಾರ ಭದ್ರಾವತಿಯಲ್ಲಿ ಪೂರ್ವ ನಿರ್ಧರಿತ ಕಾರ್ಯಕ್ರಮ ಇರುವುದರಿಂದ ಅವರು ಅಲ್ಲಿಗೆ ತೆರಳಲಿದ್ದಾರೆ.

ನಳಿನ್ ಕುಮಾರ್ ಕಟೀಲ್ ಅವರು ಇದೇ 4 ರಿಂದ, ಕೆ.ಎಸ್. ಈಶ್ವರಪ್ಪ ಅವರು ಇದೇ 6 ರಿಂದ ಪ್ರವಾಸ ನಡೆಸಲಿದ್ದಾರೆ. ಕೆಲ ತಂಡಗಳು ಶುಕ್ರವಾರದಿಂದಲೇ ಬರ ಅಧ್ಯಯನ ಆರಂಭಿಸಲಿವೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ನಾಳೆ ಮೂರು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್'

ಬೆಂಗಳೂರು: ಹವಾಮಾನ ಇಲಾಖೆಯು ಚಿಕ್ಕಮಗಳೂರು, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಗೆ ಶನಿವಾರ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಕೊಡಗು ಜಿಲ್ಲೆಗೆ ಶುಕ್ರವಾರ ಹಾಗೂ ಮೈಸೂರು, ಹಾಸನ ಸೇರಿದಂತೆ ಐದು ಜಿಲ್ಲೆಗಳಿಗೆ ಭಾನುವಾರ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಶನಿವಾರದಿಂದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳ ಕೆಲವೆಡೆ ಮಳೆ ಪ್ರಮಾಣ ಹೆಚ್ಚಳವಾಗುವ ಸಾಧ್ಯತೆಯಿದೆ.

ಕರಾವಳಿ ಮತ್ತು ದಕ್ಷಿಣ ಒಳನಾಡಿನ ಕೆಲವು ಕಡೆ ಶುಕ್ರವಾರ ಸಾಧಾರಣ ಮಳೆಯಾಗಲಿದೆ. ಗರಿಷ್ಠ ತಾಪಮಾನ 2 ರಿಂದ 3 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ತಾಪಮಾನ 2 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರುತ್ತದೆ. ಸಂಜೆ ಅಥವಾ ರಾತ್ರಿಯ ಅವಧಿಯಲ್ಲಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹೇಳಿದೆ.

ಮಹಾರಾಷ್ಟ್ರಕ್ಕೆ ಬಸ್ ಸಂಚಾರ ರದ್ದು ಮುಂದುವರಿಕೆ

ಬೆಂಗಳೂರು: ಮಹಾರಾಷ್ಟ್ರದಲ್ಲಿ ನಡೆಯುತ್ತಿರುವ ಮರಾಠ ಮೀಸಲಾತಿ ಚಳವಳಿ ಪ್ರಾರಂಭವಾದಾಗಿನಿಂದ ಕೆಎಸ್‌ಆರ್‌ಟಿಸಿ ಬಸ್ ಸಂಚಾರ ಸ್ಥಗಿತಗೊಳಿಸಲಾಗಿತ್ತು. ಹಿಂಸಾಚಾರ ಮತ್ತೆ ಭುಗಿಲೆದ್ದಿರುವುದರಿಂದ ಸಂಚಾರ ಸ್ಥಗಿತ ಮುಂದುವರಿಯಲಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಮಹಾರಾಷ್ಟ್ರದಲ್ಲಿ ಚಳವಳಿ ತೀವ್ರಗೊಂಡು ಅಲ್ಲಿನ ಹಲವು ಬಸ್‌ಗಳನ್ನು ಸುಡಲಾಗಿದೆ. ಅನೇಕ ಬಸ್‌ಗಳಿಗೆ ಹಾನಿಯಾಗಿದೆ. ಹಾಗಾಗಿ ಬೆಂಗಳೂರಿನಿಂದ ಹೊರಡುವ ಶಿರಡಿ, ಮುಂಬೈ ಮತ್ತು ಪುಣೆಗೆ ನಾಲ್ಕು ಬಸ್‌ಗಳ ಪುನರಾರಂಭವನ್ನು ಮುಂದೂಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಕೆವಿಎಸ್ ಕಬಡ್ಡಿ: ಜೈಪುರಕ್ಕೆ ಜಯ

ಬೆಂಗಳೂರು: ಜೈಪುರ ವಲಯ ತಂಡ, ಗುರುವಾರ ಇಲ್ಲಿ ಆರಂಭವಾದ ಕೆವಿಎಸ್ 52ನೇ ರಾಷ್ಟ್ರೀಯ 17 ವರ್ಷದೊಳಗಿನವರ ಕಬಡ್ಡಿ ಟೂರ್ನಿಯ 'ಎ' ಗುಂಪಿನ ಪಂದ್ಯದಲ್ಲಿ ಬೆಂಗಳೂರು ತಂಡವನ್ನು ಸೋಲಿಸಿ ಶುಭಾರಂಭ ಮಾಡಿತು.

ಸಿ.ವಿ.ರಾಮನ್‌ನಗರದ ಡಿಆರ್‌ಡಿಒ ಕೇಂದ್ರೀಯ ವಿದ್ಯಾಲಯದಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ ಭುವನೇಶ್ವರ ತಂಡ, ಭೋಪಾಲ್ ವಲಯವನ್ನು ಸೋಲಿಸಿತು.

'ಬಿ' ಗುಂಪಿನಲ್ಲಿ ಎರ್ನಾಕುಲಂ ತಂಡ, ತೀನ್‌ಸುಕಿಯಾ ತಂಡವನ್ನು ಸೋಲಿಸಿದರೆ, ರಾಂಚಿ ತಂಡ, ಅಹಮದಾಬಾದ್ ವಿರುದ್ಧ ಜಯಗಳಿಸಿತು. ಟೀಮ್ ಆಗ್ರಾ ತಂಡ 'ಸಿ' ಗುಂಪಿನಲ್ಲಿ ಹೈದರಾಬಾದ್ ವಿರುದ್ಧ, ಡೆಹ್ರಾಡೂನ್ 'ಡಿ' ಗುಂಪಿನಲ್ಲಿ ವಾರಾಣಸಿ ವಿರುದ್ಧ ಜಯಗಳಿಸಿದವು.

ನಿಧನ ವಾರ್ತೆ

ನಿಜಗಲ್ ಕೆಂಪೋಹಳ್ಳಿಯ ಕೃಷ್ಣೇಗೌಡ

ದಾಬಸ್ ಪೇಟೆ: ಸೋಂಪುರ ಗ್ರಾಮ ಪಂಚಾಯಿತಿ ಸದಸ್ಯ ಹಾಗೂ ಕಲಾವಿದರಾದ ನಿಜಗಲ್ ಕೆಂಪೋಹಳ್ಳಿಯ ಕೃಷ್ಣೇಗೌಡ ಅನಾರೋಗ್ಯದಿಂದ ಗುರುವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು.



ಕೃಷ್ಣೇಗೌಡ

'ಸ್ಪರ್ಧಾವಾಣಿ' ಸಂಚಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಶಂಕರ ಬಿದರಿ ಅಭಿಮತ

ಗಡಿದಾಟಿದರಷ್ಟೇ ಕನ್ನಡಿಗರಿಗೆ ಯಶಸ್ಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸೇವೆಗಳಲ್ಲಿ ಹಲವು ಉದ್ಯೋಗಾವಕಾಶಗಳಿದ್ದರೂ, ಹೆಚ್ಚಿನ ಸಂಖ್ಯೆಯ ಕನ್ನಡಿಗರು ರಾಜ್ಯದ ಗಡಿ ದಾಟದೇ ಅವಕಾಶಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎಂದು ನಿವೃತ್ತ ಐಪಿಎಸ್ ಅಧಿಕಾರಿ ಶಂಕರ್ ಬಿದರಿ ಗುರುವಾರ ಹೇಳಿದರು.

ಸರ್ಕಾರಿ ನೌಕರರ ಭವನದಲ್ಲಿ 'ಪ್ರಜಾವಾಣಿ' ಪತ್ರಿಕೆ ಸ್ಪರ್ಧಾ ಪರೀಕ್ಷೆಯ ಆಕಾಂಕ್ಷಿಗಳಿಗಾಗಿ ರೂಪಿಸಿದ 'ಸ್ಪರ್ಧಾವಾಣಿ' ಮಾಸಿಕ ಸಂಚಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರದಲ್ಲಿ 1.80 ಕೋಟಿ ಹುದ್ದೆಗಳಿವೆ. ಭೌಗೋಳಿಕ ವಿಸ್ತೀರ್ಣ, ಜನಸಂಖ್ಯೆ ಆಧಾರದಲ್ಲಿ ರಾಜ್ಯದ 15 ಲಕ್ಷ ಜನರಿಗೆ ಕೆಲಸ ದೊರಕಬೇಕಿತ್ತು. ಕೇಂದ್ರ ಲೋಕಸೇವಾ ಆಯೋಗ, ಸಿಬ್ಬಂದಿ ನೇಮಕಾತಿ ಆಯೋಗ ನಡೆಸುವ ಪ್ರತಿ ವರ್ಷದ ನೇಮಕಾತಿಯಲ್ಲಿ ಕನಿಷ್ಠ ಶೇ 5.5ರಷ್ಟು ಹುದ್ದೆಗಳು ಲಭಿಸಬೇಕು. ಈಗ ಇರುವುದು ಶೇ 1ಕ್ಕಿಂತ ಕಡಿಮೆ. ನಮಗಿಂತ ಕಡಿಮೆ ವಿಸ್ತೀರ್ಣ, ಜನಸಂಖ್ಯೆ ಹೊಂದಿರುವ ಕೇರಳ ಶೇ 12ರಷ್ಟು ಪಾಲು ಪಡೆಯುತ್ತಿದೆ ಎಂದರು.

ರಾಜ್ಯದ ಅಭ್ಯರ್ಥಿಗಳು ಗಡಿ ದಾಟಲು ಮನಸ್ಸು ಮಾಡದೆ ರಾಜ್ಯ ಸರ್ಕಾರದ ಹುದ್ದೆಗಳ ಮೇಲೆ ಅವಲಂಬಿತರಾಗಿದ್ದಾರೆ. ಇಲ್ಲಿನ ಬಹುತೇಕ ನೇಮಕಾತಿಗಳು 5ರಿಂದ 10 ವರ್ಷಗಳಷ್ಟು ವಿಳಂಬವಾಗುತ್ತಿವೆ. ಯುವಕರಿದ್ದಾಗ ಅರ್ಜಿ ಸಲ್ಲಿದರೆ, ಪ್ರಕ್ರಿಯೆ ಪೂರ್ಣಗೊಂಡು ನೇಮಕಾತಿ ಆದೇಶ ನೀಡುವಷ್ಟರಲ್ಲಿ ಮಧ್ಯವಯಸ್ಸು ದಾಟಿರುತ್ತದೆ. ಕೆಲಸದ ಆಸಕ್ತಿ, ಸೇವಾ ಮನೋಭಾವ ಹೊರಟು ಹೋಗಿರುತ್ತದೆ. ಸರ್ಕಾರಕ್ಕೂ ಪ್ರಯೋಜನವಾಗುವುದಿಲ್ಲ. ಕೇಂದ್ರ ಸೇವೆಗಳಿಗೆ ಪರೀಕ್ಷೆ ಬರೆದರೆ ಒಂದು ವರ್ಷದ ಒಳಗೆ ನೇಮಕಾತಿ ಆದೇಶ ಪಡೆಯಬಹುದು ಎಂದು ಕಿವಿಮಾತು ಹೇಳಿದರು.

'ಸ್ಪರ್ಧಾವಾಣಿ' ಬಿಡುಗಡೆ ಮಾಡಿದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಕೆಲ ವಿದ್ಯಾರ್ಥಿಗಳು ಜ್ಞಾನದ ಆಧಾರದಲ್ಲಿ ಪರೀಕ್ಷೆ ಎದುರಿಸದೆ, ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಅಡ್ಡದಾರಿ ಹಿಡಿಯುತ್ತಿದ್ದಾರೆ. ಅಂತಹ ದಾರಿಯಲ್ಲಿ ವಿದ್ಯಾರ್ಥಿನಿಯರೂ ಸಾಗಿರುವುದು ಕಳವಳಕಾರಿ ವಿಚಾರ. ಕೆಇಎ ಈಚೆಗೆ ನಡೆಸಿದ ಪರೀಕ್ಷೆಯಲ್ಲಿ ಕಿವಿಯೊಳಗೆ ಬ್ಲೂಟೂತ್ ಅಳವಡಿಸಿಕೊಂಡ ಪ್ರಕರಣ ಪತ್ತೆಹಚ್ಚಲಾಗಿದ್ದು, ವೈದ್ಯರ ಬಳಿ ತೆಗಿಸಬೇಕಾಯಿತು. 'ಪ್ರಜಾವಾಣಿ' ಯಂತಹ ಪತ್ರಿಕೆ ಓದಿದರೆ ಅಡ್ಡದಾರಿಯ ಅಗತ್ಯವಿಲ್ಲ ಎಂದರು.

ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಕೋಲಾರದ ಯುವಕರೇ ಹೆಚ್ಚಿನ ಯಶಸ್ಸು ಪಡೆದಿದ್ದಾರೆ. ಒಂದು ಕಾಲದಲ್ಲಿ ಕೆಎಎಸ್ ಅನ್ನು ಕೋಲಾರ ಆಡಳಿತ ಸೇವೆ ಎಂದು ಕರೆಯುತ್ತಿದ್ದೆವು. ಇಂದು ಎಲ್ಲ ಕೆಲಸಗಳಿಗೂ ಘನತೆ ಇದೆ. ಹೋಟೆಲ್ ಅಡುಗೆ ಸಿದ್ಧಪಡಿಸುವ ಕೆಲಸಕ್ಕೂ ಬೇಡಿಕೆ ಇದೆ. ಜ್ಞಾನದ ಜತೆಗೆ ಗ್ರಹಿಕೆ ಇದ್ದರೆ ಯಶಸ್ಸು ಕಾಣಬಹುದು ಎಂದು ಹೇಳಿದರು.

'ಸ್ಪರ್ಧಾವಾಣಿ' ಮಾಸಿಕ ಪತ್ರಿಕೆಯನ್ನು ಸಚಿವರಾದ ಮಧು ಬಂಗಾರಪ್ಪ, ಡಾ.ಎಂ.ಸಿ. ಸುಧಾಕರ್ ಗುರುವಾರ ಬಿಡುಗಡೆ ಮಾಡಿದರು. ಶಂಕರ ಬಿದರಿ ಹಾಗೂ ವೂಡೇ ಪಿ. ಕೃಷ್ಣ ಇದ್ದರು —ಪ್ರಜಾವಾಣಿ ಚಿತ್ರ

> **ವಿದ್ಯಾರ್ಥಿಗಳಿಗೆ ಏನು ಅನುಕೂಲ ಮಾಡಿಕೊಟ್ಟಿದ್ದೀರಿ ಎಂದು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗೆ ಭೇಟಿ ನೀಡಿದ್ದ ನ್ಯಾಕ್ ಸಮಿತಿ ಕೇಳಿತ್ತು. 'ಪ್ರಜಾವಾಣಿ'ಯ 'ಮಾಸ್ಟರ್‌ಮೈಂಡ್' ಪ್ರತಿ ತೋರಿಸಿದೆವು. 'ಎ ಡಬಲ್ ಪ್ಲಸ್' ಗ್ರೇಡ್ ದೊರೆಯಿತು**
> **ವೂಡೇ ಪಿ. ಕೃಷ್ಣ,** ಶಿಕ್ಷಣ ತಜ್ಞ

> **'ಪ್ರಜಾವಾಣಿ' ಓದಿದ ಬಹುತೇಕರು ಸ್ಪರ್ಧಾ ಪರೀಕ್ಷೆಗಳಲ್ಲಿ ಯಶಸ್ಸು ಕಂಡಿದ್ದಾರೆ. ಹೊಸದಾಗಿ ರೂಪಿಸಲಾದ 'ಸ್ಪರ್ಧಾವಾಣಿ' ಓದಿನ ಸಮಯವನ್ನು ಇನ್ನಷ್ಟು ಉಳಿಸುತ್ತದೆ. ಹೆಚ್ಚಿನ ಜ್ಞಾನ ವೃದ್ಧಿಗೆ ಸಹಕಾರಿಯಾಗುತ್ತದೆ**
> **ಪಿ.ಮಣಿವಣ್ಣನ್,** ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ

ಬಡ ಅಭ್ಯರ್ಥಿಗಳಿಗೆ 'ಸ್ಪರ್ಧಾವಾಣಿ' ವರ

ಬಾಲ್ಯದಿಂದಲೇ ಪ್ರಜಾವಾಣಿ, ಸುಧಾ, ಮಯೂರ ಓದಿಕೊಂಡು ಬೆಳೆದಿದ್ದೇನೆ. ಪತ್ರಿಕೆಗಳಲ್ಲಿ ಅಂದಿನ ಗುಣಮಟ್ಟವೇ ಇಂದೂ ಉಳಿದಿದೆ. ಅಧಿಕ ಮೊತ್ತ ನೀಡಿ ತರಬೇತಿ ಪಡೆಯಲು ಸಾಧ್ಯವಾಗದ ಬಡ ವರ್ಗದ ಅಭ್ಯರ್ಥಿಗಳಿಗೆ 'ಸ್ಪರ್ಧಾವಾಣಿ' ದಾರಿ ದೀಪವಾಗಲಿದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಆಧುನಿಕ ತಂತ್ರಜ್ಞಾನದ ಬಳಕೆಯ ಜತೆಗೆ ವಿದ್ಯಾರ್ಥಿಗಳು ಓದುವ ಬರೆಯುವ ಅಭ್ಯಾಸ ರೂಢಿಸಿಕೊಳ್ಳಬೇಕು. ಬರೆಯುವ, ಓದುವ ಬುನಾದಿ ಇದ್ದರೆ ಉಳಿದ ಮಾರ್ಗ ಸುಲಭವಾಗುತ್ತದೆ ಎಂದು ಸಲಹೆ ನೀಡಿದರು.

ಪರೀಕ್ಷಾ ಅಕ್ರಮ ತಡೆಗೆ ಕಠಿಣ ಕ್ರಮ

ಕೆಪಿಎಸ್‌ಸಿಯಿಂದ 207 ಕೇಂದ್ರಗಳಲ್ಲಿ ನ. 4, 5ರಂದು ಸ್ಪರ್ಧಾತ್ಮಕ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 4 ಮತ್ತು 5ರಂದು ನಡೆಯಲಿರುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಭ್ಯರ್ಥಿಗಳು ಮಂಗಳ ಸೂತ್ರ ಹಾಗೂ ಕಾಲುಂಗುರ ಹೊರತುಪಡಿಸಿ, ಇತರ ಯಾವುದೇ ಆಭರಣ, ತುಂಬು ತೋಳಿನ ಶರ್ಟ್, ಫುಲ್ ಓವರ್, ಜಾಕೆಟ್, ಸ್ವೆಟರ್ ಧರಿಸುವುದನ್ನು ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಿಷೇಧಿಸಿದೆ.

ವಿವಿಧ ನಿಗಮ, ಮಂಡಳಿಗಳಲ್ಲಿನ ನೇಮಕಾತಿಗೆ ಕೆಇಎ ನಡೆಸಿದ ಪರೀಕ್ಷೆಯಲ್ಲಿ ಬ್ಲೂ ಟೂತ್ ಬಳಸಿದ ಪ್ರಕರಣ ಬಹಿರಂಗಗೊಂಡ ಬೆನ್ನಲ್ಲೆ, ಪರೀಕ್ಷಾ ಕೇಂದ್ರಗಳಲ್ಲಿ ಅತ್ಯಂತ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಲು ಕೆಪಿಎಸ್‌ಸಿ ನಿರ್ಧರಿಸಿದೆ.

ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿ 242 ಲೆಕ್ಕ ಸಹಾಯಕರು, 67 ಕಿರಿಯ ಲೆಕ್ಕ ಸಹಾಯಕರು, ಸಹಕಾರ ಇಲಾಖೆಯಲ್ಲಿ ಸಹಕಾರ ಸಂಘಗಳ ನಿರೀಕ್ಷಕರು 47 (ಮೂಲವೃಂದ) ಮತ್ತು 53 (ಹೈ-ಕ ವೃಂದ) ಹುದ್ದೆಗಳ ನೇಮಕಾತಿಗೆ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿದೆ. 23 ಜಿಲ್ಲಾ ಕೇಂದ್ರಗಳ 207 ಪರೀಕ್ಷಾ ಕೇಂದ್ರಗಳಲ್ಲಿ 78 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ಈ ಪರೀಕ್ಷೆಗಳಿಗೆ ಹಾಜರಾಗುತ್ತಿದ್ದು, ಯಾವುದೇ ರೀತಿಯ ಪರೀಕ್ಷಾ ಅಕ್ರಮ ನಡೆಯದಂತೆ ಮುನ್ನೆಚ್ಚರಿಕೆ ವಹಿಸಲಾಗುತ್ತಿದೆ ಎಂದು ಆಯೋಗದ ಮೂಲಗಳು ತಿಳಿಸಿವೆ.

ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಿಕ್ಷಣ ಸಂಸ್ಥೆಗಳನ್ನು ಮಾತ್ರ ಪರೀಕ್ಷಾ ಉಪ ಕೇಂದ್ರಗಳನ್ನಾಗಿ ಪರಿಗಣಿಸಲಾಗಿದ್ದು, ಹಾಜರಾಗುವ ಅಭ್ಯರ್ಥಿಗಳು ಕೊಠಡಿಯ ಒಳಗೆ ಯಾವುದೇ ಆಧುನಿಕ ಉಪಕರಣಗಳನ್ನು (ಮೊಬೈಲ್, ಬ್ಲೂಟೂತ್, ವಯರ್‌ಲೆಸ್ ಸೆಟ್, ಪೇಪರ್) ತೆಗೆದುಕೊಂಡು ಹೋಗುವಂತೆ ಇಲ್ಲ. ಲೋಹದ ಕುಡಿಯುವ ನೀರಿನ ಬಾಟಲಿ ಅಥವಾ ಪಾರದರ್ಶಕವಲ್ಲದ ಬಾಟಲಿ ಕೊಂಡೊಯ್ಯುವುದನ್ನೂ ಕಡ್ಡಾಯವಾಗಿ ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ಜಾಮರ್ ಅಳವಡಿಸಲಾಗುವುದು.

ಮೊದಲ ಬಾರಿಗೆ ಪರೀಕ್ಷಾ ಕೇಂದ್ರಗಳ ಸಂವೀಕ್ಷಕರಿಗೆ 'ಬಾಡಿ ಕ್ಯಾಮೆರಾ' ಅಳವಡಿಸಲಾಗುವುದು. ಆ ಮೂಲಕ ಕೊಠಡಿಗಳಲ್ಲಿ ಅಭ್ಯರ್ಥಿಗಳ ಮತ್ತು ಸಂವೀಕ್ಷಕರ ಚಲನವಲನ ಮಾಹಿತಿ ಸಂಗ್ರಹಿಸಲಾಗುವುದು. ಜೊತೆಗೆ ಕೇಂದ್ರದ ಪರೀಕ್ಷಾ ಕಾರ್ಯನಿರ್ವಹಣೆಯನ್ನು ವಿಡಿಯೊ ಚಿತ್ರೀಕರಣ ಮಾಡಲಾಗುವುದು. ಅಭ್ಯರ್ಥಿಗಳ ನೈಜತೆ ಪರಿಶೀಲಿಸಲು ಬಯೋಮೆಟ್ರಿಕ್ ಮೂಲಕ ಮುಖ ಗುರುತಿಸಲಾಗುವುದು. ಎಲ್ಲ ಕೇಂದ್ರಗಳಲ್ಲಿಯೂ ಸ್ಥಳೀಯ ನಿರೀಕ್ಷಣಾಧಿಕಾರಿಗಳನ್ನು ನಿಯೋಜಿಸಲಾಗುವುದು. ಗ್ರೂಪ್ 'ಎ' ಮತ್ತು 'ಬಿ' ಶ್ರೇಣಿಯ ವೀಕ್ಷಕರನ್ನು ನೇಮಿಸಲಾಗುವುದು ಎಂದೂ ಕೆಪಿಎಸ್‌ಸಿ ತಿಳಿಸಿದೆ.

ಒಮ್ಮೆಗೆ ಎರಡು ಪರೀಕ್ಷೆ; ಬೇಸರ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ ನ.4 ರಂದು ಲೆಕ್ಕಪರಿಶೋಧಕರ ಹುದ್ದೆಗಳಿಗೆ ಪರೀಕ್ಷೆ ನಡೆಸುತ್ತಿದ್ದು, ಅಂದು ಕೆಲ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬಿ.ಇಡಿ ಪರೀಕ್ಷೆಯೂ ಇರುವ ಕಾರಣ ಒಂದು ಪರೀಕ್ಷೆ ಕೈಬಿಡುವ ಅನಿವಾರ್ಯತೆ ಎದುರಾಗಿದೆ ಎಂದು ವಿದ್ಯಾರ್ಥಿಗಳು ದೂರಿದ್ದಾರೆ.

'ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬಿ.ಇಡಿ ಪರೀಕ್ಷೆ ನಡೆಯುತ್ತಿದೆ. ಅಂದು ಲೆಕ್ಕಪರಿಶೋಧಕರ ಹುದ್ದೆಗಳಿಗೆ ಆಯ್ಕೆ ಬಯಸಿ ಪರೀಕ್ಷೆ ತೆಗೆದುಕೊಂಡಿದ್ದೇವೆ. ಇದರಿಂದ ಒಂದು ಪರೀಕ್ಷೆಯಿಂದ ಹೊರಗುಳಿಯಬೇಕಿದೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಕೆಪಿಎಸ್‌ಸಿ ಪರೀಕ್ಷಾ ದಿನಾಂಕ ನಿಗದಿ ಮಾಡುವ ಮೊದಲು ಎಲ್ಲ ವಿಶ್ವವಿದ್ಯಾಲಯಗಳಿಂದ ಮಾಹಿತಿ ಪಡೆದರೆ ಇಂತಹ ಗೊಂದಲಗಳಿಗೆ ಅವಕಾಶ ಇರುವುದಿಲ್ಲ. ಪ್ರತಿ ಪರೀಕ್ಷೆಗಳಲ್ಲೂ ಇಂತಹ ಸಮಸ್ಯೆ ಸಾಮಾನ್ಯವಾಗಿದೆ. ಸರ್ಕಾರ ಇಂತಹ ವಿಷಯಗಳಲ್ಲಿ ಸ್ಪಷ್ಟ ಸೂಚನೆ ನೀಡಬೇಕು ಎಂದು ಅಭ್ಯರ್ಥಿಗಳು ಮನವಿ ಮಾಡಿದ್ದಾರೆ.

ಕಬ್ಬನ್ ಉದ್ಯಾನ ಸಂರಕ್ಷಣಾ ಸಮಿತಿ

ಬೆಂಗಳೂರು: ಕಬ್ಬನ್ ಉದ್ಯಾನವನ್ನು ಸಂರಕ್ಷಿಸುವ ಉದ್ದೇಶದಿಂದ ತೋಟಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಂರಕ್ಷಣಾ ಸಮಿತಿಯನ್ನು ರಚಿಸಿ ಸರ್ಕಾರ ಆದೇಶ ಹೊರಡಿಸಿದೆ.

ಈ ಸಮಿತಿಯು 33 ಸದಸ್ಯರನ್ನು ಒಳಗೊಂಡಿದ್ದು, ವಿವಿಧ ಇಲಾಖೆಗಳ ಅಧಿಕಾರಿಗಳು, ತಜ್ಞರು, ವಾಯುವಿಹಾರಿಗಳು ಮತ್ತು ಪರಿಸರವಾದಿ ಇದ್ದಾರೆ.

ಕಬ್ಬನ್ ಉದ್ಯಾನದ ವ್ಯಾಪ್ತಿಯಲ್ಲಿ ಪರಿಸರ ಸ್ನೇಹಿ ಹಾಗೂ ಪೂರಕ ಅಭಿವೃದ್ಧಿ ಕಾರ್ಯಚಟುವಟಿಕೆಗಳು ನಡೆಯುತ್ತಿವೆ. ಉದ್ಯಾನದ ಆವರಣದಲ್ಲಿ ನಡೆಯುವ ಚಟುವಟಿಕೆಗಳ ಸಾಧಕ–ಬಾಧಕಗಳನ್ನು ಪರಿಶೀಲಿಸಿ ತೆಗೆದುಕೊಳ್ಳುವ ನಿರ್ಣಯಗಳಿಗೆ ಸಂಬಂಧಪಟ್ಟ ಎಲ್ಲ ಇಲಾಖೆಗಳ ಸಂಸ್ಥೆಗಳು ಬದ್ಧರಾಗಬೇಕು ಎಂದು ತಿಳಿಸಿದೆ.

ಉದ್ಯಾನ ವೈವಿಧ್ಯಮಯ ಪ್ರಾಣಿ–ಪಕ್ಷಿಗಳ ಜೀವಸಂಕುಲಗಳಿಗೆ ನೆಲೆಯಾಗಿದೆ. ಈ ಉದ್ಯಾನವನ್ನು ಸಂರಕ್ಷಿಸುವುದು ಸರ್ಕಾರ ಹಾಗೂ ಸಾರ್ವಜನಿಕರ ಜವಾಬ್ದಾರಿಯಾಗಿದೆ ಎಂದು ಆದೇಶದಲ್ಲಿ ತಿಳಿಸಿದೆ. ಗುರುವಾರ ಸಮಿತಿಯ ಪ್ರಥಮ ಸಭೆ ನಡೆಯಿತು.

ಸಣ್ಣ ಕೈಗಾರಿಕೆ ಆರ್ಥಿಕತೆಯ ಬೆನ್ನೆಲುಬು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್ಥಿಕತೆಯ ಸ್ಥಿರತೆ ಕಾಯ್ದುಕೊಳ್ಳಲು ಸಣ್ಣ ಕೈಗಾರಿಕೆಗಳು ದೊಡ್ಡ ಪಾತ್ರ ವಹಿಸುತ್ತವೆ. ಸಣ್ಣ ಕೈಗಾರಿಕೆಗಳೇ ನಮ್ಮ ದೇಶದ ಆರ್ಥಿಕತೆಯ ಬೆನ್ನೆಲುಬು' ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದರು.

ಬೆಂಗಳೂರು ಅಂತರ ರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) ಮೂರು ದಿನ ನಡೆಯಲಿರುವ 6ನೇ 'ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಶೋ–2023' ಮೇಳವನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

ಹೂಡಿಕೆ ಮತ್ತು ಉದ್ಯೋಗಾವಕಾಶಗಳನ್ನು ಹೋಲಿಕೆ ಮಾಡಿದರೆ ಬೃಹತ್ ಕೈಗಾರಿಕೆಗಳಿಗಿಂತ ಸಣ್ಣ ಕೈಗಾರಿಕೆಗಳೇ ಹೆಚ್ಚಿನ ಉದ್ಯೋಗ ಸೃಷ್ಟಿಸುತ್ತವೆ. ರಫ್ತಿನಲ್ಲೂ ಪ್ರಮುಖ ಪಾತ್ರ ವಹಿಸುತ್ತವೆ. ಸಮಾಜದಲ್ಲಿ ಸಂಪತ್ತಿನ ಹಂಚಿಕೆಯಾಗಲು ಕೂಡ ಸಣ್ಣ ಕೈಗಾರಿಕೆಗಳು ಅಗತ್ಯ. ಸಣ್ಣ ಕೈಗಾರಿಕೆಗಳನ್ನು ನಿರ್ಲಕ್ಷಿಸಿ ದೇಶ ಪ್ರಗತಿ ಸಾಧಿಸಲು ಸಾಧ್ಯವಿಲ್ಲ' ಎಂದರು.

'ಶಸ್ತ್ರಾಸ್ತ್ರಗಳ ಆಮದಿನ ಮೇಲೆ ನಿರ್ಬಂಧ ಹೇರಿದ ಮೊದಲ ಸರ್ಕಾರ ನಮ್ಮದು. ನಾವು ಐದು ಸಕಾರಾತ್ಮಕ ಸ್ವದೇಶೀಕರಣ ಪಟ್ಟಿ ಬಿಡುಗಡೆ ಮಾಡಿದ್ದೇವೆ,ಅದರಡಿ 509 ಉಪಕರಣಗಳನ್ನು ಗುರುತಿಸಿ, ತಯಾರಿಸುವ ಕಾರ್ಯ ನಡೆಯುತ್ತಿದೆ. ಹೆಚ್ಚುವರಿಯಾಗಿ ರಕ್ಷಣಾ–ಸಾರ್ವಜನಿಕ ವಲಯದ ಉದ್ಯಮಗಳನ್ನು ಸ್ವದೇಶಿ ತತ್ವದಡಿ ನಡೆಸಲು ನಿರ್ಧರಿಸಿದ್ದು, 4,666 ವಸ್ತುಗಳನ್ನು ದೇಶದಲ್ಲಿ ತಯಾರಿಸಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

ಬೆಂಗಳೂರು ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ಆಯೋಜಿಸಿರುವ ಆರನೇ 'ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಶೋ' ಕಾರ್ಯಕ್ರಮದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ವಿವಿಧ ಪ್ರದರ್ಶನಗಳನ್ನು ವೀಕ್ಷಿಸಿದರು. ಐಎಂಎಸ್ ಛೇರ್ಮನ್ ಎಚ್‌ವಿಎಸ್ ಕೃಷ್ಣ ಇದ್ದರು

ಡಿಕೆಶಿ ಸಿ.ಎಂ ಆಗಬೇಕೆಂಬುದು 224 ಕ್ಷೇತ್ರದವರ ಬಯಕೆ: ಶಾಸಕ ಇಕ್ಬಾಲ್

ಪ್ರಜಾವಾಣಿ ವಾರ್ತೆ

ರಾಮನಗರ: 'ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಬೇಕೆಂಬುದು ಕೇವಲ ನಮ್ಮ ಜಿಲ್ಲೆ ಜನರ ಬಯಕೆಯಷ್ಟೇ ಅಲ್ಲ. ರಾಜ್ಯದ 224 ಕ್ಷೇತ್ರಗಳಲ್ಲೂ ಅವರು ಸಿ.ಎಂ ಆಗಲೇಬೇಕು ಎಂದು ಜನ ಬಯಸಿದ್ದಾರೆ' ಎಂದು ಡಿಕೆಶಿ ಅವರ ಆಪ್ತ ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಶಿವಕುಮಾರ್ ಪಕ್ಷದ ಅಧ್ಯಕ್ಷರು. ತಳ ಮಟ್ಟದಿಂದ ಪಕ್ಷವನ್ನು ಬೆಳೆಸಿ, ಕಾರ್ಯಕರ್ತರಿಗೆ ಶಕ್ತಿ ಕೊಟ್ಟು ಉಳಿಸಿದ್ದಾರೆ. ತನ್ನೆಲ್ಲಾ ಶಕ್ತಿ ಮೀರಿ ಕೆಲಸ ಮಾಡಿ ಅಧಿಕಾರಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ಅದಕ್ಕಾಗಿ ಸಾಕಷ್ಟು ತ್ಯಾಗ ಮಾಡಿದ್ದಾರೆ' ಎಂದು ಹೇಳಿದರು.

'ಸಿದ್ದರಾಮಯ್ಯ ನಮ್ಮ ನಾಯಕರು. ಕಳೆದ ಸಲ ಸಿ.ಎಂ ಆಗಿದ್ದ ಅವರು ಉತ್ತಮ ಕಾರ್ಯಕ್ರಮ ಕೊಟ್ಟಿದ್ದಾರೆ. ಜನಪರ ಮತ್ತು ಬಡವರ ಪರ ಕೆಲಸ ಮಾಡಿದ್ದಾರೆ' ಎಂದರು.

ಇಕ್ಬಾಲ್

ಅನುಮತಿ ಇಲ್ಲದೆ ರಸ್ತೆ ಅಗೆದರೆ ದಂಡ

ಬೆಂಗಳೂರು: ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಪ್ರಮುಖ ರಸ್ತೆಗಳಲ್ಲಿನ ಗುಂಡಿಗಳನ್ನು ತ್ವರಿತಗತಿಯಲ್ಲಿ ಮುಚ್ಚಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಮಹದೇವಪುರ ವಲಯ ವ್ಯಾಪ್ತಿಗೆ ಸಂಬಂಧಿಸಿದಂತೆ ನಡೆದ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, ಮುಖ್ಯ ಹಾಗೂ ಉಪ ಮುಖ್ಯರಸ್ತೆಗಳ ಗುಂಡಿಗಳನ್ನು ಮುಚ್ಚಿದ ನಂತರ ವಾರ್ಡ್ ರಸ್ತೆಗಳಲ್ಲಿ ರಸ್ತೆ ಗುಂಡಿ ಮುಚ್ಚಲು ಆದೇಶಿಸಿದರು.

ಬೆಸ್ಕಾಂ ಹಾಗೂ ಜಲಮಂಡಳಿ ಸೇರಿದಂತೆ ಇನ್ನಿತರೆ ಇಲಾಖೆಗಳು ಪಾಲಿಕೆಯ ಅನುಮತಿಯಿಲ್ಲದೆ ರಸ್ತೆ ಅಗೆಯುವಂತಿಲ್ಲ. ಸಮ್ಮತಿ ಇಲ್ಲದೆ ಅಗೆದರೆ ಇಲಾಖೆಗೆ ದಂಡ ವಿಧಿಸಲು ಬಿಬಿಎಂಪಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಎಂಜಿನಿಯರಿಂಗ್ ವಿಭಾಗದಿಂದ ಟೆಂಡರ್ ಕರೆದಿರುವ ವಿವಿಧ ಕಾಮಗಾರಿಗಳನ್ನು ತ್ವರಿತವಾಗಿ ಪ್ರಾರಂಭಿಸಬೇಕು. ಅನಧಿಕೃತ ಕಟ್ಟಡಗಳ ನಿರ್ಮಾಣದ ಬಗ್ಗೆ ವಾರ್ಡ್ ಎಂಜಿನಿಯರ್‌ಗಳು ಹಾಗೂ ನಗರ ಯೋಜನಾ ವಿಭಾಗದ ಸಹಾಯಕ ನಿರ್ದೇಶಕರು ಜಂಟಿ ತಪಾಸಣೆ ನಡೆಸಬೇಕು. ಅಕ್ರಮ ಕಂಡುಬಂದರೆ ಶಿಸ್ತು ಕ್ರಮ ಜರುಗಿಸಬೇಕು ಎಂದರು.

ರಾಜಕಾಲುವೆ ಪೂರ್ಣಗೊಳಿಸಿ: ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿರುವ ಕಡೆ ಕೈಗೆತ್ತಿಕೊಳ್ಳಬೇಕಿರುವ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು. ಒತ್ತುವರಿ ತೆರವು ಕಾರ್ಯಾಚರಣೆಗೆ ಸಂಬಂಧಿಸಿದಂತೆ ತಹಶೀಲ್ದಾರರಿಂದ ಆದೇಶ ಪಡೆದುಕೊಳ್ಳಬೇಕು ಎಂದು ಹೇಳಿದರು.

ಜೆಇಇ–ಮೇನ್ ಪಠ್ಯಕ್ರಮ ಪರಿಷ್ಕರಣೆ

ನವದೆಹಲಿ (ಪಿಟಿಐ): ಸಿಬಿಎಸ್‌ಇ ಮತ್ತು ಇತರ ಶಾಲಾ ಮಂಡಳಿಗಳ ಪರಿಷ್ಕೃತ ಪಠ್ಯಕ್ರಮಗಳಿಗೆ ಅನುಗುಣವಾಗಿ ಜೆಇಇ–ಮೇನ್ ಪರೀಕ್ಷೆಯ ಪಠ್ಯಕ್ರಮವನ್ನೂ ಪರಿಷ್ಕರಿಸಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಅಧಿಕಾರಿಗಳು ತಿಳಿಸಿದ್ದಾರೆ.

ಅಲ್ಲದೆ, ಪರೀಕ್ಷಾ ಸಂಸ್ಥೆಯು ಗುರುವಾರ 2024ರ ಜನವರಿ ತಿಂಗಳಲ್ಲಿ ನಡೆಯುವ ಜೆಇಇ–ಮೇನ್ ಪರೀಕ್ಷೆ, ಆನ್‌ಲೈನ್ ಮೂಲಕ ನೋಂದಣಿಗೆ ವೇಳಾಪಟ್ಟಿ ಕುರಿತು ಅಧಿಸೂಚನೆ ಹೊರಡಿಸಿದೆ.

ಇದೇ ಮೊದಲ ಬಾರಿಗೆ ಎನ್‌ಟಿಎ ಫಲಿತಾಂಶ ಪ್ರಕಟಿಸುವ ದಿನಾಂಕವನ್ನು ಮುಂದಾಗಿಯೇ ಪ್ರಕಟಿಸಿದೆ. ಅದರ ಪ್ರಕಾರ, ಜೆಇಇ–ಮೇನ್ ಪರೀಕ್ಷೆಯ ಫಲಿತಾಂಶವು ಫೆಬ್ರುವರಿ 12, 2024ರಂದು ಪ್ರಕಟವಾಗಲಿದೆ.

ಸಿಬಿಎಸ್‌ಇ ಸೇರಿದಂತೆ ವಿವಿಧ ಶಿಕ್ಷಣ ಮಂಡಳಿಗಳು ಕೋವಿಡ್‌ನಿಂದ ಶೈಕ್ಷಣಿಕ ವೇಳಾಪಟ್ಟಿ ಮೇಲಾಗಿದ್ದ ಪರಿಣಾಮದ ಹಿನ್ನೆಲೆಯಲ್ಲಿ ಪಠ್ಯಕ್ರಮ ಬದಲಿಸಿದ್ದವು. 44 ಶಿಕ್ಷಣ ಮಂಡಳಿಗಳು ಈ ಕುರಿತು ಪ್ರತಿಕ್ರಿಯೆ ನೀಡಿದ್ದವು. ಎನ್‌ಸಿಇಆರ್‌ಟಿ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿದ್ದು, ಬದಲಾದ ಪಠ್ಯಕ್ರಮಗಳಿಗೆ ಅನುಗುಣವಾಗಿ ಜೆಇಇ–ಮೇನ್ ಪಠ್ಯಕ್ರಮದಲ್ಲೂ ಬದಲಾವಣೆ ತರಲಾಯಿತು ಎಂದು ತಿಳಿಸಿದೆ.

ಬೆಂಗಳೂರು ರೇಸ್

ಸೀಝ್ ಕರೇಜಿಯಸ್ ಗೆಲ್ಲುವ ನಿರೀಕ್ಷೆ

ರಾಜ್ಯೋತ್ಸವ ಟ್ರೋಫಿ ಶುಕ್ರವಾರದಿಂದ ಪ್ರಾರಂಭವಾಗಲಿರುವ ಬೆಂಗಳೂರು ಚಳಿಗಾಲದ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸೀಝ್ ಕರೇಜಿಯಸ್ ಈ ರೇಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಎಕ್ಸಲೆಂಟ್ ರೇ 6, ವರ್ಡ್ಲಿ ವೈಸ್ 1, ಬಾಲ್ಟಿಮೋರ್ 7
2ನೇ ರೇಸ್: ಸಸ್ಪಿ 7, ರೀಗಲ್ ಅರಿಸ್ಟೊಕ್ರಸಿ 6, ವಿಕ್ಟೋರಿಯಾ ದೊರೆಸಾನಿ 8
3ನೇ ರೇಸ್: ವಂಡರ್ ವುಮನ್ 1, ಅನಡೇಲ್ 4, ಕ್ಯಾಟ್ ವಿಸ್ಕರ್ಸ್ 2
4ನೇ ರೇಸ್: ಮೇಡಮ್ ರಿಚ್ 7, ರೈನ್‌ಬೋ ಡ್ರೀಮರ್ 1, ಆರ್ಟ್ ಗ್ಯಾಲರಿ 3
5ನೇ ರೇಸ್: ಫಾಂಡ್‌ನೆಸ್ ಆಫ್ ಯೂ 4, ಆಚ್‌ವೇರ್ 3, ಟ್ರಿಪಿಟಾಕ 1
6ನೇ ರೇಸ್: ನಿಕೊಲಿನ 1, ಫಾರ್ಚೂನೇಟಸ್ 3, ಅಕ್ವಾಮೆಟಿಕ್ 6
7ನೇ ರೇಸ್: ಸೀಝ್ ಕರೇಜಿಯಸ್ 5, ಫಾರೆಸ್ಟಿ 1, ಲಾಸ್ಟ್ ವಿಶ್ 3
8ನೇ ರೇಸ್: ವಿವಾಲ್ಡೊ 1, ರೋಮನ್ ಸ್ಪಿರಿಟ್ 2, ಸೆರಾಯ್ 5

ಉತ್ತಮ ಬೆಟ್: ಫಾಂಡ್‌ನೆಸ್ ಆಫ್ ಯೂ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಕಾರ್ಯಕ್ರಮದಲ್ಲಿ ವಕೀಲ ಬಿ.ಟಿ. ವೆಂಕಟೇಶ್ ಮಾತನಾಡಿದರು. ಜೆಐಎಚ್ ಕರ್ನಾಟಕದ ರಾಜ್ಯಾಧ್ಯಕ್ಷ ಮುಹಮ್ಮದ್ ಸಾದ್ ಬೆಳಗಾಮಿ, ಸಾಲಿಡಾರಿಟಿ ಯೂಥ್ ಮೂವ್‌ಮೆಂಟ್ ಕರ್ನಾಟಕದ ರಾಜ್ಯಾಧ್ಯಕ್ಷ ಲಬೀದ್ ಶಾಫಿ, ಲೇಖಕ ಶಿವಸುಂದರ್ ಇದ್ದರು —ಪ್ರಜಾವಾಣಿ ಚಿತ್ರ

ಪ್ಯಾಲೆಸ್ಟೀನ್ ಮುಕ್ತ ಗಾಜಾಕ್ಕಾಗಿ ನರಮೇಧ: ಶಿವಸುಂದರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಜಾದಲ್ಲಿರುವ ಪ್ಯಾಲೆಸ್ಟೀನಿಯರನ್ನು ನಿವಾರಣೆ ಮಾಡುವ ಗುರಿ ಇಟ್ಟುಕೊಂಡು ಇಸ್ರೇಲ್ ನರಮೇಧ ಮಾಡುತ್ತಿದೆ ಎಂದು ಲೇಖಕ ಶಿವಸುಂದರ್ ತಿಳಿಸಿದರು.

ನಗರದಲ್ಲಿ ಗುರುವಾರ ನಡೆದ 'ಪ್ಯಾಲೆಸ್ಟೀನ್ ಸಮಸ್ಯೆ'ಯ ಒಂದು ಅವಲೋಕನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಮಾಸ್ ದಾಳಿ ಖಂಡನಾರ್ಹ. ಆದರೆ, ಅದಕ್ಕೆ ಉತ್ತರಿಸುವ ನೆಪದಲ್ಲಿ ಇಸ್ರೇಲ್ ಬೇರೆ ಗುರಿಯನ್ನು ಇಟ್ಟುಕೊಂಡು ಜನಾಂಗೀಯ ದ್ವೇಷದ ನರಮೇಧ ನಡೆಸುತ್ತಿದೆ ಎಂದು ಆರೋಪಿಸಿದರು.

ಮಾನವೀಯತೆಯೇ ವಿಚಾರಣೆಯಲ್ಲಿದೆ. ಇದರ ವಿರುದ್ಧ ಗಟ್ಟಿಧ್ವನಿ ಎತ್ತಬೇಕು ಎಂದು ಸೋನಿಯಾಗಾಂಧಿ ಒಂದು ಕಡೆ ಹೇಳುತ್ತಾರೆ. ಇನ್ನೊಂದು ಕಡೆ ಅವರದ್ದೇ ಪಕ್ಷವಿರುವ ಕರ್ನಾಟಕದಲ್ಲಿ ಗಟ್ಟಿಧ್ವನಿಯಲ್ಲ, ಪಿಸುಧ್ವನಿ ಎತ್ತಲೂ ಬಿಡದೇ ಇರುವುದು ವಿಪರ್ಯಾಸ ಎಂದು ರಾಜ್ಯ ಸರ್ಕಾರವನ್ನು ಟೀಕಿಸಿದರು.

ವಕೀಲ ಬಿ.ಟಿ. ವೆಂಕಟೇಶ್ ಮಾತನಾಡಿ, 'ಇಸ್ರೇಲ್ ಯುದ್ಧ ಮಾಡುತ್ತಿಲ್ಲ. ಯುದ್ಧಾಪರಾಧ ನಡೆಸುತ್ತಿದೆ. ನಿರಾಯುಧ ನಾಗರಿಕರ ಮೇಲೆ ಯಾವುದೇ ಹಿಂಸೆ ಮಾಡುವಂತಿಲ್ಲ ಎಂಬುದು ಜಿನೀವಾ ಒಪ್ಪಂದದಲ್ಲಿದೆ. ಆದರೆ, ಅದೇ ಅಪರಾಧವನ್ನು ಇಸ್ರೇಲ್ ಮಾಡುತ್ತಿದೆ. ಸಿರಿಯಾ, ಕಾಂಬೋಡಿಯಗಳಲ್ಲಿ ನಡೆದ ಹತ್ಯೆಗಳಿಗೂ ಯಾವುದೇ ವ್ಯತ್ಯಾಸವಿಲ್ಲ' ಎಂದು ತಿಳಿಸಿದರು.

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–560023.
ದೂರವಾಣಿ ಸಂಖ್ಯೆ: 080–23295626, ಇ ಮೇಲ್ ಐಡಿ: ddehospital-hfws@karnataka.gov.in

No. : e-H/e-Hospital Phase II call-3/46/2022-23 Date: 31/10/2023

ಟೆಂಡರ್ ಪ್ರಕಟಣೆ

ಉಲ್ಲೇಖ: 1) NHM/2023-24/IND0011 e-Hospital Phase II Date: 31/10/2023
2) NHM/2023-24/IND0013 ECRP Phase II Date: 31/10/2023

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಇ–ಆಸ್ಪತ್ರೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅವಶ್ಯವಿರುವ ಐ.ಸಿ.ಟಿ ಸಲಕರಣೆಗಳನ್ನು ಖರೀದಿಸಲು ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ರಾಷ್ಟ್ರವ್ಯಾಪಿ ಈ ಕೆಳಕಂಡಂತೆ ಟೆಂಡರ್ ಕರೆಯಲಾಗಿದೆ.

ಕ್ರ.ಸಂ : (1) ಟೆಂಡರ್ ಅಧಿಸೂಚನೆ ಸಂಖ್ಯೆ : NHM/2023-24/IND001 (2) ಟೆಂಡರ್ ಅಧಿಸೂಚನೆ ಸಂಖ್ಯೆ : NHM/2023-24/IND0013. ತಾಂತ್ರಿಕ ವಿವರಣೆ, ಇ.ಎಂ.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಇ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: https://kppp.karnataka.gov.inನಲ್ಲಿ ನೋಂದಾಯಿತ ಬಿಡ್ ದಾರರು ಈ ಕೆಳಕಂಡಂತೆ ಟೆಂಡರ್‌ಗಳ ದಸ್ತಾವೇಜನ್ನು ದಿನಾಂಕ : 31.10.2023 ರಿಂದ ಡೌನ್‌ಲೋಡ್ ಮಾಡಬಹುದು ಹಾಗೂ ಭಾಗವಹಿಸಲು ಇಚ್ಛಿಸುವ ಬಿಡ್ ದಾರರು ದಿನಾಂಕ : 21.11.2023, 5:30 ರೊಳಗೆ ಅಪ್‌ಲೋಡ್ ಮಾಡಬಹುದು. ಇತರೆ ಮಾಹಿತಿಯನ್ನು ಟೆಂಡರ್ ದಸ್ತಾವೇಜುವಿನಲ್ಲಿ ಪಡೆಯಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/–
DIPR/CP/1950/Zen/2023-24 ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ. 39, 2ನೇ ಮಹಡಿ, ಯುನೈಟೆಡ್ ಮ್ಯಾನ್‌ಷನ್, ಎಂ.ಜಿ. ರಸ್ತೆ, ಬೆಂಗಳೂರು–01. ದೂ: 080–71204445/71204446
ಇ–ಮೇಲ್: md@cauveryhandicrafts.net
ವೆಬ್‌ಸೈಟ್: www.cauverycrafts.com
CAUVERY

ಸಂಖ್ಯೆ: ಕೆಎಸ್‌ಹೆಚ್‌ಡಿಸಿ/ಎಂಕೆಟಿಜಿ/2023–24 ದಿನಾಂಕ: 03.11.2023

ಎಸ್‌ಒಎ ಆಧಾರದ ಮೇಲೆ ಶ್ರೀಗಂಧದ ಎಣ್ಣೆ ಸರಬರಾಜಿಗಾಗಿ ಆಸಕ್ತಿ ವ್ಯಕ್ತಪಡಿಸುವಿಕೆ (ಇಒಐ)

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಹೆಚ್‌ಡಿಸಿಎಲ್), ಕರ್ನಾಟಕ ಸರ್ಕಾರದ ಒಂದು ಉದ್ಯಮ, ಇವರು ಅನುಮೋದನೆ ಆಧಾರದ ಮೇಲೆ (ಎಸ್‌ಒಎ) ಮಾರಾಟಕ್ಕಾಗಿ ಶೀಶೆಯಲ್ಲಿ ತುಂಬಿಸಿದ ಪರಿಶುದ್ಧ ಶ್ರೀಗಂಧದ ಎಣ್ಣೆ ಸರಬರಾಜಿಗಾಗಿ ಕರ್ನಾಟಕ ಅರಣ್ಯ ಇಲಾಖೆಯಿಂದ ಸಿಂಧುವಾದ ಪರವಾನಗಿ ಹೊಂದಿರುವ ಆಸಕ್ತಿಯುಳ್ಳ ತಯಾರಕರುಗಳು/ ಡಿಸ್ಟಿಲರ್‌ಗಳು/ವೆಂಡರ್‌ಗಳಿಂದ ಮೊಹರಾದ ಲಕೋಟೆಯಲ್ಲಿ ಆಸಕ್ತಿ ವ್ಯಕ್ತಪಡಿಸುವಿಕೆ (ಇಒಐ)ಯನ್ನು ಆಹ್ವಾನಿಸಿರುವರು. ನಿಯಮಗಳು ಮತ್ತು ನಿಬಂಧನೆಗಳ ವಿವರಗಳ ಜೊತೆಗೆ ಶ್ರೀಗಂಧದ ಎಣ್ಣೆ ಸರಬರಾಜಿಗಾಗಿ ಅರ್ಜಿಯನ್ನು **ರೂ.200/–** ಪಾವತಿ ಮಾಡಿ ಕೆಎಸ್‌ಹೆಚ್‌ಡಿಸಿಎಲ್‌ನ ನೋಂದಾಯಿತ ಕಚೇರಿ, 2ನೇ ಮಹಡಿ, ಯುನೈಟೆಡ್ ಮ್ಯಾನ್‌ಷನ್, ಎಂ.ಜಿ. ರಸ್ತೆ, ಬೆಂಗಳೂರು–560001 ಇಲ್ಲಿಂದ **ಬೆಳಿಗ್ಗೆ 10.00 ರಿಂದ ಸಂಜೆ 5.00 ಗಂಟೆ ವರೆಗೆ** ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು. ಕ್ರಮವಾಗಿ ಭರ್ತಿಮಾಡಿದ ಅರ್ಜಿಯನ್ನು ಸಲ್ಲಿಸುವ ಕಡೆಯ ದಿನಾಂಕ ಮತ್ತು ಸಮಯ **09.11.2023 ರಂದು ಸಂಜೆ 5.00 ಗಂಟೆಗೆ** ಅಥವಾ ಅದಕ್ಕಿಂತ ಮುಂಚಿತವಾಗಿ. ನಿಗದಿತ ದಿನಾಂಕ ಮತ್ತು ಸಮಯದ ನಂತರ ಬರುವ ಅರ್ಜಿಗಳನ್ನು ಅಂಗೀಕರಿಸುವುದಿಲ್ಲ. ನಿಗಮವು ಯಾವುದೇ ಕಾರಣ ನೀಡದೆ ಯಾವುದೇ / ಎಲ್ಲಾ ಅರ್ಜಿಗಳನ್ನು ಅಂಗೀಕರಿಸುವ / ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುವುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಮಾರ್ಕೆಟಿಂಗ್)

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ
ನಿರ್ಮಾಣ ಮತ್ತು ನಿರ್ವಹಣೆ ಸಮೂಹ
ಅಂತರಿಕ್ಷ ಭವನ, ಬೆಂಗಳೂರು–560094, ದೂರವಾಣಿ: (080) 22172614/2613/5610

ಇ–ಟೆಂಡರ್‌ನ ವಿಸ್ತರಣೆ
ತಿದ್ದುಪಡಿ ಸಂ–1 ದಿನಾಂಕ: 01.11.2023

ಕಾಮಗಾರಿಯ ಹೆಸರು:
ಬೆಂಗಳೂರಿನ ದೇವನಹಳ್ಳಿಯಲ್ಲಿರುವ ಹೆಚ್‌ಎಸ್‌ಎಫ್‌ಸಿ ಕ್ಯಾಂಪಸ್ ಇಲ್ಲಿಗೆ 2 ಸಂಖ್ಯೆಗಳ 750 ಕೆವಿಎ ಡಿಜಿ ಸೆಟ್‌ಗಳ ಸರಬರಾಜು, ಅಳವಡಿಕೆ, ಪರೀಕ್ಷೆ ಮತ್ತು ಕಾರ್ಯಾರಂಭ.

ಟೆಂಡರಿಗೆ ಇಟ್ಟಿರುವ ಅಂದಾಜು ಮೊತ್ತ ರೂ.	186.24 ಲಕ್ಷಗಳು
ಪೂರ್ಣಗೊಳಿಸುವ ಅವಧಿಯನ್ನು ಕೆಲಸದ ಆದೇಶ ನೀಡಿದ ದಿನಾಂಕದಿಂದ 15ನೇ ದಿನದಿಂದ ಲೆಕ್ಕ ಹಾಕಲಾಗುವುದು	4 ತಿಂಗಳು

ಇ–ಟೆಂಡರ್ ಪ್ರಕಟಣೆ ಸಂಖ್ಯೆ:
ಎಚ್‌ಎಸ್‌ಎಫ್‌ಸಿ/ಸಿಎಂಜಿ/2(7)/ಇ/83/2023–24 ದಿನಾಂಕ: 16.10.2023.

ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	14.11.2023 ರಂದು 23.59 ಗಂಟೆವರೆಗೆ ವಿಸ್ತರಣೆ ಮಾಡಿದೆ
ಬಿಡ್ ಸ್ಪಷ್ಟನೆ	15.11.2023ರಂದು 14.30 ಗಂಟೆವರೆಗೆ ವಿಸ್ತರಣೆ ಮಾಡಿದೆ
ಬಿಡ್ ಸ್ಪಷ್ಟನೆಗಳಿಗೆ ಉತ್ತರ ನೀಡಿಕೆ	16.11.2023ರಂದು 17.00 ಗಂಟೆವರೆಗೆ ವಿಸ್ತರಣೆ ಮಾಡಿದೆ
ಟೆಂಡರುಗಳ ಸ್ವೀಕಾರ	17.11.2023ರಂದು 10.00 ಗಂಟೆವರೆಗೆ ವಿಸ್ತರಣೆ ಮಾಡಿದೆ
ಟೆಂಡರುಗಳನ್ನು ತೆರೆಯುವುದು	17.11.2023ರಂದು 11.30 ಗಂಟೆಗೆ

ಆಸಕ್ತಿಯುಳ್ಳ ಟೆಂಡರುದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗಾಗಿ ವಿವರವಾದ ಇ–ಟೆಂಡರ್ ಆಹ್ವಾನ ಪ್ರಕಟಣೆ (ಇ–ಎನ್‌ಐಟಿ) ನೋಡಬಹುದು. ಇದನ್ನು ವೆಬ್‌ಸೈಟ್ www.tenderwizard.in/ISRO ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು

ಸಹಿ/– ಮುಖ್ಯಸ್ಥರು, ಸಿಎಂಡಿ, ಸಿಎಂಜಿ, ಎಚ್‌ಎಸ್‌ಎಫ್‌ಸಿ.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್
DIAGEO INDIA
ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001
ಫೋನ್: +91 80 22210705; ಫ್ಯಾಕ್ಸ್: +91 80 22245253
ಇಮೇಲ್: investor.india@diageo.com; ವೆಬ್‌ಸೈಟ್: www.diageoindia.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L01551KA1999PLC024991

ದಾಖಲೆ ದಿನಾಂಕ ಸೂಚನೆ

ಕಂಪನಿಯ ನಿರ್ದೇಶಕರ ಮಂಡಳಿಯು 8ನೇ ನವೆಂಬರ್ 2023 ರಂದು ಬುಧವಾರ ನಡೆಯಲಿರುವ ಅವರ ಸಭೆಯಲ್ಲಿ ಮಧ್ಯಂತರ ಲಾಭಾಂಶದ ಘೋಷಣೆಯನ್ನು ಪರಿಗಣಿಸುತ್ತದೆ. ಮಧ್ಯಂತರ ಲಾಭಾಂಶವನ್ನು ಘೋಷಿಸಿದರೆ, ಕಂಪನಿಯ ಸದಸ್ಯರ ನೋಂದಣಿಯಲ್ಲಿ ಅಥವಾ ಠೇವಣಿಗಳ ದಾಖಲೆಗಳಲ್ಲಿ ಷೇರುಗಳ ಲಾಭದಾಯಕ ಮಾಲೀಕರಾಗಿ ಶುಕ್ರವಾರ, 17ನೇ ನವೆಂಬರ್ 2023 ರಂತೆ ಹೆಸರು ಕಾಣಿಸಿಕೊಂಡಿರುವ ಕಂಪನಿಯ ಷೇರುದಾರರಿಗೆ ಪಾವತಿಸಲಾಗುತ್ತದೆ. ಈ ಉದ್ದೇಶಕ್ಕಾಗಿ ದಾಖಲೆ ದಿನಾಂಕವನ್ನು ನಿಗದಿಪಡಿಸಲಾಗಿದೆ.

ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ಸಲ್ಲಿಸಿದ ದಾಖಲೆ ದಿನಾಂಕದ ಸೂಚನೆಯನ್ನು ಕಂಪನಿಯ ವೆಬ್‌ಸೈಟ್ www.diageoindia.com ನಲ್ಲಿ ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಾದ https://www.nseindia.com/ ಮತ್ತು https://www.bseindia.com ನಲ್ಲಿ ವೀಕ್ಷಿಸಬಹುದು.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ಪರವಾಗಿ
ಸ್ಥಳ : ಮುಂಬಯಿ
ದಿನಾಂಕ : 3ನೇ ನವೆಂಬರ್ 2023
ಮಿತ್ತಲ್ ಸಂಘ್ವಿ
ಕಂಪನಿಕಾರ್ಯದರ್ಶಿ

₹439 ಕೋಟಿ ಮೌಲ್ಯದ ವಸ್ತು ವಶ

ಹೈದರಾಬಾದ್ (ಪಿಟಿಐ): ತೆಲಂಗಾಣದಲ್ಲಿ ಮಾದರಿ ನೀತಿ ಸಂಹಿತೆ ಜಾರಿಗೆ ಬಂದಾಗಿನಿಂದ ಒಟ್ಟು ₹ 439 ಕೋಟಿ ಮೌಲ್ಯದ ನಗದು, ಚಿನ್ನ, ಮದ್ಯ ಮತ್ತಿತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮುಖ್ಯ ಚುನಾವಣಾ ಅಧಿಕಾರಿ ಹೇಳಿದರು. ವಶಪಡಿಸಿಕೊಂಡ ವಸ್ತುಗಳಲ್ಲಿ ₹ 156.2 ಕೋಟಿ ನಗದು, 263.7 ಕೆಜಿ ಚಿನ್ನ, 1091 ಕೆಜಿ ಬೆಳ್ಳಿ ಮತ್ತು ₹ 165.2 ಕೋಟಿ ಮೌಲ್ಯದ ಇತರ ವಸ್ತುಗಳು, ₹ 49.4 ಕೋಟಿ ಮೊತ್ತದ ಮದ್ಯ, ₹ 24.7 ಕೋಟಿ ಮೌಲ್ಯದ ಗಾಂಜಾ ಅಲ್ಲದೆ ₹ 43.2 ಕೋಟಿ ಮೌಲ್ಯದ ಉಡುಗೊರೆ ವಸ್ತುಗಳು ಸೇರಿವೆ ಎಂದು ಹೇಳಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.
ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಎಇ–1/ಟೆಂಡರ್/08/2023–24 ದಿನಾಂಕ: 31–10–2023
ಕೆಪಿಪಿಪಿ ಟೆಂಡರ್ ಪ್ರಕಟಣೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ MP and Muzarai Grants Works ಅನುಮೋದನೆಯಾಗಿರುವ ಕಾಮಗಾರಿಗಾಗಿ ಕೆಪಿಪಿಪಿ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **21–11–2023 ರಂದು ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ಕೆಪಿಪಿಪಿ ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://www.kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/1953/ಅಡ್ವರ್ಟೋರ್/2023–24

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
ನಂ.1, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ. ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು – 560079.
ದೂರವಾಣಿ: +91–80–29619801 ಇ–ಮೇಲ್: md.ksmscl@gmail.com
No: HFW/KSMSCL/EQPT/TND/MH/LAQSHYA/48/2023-24 Date: 02-11-2023
ಟೆಂಡರ್ ಪ್ರಕಟಣೆ
ಉಲ್ಲೇಖ: 1) ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/EQPT/TND/MH/LAQSHYA/48/2023-24 (IND-0061), Date: 31.10.2023.
ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ಈ ಕೆಳಕಂಡ ಟೆಂಡರ್‌ನ್ನು ರಾಷ್ಟ್ರವ್ಯಾಪ್ತಿಯಲ್ಲಿ ಕರೆಯಲಾಗಿದೆ.
1) **ತಾಯಿ ಆರೋಗ್ಯದ ಲಕ್ಷ್ಯ ಕಾರ್ಯಕ್ರಮದಡಿಯಲ್ಲಿ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳನ್ನು ಖರೀದಿಸುವ ಬಗ್ಗೆ.**
ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಿರುವ ಟೆಂಡರ್‌ದಾರರು ಇ–ಟೆಂಡರಿಂಗ್ ವ್ಯವಸ್ಥೆಯ ಮೂಲಕ ಭಾಗವಹಿಸಬಹುದಾಗಿದೆ. ತಾಂತ್ರಿಕ ವಿವರಣೆ, ಇ.ಎಂ.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಟೆಂಡರ್ ದಸ್ತಾವೇಜಿನಲ್ಲಿ ಅಳವಡಿಸಲಾಗಿದ್ದು, ಟೆಂಡರ್‌ಗಳ ದಸ್ತಾವೇಜನ್ನು ಇ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: **https://kppp.karnataka.gov.in ನಲ್ಲಿ ದಿನಾಂಕ: 31–10–2023 ರಿಂದ** ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.
ಸಹಿ/– ಪ್ರಧಾನ ವ್ಯವಸ್ಥಾಪಕರು (ಆಡಳಿತ ಮತ್ತು ಸಂಗ್ರಹಣೆ) ಕೆ.ಎಸ್.ಎಂ.ಎಸ್.ಸಿ.ಎಲ್, ಬೆಂಗಳೂರು
ವಾಸಾಸಂಇ/ವಾ.ಪ್ರ/1959/ಅಡ್ವರ್ಟೋರ್/2023–24

KARNATAKA VETERINARY, ANIMAL & FISHERIES SCIENCES UNIVERSITY,
NANDINAGAR, BIDAR-585401
No. R/PG-Admn/Ntfn/2023-24 Date : 02-11-2023
PG ADMISSION NOTIFICATION 2023-24
The eligible candidates for PG admission to the Master's and Doctoral degree programs at the constituent colleges of the University for the Academic year 2023-24 are invited to submit their application online as on the last date prescribed. The dead line for uploading the online application is **20-11-2023.**
For details of various Masters' and Doctoral programs offered at KVAFSU, Bidar Application fees, Mode of payment and calendar of Events with respect to Admission please visit **www.kvafsu.edu.in**
By order, Sd/-
(**Sivasankar S.**, IFS)
Registrar

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್, ಬೆಂಗಳೂರು–560 001. ಕರ್ನಾಟಕ ರಾಜ್ಯ, ಭಾರತ.
ಫೋನ್: 25581383, 25589112, 25589113, ಫ್ಯಾಕ್ಸ್: 080–25586321
ಈ–ಮೇಲ್: ho@kspcb.gov.in ವೆಬ್‌ಸೈಟ್: https://kspcb.karnataka.gov.in
ಸಂ: ಮಾನಿಮಂ/246/ಹಿಪಅ/ಗಣಿ/ಪಸಾಸ/2023–24/4066 ದಿನಾಂಕ:30/10/2023
ಪರಿಸರ ಸಾರ್ವಜನಿಕ ಸಭೆಗಾಗಿ ಅಧಿಸೂಚನೆ
ಮೆ.ನವೋದಯಾ ಮಿನರಲ್ಸ್, ರವರು ಸರ್ವೆ ನಂ.13, 139, 140 & 141, ಹಲ್ಕಿ ಮತ್ತು ನಿಂಗಾಪುರ ಗ್ರಾಮ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟು 4.856 ಹೆಕ್ಟೇರ್ ಪ್ರದೇಶದಲ್ಲಿ ವಾರ್ಷಿಕ 60,000 ಟನ್‌ಗಳಷ್ಟು ಸುಣ್ಣದಕಲ್ಲು ಮತ್ತು 10,000 ಟನ್‌ಗಳಷ್ಟು ಡೋಲಮೈಟ್ ಗಣಿಗಾರಿಕೆ ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಿರುತ್ತಾರೆ.
ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ(ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಿಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference ಪತ್ರ ಸಂಖ್ಯೆ :SEIAA 361MIN 2022, ದಿನಾಂಕ:06.07.2023 ಹಾಗೂ ಉದ್ದಿಮೆಯವರು ನೀಡಿದ ನಿವೇದನೆಯ ಪತ್ರ ದಿನಾಂಕ: 14.08.2023ರ ಪ್ರಕಾರ ಮತ್ತು ಪ್ರಾದೇಶಿಕ ಅಧಿಕಾರಿ, ಬಾಗಲಕೋಟೆ, ಇವರ ಪತ್ರ ದಿನಾಂಕ: 29.09.2023ರಲ್ಲಿ ಸೂಚಿಸಿದ ದಿನಾಂಕದಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.
ಯೋಜನೆಯ ವಿವರಗಳು ಕೆಳಕಂಡಂತಿವೆ.
1. **ಕಂಪನಿಯ ಹೆಸರು ಮತ್ತು ವಿಳಾಸ:** ಮೆ. ನವೋದಯಾ ಮಿನರಲ್ಸ್, ಡೋರ್ ನಂ. 1475, ಮಥುರಾ, 31 ನೇ ಯಾರ್ಡ್, ಬಾಲದೋತ ಕಾಲೋನಿ, ಶ್ರೀ. ಗುರು ರಾಘವೇಂದ್ರ ದೇವಸ್ಥಾನದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ– 563 203.
2. **ಉದ್ದೇಶಿತ ಯೋಜನೆಯ ಸ್ಥಳ :** ಸರ್ವೆ ನಂ. 13, 139, 140 & 141, ಹಲ್ಕಿ ಮತ್ತು ನಿಂಗಾಪುರ ಗ್ರಾಮ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
3. **ಉದ್ದೇಶಿತ ಯೋಜನೆಯ ವಿವರ:** ವಾರ್ಷಿಕ 60,000 ಟನ್‌ಗಳಷ್ಟು ಸುಣ್ಣದಕಲ್ಲು ಮತ್ತು 10,000 ಟನ್‌ಗಳಷ್ಟು ಡೋಲಮೈಟ್ ಗಣಿಗಾರಿಕೆಯನ್ನು ಒಟ್ಟು 4.856 ಹೆಕ್ಟೇರ್ ಪ್ರದೇಶದಲ್ಲಿ ಸ್ಥಾಪಿಸಲು ಉದ್ದೇಶಿಸಿರುತ್ತಾರೆ.
4. **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ದಿನಾಂಕ : 04.12.2023 (ಸೋಮವಾರ) ಸಮಯ : ಬೆಳಗ್ಗೆ 11:00 ಗಂಟೆ. ಸ್ಥಳ: ಯೋಜನಾ ಸ್ಥಳ, ಸರ್ವೆ ನಂ. 13, 139, 140 & 141, ಹಲ್ಕಿ ಮತ್ತು ನಿಂಗಾಪುರ ಗ್ರಾಮ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.**
5. **ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ:** ಅ) ಜಿಲ್ಲಾಧಿಕಾರಿಗಳ ಕಛೇರಿ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ. ಆ) ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ. ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ. ಈ) ತಹಶೀಲ್ದಾರರ ಕಾರ್ಯಾಲಯ, ಮುಧೋಳ ತಾಲ್ಲೂಕು, ಉ) ಗ್ರಾಮ ಪಂಚಾಯತ್ ಕಾರ್ಯಾಲಯ, ಮೆಟಗುಡ್ ಗ್ರಾಮ, ಮುಧೋಳ ತಾಲ್ಲೂಕು. ಊ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಾಗಲಕೋಟೆ. ಋ) ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, 7ನೇ ಮಹಡಿ, 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಕರ್ನಾಟಕ, ಬೆಂಗಳೂರು–560 001. ಎ) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಅಂತಸ್ತು, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು–560001
ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (**ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ**)ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: kspcb.karnataka.gov.in ನಲ್ಲಿ ಪಡೆಯಬಹುದು.**
ಸಹಿ/–
ಸದಸ್ಯ ಕಾರ್ಯದರ್ಶಿ
ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ: ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ.

ತೆಲಂಗಾಣ: ಕಾಂಗ್ರೆಸ್ ಜತೆ ಸೀಟು ಹಂಚಿಕೆಯಲ್ಲಿ ಮೂಡದ ಒಮ್ಮತ

ಸಿಪಿಎಂ ಏಕಾಂಗಿ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: 'ಇಂಡಿಯಾ' ಮೈತ್ರಿಕೂಟದ ಸದಸ್ಯ ಪಕ್ಷವಾದ ಸಿಪಿಎಂ ಕಾಂಗ್ರೆಸ್‌ನೊಂದಿಗೆ ಮುನಿಸಿಕೊಂಡಿದ್ದು ತೆಲಂಗಾಣ ವಿಧಾನಸಭಾ ಚುನಾವಣೆಯನ್ನು ಏಕಾಂಗಿಯಾಗಿ ಎದುರಿಸಲು ನಿರ್ಧರಿಸಿದೆ.

ಆಡಳಿತ ವಿರೋಧಿ ಮತಗಳು ಒಡೆದರೆ ಅದು ಬಿಆರ್‌ಎಸ್‌ಗೆ ಅನುಕೂಲ ಮಾಡಿಕೊಡುತ್ತದೆ. ಮತ ವಿಭಜನೆ ತಡೆಯಲು ಎಡಪಕ್ಷಗಳು ಮತ್ತು ಕಾಂಗ್ರೆಸ್ ನಿರ್ಧರಿಸಿದ್ದು ಚುನಾವಣಾ ಪೂರ್ವ ಮೈತ್ರಿ ಮಾಡಿಕೊಳ್ಳಲು ಬಯಸಿದ್ದವು. ಸೀಟು ಹಂಚಿಕೆ ಕುರಿತು ಹಲವು ಸುತ್ತಿನ ಮಾತುಕತೆಗಳು ನಡೆದ ಬಳಿಕ ಒಮ್ಮತ ಮೂಡಿರಲಿಲ್ಲ. ಗುರುವಾರ ಮಧ್ಯಾಹ್ನ 3ರೊಳಗೆ ಸೀಟು ಹಂಚಿಕೆ ಅಂತಿಮಗೊಳಿಸುವಂತೆ ಕಾಂಗ್ರೆಸ್‌ಗೆ ಸಿಪಿಎಂ ಗಡುವು ನೀಡಿತ್ತು.

ಕಾಂಗ್ರೆಸ್‌ನಿಂದ ಯಾವುದೇ ಪ್ರತಿಕ್ರಿಯೆ ಬರದ ಕಾರಣ ಸಿಪಿಎಂ 24 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದಾಗಿ ಪ್ರಕಟಿಸಿತು. ರಾಜ್ಯ ಮಟ್ಟದ ಸಭೆ ನಡೆಸಿದ ಪಕ್ಷವು ಮೊದಲ ಪಟ್ಟಿಯಲ್ಲಿ 17 ಅಭ್ಯರ್ಥಿಗಳ ಹೆಸರನ್ನೂ ಘೋಷಿಸಿತು.

ಸೀಟು ಹಂಚಿಕೆ ಸಂದರ್ಭದಲ್ಲಿ ಸಿಪಿಎಂ ಮೂರು ಕ್ಷೇತ್ರಗಳನ್ನು ಬಿಟ್ಟುಕೊಡಲು ಕೋರಿತ್ತು. ಕಾಂಗ್ರೆಸ್ ಎರಡು ಸ್ಥಾನಗಳನ್ನು ಮಾತ್ರ ಬಿಟ್ಟುಕೊಡಲು ಸಿದ್ಧವಾಗಿತ್ತು. ಇದಕ್ಕೂ ಸಿಪಿಎಂ ಒಪ್ಪಿತ್ತು. ಆದರೆ ಕಾಂಗ್ರೆಸ್ ಈ ಎರಡು ಕ್ಷೇತ್ರಗಳ ಬಗ್ಗೆ ಇನ್ನೂ ನಿರ್ಧರಿಸಿಲ್ಲ ಎಂದು ಪಕ್ಷದ ರಾಜ್ಯ ಕಾರ್ಯದರ್ಶಿ ಟಿ. ವೀರಭದ್ರಂ ಅವರು ಹೇಳಿದ್ದಾರೆ.

'ಮಾತುಕತೆ ಶುರುವಾಗಿನಿಂದಲೂ ನಾವು ಭದ್ರಾಚಲಂ ಮತ್ತು ಪಾಲೇರು ಜತೆಗೆ ವೈರಾ ಕ್ಷೇತ್ರಗಳನ್ನು ಬಿಟ್ಟುಕೊಡುವಂತೆ ಕೇಳುತ್ತಿದ್ದೆವು. ಅವರು ವೈರಾ ಮತ್ತು ಮಿರ್ಯಾಲಗೂಡ ಕ್ಷೇತ್ರ ಬಿಟ್ಟುಕೊಡಲು ಸಜ್ಜಾಗಿದ್ದರು. ಈಗ ಕಾಂಗ್ರೆಸ್‌ನವರು ವೈರಾ ಕ್ಷೇತ್ರ ಬಿಟ್ಟುಕೊಡಲು ಸಾಧ್ಯವಿಲ್ಲ ಎನ್ನುತ್ತಿದ್ದಾರೆ. ಅಲ್ಲದೆ ಮಿರ್ಯಾಲಗೂಡ ಮತ್ತು ಹೈದರಾಬಾದ್‌ನಿಂದ ಮತ್ತೊಂದು ಕ್ಷೇತ್ರ ಬಿಟ್ಟುಕೊಡುವುದಾಗಿ ಹೇಳುತ್ತಿದ್ದಾರೆ. ಈ ಎರಡು ಕ್ಷೇತ್ರಗಳ ಕುರಿತೂ ನಿರ್ಧಾರಕ್ಕೆ ಬರಲಿಲ್ಲ. ನಮ್ಮ ಜತೆ ಮೈತ್ರಿ ಮಾಡಿಕೊಳ್ಳಲು ಕಾಂಗ್ರೆಸ್‌ಗೆ ಇಷ್ಟವಿಲ್ಲ ಎನಿಸುತ್ತದೆ' ಎಂದು ವೀರಭದ್ರಂ ಹೇಳಿದರು. 'ಸಿಪಿಎಂ ಅಭ್ಯರ್ಥಿಗಳು ಕಣಕ್ಕಿಳಿದಿರುವ ಸ್ಥಾನಗಳು ಬಿಟ್ಟು ಉಳಿದೆಡೆ, ಬಿಜೆಪಿ ಅಭ್ಯರ್ಥಿಗಳನ್ನು ಸೋಲಿಸಲು ಸಾಧ್ಯವಿರುವಲ್ಲಿ ಕಾಂಗ್ರೆಸ್‌ಗೆ ಮತ ಹಾಕಲಾಗುವುದು. ಕಾಂಗ್ರೆಸ್ ಅಥವಾ ಬಿಆರ್‌ಎಸ್ ಕೂಡ ಆಗಬಹುದು. ಬಿಜೆಪಿ ಸೋಲುವಂತೆ ಮಾಡುವುದು ಮುಖ್ಯ ಉದ್ದೇಶ' ಎಂದರು. ಕೊತ್ತಗೂಡಂ ಮತ್ತು ಚೆನ್ನೂರು ಕ್ಷೇತ್ರಗಳನ್ನು ಬಿಟ್ಟುಕೊಡುವುದಾಗಿ ಸಿಪಿಐಗೆ ಕಾಂಗ್ರೆಸ್ ಹೇಳಿದೆ. ಆದರೆ ಕಾಂಗ್ರೆಸ್ ತನ್ನ ಅಂತಿಮ ಪಟ್ಟಿ ಪ್ರಕಟಿಸುವವರೆಗೆ ಇನ್ನೂ ಎರಡು ದಿನ ಕಾದು ನೋಡಲು ಸಿಪಿಐ ನಿರ್ಧರಿಸಿದೆ.

ಮುಖ್ಯಾಂಶಗಳು
- 24 ಕ್ಷೇತ್ರಗಳಲ್ಲಿ ಸ್ಪರ್ಧೆಗೆ ತೀರ್ಮಾನ
- 17 ಸ್ಥಾನಗಳಿಗೆ ಅಭ್ಯರ್ಥಿಗಳ ಹೆಸರು ಘೋಷಣೆ
- ಇನ್ನೂ ಎರಡು ದಿನ ಕಾದು ನೋಡಲು ಸಿಪಿಐ ನಿರ್ಧಾರ

'ಪಟ್ಟಿಯಲ್ಲಿ ಅಂತಿಮವಾಗಿ ಕೆಲವು ಮಾರ್ಪಾಡು ಆಗಬಹುದು. ಸಿಪಿಐ ಕೂಡ ಕಾಂಗ್ರೆಸ್ ಜತೆ ಮೈತ್ರಿ ಮಾಡಿಕೊಳ್ಳದಿದ್ದರೆ ಮತ್ತಷ್ಟು ಬದಲಾವಣೆ ಆಗುವ ಸಾಧ್ಯತೆ ಇದೆ'
ಟಿ. ವೀರಭದ್ರಂ
ಸಿಪಿಎಂ ರಾಜ್ಯ ಕಾರ್ಯದರ್ಶಿ

ಅಜರುದ್ದೀನ್ ವಿರುದ್ಧ ಬಿಜೆಪಿಯಿಂದ ಲಂಕಲ ದೀಪಕ್ ರೆಡ್ಡಿ ಕಣಕ್ಕೆ

ಹೈದರಾಬಾದ್ (ಪಿಟಿಐ): ಬಿಜೆಪಿಯ ಸಂಸತ್ ಸದಸ್ಯರಾದ ಜಿ. ಕಿಶನ್ ರೆಡ್ಡಿ ಮತ್ತು ಕೆ.ಲಕ್ಷ್ಮಣ್ ಅವರು ಈ ಬಾರಿ ತೆಲಂಗಾಣ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿಲ್ಲ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಈ ಇಬ್ಬರೂ ಸೋತಿದ್ದರು. ಪಕ್ಷವು ಗುರುವಾರ 35 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದೆ.

ಜ್ಯುಬಿಲ್ ಹಿಲ್ಸ್ ಕ್ಷೇತ್ರದಲ್ಲಿ ಕ್ರಿಕೆಟಿಗ ಅಜರುದ್ದೀನ್ ವಿರುದ್ಧ ಲಂಕಲ ದೀಪಕ್ ರೆಡ್ಡಿ ಅವರನ್ನು ಪಕ್ಷವು ಕಣಕ್ಕಿಳಿಸಿದೆ. 119 ಕ್ಷೇತ್ರಗಳಲ್ಲಿ ಬಿಜೆಪಿಯು 88 ಅಭ್ಯರ್ಥಿಗಳ ಹೆಸರು ಪ್ರಕಟಿಸಿದಂತೆ ಆಗಿದೆ.

ಪವನ್ ಕಲ್ಯಾಣ್ ನೇತೃತ್ವದ ಜನಸೇನಾ ಪಕ್ಷದೊಂದಿಗೆ ಸೀಟು ಹಂಚಿಕೆ ಮಾತುಕತೆ ನಡೆದಿರುವ ಕಾರಣ ಕೆಲವು ಪ್ರಮುಖ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಪ್ರಕಟಿಸಿಲ್ಲ ಎಂದು ಬಿಜೆಪಿಯ ಹಿರಿಯ ನಾಯಕರು ಹೇಳಿದ್ದಾರೆ.

ಆಂಧ್ರಪ್ರದೇಶದ ಗಡಿ ಜಿಲ್ಲೆಗಳಲ್ಲಿ ಜನಸೇನಾ ಪಕ್ಷಕ್ಕೆ ಆರರಿಂದ ಏಳು ಕ್ಷೇತ್ರಗಳನ್ನು ಬಿಟ್ಟುಕೊಡಲಾಗುವುದು ಎಂದು ಪಕ್ಷದ ಮೂಲಗಳು ಹೇಳಿವೆ. ಅವಿಭಜಿತ ಆಂಧ್ರಪ್ರದೇಶದ ಮಾಜಿ ಸಚಿವ ಸಿ. ಕೃಷ್ಣ ಯಾದವ್ ಅವರಿಗೆ ಅಂಬರ್‌ಪೇಟ್ ಕ್ಷೇತ್ರದ ಟಿಕೆಟ್ ನೀಡಿದ್ದರೆ, ಮುಷೀರಾಬಾದ್‌ನಿಂದ ಪೂಸಾ ರಾಜು ಕಣಕ್ಕಿಳಿಯಲಿದ್ದಾರೆ. ನಟ ಬಾಬು ಮೋಹನ್ ಮತ್ತು ಹಿರಿಯ ನಾಯಕ ಮರ್ರಿ ಶಶಿಧರ್ ರೆಡ್ಡಿ ಅವರಿಗೂ ಟಿಕೆಟ್ ನೀಡಲಾಗಿದೆ.

ಗೆಹಲೋತ್, ಪೈಲಟ್ ವಿರುದ್ಧ ಅಭ್ಯರ್ಥಿಗಳ ಹೆಸರಿಸಿದ ಬಿಜೆಪಿ

ಜೈಪುರ (ಪಿಟಿಐ): ರಾಜಸ್ಥಾನ ವಿಧಾನಸಭೆ ಚುನಾವಣೆಗಾಗಿ ಬಿಜೆಪಿಯು ಗುರುವಾರ 58 ಅಭ್ಯರ್ಥಿಗಳ ಮೂರನೇ ಪಟ್ಟಿ ಬಿಡುಗಡೆ ಮಾಡಿದೆ. ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಮತ್ತು ಮಾಜಿ ಉಪ ಮುಖ್ಯಮಂತ್ರಿ ಸಚಿನ್ ಪೈಲಟ್ ವಿರುದ್ಧ ಕಣಕ್ಕಿಳಿಯುವ ಅಭ್ಯರ್ಥಿಗಳನ್ನು ಹೆಸರಿಸಿದೆ.

ಸರ್ದಾರ್‌ಪುರ ಕ್ಷೇತ್ರದಲ್ಲಿ ಗೆಹಲೋತ್ ವಿರುದ್ಧ ಜೋಧ್‌ಪುರ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಹೇಂದ್ರ ಸಿಂಗ್ ರಾಥೋಡ್ ಮತ್ತು ಟೋಂಕ್‌ನಲ್ಲಿ ಪೈಲಟ್ ವಿರುದ್ಧ ಮಾಜಿ ಶಾಸಕ ಅಜಿತ್ ಸಿಂಗ್ ಮೆಹ್ತಾ ಅವರನ್ನು ಕಣಕ್ಕಿಳಿಸಿದೆ. ಮೆಹ್ತಾ ಅವರು 2013ರ ವಿಧಾನಸಭೆ ಚುನಾವಣೆಯಲ್ಲಿ ಟೋಂಕ್‌ನಿಂದ ಗೆದ್ದಿದ್ದರು. 2018ರಲ್ಲಿ ಪೈಲಟ್ ಜಯ ಗಳಿಸಿದ್ದರು.

ಮೂರನೇ ಪಟ್ಟಿಯಲ್ಲಿ ಬಿಜೆಪಿಯು ಧಾರ್ಮಿಕ ಗುರು ಹಾಥೋಜ್ ಧಾಮ್‌ನ ಬಾಲ ಮುಕುಂದ್ ಆಚಾರ್ಯ ಅವರಿಗೆ ಹವಾ ಮಹಲ್‌ನಿಂದ ಸ್ಪರ್ಧಿಸಲು ಟಿಕೆಟ್ ನೀಡಿದೆ. ಏಳು ಮಹಿಳಾ ಅಭ್ಯರ್ಥಿಗಳನ್ನು ಹೆಸರಿಸಿದೆ ಅಲ್ಲದೆ ಎಂಟು ಹಾಲಿ ಶಾಸಕರನ್ನು ಮತ್ತೆ ಕಣಕ್ಕಿಳಿಸಿದೆ.

ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷೆ ವಸುಂಧರಾ ರಾಜೇ ಅವರು ಝಾಲರಾಪಾಟನ್‌ನಿಂದ ಮತ್ತು ಅಧ್ಯಕ್ಷ ಸತೀಶ್ ಪೂನಿಯಾ ಅವರು ಅಂಬರ್ ಕ್ಷೇತ್ರದಲ್ಲಿ ಸ್ಪರ್ಧಿಸಲಿದ್ದಾರೆ. ಬಿಜೆಪಿ ರಾಜಸ್ಥಾನ ಉಸ್ತುವಾರಿ ಅರುಣ್ ಸಿಂಗ್ ಅವರು ದೆಹಲಿಯಲ್ಲಿ ಪಟ್ಟಿ ಬಿಡುಗಡೆ ಮಾಡಿದರು. 200 ಸದಸ್ಯ ಬಲದ ವಿಧಾನಸಭೆಗೆ ಈವರೆಗೆ ಬಿಜೆಪಿಯು 182 ಅಭ್ಯರ್ಥಿಗಳ ಹೆಸರು ಘೋಷಿಸಿದೆ.

ನವೆಂಬರ್ 25ರಂದು ಚುನಾವಣೆ ನಡೆಯಲಿದೆ. ನಾಮಪತ್ರ ಸಲ್ಲಿಸಲು ನವೆಂಬರ್ 6 ಕಡೆಯ ದಿನ.

ಸಿಪಿಐ ಪಾಟ್ನಾದಲ್ಲಿ ಗುರುವಾರ ಆಯೋಜಿಸಿದ್ದ 'ಬಿಜೆಪಿ ಹಠಾವೊ, ದೇಶ್ ಬಚಾವೊ' ರ್‍ಯಾಲಿಯಲ್ಲಿ ಸಿಪಿಎಂ ಪ್ರಧಾನ ಕಾರ್ಯದರ್ಶಿ ಡಿ.ರಾಜಾ, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಹಾಗೂ ಇತರ ನಾಯಕರು ಭಾಗವಹಿಸಿದ್ದರು —ಪಿಟಿಐ ಚಿತ್ರ

ವಿಧಾನಸಭೆ ಚುನಾವಣೆಗೇ ಕಾಂಗ್ರೆಸ್ ಒಲವು: ನಿತೀಶ್

ಪ್ರಜಾವಾಣಿ ವಾರ್ತೆ

ನವದೆಹಲಿ: 'ಇಂಡಿಯಾ' ಮೈತ್ರಿಕೂಟವು ಆರಂಭದಲ್ಲಿದ್ದಂತೆ ಈಗ ಬಿರುಸು ಕಾಯ್ದುಕೊಳ್ಳದೇ ಇರಲು, ಕಾಂಗ್ರೆಸ್ ಪಕ್ಷವು ಸದ್ಯ ನಡೆಯುತ್ತಿರುವ ಐದು ರಾಜ್ಯಗಳ ಚುನಾವಣೆಗಳತ್ತಲೇ ಹೆಚ್ಚಿನ ಆಸಕ್ತಿಯನ್ನು ಹೊಂದಿರುವುದು ಕಾರಣ' ಎಂದು ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಹೇಳಿದ್ದಾರೆ.

ಸಿಪಿಐ ಗುರುವಾರ ಪಟ್ನಾದಲ್ಲಿ ಅಯೋಜಿಸಿದ್ದ 'ಬಿಜೆಪಿ ಹಠಾವೊ, ದೇಶ್ ಬಚಾವೊ' ರ್‍ಯಾಲಿಯಲ್ಲಿ ಮಾತನಾಡಿದ ಅವರು, 'ಇಂಡಿಯಾ' ಮೈತ್ರಿಕೂಟದಲ್ಲಿ ಕಾಂಗ್ರೆಸ್ ಪಕ್ಷದ ವಿರುದ್ಧ ಅಪಸ್ವರ ಮೂಡಿರುವುದನ್ನು ಉಲ್ಲೇಖಿಸಿ ಈ ಮಾತು ಹೇಳಿದರು.

ಐದು ರಾಜ್ಯಗಳ ವಿಧಾನಸಭೆ ಚುನಾವಣೆಯಲ್ಲಿ 'ಇಂಡಿಯಾ'ದ ಸದಸ್ಯ ಪಕ್ಷಗಳ ಜೊತೆಗೆ ಮೈತ್ರಿ ಮಾಡಿಕೊಳ್ಳದ ಕಾಂಗ್ರೆಸ್ ವಿರುದ್ಧ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಈಚೆಗೆ ಬೇಸರ ವ್ಯಕ್ತಪಡಿಸಿದ್ದರು. ಆ ಹಿನ್ನೆಲೆಯಲ್ಲಿ ನಿತೀಶ್ ಹೇಳಿಕೆ ಹೊರಬಿದ್ದಿದೆ.

ಇತ್ತೀಚಿನ ದಿನಗಳಲ್ಲಿ ಮೈತ್ರಿಕೂಟದಲ್ಲಿ ಗಣನೀಯ ಬೆಳವಣಿಗೆ ಕಂಡುಬಂದಿಲ್ಲ ಎಂದು ನಿತೀಶ್ ಹೇಳಿದರು.

'ಈಗ ಕಾಂಗ್ರೆಸ್‌ಗೆ ಐದು ರಾಜ್ಯಗಳ ವಿಧಾನಸಭೆಗೆ ಚುನಾವಣೆ ಕುರಿತೇ ಹೆಚ್ಚಿನ ಒಲವಿದೆ. ನಾವು ಕಾಂಗ್ರೆಸ್ ಮುನ್ನಡೆಸಲು ಯತ್ನಿಸುತ್ತಿದ್ದೇವೆ. ಇದನ್ನು ಆ ಪಕ್ಷ ಗಮನಿಸುತ್ತಿಲ್ಲ. ಬಹುಶಃ ಚುನಾವಣೆ ಬಳಿಕ ಕಾಂಗ್ರೆಸ್ ಎಲ್ಲರ ಜೊತೆಗೆ ಮಾತನಾಡಬಹುದು' ಎಂದೂ ಅಭಿಪ್ರಾಯಪಟ್ಟರು.

ಕಾಂಗ್ರೆಸ್ ವಿರುದ್ಧ ಬೇಸರ ವ್ಯಕ್ತಪಡಿಸಿದ್ದ ಅಖಿಲೇಶ್, '2018ರ ಚುನಾವಣೆಯಲ್ಲಿ ಆ ಪಕ್ಷ ಉತ್ತಮ ಸಾಧನೆ ಮಾಡಿರಬಹುದು. ಆದರೆ, ಬಿಜೆಪಿಯು ಹಿಂದಿ ಪ್ರಾಬಲ್ಯದ ರಾಜ್ಯಗಳ ವಿಧಾನಸಭೆ ಚುನಾವಣೆ ಗೆದ್ದರೂ, ಅದರಿಂದ ಹಿಗ್ಗಿಹೋಗಲಿಲ್ಲ' ಎಂದು ಕಾಂಗ್ರೆಸ್ ಪಕ್ಷಕ್ಕೆ ನೆನಪಿಸಿದ್ದರು.

'ಈಗ ಚುನಾವಣೆ ನಡೆಯುತ್ತಿರುವ ಐದು ರಾಜ್ಯಗಳಲ್ಲಿಯೂ ಮೈತ್ರಿಕೂಟದ ಸದಸ್ಯ ಪಕ್ಷಗಳು ಒಟ್ಟಾಗಿಯೇ ಸ್ಪರ್ಧೆ ನಡೆಸಿದ್ದರೆ ಚೆನ್ನಾಗಿರುತ್ತಿತ್ತು' ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅವರು ಅಭಿಪ್ರಾಯಪಟ್ಟರು.

ನುಡಿ–ಕಿಡಿ

ಛತ್ತೀಸಗಢ ಜನರಿಗೆ ಕಾಂಗ್ರೆಸ್ ನಾಯಕರು ಭಾರಿ ಮೋಸ ಮಾಡಿದ್ದಾರೆ. ಆಶ್ವಾಸನೆಗಳನ್ನು ಈಡೇರಿಸಲಿಲ್ಲ. ಬದಲು ಸರ್ಕಾರದ ಉದ್ಯೋಗಗಳಲ್ಲಿ ಮಕ್ಕಳು, ಬಂಧುಗಳ ನೇಮಕಾತಿ ಮಾಡಿದರು. ರಾಜ್ಯ ಪಿಎಸ್‌ಸಿ ಕಚೇರಿಯನ್ನು ಕಾಂಗ್ರೆಸ್ ಸಮಿತಿ ಕಚೇರಿಯಾಗಿ ಪರಿವರ್ತಿಸಿದರು.

ನರೇಂದ್ರ ಮೋದಿ, ಪ್ರಧಾನಮಂತ್ರಿ

ಛತ್ತೀಸಗಢಕ್ಕೆ ಬರುವ ವಾಹನಗಳು ವಿಶೇಷವಾಗಿ ಸಿಆರ್‌ಪಿಎಫ್ ಮತ್ತು ಇ.ಡಿ ಸಿಬ್ಬಂದಿಯ ವಾಹನಗಳನ್ನು ತಪಾಸಣೆ ಮಾಡಬೇಕು ಎಂದು ಚುನಾವಣಾ ಆಯೋಗಕ್ಕೆ ಹೇಳಬಯಸುತ್ತೇನೆ. ಸೋಲನ್ನು ಬಿಜೆಪಿ ಈಗಾಗಲೇ ಒಪ್ಪಿಕೊಂಡಿದೆ. ಕೊನೇ ಯತ್ನವಾಗಿ ಮತದಾರರ ಮೇಲೆ ಪ್ರಭಾವ ಬೀರಲು ಪೆಟ್ಟಿಗೆಗಳಲ್ಲಿ ಹಣ ತರುತ್ತಿದೆ.

ಭೂಪೇಶ್ ಬಘೇಲ್, ಛತ್ತೀಸಗಢ ಮುಖ್ಯಮಂತ್ರಿ

ಚುನಾವಣಾ ಕಣದಲ್ಲಿ

- **ಮನೆಯಿಂದ ಮತ:** ಛತ್ತೀಸಗಢದಲ್ಲಿ 6,400ಕ್ಕೂ ಹೆಚ್ಚು ಮತದಾರರು ಮನೆಯಿಂದ ಮತ ಚಲಾಯಿಸುವ ಸೌಲಭ್ಯವನ್ನು ಬಳಸಿಕೊಳ್ಳಲು ನಿರ್ಧರಿಸಿದ್ದಾರೆ ಎಂದು ಚುನಾವಣಾ ಅಧಿಕಾರಿಗಳು ತಿಳಿಸಿದ್ದಾರೆ. 80 ವರ್ಷಕ್ಕೂ ಹೆಚ್ಚಿನ ವಯಸ್ಸಿನವರು ಮತ್ತು ಶೇ 40 ಕ್ಕೂ ಹೆಚ್ಚಿನ ಅಂಗವೈಕಲ್ಯ ಹೊಂದಿರುವವರು ಈ ಸೌಲಭ್ಯ ಬಳಸಿಕೊಳ್ಳಬಹುದು ಎಂದು ಚುನಾವಣಾ ಆಯೋಗ ಹೇಳಿದೆ.
- **'₹4000 ಲಾಭ':** ತೆಲಂಗಾಣದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಸಾಮಾಜಿಕ ಪಿಂಚಣಿ, ಅಡುಗೆ ಅನಿಲ ದರದ ಉಳಿತಾಯ ಮತ್ತು ಸರ್ಕಾರಿ ಬಸ್‌ಗಳಲ್ಲಿ ಉಚಿತ ಪಯಣದ ಮೂಲಕ ಮಹಿಳೆಯರು ಮಾಸಿಕ ₹ 4,000 ಲಾಭ ಪಡೆಯಬಹುದು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ಅಂಬಟಿಪಲ್ಲಿಯಲ್ಲಿ ಅವರು ಮಹಿಳೆಯರನ್ನು ಉದ್ದೇಶಿಸಿ ಮಾತನಾಡಿದರು.

- **ಐ.ಟಿ ಅಧಿಕಾರಿಗಳಿಂದ ಶೋಧ:** ತೆಲಂಗಾಣದ ಮಹೇಶ್ವರಂ ಕ್ಷೇತ್ರದಿಂದ ಸ್ಪರ್ಧಿಸಿರುವ ಕಾಂಗ್ರೆಸ್ ಅಭ್ಯರ್ಥಿ ಕೆ.ಲಕ್ಷ್ಮ ರೆಡ್ಡಿ ಅವರ ಮನೆಯಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಮತ್ತು ಚುನಾವಣಾ ಆಯೋಗದ ಅಧಿಕಾರಿಗಳು ಗುರುವಾರ ಶೋಧ ಕೈಗೊಂಡರು ಎಂದು ಮೂಲಗಳು ಹೇಳಿವೆ. ರಾಜ್ಯದ ಆಡಳಿತಾರೂಢ ಬಿಆರ್‌ಎಸ್ ಮತ್ತು ಕೇಂದ್ರದ ಆಡಳಿತಾರೂಢ ಬಿಜೆಪಿ, ಇಂತಹ ಕೃತ್ಯಗಳ ಮೂಲಕ ಕಾಂಗ್ರೆಸ್ ಅಭ್ಯರ್ಥಿಯ ಸ್ಥೈರ್ಯಗೆಡಿಸಲು ಯತ್ನಿಸುತ್ತಿವೆ ಎಂದು ಟಿಪಿಸಿಸಿ ವಕ್ತಾರ ಗೌರಿ ಸತೀಶ್ ಆರೋಪಿಸಿದ್ದಾರೆ.
- **ಕಲ್ಲು ತೂರಾಟ:** ಮಧ್ಯಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಚಿತ್ರಕೂಟ ಕ್ಷೇತ್ರದಿಂದ ಮರುಆಯ್ಕೆ ಬಯಸಿರುವ ಕಾಂಗ್ರೆಸ್ ಶಾಸಕ ನಿಲಾಂಶು ಚತುರ್ವೇದಿ ಅವರ ಬೆಂಗಾವಲು ವಾಹನದ ಮೇಲೆ ಸಾತ್ನಾ ಜಿಲ್ಲೆಯಲ್ಲಿ ಗುರುವಾರ ಬೆಳಿಗ್ಗೆ ಕಲ್ಲುತೂರಾಟ ನಡೆದಿದೆ. ಯಾರಿಗೂ ಗಾಯಗಳಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆ ಸಂಬಂಧ ಒಬ್ಬನನ್ನು ಬಂಧಿಸಲಾಗಿದೆ.
- **ನಕ್ಸಲರ ಬೆದರಿಕೆ:** ಛತ್ತೀಸಗಢದ ಗ್ರಾಮದಲ್ಲಿ ನಕ್ಸಲರು ಪೊಲೀಸ್ ಮಾಹಿತಿದಾರ ಎಂಬ ಆರೋಪದ ಮೇಲೆ 40 ವರ್ಷ ವಯಸ್ಸಿನ ವ್ಯಕ್ತಿಯೊಬ್ಬರನ್ನು ಹತ್ಯೆ ಮಾಡಿದ್ದಾರೆ. ಅಲ್ಲದೆ ಇದೇ 7ರ ಚುನಾವಣೆಯಲ್ಲಿ ಮತಗಟ್ಟೆಗಳಿಗೆ ಭೇಟಿ ನೀಡದಂತೆ ಚುನಾವಣಾ ಅಧಿಕಾರಿಗಳಿಗೆ ಬೆದರಿಕೆ ಹಾಕಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.
- **ಬಿಜೆಪಿಗೆ ಸೇರ್ಪಡೆ:** ತೆಲಂಗಾಣದ ಬಿಆರ್‌ಎಸ್ ಶಾಸಕ ರಾಥೋಡ್ ಬಾಪು ರಾವ್ ಮತ್ತು ಕಾಂಗ್ರೆಸ್ ನಾಯಕ ಚಲಮಲ ಕೃಷ್ಣರೆಡ್ಡಿ ಅವರು ಬುಧವಾರ ದೆಹಲಿಯಲ್ಲಿ ಬಿಜೆಪಿಗೆ ಸೇರ್ಪಡೆಗೊಂಡಿದ್ದಾರೆ. ಬಿಜೆಪಿ ಅಧ್ಯಕ್ಷ ಜೆ.ಪಿ ನಡ್ಡಾ ಸಮ್ಮುಖದಲ್ಲಿ ಈ ಕಾರ್ಯಕ್ರಮ ನಡೆದಿದೆ.
- **ದೇವಸ್ಥಾನಕ್ಕೆ ಮೊರೆ:** ಚುನಾವಣೆ ವೇಳೆ ರಾಜಸ್ಥಾನದಲ್ಲಿ ಉಮರೈ ಗ್ರಾಮದ ತ್ರಿಪುರ ಸುಂದರಿ ದೇವಸ್ಥಾನವು ರಾಜಕಾರಣಿಗಳ ಪ್ರಿಯವಾದ ಸ್ಥಳವಾಗುತ್ತದೆ. ವಸುಂಧರಾ ರಾಜೇ ಅವರೂ ಈ ದೇವತೆಯ ಭಕ್ತೆ. ಎಲ್ಲಾ ರಾಜಕೀಯ ಪಕ್ಷಗಳ ನಾಯಕರು ಈ ದೇವಾಲಯಕ್ಕೆ ನಿಯಮಿತವಾಗಿ ಭೇಟಿ ನೀಡುವುದು ವಿಶೇಷ.

ಡೊಟಾಸರಾ ಪುತ್ರರಿಗೆ ಇ.ಡಿ. ಸಮನ್ಸ್

ಪ್ರಜಾವಾಣಿ ವಾರ್ತೆ

ಜೈಪುರ, ರಾಜಸ್ಥಾನ: ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ಗೋವಿಂದ್ ಸಿಂಗ್ ಡೊಟಾಸರಾ ಮತ್ತು ಅವರ ಕುಟುಂಬದ ಸುತ್ತ ಜಾರಿ ನಿರ್ದೇಶನಾಲಯ (ಇ.ಡಿ) ತನ್ನ ಕುಣಿಕೆಯನ್ನು ಬಿಗಿಗೊಳಿಸಿದೆ. ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗಾಗಿ ದೆಹಲಿಗೆ ಬರುವಂತೆ ಅವರ ಇಬ್ಬರು ಪುತ್ರರಿಗೆ ಸಮನ್ಸ್ ನೀಡಿದೆ.

ಡೊಟಾಸರಾ ಅವರ ಹಿರಿಯ ಪುತ್ರ ಅಭಿಲಾಷ್ ಅವರಿಗೆ ನವೆಂಬರ್ 7ರಂದು ಮತ್ತು ಕಿರಿಯ ಪುತ್ರ ಅವಿನಾಶ್ ಅವರಿಗೆ ನವೆಂಬರ್ 8ರಂದು ಹಾಜರಾಗಲು ಸೂಚಿಸಲಾಗಿದೆ. ಇಬ್ಬರನ್ನೂ ಒಂದೇ ಸಲ ನ. 9ರಂದು ವಿಚಾರಣೆಗೆ ಒಳಪಡಿಸುವ ಸಾಧ್ಯತೆ ಇದೆ. ಜೈಪುರ ಮತ್ತು ಸಿಕಾರದಲ್ಲಿ ಅ. 26ರಂದು ಇ.ಡಿ ಡೊಟಾಸರಾ ಅವರಿಗೆ ಸೇರಿದ ಸ್ಥಳಗಳ ಮೇಲೆ ದಾಳಿ ಮಾಡಿತ್ತು. ಮಹುವಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಓಂ ಪ್ರಕಾಶ್ ಹುಡ್ಲಾ ಮತ್ತು ಇತರರಿಗೆ ಸೇರಿದ ಸ್ಥಳಗಳ ಮೇಲೂ ಆಗ ದಾಳಿ ನಡೆದಿತ್ತು.

ಮಕ್ಕಳ ಸ್ಮಶಾನ ಭೂಮಿಯಾದ ಗಾಜಾ ಪಟ್ಟಿ: ಪೋಷಕರ ಅಳಲು

ಪ್ಯಾಲೆಸ್ಟೀನ್: 3,760 ಮಕ್ಕಳ ಸಾವು

ರಫಾ (ಗಾಜಾ ಪಟ್ಟಿ) (ಎಪಿ): ಇಸ್ರೇಲ್ ಹಾಗೂ ಹಮಾಸ್ ನಡುವಿನ ಯುದ್ಧವು ಗುರುವಾರ 27ನೇ ದಿನಕ್ಕೆ ಕಾಲಿಟ್ಟಿದ್ದು, ಇಲ್ಲಿಯವರೆಗೆ 18 ವರ್ಷದೊಳಗಿನ 3,760 ಪ್ಯಾಲೆಸ್ಟೀನ್ ಮಕ್ಕಳು ಮೃತಪಟ್ಟಿದ್ದಾರೆ ಎಂದು ಗಾಜಾ ಪಟ್ಟಿಯ ಆರೋಗ್ಯ ಸಚಿವಾಲಯ ಹೇಳಿದೆ.

'9,061 ಪ್ಯಾಲೆಸ್ಟೀನ್ ನಾಗರಿಕರು ಮೃತಪಟ್ಟಿದ್ದಾರೆ' ಎಂದು ಸಚಿವಾಲಯದ ವಕ್ತಾರ ಡಾ.ಅಶ್ರಫ್ ಅಲ್ ಕುದ್ರಾ ಮಾಹಿತಿ ನೀಡಿದ್ದಾರೆ.

ಹಮಾಸ್ ಆಡಳಿತಕ್ಕೆ ಒಳಪಟ್ಟ ಈ ಸಚಿವಾಲಯದಲ್ಲಿ ಅಧಿಕೃತ ವೈದ್ಯರು ಹಾಗೂ ಅನುಭವಿ ನಾಗರಿಕ ಸೇವಾ ಅಧಿಕಾರಿಗಳು ಇಲ್ಲ. ಆದರೆ, ಸಚಿವಾಲಯವು ಹಿಂದಿನ ಯುದ್ಧಗಳ ವೇಳೆ ಸಾವುನೋವಿನ ಬಗ್ಗೆ ನೀಡಿದ್ದ ಅಂಕಿ–ಅಂಶಗಳು ವಿಶ್ವಸಂಸ್ಥೆ ನಡೆಸಿದ ಸ್ವಯಂ ತನಿಖೆ ಹಾಗೂ ಇಸ್ರೇಲ್ ನೀಡಿದ್ದ ಮಾಹಿತಿಯ ಜತೆಗೆ ತಾಳೆ ಹಾಕಲು ನೆರವಾಗಿದ್ದವು.

ಮೃತಪಟ್ಟ ಮಕ್ಕಳ ಪೈಕಿ ಹಸುಗೂಸುಗಳು, ಅಂಬೆಗಾಲಿಡುತ್ತಿರುವ ಚಿಣ್ಣರೂ ಇದ್ದಾರೆ. ವಾಯು ಹಾಗೂ ಕ್ಷಿಪಣಿ ದಾಳಿಯಿಂದಾಗಿ ಉರುಳಿಬಿದ್ದ ಹಲವು ಕಟ್ಟಡಗಳ ಅಡಿಯಲ್ಲಿ ಮಕ್ಕಳು ಸಿಲುಕಿದ್ದರಿಂದ ಈ ಸಾವಿನ ಸಂಖ್ಯೆ ಹೆಚ್ಚಾಗಿದೆ ಎಂದು ಹೇಳಲಾಗಿದೆ.

ಸಚಿವಾಲಯವು ಅಕ್ಟೋಬರ್ 26ರಂದು ನೀಡಿದ್ದ ಅಂಕಿಅಂಶ ಆಧರಿಸಿ ಎಪಿ ಸುದ್ದಿಸಂಸ್ಥೆ ಕೂಡ ಸಾವಿನ ಸಂಖ್ಯೆ ಬಗ್ಗೆ ವಿಶ್ಲೇಷಣೆ ನಡೆಸಿದೆ. ಮೃತಪಟ್ಟವರಲ್ಲಿ 12 ವರ್ಷದೊಳಗಿನ 2,001 ಹಾಗೂ ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನ 615 ಚಿಣ್ಣರು ಇದ್ದಾರೆ ಎಂದು ಹೇಳಿದೆ.

ಗಾಜಾ ಪಟ್ಟಿಯಲ್ಲಿರುವ ವೈದ್ಯರ ಮಾಹಿತಿ ಪ್ರಕಾರ, ಏಳು ಸಾವಿರಕ್ಕೂ ಹೆಚ್ಚು ಮಕ್ಕಳು ಗಾಯಗೊಂಡಿದ್ದಾರೆ.

'ಗಾಜಾ ಪಟ್ಟಿಯು ಸಾವಿರಾರು ಮಕ್ಕಳ ಸ್ಮಶಾನ ಭೂಮಿಯಾಗಿ ಮಾರ್ಪಟ್ಟಿದೆ' ಎಂದು ಯುನಿಸೆಫ್‌ನ ವಕ್ತಾರ ಜೇಮ್ಸ್ ಎಲ್ಡರ್ ಆತಂಕ ವ್ಯಕ್ತಪಡಿಸಿದ್ದಾರೆ.

'ಗಾಜಾ ಪಟ್ಟಿಯು ಪೋಷಕರ ಪಾಲಿಗೆ ಶಾಪವಾಗಿ ಪರಿಣಮಿಸಿದೆ' ಎಂದು ಹೇಳುತ್ತಾರೆ ಯುದ್ಧದಿಂದಾಗಿ ತನ್ನ ಎಂಟು ವರ್ಷದ ಪುತ್ರಿಯನ್ನು ಕಳೆದುಕೊಂಡಿರುವ ಅಹ್ಮದ್ ಮೊದಾವಿಖ್.

ಇಸ್ರೇಲ್ ವಾದವೇನು?: ಹಮಾಸ್ ಬಂಡುಕೋರರ ನೆಲೆಗಳಷ್ಟೇ ನಮ್ಮ ವಾಯು ದಾಳಿಯ ಗುರಿಯಾಗಿವೆ. ಆದರೆ, ಹಮಾಸ್, ಪ್ಯಾಲೆಸ್ಟೀನ್ ನಾಗರಿಕರನ್ನು ತನ್ನ ಗುರಾಣಿಯಾಗಿ ಬಳಸಿಕೊಳ್ಳುತ್ತಿದೆ. ಅವರು ಹಾರಿಸಿದ 500ಕ್ಕೂ ಹೆಚ್ಚು ಕ್ಷಿಪಣಿಗಳು ಗುರಿ ತಪ್ಪಿ ಗಾಜಾ ಪಟ್ಟಿಯ ಮೇಲೆ ಬಿದ್ದಿವೆ. ಇದರಿಂದ ಪ್ಯಾಲೆಸ್ಟೀನ್ ನಾಗರಿಕರ ಸಾವಿನ ಸಂಖ್ಯೆ ಹೆಚ್ಚಿದೆ ಎಂದು ಇಸ್ರೇಲ್ ವಾದಿಸಿದೆ.

ಕೇಂದ್ರ ಗಾಜಾ ಪಟ್ಟಿಯಲ್ಲಿನ ಬುರೇಜ್ ಶಿಬಿರದ ಮೇಲೆ ಗುರುವಾರ ಇಸ್ರೇಲ್ ನಡೆಸಿದ ವಾಯುದಾಳಿಯಲ್ಲಿ ಗಾಯಗೊಂಡ ಬಾಲಕಿಯನ್ನು ವ್ಯಕ್ತಿಯೊಬ್ಬರು ಚಿಕಿತ್ಸೆಗಾಗಿ ಆಸ್ಪತ್ರೆಗೆ ಎತ್ತಿಕೊಂಡು ಹೋದರು —ಎಎಫ್‌ಪಿ ಚಿತ್ರ

ಇಸ್ರೇಲ್ ಸೇನೆಯು ಗಾಜಾ ಪಟ್ಟಿಯ ಹೊರವಲಯವನ್ನು ದಾಟಿದೆ. ನಾವೀಗ ಯುದ್ಧದ ಉತ್ತುಂಗದ ಸ್ಥಿತಿಯಲ್ಲಿದ್ದು, ಮುನ್ನಡೆಯುತ್ತಿದ್ದೇವೆ
ಬೆಂಜಮಿನ್ ನೆತನ್ಯಾಹು
ಪ್ರಧಾನಿ, ಇಸ್ರೇಲ್

ಸಾವಿರ ಚಿಣ್ಣರ ಚಿಕಿತ್ಸೆಗೆ ಯುಎಇ ನಿರ್ಧಾರ

ದುಬೈ (ರಾಯಿಟರ್ಸ್): ಗಾಜಾ ಪಟ್ಟಿಯಲ್ಲಿ ಗಾಯಗೊಂಡಿರುವ ಒಂದು ಸಾವಿರ ಪ್ಯಾಲೆಸ್ಟೀನ್ ಮಕ್ಕಳಿಗೆ ಚಿಕಿತ್ಸೆ ನೀಡಲು ಅರಬ್ ಸಂಯುಕ್ತ ಸಂಸ್ಥಾನ (ಯುಎಇ) ಮುಂದಾಗಿದೆ.

ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರು, ಮಕ್ಕಳಿಗೆ ಚಿಕಿತ್ಸೆ ನೀಡುವಂತೆ ಆಸ್ಪತ್ರೆಗಳಿಗೆ ನಿರ್ದೇಶನ ನೀಡಿದ್ದಾರೆ. ಆದರೆ, ಇಸ್ರೇಲ್ ಹಿಡಿತ ಸಾಧಿಸಿರುವ ಗಾಜಾ ಪ್ರದೇಶದಿಂದ ಗಲ್ಫ್ ರಾಷ್ಟ್ರಕ್ಕೆ ಮಕ್ಕಳನ್ನು ಚಿಕಿತ್ಸೆಗಾಗಿ ಹೇಗೆ ಕರೆತರಲಾಗುತ್ತದೆ ಎಂಬ ಬಗ್ಗೆ ಸ್ಪಷ್ಟಪಡಿಸಿಲ್ಲ.

ಇಸ್ರೇಲ್–ಹಮಾಸ್ ಸಮರ

2 ಶಿಬಿರಗಳ ಮೇಲೆ ದಾಳಿ

ಗಾಜಾ ಪಟ್ಟಿ (ರಾಯಿಟರ್ಸ್): ಗಾಜಾ ಪಟ್ಟಿಯಲ್ಲಿರುವ ಎರಡು ಶಿಬಿರಗಳ ಮೇಲೆ ಇಸ್ರೇಲ್ ನಡೆಸಿದ ವಾಯುದಾಳಿಗೆ 210 ನಾಗರಿಕರು ಮೃತಪಟ್ಟಿದ್ದಾರೆ.

ಜಬಾಲಿಯಾ ಶಿಬಿರದ ಮೇಲೆ ಬುಧವಾರ ದಾಳಿ ನಡೆಸಿದ್ದ ಇಸ್ರೇಲ್ ಗುರುವಾರ, ಬುರೇಜ್ ಶಿಬಿರದ ಮೇಲೆ ನಡೆಸಿದೆ. ಒಟ್ಟು 15 ಮಂದಿ ಮೃತಪಟ್ಟಿದ್ದಾರೆ ಎಂದು ನಾಗರಿಕ ತುರ್ತು ಸೇವಾ ಸಂಸ್ಥೆಯೊಂದು ಹೇಳಿದೆ.

ಜಬಾಲಿಯಾ ಶಿಬಿರದ ಮೇಲೆ ಎರಡು ದಿನಗಳ ಕಾಲ ನಡೆದ ದಾಳಿಯಲ್ಲಿ ಒಟ್ಟು 195 ಮಂದಿ ಮೃತಪಟ್ಟಿದ್ದು, 120 ಮಂದಿ ಅವಶೇಷಗಳ ಅಡಿಯಲ್ಲಿ ಸಿಲುಕಿದ್ದಾರೆ. 777 ನಾಗರಿಕರು ಗಾಯಗೊಂಡಿದ್ದಾರೆ ಎಂದು ಹಮಾಸ್ ಸರ್ಕಾರ ಹೇಳಿದೆ.

ಜಬಾಲಿಯಾ ಶಿಬಿರದ ಮೇಲಿನ ದಾಳಿಯಿಂದ ಅಪಾರ ಸಾವು, ನೋವು ಸಂಭವಿಸಿದೆ. ಇದು ಯುದ್ಧಾಪರಾಧವಾಗಿದೆ ಎಂದು ವಿಶ್ವಸಂಸ್ಥೆಯ ಹೈಕಮಿಷನರ್ ಕಚೇರಿ ಟೀಕಿಸಿದೆ. ಗುರುವಾರ ನಡೆದ ದಾಳಿಯಲ್ಲಿ ಹಮಾಸ್‌ನ ಒಬ್ಬ ಕಮಾಂಡರ್ ಮೃತಪಟ್ಟಿದ್ದಾರೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಯುದ್ಧಕ್ಕೆ ಮಾನವೀಯ ವಿರಾಮ ಬೇಕಿದೆ: ಬೈಡನ್

ಮಿನ್ನಿಯಾಪೋಲಿಸ್ (ಎಪಿ): ಇಸ್ರೇಲ್–ಹಮಾಸ್ ನಡುವಿನ ಯುದ್ಧಕ್ಕೆ ಮಾನವೀಯ ವಿರಾಮದ ಅಗತ್ಯವಿದೆ ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಪ್ರತಿಪಾದಿಸಿದ್ದಾರೆ.

ಅಮೆರಿಕದ ಮಿನ್ನಿಯಾಪೋಲಿಸ್ ನಗರದಲ್ಲಿ ಬುಧವಾರ ನಡೆದ ಚುನಾವಣಾ ಅಭಿಯಾನದ ವೇಳೆ ಬೈಡನ್‌ಗೆ ಪ್ರತಿಭಟನೆಯ ಬಿಸಿ ತಟ್ಟಿತು. ಯುದ್ಧ ವಿರಾಮ ಘೋಷಣೆಗೆ ಬಗ್ಗೆ ಸರ್ಕಾರ ಕರೆ ನೀಡಬೇಕು ಎಂದು ಹೋರಾಟಗಾರರು ಘೋಷಣೆ ಕೂಗಿದರು.

ಜೋ ಬೈಡನ್

ಯುದ್ಧ ಶುರುವಾದ ದಿನದಿಂದಲೂ ಬೈಡನ್ ಅವರು, ಇಸ್ರೇಲ್ ಪರವಾಗಿ ನಿಂತಿದ್ದಾರೆ. ಆದರೆ, ಮಾನವ ಹಕ್ಕುಗಳ ಸಂಘಟನೆಗಳು, ಹಲವು ನಾಯಕರು ಹಾಗೂ ಅಮೆರಿಕದ ಡೆಮಾಕ್ರಟಿಕ್ ಪಕ್ಷದ ಉದಾರವಾದಿ ನಾಯಕರು, ಗಾಜಾ ಪಟ್ಟಿ ಮೇಲೆ ಇಸ್ರೇಲ್ ದಾಳಿಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಕದನ ವಿರಾಮ ಘೋಷಣೆಗೆ ಇದು ಸಕಾಲವಾಗಿದೆ ಎಂದು ಹೇಳುತ್ತಿದ್ದಾರೆ. ಹಾಗಾಗಿ, ಬೈಡನ್ ತೀವ್ರ ಒತ್ತಡಕ್ಕೆ ಸಿಲುಕುವಂತಾಗಿದೆ.

ಸಮನ್ಸ್ ಹಿಂಪಡೆಯುವಂತೆ ಕೋರಿ ಪತ್ರ ಬರೆದ ದೆಹಲಿ ಮುಖ್ಯಮಂತ್ರಿ

ಇ.ಡಿ. ವಿಚಾರಣೆಗೆ ಕೇಜ್ರಿವಾಲ್ ಗೈರು

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆಗೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ಎದುರು ಗುರುವಾರ ಹಾಜರಾಗಲಿಲ್ಲ. ಬಿಜೆಪಿಯ ಚಿತಾವಣೆಯಿಂದ, ಬಾಹ್ಯ ಕಾರಣಗಳಿಂದಾಗಿ ಇ.ಡಿ. ಈ ಸಮನ್ಸ್ ಕಳುಹಿಸಿದೆ ಎಂದು ಕೇಜ್ರಿವಾಲ್ ಆರೋಪಿಸಿದ್ದಾರೆ.

ಇ.ಡಿ.ಗೆ ಗುರುವಾರ ಪತ್ರ ಬರೆದಿರುವ ಕೇಜ್ರಿವಾಲ್, ವಿಚಾರಣೆಗೆ ಬರುವಂತೆ ಜಾರಿಗೊಳಿಸಿರುವ 'ಸಮನ್ಸ್'ಅನ್ನು ಹಿಂಪಡೆಯಬೇಕು' ಎಂದು ಆಗ್ರಹಿಸಿದ್ದಾರೆ. ಈ ಸಮನ್ಸ್ 'ಅಸ್ಪಷ್ಟವಾಗಿದೆ, ಕಾನೂನಿನ ಅಡಿಯಲ್ಲಿ ಇದಕ್ಕೆ ಸಮರ್ಥನೆಯಿಲ್ಲ' ಎಂದು ಹೇಳಿದ್ದಾರೆ.

ಸಮನ್ಸ್‌ಗೆ ಕೇಜ್ರಿವಾಲ್ ನೀಡಿರುವ ಉತ್ತರವನ್ನು ಇ.ಡಿ ಪರಿಶೀಲಿಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೇಜ್ರಿವಾಲ್ ಅವರಿಗೆ ಇನ್ನೊಂದು ದಿನ ವಿಚಾರಣೆಗೆ ಬರುವಂತೆ ಸೂಚಿಸಬಹುದು ಎಂದು ಮೂಲಗಳು ಹೇಳಿವೆ. ಹಣದ ಅಕ್ರಮ ವರ್ಗಾವಣೆ ಕಾಯ್ದೆಯ ಅಡಿಯಲ್ಲಿ (ಪಿಎಂಎಲ್‌ಎ) ಕೇಜ್ರಿವಾಲ್ ಅವರ ಹೇಳಿಕೆಯನ್ನು ಇ.ಡಿ. ಅಧಿಕಾರಿಗಳು ದಾಖಲು ಮಾಡಿಕೊಳ್ಳುವವರಿದ್ದರು.

ಎಎಪಿ ಪ್ರಮುಖರಾದ ಮನೀಶ್ ಸಿಸೋಡಿಯಾ ಮತ್ತು ಸಂಜಯ್ ಸಿಂಗ್ ಅವರು ಈ ಪ್ರಕರಣದಲ್ಲಿ ಈಗಾಗಲೇ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ. ಈ ಸಮನ್ಸ್ ರಾಜಕೀಯ ಪ್ರೇರಿತವಾಗಿದೆ, ವಿಧಾನಸಭಾ ಚುನಾವಣೆ ನಡೆಯಲಿರುವ ರಾಜ್ಯಗಳಲ್ಲಿ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ತಮಗೆ ಅಡ್ಡಿಯುಂಟು ಮಾಡುವ ಉದ್ದೇಶ ಹೊಂದಿದೆ ಎಂದು ಕೇಜ್ರಿವಾಲ್ ಅವರು ಉತ್ತರಿಸಿದ್ದಾರೆ ಎಂದು ದೆಹಲಿ ಮುಖ್ಯಮಂತ್ರಿ ಕಚೇರಿ ತಿಳಿಸಿದೆ.

ಇ.ಡಿ. ಸಮನ್ಸ್ ಜಾರಿಮಾಡಿದ್ದರೂ, ಕೇಜ್ರಿವಾಲ್ ಅವರು ಗುರುವಾರ ಮಧ್ಯಪ್ರದೇಶದಲ್ಲಿ ತಮ್ಮ ಪಕ್ಷದ ಅಭ್ಯರ್ಥಿಯ ಪರವಾಗಿ ಸಿಂಗ್ರೌಲಿ ನಗರದಲ್ಲಿ ರೋಡ್‌ಶೋನಲ್ಲಿ ಭಾಗಿಯಾಗಿದ್ದರು.

ಸಚಿವರ ಸ್ಥಳದಲ್ಲಿ ಇ.ಡಿ. ದಾಳಿ: ಹಣದ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಸಚಿವ, ಎಎಪಿ ನಾಯಕ ರಾಜ್ ಕುಮಾರ್ ಆನಂದ್ ಮತ್ತು ಇತರ ಕೆಲವರಿಗೆ ಸೇರಿದ ಪ್ರದೇಶಗಳ ಮೇಲೆ ಇ.ಡಿ. ಅಧಿಕಾರಿಗಳು ದಾಳಿ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ.

ಒಂದು ಡಜನ್ ಪ್ರದೇಶಗಳಲ್ಲಿ ಬೆಳಿಗ್ಗೆ 7.30ರಿಂದಲೇ ಶೋಧ ನಡೆದಿದೆ ಎಂದು ಗೊತ್ತಾಗಿದೆ. ಅಂತರರಾಷ್ಟ್ರೀಯ ಹವಾಲಾ ವಹಿವಾಟು ಮಾತ್ರವಲ್ಲದೆ ಕಸ್ಟಮ್ಸ್ ಸುಂಕ ವಂಚಿಸಲು ಆಮದು ವಸ್ತುಗಳ ತಪ್ಪು ಘೋಷಣೆಯ ಆರೋಪದ ಅಡಿಯಲ್ಲಿ ರೆವಿನ್ಯು ಗುಪ್ತದಳ ನಿರ್ದೇಶನಾಲಯ (ಡಿಆರ್‌ಐ) ದಾಖಲಿಸಿದ ದೋಷಾರೋಪವು ಈ ದಾಳಿಗೆ ಮೂಲ.

ಬಿಜೆಪಿ ಧರಣಿ: ಕೇಜ್ರಿವಾಲ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ನಾಯಕರು ರಾಜಘಾಟ್‌ನಲ್ಲಿ ಧರಣಿ ನಡೆಸಿದ್ದಾರೆ. 'ದೆಹಲಿ ಅಬಕಾರಿ ನೀತಿ ಕುರಿತ ಹಗರಣದ ಪ್ರಮುಖ ಸೂತ್ರಧಾರ ಕೇಜ್ರಿವಾಲ್ ಎಂಬುದು ದೆಹಲಿಯ ಮಕ್ಕಳಿಗೂ ಗೊತ್ತಿದೆ' ಎಂದು ಬಿಜೆಪಿ ದೆಹಲಿ ಘಟಕದ ಅಧ್ಯಕ್ಷ ವೀರೇಂದ್ರ ಸಚ್‌ದೇವ ವಾಗ್ದಾಳಿ ನಡೆಸಿದ್ದಾರೆ.

ಇ.ಡಿ.ಗೆ ಉತ್ತರ...

- ನನ್ನನ್ನು ಶಂಕಿತ ಎಂಬ ನೆಲೆಯಲ್ಲಿ ವಿಚಾರಣೆಗೆ ಕರೆಯಲಾಗುತ್ತಿದೆಯೋ, ಸಾಕ್ಷಿ ಎಂಬ ನೆಲೆಯಲ್ಲಿ ವಿಚಾರಣೆಗೆ ಕರೆಯಲಾಗುತ್ತಿದೆಯೋ ಎನ್ನುವ ವಿಚಾರದಲ್ಲಿ ಸ್ಪಷ್ಟತೆ ಇಲ್ಲ. ನನ್ನನ್ನು ವ್ಯಕ್ತಿಗತವಾಗಿ ಕರೆಯಲಾಗುತ್ತಿದೆಯೋ, ನಾನು ಮುಖ್ಯಮಂತ್ರಿ ಎಂಬ ಕಾರಣಕ್ಕೆ ಕರೆಯಲಾಗುತ್ತಿದೆಯೋ, ನಾನು ಎಎಪಿಯ ರಾಷ್ಟ್ರೀಯ ಸಂಚಾಲಕ ಎಂಬ ಕಾರಣಕ್ಕೆ ಕರೆಯಲಾಗುತ್ತಿದೆಯೋ ಎಂಬ ಬಗ್ಗೆಯೂ ಸಮನ್ಸ್‌ನಲ್ಲಿ ಸ್ಪಷ್ಟತೆ ಇಲ್ಲ.
- ಇ.ಡಿ. ನನಗೆ ಸಮನ್ಸ್ ನೀಡಿರುವುದು ಸಂಬಂಧವೇ ಇಲ್ಲದ ಪ್ರಶ್ನೆಗಳನ್ನು ಕೇಳುವುದಕ್ಕೆ.
- ಅಕ್ಟೋಬರ್ 30ರ ಮಧ್ಯಾಹ್ನ ಬಿಜೆಪಿಯ ನಾಯಕರು, ನನಗೆ ಸಮನ್ಸ್ ನೀಡಲಾಗುತ್ತದೆ ಹಾಗೂ ನನ್ನನ್ನು ಬಂಧಿಸಲಾಗುತ್ತದೆ ಎಂಬ ಹೇಳಿಕೆಗಳನ್ನು ನೀಡಲು ಆರಂಭಿಸಿದರು. ಅದೇ ದಿನ ಸಂಜೆ ನನಗೆ ಸಮನ್ಸ್ ಬಂತು. ಹೀಗಾಗಿ, ನನ್ನ ಹೆಸರು ಹಾಳುಮಾಡುವ ಉದ್ದೇಶದಿಂದ ಈ ಸಮನ್ಸ್ ಬಗ್ಗೆ ಬಿಜೆಪಿಯ ಆಯ್ದ ನಾಯಕರಿಗೆ ಸುದ್ದಿ ಸೋರಿಕೆಯಾಗಿತ್ತು ಅನ್ನಿಸುತ್ತದೆ. ಕೇಂದ್ರದಲ್ಲಿ ಆಡಳಿತದಲ್ಲಿ ಇರುವ ಪಕ್ಷದ ಆಜ್ಞೆಯ ಮೇರೆಗೆ ಈ ಸಮನ್ಸ್ ಕಳುಹಿಸಲಾಗಿದೆ.
- ಕೇಜ್ರಿವಾಲ್ ಅವರಿಗೆ ಸಮನ್ಸ್ ಜಾರಿಯಾಗಿದೆ, ಅವರನ್ನು ಬಂಧಿಸಲಾಗುತ್ತದೆ ಎಂದು ಬಿಜೆಪಿ ಸಂಸದ ಮನೋಜ್ ತಿವಾರಿ ಅವರು ಅಕ್ಟೋಬರ್ 30ರ ಮಧ್ಯಾಹ್ನ ಬಹಿರಂಗವಾಗಿ ಹೇಳಿದ್ದರು.
- ಎಎಪಿಯ ತಾರಾ ಪ್ರಚಾರಕನಾಗಿರುವ ನಾನು ಐದು ರಾಜ್ಯಗಳಲ್ಲಿ ಚುನಾವಣಾ ಪ್ರಚಾರಕ್ಕೆ ತೆರಳಬೇಕಿದೆ. ದೆಹಲಿ ಮುಖ್ಯಮಂತ್ರಿಯಾಗಿ ನನ್ನ ಖುದ್ದು ಹಾಜರಿ ಬೇಕಾಗುತ್ತದೆ. ಇ.ಡಿ. ತನ್ನ ಸಮನ್ಸ್‌ಅನ್ನು ವಾಪಸ್ ಪಡೆಯಬೇಕು ಎಂದು ಕೇಜ್ರಿವಾಲ್ ಹೇಳಿದ್ದಾರೆ.

ರಾಜಕೀಯ ಪಿತೂರಿ: ಎಎಪಿ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಇ.ಡಿ. ಸಮನ್ಸ್ ಜಾರಿ ಮಾಡಿರುವುದರ ಹಿಂದೆ ರಾಜಕೀಯ ಪಿತೂರಿ ಇದೆ ಎಂದು ಎಎಪಿ ಆರೋಪಿಸಿದೆ.

'ಕೇಜ್ರಿವಾಲ್ ಅವರು ಇ.ಡಿ. ಸಮನ್ಸ್‌ಗೆ ಪ್ರತ್ಯುತ್ತರ ಕಳಿಸಿದ್ದಾರೆ. ಇ.ಡಿ. ಕಡೆಯಿಂದ ಉತ್ತರ ಬಂದಿಲ್ಲ. ಆದರೆ ಬಿಜೆಪಿ ವಕ್ತಾರರು ಕೇಜ್ರಿವಾಲ್ ಅವರ ಪತ್ರಕ್ಕೆ ಉತ್ತರ ನೀಡಲು ಆರಂಭಿಸಿದ್ದಾರೆ. ಇ.ಡಿ. ಹಾಗೂ ಬಿಜೆಪಿ ನಡುವೆ ವ್ಯತ್ಯಾಸ ಗುರುತಿಸುವುದು ಇಂದು ಕಷ್ಟವಾಗುತ್ತಿದೆ' ಎಂದು ದೆಹಲಿ ಎಎಪಿ ಸಂಚಾಲಕ ಗೋಪಾಲ್ ರಾಯ್ ವ್ಯಂಗ್ಯವಾಡಿದ್ದಾರೆ.

2024ರ ಲೋಕಸಭಾ ಚುನಾವಣೆಯ ಪೂರ್ವದಲ್ಲಿ 'ಇಂಡಿಯಾ' ಮೈತ್ರಿಕೂಟದ ನಾಯಕರನ್ನು ಗುರಿಯಾಗಿಸುವ ಬಿಜೆಪಿಯ ಯೋಜನೆಯ ಭಾಗವಾಗಿ ಕೇಜ್ರಿವಾಲ್ ಅವರನ್ನು ಮೊದಲು ಬಂಧಿಸಲಾಗುತ್ತದೆ ಎಂದು ಎಎಪಿ ಹೇಳಿದೆ.

ಕೇಜ್ರಿವಾಲ್ ವಿರುದ್ಧ ಹರಿಹಾಯ್ದ ಬಿಜೆಪಿ

ನವದೆಹಲಿ (ಪಿಟಿಐ): ಇ.ಡಿ. ಸಮನ್ಸ್ ನೀಡಿದ್ದರೂ ಅರವಿಂದ ಕೇಜ್ರಿವಾಲ್ ಅವರು ಪಲಾಯನ ಮಾಡಿದ್ದಾರೆ, ಅವರಿಗೆ ಸತ್ಯವನ್ನು ಎದುರಿಸಲಾಗುತ್ತಿಲ್ಲ ಎಂದು ಬಿಜೆಪಿ ಟೀಕಿಸಿದೆ.

'ದೆಹಲಿ ಅಬಕಾರಿ ಹಗರಣದ ಮಹಾರಾಜ ತಾವು ಅಬಕಾರಿ ಹಗರಣದಲ್ಲಿ ಮತ್ತು ಭ್ರಷ್ಟಾಚಾರದಲ್ಲಿ ಭಾಗಿಯಾಗಿದ್ದನ್ನು ಒಪ್ಪಿಕೊಂಡಿದ್ದಾರೆ ಎಂದು ಹೇಳುವುದು ಅತಿಶಯೋಕ್ತಿ ಆಗುವುದಿಲ್ಲ' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರಾ ಅವರು ಸುದ್ದಿಗೋಷ್ಠಿಯಲ್ಲಿ ವಾಗ್ದಾಳಿ ನಡೆಸಿದ್ದಾರೆ.

ಸಾಕ್ಷ್ಯ ಮತ್ತು ಸತ್ಯವನ್ನು ಆಧರಿಸಿ ಇ.ಡಿ. ಸಮನ್ಸ್ ನೀಡಿದೆ. ಆದರೆ ಸತ್ಯ ಗೊತ್ತಿರುವ ಕಾರಣಕ್ಕೆ ಕೇಜ್ರಿವಾಲ್ ಅವರು ಇ.ಡಿ. ಪ್ರಶ್ನೆಗಳನ್ನು ಎದುರಿಸುವ ಬದಲು ಪಲಾಯನ ಮಾಡುತ್ತಿದ್ದಾರೆ ಎಂದು ಪಾತ್ರಾ ಆರೋಪಿಸಿದ್ದಾರೆ.

'ಅತ್ಯಂತ ಅಪ್ರಾಮಾಣಿಕ ವ್ಯಕ್ತಿಯು ಅತ್ಯಂತ ನಾಚಿಕೆಗೇಡಿಯೂ ಹೌದು ಎಂಬುದು ಇಂದು ಸಾಬೀತಾಗಿದೆ. ಏನಾದರೂ ಆಧಾರ ಇಟ್ಟುಕೊಂಡೇ ಇ.ಡಿ. ಅಥವಾ ಇತರ ಯಾವುದೇ ತನಿಖಾ ಸಂಸ್ಥೆ ಕೇಜ್ರಿವಾಲ್ ಅವರಿಗೆ ಸಮನ್ಸ್ ನೀಡುತ್ತದೆ ಎಂಬುದು ನಮ್ಮ ಬಲವಾದ ನಂಬಿಕೆ' ಎಂದು ಅವರು ಹೇಳಿದ್ದಾರೆ.

ಸಭೆ: ಹೊರನಡೆದ ಮಹುವಾ

'ನೀತಿ ಸಂಹಿತೆ ಸಮಿತಿಯಲ್ಲಿ ವಸ್ತ್ರಾಪಹರಣದ ಪರಿಸ್ಥಿತಿ ಸೃಷ್ಟಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರ ವಿರುದ್ಧದ ಆರೋಪಗಳ ಕುರಿತು ತನಿಖೆ ನಡೆಸುತ್ತಿರುವ ಲೋಕಸಭೆಯ 'ನೀತಿ ಸಮಿತಿ'ಯ ಸಭೆಯು ಗುರುವಾರ ನಾಟಕೀಯ ವಿದ್ಯಮಾನಗಳಿಗೆ ಸಾಕ್ಷಿಯಾಯಿತು. ಸಮಿತಿಯ ಅಧ್ಯಕ್ಷ ವಿನೋದ್ ಸೋನಕರ್ ಅವರು ಮಹುವಾ ಅವರಿಗೆ ವೈಯಕ್ತಿಕ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ ಎಂದು ಆರೋಪಿಸಿ ವಿರೋಧ ಪಕ್ಷಗಳ ಸದಸ್ಯರು ಹಾಗೂ ಮಹುವಾ ಸಭೆಯಿಂದ ಹೊರನಡೆದರು.

ಸುದ್ದಿಗಾರರ ಪ್ರಶ್ನೆಗೆ ಸಂಸದೆ ಮಹುವಾ ಪ್ರತಿಕ್ರಿಯಿಸಿದ್ದು ಹೀಗೆ. –ಪಿಟಿಐ ಚಿತ್ರ

ವಿರೋಧ ಪಕ್ಷಗಳ ಸಂಸದರ ಆರೋಪಕ್ಕೆ ಸಭೆಯ ನಂತರ ಪ್ರತಿಕ್ರಿಯೆ ನೀಡಿದ ಸೋನಕರ್ ಅವರು, ಪ್ರಶ್ನೆಗಳಿಗೆ ಉತ್ತರ ನೀಡುವ ಬದಲು ಮಹುವಾ ಮತ್ತು ಇತರ ಸದಸ್ಯರು 'ಕೋಪಿಸಿಕೊಂಡು ನನ್ನ ವಿರುದ್ಧ ಅಸಂಸದೀಯ ಪದಗಳನ್ನು ಬಳಸಿದರು' ಎಂದರು. ಮುಂದಿನ ನಡೆ ಏನಿರಬೇಕು ಎಂಬುದನ್ನು ಸಮಿತಿಯು ಶೀಘ್ರದಲ್ಲಿಯೇ ತೀರ್ಮಾನಿಸಲಿದೆ ಎಂದು ಅವರು ಹೇಳಿದರು.

ಬಿಜೆಪಿ ಸಂಸದರಾದ ಸೋನಕರ್ ಅವರು ಮಹುವಾ ಅವರ ಪ್ರಯಾಣದ ವಿವರಗಳು, ಅವರ ದೂರವಾಣಿ ವಿವರಗಳು ಮತ್ತು ಅವರು ಯಾರನ್ನು ಭೇಟಿಯಾಗಿದ್ದರು ಎಂಬುದರ ವಿವರಗಳನ್ನು ಕೇಳಿದ ಕಾರಣ ಸಂಸದರಾದ ಎನ್. ಉತ್ತಮ್ ಕುಮಾರ್ ರೆಡ್ಡಿ, ವೈಥಿಲಿಂಗಮ್ (ಕಾಂಗ್ರೆಸ್), ಡ್ಯಾನಿಶ್ ಅಲಿ (ಬಿಎಸ್‌ಪಿ), ಪಿ.ಆರ್. ನಟರಾಜನ್ (ಸಿಪಿಎಂ) ಮತ್ತು ಗಿರಿಧರ ಯಾದವ್ (ಜೆಡಿಯು) ಹಾಗೂ ಮಹುವಾ ಅವರು ಕೋಪಗೊಂಡು ಸಭೆಯಿಂದ ಹೊರನಡೆದರು ಎಂದು ವಿರೋಧ ಪಕ್ಷಗಳ ಸಂಸದರು ತಿಳಿಸಿದ್ದಾರೆ.

ಇಡೀ ಘಟನೆಯ ಬಗ್ಗೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದಿರುವ ಮಹುವಾ ಅವರು, 'ನನಗೆ ಸಮಿತಿಯ ಅಧ್ಯಕ್ಷರು ವಸ್ತ್ರಾಪಹರಣದಂತಹ ಪರಿಸ್ಥಿತಿ ಸೃಷ್ಟಿಸಿದ್ದರು' ಎಂದು ದೂರಿದ್ದಾರೆ. 'ಸಮಿತಿಯಲ್ಲಿ ನೀತಿ, ನೈತಿಕತೆ ಉಳಿದಿಲ್ಲ. ಹಾಗಾಗಿ ಅದು ನೀತಿ ಸಮಿತಿ ಎಂಬ ಹೆಸರಿನ ಬದಲು ಬೇರೆ ಹೆಸರು ಇಟ್ಟುಕೊಳ್ಳಬೇಕು' ಎಂದು ಪತ್ರದಲ್ಲಿ ಹೇಳಿದ್ದಾರೆ.

ಬಿಜೆಪಿ ಸಂಸದ ನಿಶಿಕಾಂತ್ ದುಬೆ ಮತ್ತು ಮಹುವಾ ಅವರ ಮಾಜಿ ಜೊತೆಗಾರ ಜೈ ಅನಂತ್ ದೆಹದ್ರಾಯ್ ಅವರು ಸಲ್ಲಿಸಿದ ದೂರಿಗೆ ಪ್ರತಿಯಾಗಿ ಮಹುವಾ ಅವರನ್ನು ಸಮಿತಿಯು ವಿಚಾರಣೆಗೆ ಹಾಜರಾಗಲು ಕರೆದಿತ್ತು. ಸಮಿತಿಯ ಮುಂದೆ ಮಹುವಾ ಅವರು, ಸಂಸತ್ತಿನಲ್ಲಿ ಪ್ರಶ್ನೆ ಕೇಳಲು ತಾವು ಹಣ, ಉಡುಗೊರೆ ಪಡೆದಿಲ್ಲ ಎಂದು ಹೇಳಿದರು. ದೆಹದ್ರಾಯ್ ಅವರ ಜೊತೆ ತಾವು ಸಂಬಂಧ ಕಡಿದುಕೊಂಡ ಕಾರಣ, ದ್ವೇಷದಿಂದ ಈ ಆರೋಪ ಮಾಡಲಾಗಿದೆ ಎಂದು ವಿವರಿಸಿದರು.

'ಸಂಸತ್ತಿನ ನೀತಿ ಸಮಿತಿಯ ಅಧ್ಯಕ್ಷರ ನಡವಳಿಕೆಯು ಅನೈತಿಕವಾಗಿತ್ತು, ಘನತೆಯಿಂದ ಕೂಡಿರಲಿಲ್ಲ ಎಂದು ನಮಗೆ ಕಂಡುಬಂತು. ಬೇರೆ ಯಾರದ್ದೋ ಪರವಾಗಿ ಅವರು ಪ್ರಶ್ನೆಗಳನ್ನು ಕೇಳುತ್ತಿರುವಂತೆ ಅನ್ನಿಸಿತು. ಇದು ಬಹಳ ಕೆಟ್ಟದ್ದು' ಎಂದು ರೆಡ್ಡಿ ಅವರು ಸುದ್ದಿಗಾರರ ಬಳಿ ಹೇಳಿದರು.

ಆದರೆ ಸಮಿತಿಯ ಸಭೆಯಲ್ಲಿ ನಡೆದಿದ್ದನ್ನು ಬಹಿರಂಗಪಡಿಸಿದ ಕ್ರಮಕ್ಕೆ ಬಿಜೆಪಿ ಸಂಸದೆ, ಸಮಿತಿಯ ಸದಸ್ಯೆ ಅಪರಾಜಿತಾ ಸಾರಂಗಿ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. 'ಮಹುವಾ ಅವರ ನಡವಳಿಕೆ ಖಂಡನಾರ್ಹವಾಗಿತ್ತು. ಅಧ್ಯಕ್ಷರನ್ನು ಉದ್ದೇಶಿಸಿ ಅವರು ಅಸಂಸದೀಯ ಪದಗಳನ್ನು ಬಳಸಿದರು. ಪ್ರಶ್ನೆಯೊಂದಕ್ಕೆ ಉತ್ತರಿಸಲು ಬಯಸದ ಅವರು ಗದ್ದಲ ಎಬ್ಬಿಸಿದರು' ಎಂದು ಸಾರಂಗಿ ಆರೋಪಿಸಿದರು.

'ದಲಿತ ಸಮುದಾಯಕ್ಕೆ ಸೇರಿದ ಸೋನಕರ್ ಅವರು ನೀತಿ ಸಮಿತಿಯ ಅಧ್ಯಕ್ಷ ಆಗಿರುವುದನ್ನು ಒಪ್ಪಿಕೊಳ್ಳಲು ವಿರೋಧ ಪಕ್ಷಗಳ ಸದಸ್ಯರಿಗೆ ಆಗುತ್ತಿಲ್ಲ. ಸೋನಕರ್ ವಿರುದ್ಧ ಅವರು ಅನಗತ್ಯ ಹೇಳಿಕೆ ನೀಡುತ್ತಿದ್ದಾರೆ. ಇದು ಸಂಸದೀಯ ಇತಿಹಾಸದಲ್ಲಿನ ಕರಾಳ ದಿನ' ಎಂದು ದುಬೆ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಕ್ರಿಯಿಸಲು ಜ್ಞಾನವಾಪಿ ಆಡಳಿತಕ್ಕೆ ಸೂಚನೆ

ವಾರಾಣಸಿ (ಪಿಟಿಐ): ಜ್ಞಾನವಾಪಿ ಮಸೀದಿಯ ನೆಲಮಾಳಿಗೆಯ ಬೀಗದ ಕೈಗಳನ್ನು ವಾರಾಣಸಿ ಜಿಲ್ಲಾಧಿಕಾರಿಗೆ ಒಪ್ಪಿಸಬೇಕು ಎಂದು ಕೋರಿರುವ ಅರ್ಜಿಗೆ ಪ್ರತಿಕ್ರಿಯೆ ನೀಡುವಂತೆ ಜ್ಞಾನವಾಪಿ ಆಡಳಿತ ಸಮಿತಿಗೆ ಜಿಲ್ಲಾ ನ್ಯಾಯಾಲಯವು ಗುರುವಾರ ಹೇಳಿದೆ.

'6ರ ಒಳಗಾಗಿ ಪ್ರತಿಕ್ರಿಯೆ ಸಲ್ಲಿಸಬೇಕು ಎಂದು ನ್ಯಾಯಾಲಯ ಸೂಚನೆ ನೀಡಿದೆ. ಜೊತೆಗೆ ವಿಚಾರಣೆಯನ್ನು 8ಕ್ಕೆ ಮುಂದೂಡಿದೆ' ಎಂದು ಸರ್ಕಾರಿ ವಕೀಲ ರಾಜೇಶ್ ಮಿಶ್ರಾ ತಿಳಿಸಿದರು.

'ಮಸೀದಿಯ ನೆಲಮಾಳಿಗೆಗೆ ಆಡಳಿತ ಸಮಿತಿಯು ಬೀಗ ಹಾಕಿದೆ. ಜೊತೆಗೆ ಇದರ ಮಾರ್ಗಕ್ಕೆ ಬ್ಯಾರಿಕೇಡ್‌ಗಳನ್ನು ಹಾಕಲಾಗಿದೆ. 1993ಕ್ಕೂ ಮೊದಲು ಈ ನೆಲಮಾಳಿಗೆಯನ್ನು 'ವ್ಯಾಸ್‌ಜಿ ಕಾ ತಹಖಾನಾ' ಎಂದು ಕರೆಯಲಾಗುತ್ತಿತ್ತು. ಸೋಮನಾಥ ವ್ಯಾಸ್ ಎಂಬವರು ಇಲ್ಲಿ ಪೂಜೆ ಮಾಡುತ್ತಿದ್ದರು' ಎಂದು ಮದನ್ ಮೋಹನ್ ಯಾದವ್ ಅವರು ಅರ್ಜಿಯಲ್ಲಿ ಪ್ರತಿಪಾದಿಸಿದ್ದಾರೆ.

ಎಚ್ಚರಿಕೆ: ಆ್ಯಪಲ್‌ಗೆ ನೋಟಿಸ್

ನವದೆಹಲಿ (ಪಿಟಿಐ/ರಾಯಿಟರ್ಸ್): ಐಫೋನ್ ಹ್ಯಾಕ್ ಮಾಡಲು ಪ್ರಯತ್ನಿಸುತ್ತಿರುವ ಕುರಿತು ವಿರೋಧ ಪಕ್ಷಗಳ ನಾಯಕರಿಗೆ ಆ್ಯಪಲ್ ಕಂಪನಿಯು ಕಳುಹಿಸಿದ್ದ 'ಎಚ್ಚರಿಕೆ ಸೂಚನೆ' ಪ್ರಕರಣಕ್ಕೆ ಸಂಬಂಧಿಸಿ ಭಾರತೀಯ ಗಣಕಯಂತ್ರ ತುರ್ತು ಸ್ಪಂದನಾ ತಂಡವು (ಸಿಇಆರ್‌ಟಿ–ಇನ್) ತನಿಖೆ ಆರಂಭಿಸಿದೆ. ಜೊತೆಗೆ, ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಪ್ರಕರಣ ಸಂಬಂಧ ಆ್ಯಪಲ್ ಕಂಪನಿಗೆ ನೋಟಿಸ್ ಜಾರಿ ಮಾಡಿದೆ.

> ಸಿಇಆರ್‌ಟಿ–ಇನ್ ತನಿಖೆ ಆರಂಭಿಸಿದೆ. ಆ್ಯಪಲ್ ಕಂಪನಿಯು ತನಿಖೆಗೆ ಖಂಡಿತ ಸಹಕರಿಸುತ್ತದೆ
>
> **ಎಸ್. ಕೃಷ್ಣನ್,** ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ ಸಚಿವಾಲಯ

ನೋಟಿಸ್ ಜಾರಿ ಮಾಡಿದ ಕುರಿತು ಸಚಿವಾಲಯದ ಕಾರ್ಯದರ್ಶಿ ಎಸ್.ಕೃಷ್ಣನ್ ಅವರು ಗುರುವಾರ ಮಾಹಿತಿ ನೀಡಿದ್ದಾರೆ. ನೋಟಿಸ್ ತಲುಪಿದ ಬಗ್ಗೆ ಆ್ಯಪಲ್ ಕಂಪನಿ ಈವರೆಗೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ, 'ನೋಟಿಸ್ ತಲುಪಿರುವುದನ್ನು ಆ್ಯಪಲ್ ಕಂಪನಿಯು ಖಚಿತಪಡಿಸಿದೆ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರು ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ' ಎಂದು ರಾಯಿಟರ್ಸ್ ವರದಿ ಮಾಡಿದೆ.

'ತನ್ನ ಮೊಬೈಲ್‌ಗಳು ಅತ್ಯಂತ ಸುರಕ್ಷಿತ ಎಂದು ಆ್ಯಪಲ್ ಕಂಪನಿಯು ಹೇಳುತ್ತದೆ. ಹಾಗಿದ್ದ ಮೇಲೆ 'ಎಚ್ಚರಿಕೆ ಸೂಚನೆ'ಗಳನ್ನು ಯಾಕಾಗಿ ಕಳುಹಿಸುತ್ತದೆ. ಈ ಬಗ್ಗೆ ಕಂಪನಿಯು ಸ್ಪಷ್ಟನೆ ನೀಡಬೇಕು' ಎಂದು ಮಾಹಿತಿ ತಂತ್ರಜ್ಞಾನ ಸಚಿವಾಲಯದ ರಾಜ್ಯ ಖಾತೆ ಸಚಿವ ರಾಜೀವ್ ಚಂದ್ರಶೇಖರ್ ಅವರು ತಮ್ಮ 'ಎಕ್ಸ್' ಖಾತೆಯಲ್ಲಿ ಮಂಗಳವಾರ ಬರೆದುಕೊಂಡಿದ್ದರು. ಸಚಿವರ ಈ ಅಭಿಪ್ರಾಯದಲ್ಲಿ ಇದ್ದ ಅಂಶಗಳನ್ನೇ ಇಟ್ಟುಕೊಂಡು ಆ್ಯಪಲ್ ಕಂಪನಿಯ ಎಚ್ಚರಿಕೆ ಸೂಚನೆಗಳ ಬಗ್ಗೆ ತನಿಖೆ ನಡೆಸಲಾಗುತ್ತದೆ ಎಂದು ಸರ್ಕಾರ ಹೇಳಿದೆ.

ಒಬಿಸಿ ನಾಯಕರ ಜತೆ ಬಿಜೆಪಿ ವರಿಷ್ಠರ ಸಮಾಲೋಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿಯ ವಿವಿಧ ರಾಜ್ಯಗಳ ಇತರ ಹಿಂದುಳಿದ ವರ್ಗಗಳ (ಒಬಿಸಿ) ಸುಮಾರು 40 ನಾಯಕರ ಜತೆಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಗುರುವಾರ ಸಮಾಲೋಚನೆ ನಡೆಸಿದರು.

ಇಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮತ್ತಿತರರು ಭಾಗವಹಿಸಿದ್ದರು. ಕರ್ನಾಟಕದ ಪ್ರತಿನಿಧಿಗಳಾಗಿ ಬಿಜೆಪಿ ಮುಖಂಡ ಕೆ.ಎಸ್.ಈಶ್ವರಪ್ಪ, ಸಂಸದ ಪಿ.ಸಿ.ಮೋಹನ್, ವಿಧಾನ ಪರಿಷತ್ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ ಪಾಲ್ಗೊಂಡಿದ್ದರು. ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಕೇಂದ್ರ ಬಿಜೆಪಿ ಸರ್ಕಾರ ಕೈಗೊಂಡ ಕ್ರಮಗಳು, ಮುಂದಿನ ದಿನಗಳಲ್ಲಿ ಯಾವೆಲ್ಲ ಕಾರ್ಯಕ್ರಗಳನ್ನು ಅನುಷ್ಠಾನಗೊಳಿಸಬೇಕು ಎಂಬ ವಿಷಯದ ಬಗ್ಗೆ ಚರ್ಚಿಸಲಾಯಿತು. ಜಾತಿ ಜನಗಣತಿ, ಮೀಸಲಾತಿ ಬಗ್ಗೆಯೂ ರಾಜ್ಯಗಳ ಮುಖಂಡರಿಂದ ವರಿಷ್ಠರು ಮಾಹಿತಿ ಪಡೆದರು. ಹಿಂದುಳಿದ ವರ್ಗಗಳ ಆಯೋಗಗಳ ವರದಿ ಬಗ್ಗೆ ಸಮಾಲೋಚಿಸಿದರು ಎಂದು ಮೂಲಗಳು ತಿಳಿಸಿವೆ.

'ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಾತಿ ಗಣತಿ ನಡೆಸಲು ₹170 ಕೋಟಿ ಖರ್ಚು ಮಾಡಿದ್ದಾರೆ. ವರದಿ ಸಿದ್ಧವಾಗಿ ಏಳು ವರ್ಷ ಕಳೆದರೂ ಅದನ್ನು ಸ್ವೀಕಾರ ಮಾಡಿಲ್ಲ. ನವೆಂಬರ್‌ನಲ್ಲಿ ವರದಿ ಪಡೆಯುವುದಾಗಿ ಇದೀಗ ಹೇಳುತ್ತಿದ್ದಾರೆ. ವರದಿ ಸ್ವೀಕರಿಸದಂತೆ ಉಪಮುಖ್ಯಮಂತ್ರಿ, ಡಿಕೆಶಿ ಒತ್ತಡ ಹೇರುತ್ತಿದ್ದಾರೆ. ಸಿದ್ದರಾಮಯ್ಯ–ಶಿವಕುಮಾರ್ 'ಮೈತ್ರಿ' ಸರ್ಕಾರದಲ್ಲಿ ಉಂಟಾಗಿರುವ ಗೊಂದಲಗಳ ಬಗ್ಗೆ ವರಿಷ್ಠರಿಗೆ ಸಮಗ್ರವಾಗಿ ಮಾಹಿತಿ ನೀಡಲಾಯಿತು' ಎಂದು ಮುಖಂಡರೊಬ್ಬರು ತಿಳಿಸಿದರು.

ಬರ ಪರಿಹಾರಕ್ಕೆ ಮನವಿ: ಕೇಂದ್ರವು ಕರ್ನಾಟಕಕ್ಕೆ ಬರ ಪರಿಹಾರ ಮೊತ್ತವನ್ನು ಬಿಡುಗಡೆ ಮಾಡಬೇಕೆಂದು ಅಮಿತ್ ಶಾ, ಜೆ.ಪಿ.ನಡ್ಡಾ ಅವರಲ್ಲಿ ರಾಜ್ಯದ ಮುಖಂಡರು ಮನವಿ ಮಾಡಿದರು.

ಜೆ.ಪಿ.ನಡ್ಡಾ ಅವರಿಗೆ ಕೆ.ಎಸ್‌.ಈಶ್ವರಪ್ಪ ಮನವಿ ಸಲ್ಲಿಸಿದರು. ಪಿ.ಸಿ.ಮೋಹನ್ ಹಾಗೂ ಕೋಟ ಶ್ರೀನಿವಾಸ ಪೂಜಾರಿ ಇದ್ದಾರೆ

₹15 ಲಕ್ಷ ಲಂಚ ಪಡೆದ ಆರೋಪ: ಇ.ಡಿ ಅಧಿಕಾರಿ ಸೆರೆ

ಜೈಪುರ (ಪಿಟಿಐ): ವ್ಯಕ್ತಿಯೊಬ್ಬರಿಂದ ₹15 ಲಕ್ಷ ಲಂಚ ಪಡೆದ ಆರೋಪದ ಮೇಲೆ ಮಣಿಪುರದ ಇಂಫಾಲ್‌ನಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿ ಸೇರಿದಂತೆ ಇಬ್ಬರನ್ನು ರಾಜಸ್ಥಾನದ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ಗುರುವಾರ ಬಂಧಿಸಿದೆ.

ಬಂಧಿತರನ್ನು ಇ.ಡಿ ಅಧಿಕಾರಿ ನವಲ್ ಕಿಶೋರ್ ಮೀನಾ ಹಾಗೂ ರಾಜಸ್ಥಾನದಲ್ಲಿರುವ ಅವರ ಆಪ್ತ ಬಾಬುಲಾಲ್ ಮೀನಾ ಎಂದು ಗುರುತಿಸಲಾಗಿದೆ. ಚಿಟ್ ಫಂಡ್ ಪ್ರಕರಣವನ್ನು ಬಗೆಹರಿಸಿಕೊಳ್ಳಲು ವ್ಯಕ್ತಿಯೊಬ್ಬರಿಗೆ ಕಿಶೋರ್ ಅವರು ₹17 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದು, ₹15 ಲಕ್ಷ ಪಡೆದಿದ್ದರು ಎಂದು ಎಸಿಬಿ ಆರೋಪಿಸಿದೆ.

ಆ ಅಧಿಕಾರಿ ವಿರುದ್ಧ ಹಣ ಅಕ್ರಮ ವರ್ಗಾವಣೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತದೆ ಎಂದು ಇ.ಡಿ ಮೂಲಗಳು ತಿಳಿಸಿವೆ.

ಹೋರಾಟಗಾರ ಜರಾಂಗೆ ಆಮರಣ ನಿರಶನ ಅಂತ್ಯ

ಮರಾಠ ಮೀಸಲು: ಡಿ.24 ಗಡುವು

ಜಲ್ನಾ, ಮಹಾರಾಷ್ಟ್ರ (ಪಿಟಿಐ): ಮರಾಠ ಮೀಸಲಾತಿಗೆ ಪಟ್ಟು ಹಿಡಿದು ಒಂಬತ್ತು ದಿನಗಳಿಂದ ನಡೆಸುತ್ತಿದ್ದ ಆಮರಣಾಂತ ನಿರಶನವನ್ನು ಹೋರಾಟಗಾರ ಮನೋಜ್ ಜರಾಂಗೆ ಪಾಟೀಲ ಗುರುವಾರ ತಂಪುಪಾನೀಯ ಕುಡಿಯುವ ಮೂಲಕ ಅಂತ್ಯಗೊಳಿಸಿದರು.

ಮನೋಜ್ ಜರಾಂಗೆ

'ಮರಾಠರಿಗೆ ಮೀಸಲಾತಿ ನೀಡುವ ಕುರಿತು ಡಿಸೆಂಬರ್ 24ರೊಳಗೆ ತೀರ್ಮಾನಿಸಬೇಕು. ಇಲ್ಲದಿದ್ದರೆ ಮುಂಬೈಗೆ ಬೃಹತ್ ಪ್ರಮಾಣದ ಜಾಥಾ ಕೈಗೊಳ್ಳಲಾಗುವುದು' ಎಂದೂ ಸರ್ಕಾರಕ್ಕೆ ಗಡುವು ನೀಡಿದರು.

'ಮೀಸಲಾತಿಗಾಗಿ ಪ್ರತಿಭಟನೆಯು ತೀವ್ರಗೊಂಡರೆ ಮುಂಬೈನ ಜನರಿಗೆ ತರಕಾರಿಯೂ ಸಿಗುವುದಿಲ್ಲ. ಈಗ ನಾನು ಆಮರಣ ನಿರಶನವನ್ನಷ್ಟೇ ಅಂತ್ಯಗೊಳಿಸಿದ್ದೇನೆ. ಆದರೆ, ಪ್ರತಿಭಟನೆ, ಅನಿರ್ದಿಷ್ಟಾವಧಿ ಧರಣಿಯು ಮುಂದುವರಿಯಲಿದೆ' ಎಂದು ಅವರು ಹೇಳಿದರು.

ಇದಕ್ಕೂ ಮುನ್ನ ಅವರು ನಿರಶನ ನಡೆಸುತ್ತಿದ್ದ ಜಲ್ನಾ ಜಿಲ್ಲೆಯ ಅಂತರವಾಲಿ ಸರಾಟಿ ಗ್ರಾಮಕ್ಕೆ ಭೇಟಿ ನೀಡಿದ್ದ ಮಹಾರಾಷ್ಟ್ರದ ನಾಲ್ವರು ಸಚಿವರು, ಆಮರಣಾಂತ ನಿರಶನ ಕೈಬಿಡಲು ಮನವಿ ಮಾಡಿದ್ದರು.

ತೀರ್ಮಾನ ಕೈಗೊಳ್ಳಲು ಸರ್ಕಾರಕ್ಕೆ ನೀಡಿರುವ ಗಡುವನ್ನು ಜನವರಿ 2ವರೆಗೆ ವಿಸ್ತರಿಸಬೇಕು ಎಂದು ಸಚಿವರು ಮನವಿ ಮಾಡಿದರು. ಇದಕ್ಕೆ ಜರಾಂಗೆ ಅವರು ಸ್ಪಂದಿಸಲಿಲ್ಲ.

ಅಲ್ಲದೆ, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳಾದ ಸಂದೀಪ್ ಶಿಂದೆ, ಎಂ.ಜಿ.ಗಾಯಕ್ವಾಡ್ ಹಾಗೂ ಕೆಲ ಅಧಿಕಾರಿಗಳು ಜರಾಂಗೆ ಅವರನ್ನು ಭೇಟಿಯಾಗಿದ್ದರು.

'ಕುಣಬಿ ಜಾತಿ ಪ್ರಮಾಣ ಪತ್ರ' ಹಿಂತಿರುಗಿಸಲು ನಿರ್ಧಾರ: ಧಾರಾಶಿವ ಜಿಲ್ಲೆಯಲ್ಲಿ ನಡೆಯುತ್ತಿರುವ ಸಮೀಕ್ಷೆ ಬಳಿಕ ಮರಾಠ ಸಮುದಾಯದ ಸದಸ್ಯರೊಬ್ಬರಿಗೆ ಕುಣಬಿ ಜಾತಿ ಪ್ರಮಾಣ ಪತ್ರ ನೀಡಲಾಗಿದೆ. ಆದರೆ, ರಾಜ್ಯದ ಮರಾಠ ಸಮುದಾಯದ ಎಲ್ಲರಿಗೂ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಬೇಕು ಎಂದು ಒತ್ತಾಯಿಸಿ ಈ ಪ್ರಮಾಣ ಪತ್ರವನ್ನು ಅಧಿಕಾರಿಗಳಿಗೆ ವಾಪಸ್ ನೀಡಲು ಅವರು ನಿರ್ಧರಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಸರಿಯಾದವೆಲ್ಲವೂ ಜನಪ್ರಿಯವಲ್ಲದೇ ಇರಬಹುದು ಮತ್ತು ಜನಪ್ರಿಯವಾದವೆಲ್ಲವೂ ಸರಿಯಾದವು ಆಗಿರದೇ ಇರಬಹುದು.

–ಆಲ್ಬರ್ಟ್ ಐನ್‌ಸ್ಟೀನ್

ಪ್ರಜೆಗಳ ಮೇಲೆ ಕಣ್ಗಾವಲು ಪೊಲೀಸ್ ರಾಜ್ಯಕ್ಕೆ ದಾರಿ

ವಿರೋಧ ಪಕ್ಷಗಳ ಕೆಲವು ಪ್ರಮುಖರು, ಪತ್ರಕರ್ತರು ಹಾಗೂ ಇತರ ಕೆಲವರಿಗೆ ಆ್ಯಪಲ್ ಕಂಪನಿಯ ಕಡೆಯಿಂದ ಎಚ್ಚರಿಕೆಯ ಸಂದೇಶವೊಂದು ರವಾನೆಯಾಗಿದೆ. ಅವರ ಡಿಜಿಟಲ್ ಉಪಕರಣಗಳನ್ನು ‘ಸರ್ಕಾರಿ ಪ್ರಾಯೋಜಿತ ದಾಳಿಕೋರರು’ ಗುರಿಯಾಗಿಸಿಕೊಂಡಿದ್ದಾರೆ ಎಂದು ತಂತ್ರಜ್ಞಾನ ವಲಯದ ಬೃಹತ್ ಕಂಪನಿಯಾಗಿರುವ ಆ್ಯಪಲ್ ಈ ಎಚ್ಚರಿಕೆ ಸಂದೇಶದಲ್ಲಿ ಹೇಳಿದೆ. ಇದು ಪ್ರಜೆಗಳ ಮೇಲೆ, ಅದರಲ್ಲೂ ಮುಖ್ಯವಾಗಿ ವಿರೋಧ ಪಕ್ಷಗಳ ನಾಯಕರ ಮೇಲೆ ಪ್ರಭುತ್ವವು ಕಣ್ಗಾವಲು ಇರಿಸಿದೆ ಎಂಬ ವಿಚಾರವನ್ನು ಮತ್ತೆ ಮುನ್ನೆಲೆಗೆ ತಂದು ನಿಲ್ಲಿಸಿದೆ. ವಿರೋಧ ಪಕ್ಷಗಳ ನಾಯಕರು ಹಾಗೂ ಪತ್ರಕರ್ತರಿಗೆ ಈ ಸಂದೇಶವು ಕಂಪನಿಯ ಕಡೆಯಿಂದ ಸೋಮವಾರ ಬಂದಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ, ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್, ಕಾಂಗ್ರೆಸ್ ಸಂಸದ ಶಶಿ ತರೂರ್ ಮತ್ತು ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಇಂತಹ ಸಂದೇಶ ಸ್ವೀಕರಿಸಿದ ಕೆಲವು ಪ್ರಮುಖರು. ಈ ಸಂದೇಶವು ಕೆಲವು ಸಂದರ್ಭಗಳಲ್ಲಿ ತಪ್ಪಾಗಿರಲೂಬಹುದು ಎಂದು ಆ್ಯಪಲ್ ಕಂಪನಿಯು ನಂತರದಲ್ಲಿ ಸ್ಪಷ್ಟನೆ ನೀಡಿದೆ. ಆದರೆ ಇದು ಇಡೀ ವಿಚಾರದ ಗಾಂಭೀರ್ಯವನ್ನು ಕಡಿಮೆ ಮಾಡುವುದಿಲ್ಲ. ಆ್ಯಪಲ್ ಉಪಕರಣಗಳನ್ನು ಹ್ಯಾಕ್ ಮಾಡಲು ಪ್ರಯತ್ನ ನಡೆದಾಗ ಕಂಪನಿಯು ಇಂತಹ ಸಂದೇಶ ರವಾನಿಸುತ್ತದೆ. ಈ ವಿಚಾರವನ್ನು ಗಂಭೀರವಾಗಿ ಪರಿಶೀಲಿಸಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಈ ಎಚ್ಚರಿಕೆಯ ಸಂದೇಶವು ಭಾರತಕ್ಕೆ ಸೀಮಿತವಾದುದಲ್ಲ ಎಂದು ಕೂಡ ಹೇಳಿದೆ. ಕೇಂದ್ರ ಐ.ಟಿ. ಸಚಿವ ಅಶ್ವಿನಿ ವೈಷ್ಣವ್ ಅವರು ಈ ಕುರಿತು ತನಿಖೆಗೆ ಆದೇಶಿಸಲಾಗಿದೆ ಎಂದು ತಿಳಿಸಿದ್ದಾರೆ. ತನಿಖೆ ಆರಂಭವಾಗಿದೆ. ತನಿಖೆಯ ಭಾಗವಾಗುವಂತೆ ಆ್ಯಪಲ್‌ಗೆ ಸೂಚಿಸಲಾಗಿದೆ. ಇದೇ ಸಂದರ್ಭದಲ್ಲಿ ವೈಷ್ಣವ್ ಅವರು ವಿರೋಧ ಪಕ್ಷಗಳ ನಾಯಕರ ಮಾತುಗಳನ್ನು ‘ಅಸ್ಪಷ್ಟ’ ಎಂದು ಕರೆದಿದ್ದಾರೆ.



ವಿರೋಧ ಪಕ್ಷಗಳ ನಾಯಕರ ಮೇಲೆ ಕಣ್ಗಾವಲು ಇರಿಸುವ ಕೆಲಸವನ್ನು ಯಾವ ದೃಷ್ಟಿಯಿಂದಲೂ ಸಮರ್ಥಿಸಿಕೊಳ್ಳಲು ಆಗುವುದಿಲ್ಲ

ಪ್ರಜೆಗಳ ಮೇಲೆ ಅಕ್ರಮವಾಗಿ ಕಣ್ಗಾವಲು ಇರಿಸಲಾಗುತ್ತಿದೆ ಎಂಬ ಆರೋಪವು ಗಂಭೀರವಾಗಿ ಕೇಳಿಬಂದಿರುವುದು ಈಚಿನ ದಿನಗಳಲ್ಲಿ ಇದು ಎರಡನೆಯ ಬಾರಿ. ಇಸ್ರೇಲ್‌ನ ಪೆಗಾಸಸ್ ಕುತಂತ್ರಾಂಶ ಬಳಸಿ ಹಲವು ರಾಜಕಾರಣಿಗಳು, ಸಾಮಾಜಿಕ ಕಾರ್ಯಕರ್ತರು, ಪತ್ರಕರ್ತರ ಮೇಲೆ ಕಾನೂನು ಬಾಹಿರವಾಗಿ ಕಣ್ಗಾವಲು ಇರಿಸಲಾಗಿತ್ತು ಎಂಬ ಆರೋಪವು 2021ರಲ್ಲಿ ಬಂದಿತ್ತು. ಪೆಗಾಸಸ್ ಕುತಂತ್ರಾಂಶವನ್ನು ಪಡೆಯುವ ಶಕ್ತಿ ಇರುವುದು ಸರ್ಕಾರಗಳಿಗೆ ಮಾತ್ರ. ಆ ಸಂದರ್ಭದಲ್ಲಿ, ಈ ಆರೋಪಗಳನ್ನು ಸರ್ಕಾರವು ಅಲ್ಲಗಳೆದ ಬಗೆಯು ತೃಪ್ತಿಕರವಾಗಿ ಇರಲಿಲ್ಲ. ಈ ವಿಚಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರೂ ಪ್ರಶ್ನೆಗಳಿಗೆ ತೃಪ್ತಿಕರ ಉತ್ತರ ಸಿಕ್ಕಿರಲಿಲ್ಲ. ಈ ಆರೋಪದ ಬಗ್ಗೆ ತನಿಖೆ ನಡೆಸಲು ಕೋರ್ಟ್ ನೇಮಕ ಮಾಡಿದ್ದ ಸಮಿತಿಯೊಂದು, ಕುತಂತ್ರಾಂಶ ಬಳಕೆ ಮಾಡಿದ್ದನ್ನು ನಿರ್ಣಾಯಕವಾಗಿ ಸಾಬೀತು ಮಾಡುವ ಸಾಕ್ಷ್ಯಗಳು ಸಿಕ್ಕಿಲ್ಲ, ತನಿಖೆಗೆ ಸರ್ಕಾರವು ಸಹಕಾರ ನೀಡಿಲ್ಲ ಎಂದು ಹೇಳಿತು. ಸಮಿತಿ ನೀಡಿರುವ ಶಿಫಾರಸುಗಳನ್ನು ಪರಿಗಣಿಸುವುದಾಗಿ ಕೋರ್ಟ್ ಹೇಳಿದ್ದು, ಅದು ಶೀಘ್ರವೇ ವಿಚಾರಣೆಗೆ ಬರಲಿದೆ.

ಈಗ ಆ್ಯಪಲ್ ಕಂಪನಿಯು ರವಾನಿಸಿರುವ ಎಚ್ಚರಿಕೆಯ ಸಂದೇಶಗಳ ಬಗ್ಗೆ ಸರ್ಕಾರದ ಅಧೀನ ಸಂಸ್ಥೆಗಳೇ ತನಿಖೆ ನಡೆಸುವುದು ಸರಿಯಲ್ಲ. ಏಕೆಂದರೆ, ಕಣ್ಗಾವಲು ಇರಿಸಿರುವ ಆರೋಪ ಇರುವುದು ಸರ್ಕಾರದ ಮೇಲೆಯೇ. ವಿರೋಧ ಪಕ್ಷಗಳ ನಾಯಕರಿಗೆ ಮಾತ್ರ ಇಂತಹ ಎಚ್ಚರಿಕೆಯ ಸಂದೇಶಗಳು ಬಂದಿವೆ ಎಂಬುದನ್ನು ಗಮನಿಸಬೇಕು. ಕಣ್ಗಾವಲು, ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಿರ್ಬಂಧ, ಪ್ರತಿಭಟನೆಯ ಹಕ್ಕಿನ ಮೇಲೆ ದಾಳಿಯ ಮೂಲಕ ನಾಗರಿಕರ ಹಕ್ಕುಗಳ ಉಲ್ಲಂಘನೆಯ ಕಾರಣಕ್ಕೆ ಸರ್ಕಾರವು ಟೀಕೆಗಳಿಗೆ ಮತ್ತೆ ಮತ್ತೆ ಗುರಿಯಾಗಿದೆ. ಖಾಸಗಿತನದ ಹಕ್ಕು ಮೂಲಭೂತ ಹಕ್ಕುಗಳಲ್ಲಿ ಒಂದು. ಪ್ರಜೆಗಳ ಮೇಲೆ ಅಕ್ರಮವಾಗಿ ಕಣ್ಗಾವಲು ಇರಿಸುವುದು ಈ ಹಕ್ಕಿನ ಉಲ್ಲಂಘನೆ. ರಾಷ್ಟ್ರದ ಭದ್ರತೆಯ ದೃಷ್ಟಿಯಿಂದ ಕಣ್ಗಾವಲು ಇರಿಸುವ ಅಗತ್ಯ ಇರುತ್ತದೆ ಎಂಬ ಸಮರ್ಥನೆಯನ್ನು ಕೇಂದ್ರ ಸರ್ಕಾರ ಹಾಗೂ ಆಡಳಿತಾರೂಢ ಬಿಜೆಪಿಯ ಪ್ರತಿನಿಧಿಗಳು ನೀಡಿದ್ದಿದೆ. ಆದರೆ ವಿರೋಧ ಪಕ್ಷಗಳ ನಾಯಕರ ಮೇಲೆ ಕಣ್ಗಾವಲು ಇರಿಸುವ ಕೆಲಸವನ್ನು ಯಾವ ದೃಷ್ಟಿಯಿಂದಲೂ ಸಮರ್ಥಿಸಿಕೊಳ್ಳಲು ಆಗುವುದಿಲ್ಲ. ಸರ್ಕಾರದ ಟೀಕಾಕಾರರು ಹಾಗೂ ಕೆಲವು ಸಾಮಾಜಿಕ ಕಾರ್ಯಕರ್ತರ ಫೋನ್‌ನಲ್ಲಿ ಅವರ ವಿರುದ್ಧವಾಗಿ ಕೆಲವು ಸಾಕ್ಷ್ಯಗಳನ್ನು ತುರುಕಲು, ಆ ಫೋನ್‌ಗಳನ್ನು ಹ್ಯಾಕ್ ಮಾಡಲಾಗಿತ್ತು ಎಂಬ ಆರೋಪಗಳು ಇವೆ. ಪ್ರಜೆಗಳ ಮೇಲೆ ಕಣ್ಗಾವಲು ಇರಿಸಲು ಅನಿರ್ಬಂಧಿತ ಸ್ವಾತಂತ್ರ್ಯ ನೀಡುವುದರಿಂದ ‘ಪೊಲೀಸ್ ರಾಜ್ಯ’ದ ನಿರ್ಮಾಣ ಆಗುತ್ತದೆ. ಈ ಬಗೆಗಿನ ಕಳವಳಗಳು ಹೆಚ್ಚುತ್ತಿವೆ.

ದಿನದ ಟ್ವೀಟ್

ಆದ್ಯತೆ ಅರಿಯಿರಿ



30ರ ಆಸುಪಾಸಿನಲ್ಲಿ ಇರುವವರಿಗೆ 2 ಸಲಹೆಗಳು:

1. ಪೋಷಕರೊಂದಿಗೆ ಸಮಯ ಕಳೆಯಿರಿ. ಬರೀ ಇನ್‌ಸ್ಟಾಗ್ರಾಂ ಜೊತೆಗಲ್ಲ. ಒಂದಷ್ಟು ವರ್ಷಗಳ ಬಳಿಕ ಪೋಷಕರು ಇಲ್ಲದೇ ಹೋಗಬಹುದು, ಆದರೆ ಇನ್‌ಸ್ಟಾಗ್ರಾಂ ಇರುತ್ತದೆ.

2. ಮಕ್ಕಳ ನಗುವನ್ನು ನೋಡುವುದರಲ್ಲಿ ಸಮಯ ಕಳೆಯಿರಿ. ಬರೀ ಇನ್‌ಸ್ಟಾಗ್ರಾಂ ಜೊತೆಗಲ್ಲ. ಆ ಮುಗ್ಧ ನಗು ಕೆಲ ವರ್ಷಗಳ ಬಳಿಕ ಕಾಣಿಸದೇ ಹೋಗಬಹುದು, ಆದರೆ ಇನ್‌ಸ್ಟಾಗ್ರಾಂ ಇರುತ್ತದೆ. ಹೆಚ್ಚು ಖುಷಿಯಿಂದ ಇರುವುದರತ್ತ ಗಮನ ಕೇಂದ್ರೀಕರಿಸಿ.

ಡಾ. ಎ.ವೇಲುಮಣಿ, ಉದ್ಯಮಿ

ಕಿಡಿನುಡಿ



2018ರಿಂದ ಚುನಾವಣಾ ಬಾಂಡ್ ಮೂಲಕ ದೇಣಿಗೆ ನೀಡಿರುವವರ ಪೂರ್ಣ ಪಟ್ಟಿ ನೀಡುವಂತೆ ಸುಪ್ರೀಂ ಕೋರ್ಟ್ ಸೂಚಿಸಿ, ಅದನ್ನು ಸಾರ್ವಜನಿಕವಾಗಿ ಪ್ರಕಟಿಸಬಾರದೇಕೆ? ಈ ಬಾಂಡ್‌ನ ಸ್ವರೂಪವೇ ಎಷ್ಟು ಭ್ರಷ್ಟ ಮತ್ತು ಅಪಾಯಕಾರಿ ಎಂಬುದನ್ನು ಆ ಪಟ್ಟಿಯೇ ಬಯಲುಗೊಳಿಸುತ್ತದೆ! ಎಲ್ಲ ಆಪ್ತಮಿತ್ರರು, ಉದ್ದೇಶಪೂರ್ವಕ ಸುಸ್ತಿದಾರರು, ವಿದೇಶಿ ಸಂಸ್ಥೆಗಳು ಮತ್ತು ಪರಾರಿಯಾದವರೆಲ್ಲರ ಮಾಹಿತಿಯೂ ಹೊರಬೀಳುತ್ತದೆ.

ಸಂದೀಪ್ ಮನುಧಾನೆ, ಉದ್ಯಮಿ

25 ವರ್ಷಗಳ ಹಿಂದೆ

ಮಂಗಳವಾರ, 3-11-1998

• **ಗೈರುಹಾಜರಿ: ಸಚಿವರಿಗೆ ಎಚ್ಚರಿಕೆ**

ಬೆಂಗಳೂರು, ನ. 2– ಸದನದಲ್ಲಿ ಮಹತ್ವಪೂರ್ಣ ಚರ್ಚೆ ನಡೆಯುತ್ತಿರುವಾಗ ಸಚಿವರು ಮತ್ತು ಹಿರಿಯ ಅಧಿಕಾರಿಗಳು ಗೈರುಹಾಜರಾಗುವ ಪ್ರವೃತ್ತಿ ತೋರಿಸುತ್ತಿರುವ ಬಗ್ಗೆ ವಿಧಾನಸಭಾಧ್ಯಕ್ಷ ರಮೇಶ್ ಕುಮಾರ್ ತೀವ್ರವಾಗಿ ಅಸಮಾಧಾನಗೊಂಡು, ಇಂಥ ಘಟನೆಗಳು ಮರುಕಳಿಸಿದರೆ ಸುಮ್ಮನಿರಲು ಸಾಧ್ಯವಿಲ್ಲ ಎಂದು ಎಚ್ಚರಿಕೆ ನೀಡಿದ ಪ್ರಸಂಗ ವಿಧಾನಸಭೆಯಲ್ಲಿ ಇಂದು ನಡೆಯಿತು.

ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಅವಿಶ್ವಾಸ ನಿರ್ಣಯ ಪ್ರಸ್ತಾವದ ಮೇಲೆ ಮಾತನಾಡುತ್ತಿದ್ದಾಗ ಸಚಿವರೊಬ್ಬರು, ತಾವು ದೆಹಲಿಗೆ ಹೋಗಬೇಕಾಗಿರುವುದರಿಂದ ತಮಗೆ ಸದನದಿಂದ ತೆರಳಲು ಅನುಮತಿ ನೀಡಬೇಕು ಎಂದು ರಮೇಶ್ ಕುಮಾರ್ ಅವರಲ್ಲಿ ಮನವಿ ಮಾಡಿಕೊಂಡಾಗ ಅವರು ಸಿಡಿಮಿಡಿಗೊಂಡರು.

50 ವರ್ಷಗಳ ಹಿಂದೆ

ಶನಿವಾರ, 3-11-1973

• **ಆಟೊ ಕನಿಷ್ಠ ಪ್ರಯಾಣ ದರ 75 ಪೈಸೆ: ಟ್ಯಾಕ್ಸಿ ಒಂದೂಕಾಲು ರೂ.**

ಬೆಂಗಳೂರು, ನ. 2– ಇನ್ನು ಮೇಲೆ ಸಿಟಿ ಬಸ್ಸು, ಆಟೊರಿಕ್ಷಾ ಮತ್ತು ಟ್ಯಾಕ್ಸಿ ಪ್ರಯಾಣ ದುಬಾರಿ.

ಪೆಟ್ರೋಲ್, ಸೀಮೆಎಣ್ಣೆ ಬೆಲೆ ಏರಿಕೆ ಕಾರಣ ಸಿಟಿ ಬಸ್ಸು, ಆಟೊರಿಕ್ಷಾ ಹಾಗೂ ಟ್ಯಾಕ್ಸಿ ಪ್ರಯಾಣದ ದರಗಳನ್ನು ಹೆಚ್ಚಿಸಲು ರಾಜ್ಯ ಸರ್ಕಾರ ಒಪ್ಪಿಕೊಂಡಿದೆ ಎಂದು ಅಧಿಕೃತವಾಗಿ ತಿಳಿದುಬಂದಿದೆ.

ಪ್ರಯಾಣದ ದರಗಳನ್ನು ಹೆಚ್ಚಿಸಲು ರಾಜ್ಯದ ಸಾರಿಗೆ ಕಮೀಷನರರ ಅಧ್ಯಕ್ಷತೆಯಲ್ಲಿರುವ ರಾಜ್ಯ ಸಾರಿಗೆ ಅಧಿಕಾರ ಮಂಡಳಿ (ಆರ್.ಟಿ.ಎ) ಇಂದು ರಾಜ್ಯ ಸರ್ಕಾರಕ್ಕೆ ಸಲಹೆ ಮಾಡಿ, ವರದಿ ಸಲ್ಲಿಸಿದೆ.

ಈ ವರದಿಯ ರೀತ್ಯ, ಆಟೊರಿಕ್ಷಾ ಪ್ರಯಾಣದ ಕನಿಷ್ಠ ದರ 75 ಪೈಸೆ. ಜತೆಗೆ ಐದು ನಿಮಿಷ ‘ವೇಟಿಂಗಿಗೆ’ 35 ಪೈಸೆ ಎಂದು ತಿಳಿದುಬಂದಿದೆ.

• **ಸಮೃದ್ಧ ಕರ್ನಾಟಕ ನಿರ್ಮಾಣಕ್ಕೆ ಶ್ರಮಿಸಲು ರಾಜ್ಯಪಾಲರ ಕರೆ**

ಮೈಸೂರು, ನ. 2– ಕರ್ನಾಟಕದ ಭವ್ಯ ಪರಂಪರೆಗೆ ತಕ್ಕಂತೆ ನಡೆದುಕೊಂಡು ರಾಜ್ಯದ ನೈಸರ್ಗಿಕ ಸಂಪತ್ತು ಬಳಸಿಕೊಳ್ಳುವ ಮೂಲಕ ಸಮೃದ್ಧ ಕರ್ನಾಟಕವನ್ನು ನಿರ್ಮಿಸಬೇಕಾದ ಹೊಣೆಗಾರಿಕೆಯನ್ನು ರಾಜ್ಯಪಾಲ ಮೋಹನಲಾಲ್ ಸುಖಾಡಿಯಾ ಅವರು ಇಂದು ನೆನಪು ಮಾಡಿದರು.

ಕರ್ನಾಟಕ ರಾಜ್ಯೋತ್ಸವ ಕೇಂದ್ರ ಸಮಿತಿ ಏರ್ಪಡಿಸಿದ್ದ ಎರಡು ದಿನಗಳ ನಾಮಕರಣೋತ್ಸವ ಸಮಾರಂಭದ ಮುಕ್ತಾಯ ಸಭೆಯ ಅಧ್ಯಕ್ಷತೆ ವಹಿಸಿ, ಕನ್ನಡನಾಡು ನುಡಿಗೆ ವಿಶಿಷ್ಟ ಸೇವೆ ಸಲ್ಲಿಸಿದ 12 ಮಂದಿಗೆ ರಜತ ಫಲಕ ನೀಡಿದ ರಾಜ್ಯಪಾಲರು, ರಾಜ್ಯದ ಪುನರ್ ನಾಮಕರಣ ಆದರಷ್ಟೇ ಸಾಲದು ಎಂದರು.

ಸರ್ಕಾರವು ‘ವಿಕೇಂದ್ರೀಕೃತ ಪಾಲ್ಗೊಳ್ಳುವಿಕೆ’ ಆಡಳಿತ ಮಾದರಿಯನ್ನು ಅನುಸರಿಸಬೇಕಾಗಿದೆ

ಜನರಿಗೆ ಪಾಲ್ಗೊಳ್ಳುವಿಕೆಯ ಭಾಗ್ಯ ಕೊಡಿ!

ವಿಶ್ಲೇಷಣೆ

ಸಂತೋಷ ನರಗುಂದ

ದೇಶದಲ್ಲಿಯೇ ಅತಿಹೆಚ್ಚು ನಗರೀಕರಣಗೊಂಡಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ 45ಕ್ಕಿಂತ ಹೆಚ್ಚು ಮಂದಿ ಬೆಂಗಳೂರು ಸೇರಿದಂತೆ 315 ದೊಡ್ಡ, ಸಣ್ಣ ನಗರ ಮತ್ತು ಪಟ್ಟಣಗಳಲ್ಲಿ ನೆಲೆಸಿದ್ದಾರೆ. ಒಂದು ರಾಜ್ಯವು ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ರಾಷ್ಟ್ರ-ಮಟ್ಟದಲ್ಲಿ ಹಾಗೂ ಜಾಗತಿಕವಾಗಿ ಯಶಸ್ಸು ಪಡೆಯುವಲ್ಲಿ ನಗರಗಳು ವಿಶೇಷ ಪಾತ್ರ ವಹಿಸುತ್ತವೆ. ನಗರಗಳನ್ನು ಆರ್ಥಿಕತೆಯ ‘ಎಂಜಿನ್’ಗಳು ಎಂದೇ ಗುರುತಿಸಲಾಗುತ್ತದೆ. ನಗರಗಳಿಂದ ಅತಿಹೆಚ್ಚು ತೆರಿಗೆ ಕೂಡ ಸಂಗ್ರಹವಾಗುತ್ತದೆ. ಅವು ರಾಜ್ಯದ ಸಂಸ್ಕೃತಿಯ ಕೇಂದ್ರಗಳೂ ಹೌದು. ಆದ್ದರಿಂದ, ಉತ್ಕೃಷ್ಟ ಮೂಲಸೌಕರ್ಯ ಹಾಗೂ ನಾಗರಿಕ ಸೇವೆಗಳನ್ನು ಕಲ್ಪಿಸುವ ಮೂಲಕ ನಗರಗಳ ಜೀವನಮಟ್ಟವನ್ನು ಸುಧಾರಿಸಲು ಹೆಚ್ಚಿನ ಆಸ್ಥೆಯಿಂದ ಕ್ರಮ ಕೈಗೊಳ್ಳುವುದು ಅತಿ ಅವಶ್ಯವಾಗಿದೆ.

ಇತ್ತೀಚಿನ ವರ್ಷಗಳಲ್ಲಿ ನಮ್ಮ ನಗರಗಳ ಸ್ಥಿತಿ ದಯನೀಯವಾಗುತ್ತಿದೆ. ಬಹುತೇಕ ನಗರಗಳು ಹದಗೆಟ್ಟ ರಸ್ತೆ, ನೀರಿನ ಕೊರತೆ, ಒಳಚರಂಡಿ ವ್ಯವಸ್ಥೆಯ ದುಃಸ್ಥಿತಿ, ಕಸದ ಅಸಮರ್ಪಕ ವಿಲೇವಾರಿ, ಉದ್ಯಾನ, ಆಟದ ಮೈದಾನ ಹಾಗೂ ಸರ್ಕಾರಿ ಜಮೀನು ಒತ್ತುವರಿಯಂತಹ ಅನೇಕ ಸವಾಲುಗಳನ್ನು ಎದುರಿಸುತ್ತಿವೆ. ಇದರೊಂದಿಗೆ, ದಿನೇದಿನೇ ಹೆಚ್ಚುತ್ತಿರುವ ಹವಾಮಾನ ವೈಪರೀತ್ಯದ ಪ್ರತಿಕೂಲ ಪರಿಣಾಮಗಳು ನಗರಗಳನ್ನು ಕಾಡುತ್ತಿವೆ. ಈ ಎಲ್ಲ ಸವಾಲುಗಳನ್ನು ಸಮರ್ಥವಾಗಿ ನಿರ್ವಹಿಸಿ, ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿ, ನಗರ, ಪಟ್ಟಣಗಳನ್ನು ಅಭಿವೃದ್ಧಿಪಡಿಸಿ ರಾಜ್ಯದ ಜನರ ಜೀವನಮಟ್ಟವನ್ನು ಏರಿಸಬೇಕಾದರೆ, ಸರ್ಕಾರವು ಸ್ಥಳೀಯ ಮತ್ತು ನೆರೆಹೊರೆಯ ಮಟ್ಟದಲ್ಲಿ ವಿಕೇಂದ್ರೀಕೃತ ಪಾಲ್ಗೊಳ್ಳುವಿಕೆ ಆಡಳಿತ (ಪಾರ್ಟಿಸಿಪೇಟರಿ ಗವರ್ನೆನ್ಸ್) ಮಾದರಿಯನ್ನು ಅನುಸರಿಸುವ ಅವಶ್ಯಕತೆ ಇದೆ.

ಅಭಿವೃದ್ಧಿ ಹೊಂದಿದ ಸ್ವೀಡನ್, ಆಸ್ಟ್ರೇಲಿಯಾ, ಅಮೆರಿಕ, ಕೆನಡಾದಂತಹ ರಾಷ್ಟ್ರಗಳಲ್ಲಿ ಸ್ಥಳೀಯ ಆಡಳಿತಕ್ಕೆ ಸಂಬಂಧಿಸಿದ ನಿರ್ಣಯಗಳನ್ನು ನಾಗರಿಕರ ಸಹಭಾಗಿತ್ವದ ಮೂಲಕವೇ ಕೈಗೊಳ್ಳಲಾಗುತ್ತದೆ. ಸ್ಥಳೀಯ ಸಮಸ್ಯೆಗಳ ನಿವಾರಣೆಗೆ ಸ್ಥಳೀಯರ ಪಾಲ್ಗೊಳ್ಳುವಿಕೆ ಒಳಗೊಂಡ ವಿಕೇಂದ್ರೀಕೃತ ವೇದಿಕೆಗಳು ಅಗತ್ಯ. ರಾಜ್ಯ ಸರ್ಕಾರವು ವಿವಿಧ ಕಾರ್ಯಕ್ರಮಗಳ ಮೂಲಕ ಆಡಳಿತ ವ್ಯವಸ್ಥೆಯನ್ನು ಚುರುಕುಗೊಳಿಸಲು ವಿಶೇಷ ಕಾಳಜಿ ವಹಿಸುತ್ತಿದ್ದು, ಈ ದಿಸೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಇತ್ತೀಚೆಗೆ ನಡೆದ ಮೊದಲ ‘ಜನತಾದರ್ಶನ’ ಗಮನಾರ್ಹ. ಅಲ್ಲಿ ಸ್ವೀಕೃತವಾದ ಅಹವಾಲುಗಳ ಪೈಕಿ ಕಂದಾಯ, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ಪೌರಾಡಳಿತ ಇಲಾಖೆಗಳಿಗೆ ಸಂಬಂಧಿಸಿದ ಅರ್ಜಿಗಳದ್ದೇ ದೊಡ್ಡ ಪಾಲು ಎಂದು ವರದಿಯಾಗಿದೆ. ಇವುಗಳಿಗೆ ಹಳ್ಳಿಗಳಲ್ಲಿ ಗ್ರಾಮಸಭೆ, ನಗರಗಳಲ್ಲಿ ವಾರ್ಡ್ ಸಮಿತಿ ಮತ್ತು ಪ್ರದೇಶ (ಏರಿಯಾ) ಸಮಿತಿಯಂತಹ ವಿಕೇಂದ್ರೀಕೃತ ಸಾಂಸ್ಥಿಕ ವೇದಿಕೆಗಳ ಮೂಲಕ ಪರಿಹಾರ ಒದಗಿಸುವುದು ಪರಿಣಾಮಕಾರಿ, ಪಾರದರ್ಶಕ ಹಾಗೂ ಸುಸ್ಥಿರ ವಿಧಾನವಾಗುವುದು.

ರಾಜ್ಯದ ನಗರಗಳಲ್ಲಿರುವ 7,000ಕ್ಕೂ ಹೆಚ್ಚು ವಾರ್ಡ್‌ಗಳು ನಗರ ಸ್ಥಳೀಯ ಆಡಳಿತದ ವಿಕೇಂದ್ರೀಕೃತ ಘಟಕಗಳಾಗಿವೆ. 1993ರಲ್ಲಿ ಸಂವಿಧಾನಕ್ಕೆ 74ನೇ ತಿದ್ದುಪಡಿ ತಂದು ಜಾರಿಗೊಳಿಸಲಾದ 243ಎಸ್ ವಿಧಿ ಮತ್ತು ಕರ್ನಾಟಕ ಮಹಾನಗರಪಾಲಿಕೆಗಳ ಅಧಿನಿಯಮ– 1976ರ ಪ್ರಕಾರ, ಎಲ್ಲ ಮಹಾನಗರಗಳ ಪ್ರತಿಯೊಂದು ವಾರ್ಡಿನಲ್ಲೂ ಪಾಲಿಕೆ ಸದಸ್ಯರ ಅಧ್ಯಕ್ಷತೆಯಲ್ಲಿ ಸ್ಥಳೀಯ ನಾಗರಿಕ ಕ್ಷೇಮಾಭಿವೃದ್ಧಿ ಸಂಘ ಹಾಗೂ ಮಹಿಳೆಯರು, ಹಿಂದುಳಿದ ವರ್ಗದವರು, ಸಾಮಾನ್ಯ ವರ್ಗದವರನ್ನು ಪ್ರತಿನಿಧಿಸುವ ಸಕ್ರಿಯ ನಾಗರಿಕರನ್ನು ಒಳಗೊಂಡ ವಾರ್ಡ್ ಸಮಿತಿಯ ರಚನೆ ಕಡ್ಡಾಯವಾಗಿದೆ.

ಅದೇರೀತಿ ಒಂದು ಅಥವಾ ಅದಕ್ಕಿಂತ ಹೆಚ್ಚು ಮತಗಟ್ಟೆ ವ್ಯಾಪ್ತಿಯ ಎಲ್ಲ ಮನೆಗಳನ್ನೂ ಒಳಗೊಂಡ ಪ್ರದೇಶ ಸಮಿತಿಗಳ ರಚನೆ ಕೂಡ ಕಾನೂನಾತ್ಮಕವಾಗಿ ಕಡ್ಡಾಯವಾಗಿದೆ. ಈ ವೇದಿಕೆಗಳು ಸ್ಥಳೀಯರ ಕುಂದು-ಕೊರತೆಗಳಿಗೆ ಪರಿಹಾರದ ಜೊತೆಗೆ, ರಸ್ತೆ, ಪಾದಚಾರಿ ಮಾರ್ಗ, ಬೀದಿದೀಪ ನಿರ್ವಹಣೆ ಮತ್ತು ದುರಸ್ತಿ, ಉದ್ಯಾನ, ಸಾರ್ವಜನಿಕ ಶೌಚಾಲಯ, ಬಸ್ ನಿಲ್ದಾಣ ನಿರ್ಮಾಣದಂತಹ ಸರ್ಕಾರಿ ಯೋಜನೆಗಳ ಅನುಷ್ಠಾನದಲ್ಲಿ ಪಾರದರ್ಶಕತೆ ತರುತ್ತವೆ. ಅಲ್ಲದೆ, ಕಾರ್ಯವಿಳಂಬ ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ವಾರ್ಡ್ ಸಮಿತಿಗಳ ಮೂಲಕ ಸರ್ಕಾರಿ ಯೋಜನೆಗಳ ಕುರಿತು ಮಾಹಿತಿ ಮತ್ತು ಹಣಕಾಸಿನ ವಿವರ ಕಾಲಕಾಲಕ್ಕೆ ಪ್ರಕಟಗೊಳ್ಳುವ ವ್ಯವಸ್ಥೆ ಇದೆ. ಹೀಗಾಗಿ ಅವು ಸರ್ಕಾರ, ಆಡಳಿತ ವ್ಯವಸ್ಥೆ ಹಾಗೂ ಜನಪ್ರತಿನಿಧಿಗಳ ಮೇಲಿನ ಜನರ ನಂಬಿಕೆಯನ್ನು ಹೆಚ್ಚಿಸಲು ಅವಕಾಶ ಮಾಡಿಕೊಡುತ್ತವೆ. ವಾರ್ಡ್ ಸಮಿತಿ ಮತ್ತು ಪ್ರದೇಶ ಸಮಿತಿಗಳ ಮಾಸಿಕ, ತ್ರೈಮಾಸಿಕ ಸಭೆಗಳು ನಿಯಮಿತವಾಗಿ ನೆರವೇರಿದರೆ, ವರ್ಷಕ್ಕೆ ಸರಿಸುಮಾರು 1.5 ಲಕ್ಷ ಸಭೆಗಳನ್ನು ನಡೆಸಿದಂತೆ ಆಗುತ್ತದೆ. ಈ ಮೂಲಕ ಸರ್ಕಾರವನ್ನು ನಗರ ಪ್ರದೇಶಗಳಲ್ಲಿರುವ ಬಡಾವಣೆ- ಓಣಿಗಳ ಹೊಸಿಲಿಗೆ ಕೊಂಡೊಯ್ದು, ನಾಗರಿಕರಿಗೆ ನಿಜವಾದ ಸ್ವರಾಜ್ ವ್ಯವಸ್ಥೆ ಕಲ್ಪಿಸಲು ಸಾಧ್ಯವಾಗುತ್ತದೆ.

ಹೀಗೆ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಅನಿವಾರ್ಯಗೊಳಿಸುವುದಕ್ಕೆ ಪೂರಕವಾದ ಸಂವಿಧಾನ ತಿದ್ದುಪಡಿ ಜಾರಿಗೆ ಬಂದು ಮೂರು ದಶಕಗಳೇ ಆಗಿವೆ. ಆದರೆ, ವಾರ್ಡ್ ಮತ್ತು ಪ್ರದೇಶ ಸಮಿತಿಗಳ ರಚನೆ ಹಾಗೂ ಅವುಗಳಿಗೆ ಸಂಬಂಧಿಸಿದ ಕಾನೂನಿನ ಅನುಷ್ಠಾನದ ಸ್ಥಿತಿಗತಿ ಕುರಿತು ಜನಾಗ್ರಹ ಸೆಂಟರ್ ಫಾರ್ ಸಿಟಿಜನ್‌ಶಿಪ್ ಆ್ಯಂಡ್ ಡೆಮಾಕ್ರಸಿ ಸಂಸ್ಥೆ ಕೈಗೊಂಡಿದ್ದ ಅಧ್ಯಯನದ ಫಲಿತಾಂಶಗಳು ಬೆಚ್ಚಿ-ಬೀಳಿಸುವಂತಿವೆ. ಬೆಂಗಳೂರು ಮತ್ತು ಮಂಗಳೂರು ಮಹಾನಗರಗಳನ್ನು ಹೊರತುಪಡಿಸಿ, ರಾಜ್ಯದ ಉಳಿದ ಒಂಬತ್ತು ಮಹಾನಗರಗಳಲ್ಲಿ ಇನ್ನೂ ವಾರ್ಡ್ ಸಮಿತಿಗಳ ರಚನೆಯಾಗಿಲ್ಲ. ಕರ್ನಾಟಕ ವಾರ್ಡ್ ಸಮಿತಿ ಬಳಗ ಮತ್ತು ಅನೇಕ ನಾಗರಿಕ ಸೇವಾ ಸಂಸ್ಥೆಗಳ ತೀವ್ರ ಒತ್ತಾಯಕ್ಕೆ ಸ್ಪಂದಿಸಿ, ಕಲಬುರಗಿ, ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಬಳ್ಳಾರಿಯಂತಹ ಮಹಾನಗರಗಳಲ್ಲಿ ಒಂದೂವರೆ ವರ್ಷದ ಹಿಂದೆ ವಾರ್ಡ್ ಸಮಿತಿ ಸದಸ್ಯತ್ವಕ್ಕೆ ಮಹಾನಗರ ಪಾಲಿಕೆಗಳು ಅರ್ಜಿಗಳನ್ನು ಆಹ್ವಾನಿಸಿದ್ದವು. ಸಾವಿರಾರು ಜನ ಅಧಿಕೃತವಾಗಿ ಅರ್ಜಿಗಳನ್ನು ಸಲ್ಲಿಸಿದ್ದರೂ ಅಲ್ಲಿ ಈವರೆಗೆ ಸಮಿತಿಗಳು ಮಾತ್ರ ರಚನೆಗೊಂಡಿಲ್ಲ.

ಇನ್ನು ತುಮಕೂರು, ದಾವಣಗೆರೆ, ಮೈಸೂರಿನಂತಹ ಮಹಾನಗರಗಳಲ್ಲಿ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸದೆ, ಪಾಲಿಕೆ ಸದಸ್ಯರ ಮೂಲಕ ವಾರ್ಡ್ ಸಮಿತಿ ಸದಸ್ಯರ ಪಟ್ಟಿಯನ್ನು ಅತ್ಯಂತ ಗೋಪ್ಯವಾಗಿ ಸಿದ್ಧಪಡಿಸಿ ಅನುಮೋದನೆ ನೀಡಲಾಗಿದೆ. ವರ್ಷಗಳೇ ಕಳೆದಿದ್ದರೂ ಅಲ್ಲಿ ಇನ್ನೂ ವಾರ್ಡ್ ಸಮಿತಿ ಸಭೆಗಳು ಪ್ರಾರಂಭವಾಗಿಯೇ ಇಲ್ಲ. ಮಹಾನಗರಗಳ ಸ್ಥಿತಿಯೇ ಹೀಗಿರುವಾಗ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ ಸ್ಥಿತಿ ಎಷ್ಟು ಕೆಟ್ಟದ್ದಾಗಿರಬಹುದು ಎಂದು ಊಹಿಸುವುದು ಕಷ್ಟವೇನಲ್ಲ.

ರಾಜ್ಯದ ಮಧ್ಯಮ ಮತ್ತು ಸಣ್ಣ ನಗರಗಳಲ್ಲಿ ನಾಗರಿಕರ ಪಾಲ್ಗೊಳ್ಳುವಿಕೆಗೆ ಅನುವು ಮಾಡಿಕೊಡಲು 2020ರಲ್ಲಿ ಕರ್ನಾಟಕ ಪೌರ ಸಂಸ್ಥೆಗಳ ಅಧಿನಿಯಮ– 1964ಕ್ಕೆ ತಿದ್ದುಪಡಿ ತರಲಾಗಿದೆ. ಆದರೆ, ಮೂರು ವರ್ಷ ಕಳೆದರೂ ಈ ಸಾಂಸ್ಥಿಕ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರಲು ಅಗತ್ಯವಿರುವ ನಿಯಮಗಳನ್ನು ಸರ್ಕಾರ ಇನ್ನೂ ಪ್ರಕಟಿಸಿಲ್ಲ. ಇಂತಹ ಉದಾಸೀನ ಧೋರಣೆಯಿಂದ, ರಾಜ್ಯದ 3 ಕೋಟಿ ಪ್ರಜೆಗಳಿಗೆ ಅಭಿವೃದ್ಧಿ ಯೋಜನೆಗಳಲ್ಲಿ ಜನಪ್ರತಿನಿಧಿಗಳು ಮತ್ತು ಸರ್ಕಾರದ ಜೊತೆಗೂಡಿ ಕೆಲಸ ಮಾಡಲು, ತಮ್ಮ ಸಮಸ್ಯೆಗಳನ್ನು ಅಡಚಣೆಗಳಿಲ್ಲದೆ ಪರಿಹರಿಸಿಕೊಳ್ಳಲು ಔಪಚಾರಿಕ ವೇದಿಕೆ ಇದ್ದರೂ ಇಲ್ಲದಂತಾಗಿದೆ.

ವಾರ್ಡ್ ಸಮಿತಿ ಮತ್ತು ಪ್ರದೇಶ ಸಮಿತಿ ಸಭೆಗಳಿಗೆ ಅಗತ್ಯವಿರುವ ಆಡಳಿತಾತ್ಮಕ ಹಾಗೂ ಆರ್ಥಿಕ ನೆರವು ನೀಡಿ, ಅವುಗಳನ್ನು ಸದೃಢಗೊಳಿಸಿ ಪೋಷಿಸುವುದು ರಾಜ್ಯ ಸರ್ಕಾರದ ಆದ್ಯತೆಯ ಪಟ್ಟಿಯಲ್ಲಿ ಇರಬೇಕು. ಈ ದಿಸೆಯಲ್ಲಿ, ನಗರಾಭಿವೃದ್ಧಿ ಮತ್ತು ಪೌರಾಡಳಿತ ಇಲಾಖೆಗಳಿಂದ ನಗರ ಸ್ಥಳೀಯ ಸಂಸ್ಥೆಗಳಿಗೆ ಅಗತ್ಯವಿರುವ ಮಾರ್ಗಸೂಚಿಗಳು ಮತ್ತು ನಿಯಮಗಳನ್ನು ಕೂಡಲೇ ಲಭ್ಯವಾಗಿಸಬೇಕು. ಈ ಮೂಲಕ, ನಗರ ಪ್ರದೇಶಗಳಲ್ಲಿ ವಾಸವಾಗಿರುವ ರಾಜ್ಯದ ಅರ್ಧಭಾಗದಷ್ಟು ಜನಸಂಖ್ಯೆಯನ್ನು ಆಡಳಿತ ವ್ಯವಸ್ಥೆಯ ಜೊತೆಗೆ ಜೋಡಿಸುವ ಸಾರ್ವಜನಿಕ ಸಹಭಾಗಿತ್ವ ವ್ಯವಸ್ಥೆಯನ್ನು ಬಲಪಡಿಸಬೇಕು. ಕರ್ನಾಟಕವನ್ನು ಪಾಲ್ಗೊಳ್ಳುವಿಕೆಯ ಮಾದರಿ ರಾಜ್ಯವನ್ನಾಗಿ ಬೆಳೆಸಲು ರಾಜ್ಯ ಸರ್ಕಾರ ಆದ್ಯತೆಯ ಮೇರೆಗೆ ಕ್ರಮ ಜರುಗಿಸಬೇಕು.

ಲೇಖಕ: ಮುಖ್ಯಸ್ಥ, ನಾಗರಿಕ ಸಹಭಾಗಿತ್ವ ವಿಭಾಗ, ಜನಾಗ್ರಹ ಸೆಂಟರ್ ಫಾರ್ ಸಿಟಿಜನ್‌ಶಿಪ್ ಆ್ಯಂಡ್ ಡೆಮಾಕ್ರಸಿ

ಚುರುಮುರಿ

ಹ್ಯಾಕು- ಟಾಕು!

• ಬಿ.ಎನ್.ಮಲ್ಲೇಶ್

‘ಗುಡ್ಡೆ ಭಾಯ್, ಈ ಹ್ಯಾಕು ಮತ್ಲಬ್ ಕ್ಯಾ ಹೈ? ನಮ್ ರಾಹುಲ್ ಗಾಂಧಿ ಸಾಬ್‌ದು ಫೋನು ಹ್ಯಾಕ್ ಆಗೇತಿ ಅಂತ ಪೇಪರ್‌ನಾಗೆ ಬಂದಿತ್ತು’ ಹರಟೆಕಟ್ಟೆಯಲ್ಲಿ ಗೌಸು ಕೇಳಿದ.

‘ಅದಾ? ನೀನು ಮೊಬೈಲ್‌ನಲ್ಲಿ ಮಾತಾಡೋದ್ನೆಲ್ಲ ಬೇರೇರು ಕದ್ದು ಕೇಳಿಸ್ಕಂಡ್ರೆ ಅದ್ನ ಹ್ಯಾಕ್ ಅಂತಾರೆ’ ಗುಡ್ಡೆ ಹೇಳಿದ.

‘ಓ ಕೈಸೆ? ನಮ್ದುಕೆ ಮನೇಲಿ ನಾವು ಕುಂತು ಮಾತಾಡಿದ್ರೆ ಅಲ್ಲಿ ಅವರೆಂಗೆ ಕೇಳಿಸ್ಕಂತಾರೆ?’

‘ಅದಕ್ಕೆಲ್ಲ ಟೆಕ್ನಾಲಜಿ ಅದಾವು ಕಣಲೆ’.

‘ನಮ್ ಫೋನು ಒಳಗೆ ಅವ್ರು ಹೆಂಗೆ ಅಂತ...’

‘ಥೋ... ಮೊಬೈಲ್ ಟವರ್ ಹತ್ತಿ ಕೇಳಿಸ್ಕಂತಾರೆ ಅನ್ನಾ, ನಿನಿಗೇಳಾದು ಕಷ್ಟಾತಪ’ ಗುಡ್ಡೆ ತಲೆ ಒಗೆದ.

‘ಲೇ ಗೌಸು, ನಿನ್ ಫೋನಿಗೆ ಪೂನಾದಿಂದ ಯಾರಾದ್ರು ರೊಕ್ಕ ಹಾಕಿದ್ರೆ ಬರ್ತತೋ ಇಲ್ಲೋ? ನಿನ್ ಫೋನ್‌ನಾಗಿದ್ದ ರೊಕ್ಕನ ಒಂದ್ಸಲ ಯಾರೋ ಕದ್ದಿದ್ರು ನೆನಪೈತಾ? ಹೆಂಗ್ ಕದ್ರು? ಅದೇ ತರ ಕದ್ದು ಕೇಳಿಸ್ಕಳಾಕೂ ಬರ್ತತಿ. ಅದ್ನೇ ಹ್ಯಾಕ್ ಅಂತಾರೆ’ ಅಂದ ಪರ್ಮೇಶಿ.

‘ಹಂಗಾದ್ರೆ ನಾವೂ ಬೇರೆ ಮಂದೀದು ಕದ್ದು ಕೇಳಿಸ್ಕಾಬೋದಾ?’

‘ಆಗಲ್ಲ, ಗೌರ್ಮೆಂಟ್‌ನೋರಿಗೆ ಮಾತ್ರ ಆ ಪವರ್ ಇರೋದು’.

‘ಐಸೆ ಕರೆತೋ ಅವರಿಗೇನ್ ಲಾಭ?’

‘ಈಗ ನೀನು ಆ್ಯಪಲ್ ಖರೀದಿಗೆ ಟೆಂಡರ್ ಹಾಕ್ತೀಯಲ್ಲ, ನಿನ್ ರೇಟ್‌ನ ಬೇರೇರು ಕದ್ದು ಕೇಳಿಸ್ಕಂಡು ನಿನಗಿಂತ ಕಮ್ಮಿ ರೇಟ್ ಹಾಕಿ ಟೆಂಡರ್ ಹೊಡ್ಕಂಡ್ರೆ ಅವರಿಗೆ ತಾನೇ ಲಾಭ? ಹಂಗೇ ಬೇರೆ ಪಕ್ಷದೋರ ಸೀಕ್ರೆಟ್‌ನೆಲ್ಲ ಅವರಿಗೆ ಗೊತ್ತಿಲ್ಲದಂಗೆ ಇನ್ನೊಂದು ಪಕ್ಷದೋರು ತಿಳ್ಕಂಡ್ರೆ ಅದೇ ಹ್ಯಾಕು’ ಪರ್ಮೇಶಿ ವಿವರಿಸಿದ.

‘ಓ... ಅಬ್ ಪೂರಾ ಸಮಜ್ ಹೋಗಯ. ಈಗ ಎಲ್ಲ ಅರ್ಥಾತು’ ಗೌಸು ನಕ್ಕ.

‘ಲೇ ಗೌಸು, ರಾಜ್ಯೋತ್ಸವ ನಡೆದೈತಿ, ಈಗ್ಲಾದ್ರು ಸರಿಯಾಗಿ ಕನ್ನಡ ಮಾತಾಡಲೆ’ ದುಬ್ಬೀರ ಆಕ್ಷೇಪಿಸಿದ. ಗೌಸ್‌ಗೆ ಸಿಟ್ಟು ಬಂತು, ‘ಅರೆ, ನಿನಿಗೇನ್ ತೆಲಿ ಬರಾಬರ್ ಐತಿಲ್ಲೋ. ನಾನು ಕನ್ನಡಾನೇ ಮಾತಾಡ್ತಿರೋದು’ ಎಂದ. ದುಬ್ಬೀರ, ಗುಡ್ಡೆ ಪಿಟಕ್ಕನ್ನಲಿಲ್ಲ.

ಸಂಗತ

ಕಾಳಜಿಯ ಹೆಸರಿನಲ್ಲಿ ‘ಗೃಹಬಂಧನ’!

ಮನೆಯಿಂದ ಹೊರಗೆ ಹೋದರೆ ಹೇಗೋ ಏನೋ ಎಂಬ ಭೀತಿಯಿಂದ ಹಿರಿಯರ ಚಲನವಲನಗಳ ಮೇಲೆ ನಿರ್ಬಂಧ ಹೇರುವುದು ತರವಲ್ಲ

• ಮಲ್ಲಿಕಾರ್ಜುನ ಹೆಗ್ಗಳಗಿ

ವಿಶ್ವವಿದ್ಯಾಲಯವೊಂದರಲ್ಲಿ ಒಳ್ಳೆಯ ಪ್ರಾಧ್ಯಾಪಕ ಎಂದು ಹೆಸರು ಪಡೆದು ನಿವೃತ್ತಿ ಹೊಂದಿರುವ ಸ್ನೇಹಿತರೊಬ್ಬರಿಗೆ ಫೋನ್ ಮಾಡಿ, ‘ಬಹಳ ದಿನಗಳಿಂದ ಯಾವ ಕಾರ್ಯಕ್ರಮದಲ್ಲಿಯೂ ಕಾಣಿಸಿಕೊಂಡಿಲ್ಲವಲ್ಲ, ಯಾಕೆ?’ ಎಂದೆ. ಗೆಳೆಯ ನಿಟ್ಟುಸಿರುಬಿಡುತ್ತಿರುವುದು ಫೋನಿನಲ್ಲಿಯೇ ಗೊತ್ತಾಯಿತು.

ನಿಧಾನಕ್ಕೆ ಹೇಳತೊಡಗಿದರು, ‘ನಾನು ಡ್ರೈವ್ ಮಾಡುತ್ತಿದ್ದ ಕಾರು ರಸ್ತೆಬದಿ ನಿಂತಿದ್ದ ಆಕಳಿಗೆ ತಾಗಿತು. ಯಾವುದೇ ಅಪಾಯ ಆಗಲಿಲ್ಲ. ಕಾರಿನ ಮುಂಭಾಗದಲ್ಲಿ ಕೊಂಬು ತಾಕಿದ್ದ ಕುರುಹನ್ನು ಗಮನಿಸಿದ ನನ್ನ ಮಗ, ಕಾರಿನ ಕೀಲಿಕೈ ಕಿತ್ತುಕೊಂಡು, ಹೊರಗೆ ಹೋಗುವುದು ಬೇಡ ಎಂದಿದ್ದಾನೆ. ಸ್ಕೂಟರ್ ಕೀಲಿಕೈಯನ್ನು ಹೆಂಡತಿ ಅಡಗಿಸಿ ಇಟ್ಟಿದ್ದಾಳೆ. ಒಂದು ರೀತಿ ಗೃಹಬಂಧನದಲ್ಲಿ ಇದ್ದೇನೆ. ಮೇಲಂತಸ್ತಿನ ರೂಮಿನಲ್ಲಿ ಇದ್ದುಬಿಟ್ಟಿದ್ದೇನೆ. ಕುಟುಂಬದವರೇ ನನ್ನ ಮೇಲೆ ಹೇರಿದ ಲಾಕ್‌ಡೌನ್ ಇದು...’ ಎಂದರು. ಅವರ ಮಾತು ಕೇಳಿ ನಲುಗಿಹೋದೆ.

ಇದು, ಅವರೊಬ್ಬರದೇ ಕಥೆಯಲ್ಲ, ಬಹಳಷ್ಟು ಹಿರಿಯ ನಾಗರಿಕರ ಬದುಕು ಇದೇ ರೀತಿ ಸಾಗುತ್ತಿದೆ. ಬಿದ್ದುಬಿಡಬಹುದು, ವಾಹನ ಡಿಕ್ಕಿ ಹೊಡೆಯಬಹುದು, ವಯಸ್ಸಾದವರಿಗೆ ಅಪಾಯ ಸಂಭವಿಸುವುದು ಜಾಸ್ತಿಯಾದ್ದರಿಂದ ರಿಸ್ಕ್ ಬೇಡ, ಪ್ರತ್ಯೇಕವಾದ ವಿಶಾಲ ರೂಮ್ ಇದೆ, ಟಿ.ವಿ. ಇದೆ, ದಿನಪತ್ರಿಕೆ ಅಥವಾ ಪುಸ್ತಕ ಓದುತ್ತಾ ಕುಳಿತುಕೊಳ್ಳಿ ಎಂದೆಲ್ಲ ಮಕ್ಕಳು, ಕುಟುಂಬ ವರ್ಗದವರು ಹಿರಿಯ ನಾಗರಿಕರಿಗೆ ‘ಸುರಕ್ಷಿತ ಗೃಹಬಂಧನದ ಶಿಕ್ಷೆ’ ವಿಧಿಸುತ್ತಿರುವುದು ಎಲ್ಲೆಡೆ ಕಾಣಿಸುತ್ತಿದೆ. ಈ ಪ್ರವೃತ್ತಿ ನಗರಗಳಲ್ಲಿ ಹೆಚ್ಚಾಗಿದೆ.

ಹಿರಿಯರು ಅಪಾಯಕ್ಕೆ ಸಿಲುಕಬಾರದು ಎಂದು ಕಾಳಜಿ ವಹಿಸುವುದು ಸರಿ ಇರಬಹುದು. ಆದರೆ, ಅವರ ಚಲನವಲನಗಳ ಮೇಲೆ ನಿರ್ಬಂಧ ಹೇರುವುದರ ಪರಿಣಾಮವಾಗಿ ಅವರು ಅನುಭವಿಸುವ ಏಕಾಂಗಿತನ, ಹತಾಶೆ, ನೋವು, ಸಂಕಟ, ನಿಷ್ಕ್ರಿಯತೆಯ ಬಾಧೆ ಅಷ್ಟಿಷ್ಟಲ್ಲ. ಹಿರಿಯರು ಯಾವುದೇ ಕೆಲಸ ಮಾಡಲು ಮುಂದಾದರೆ ‘ಇದೆಲ್ಲ ಉಸಾಬರಿ ನಿಮಗೇಕೆ? ಹಾಯಾಗಿ ಕುಳಿತುಕೊಳ್ಳಿ, ಹಿಂದೆ ಬಹಳಷ್ಟು ದುಡಿದಿದ್ದೀರಲ್ಲ’ ಎಂದು ತಡೆಯುತ್ತಾರೆ. ಹೊರಗೆ ಹೋಗಿ ಸ್ವತಂತ್ರವಾಗಿ ವ್ಯವಹರಿಸುವುದಕ್ಕೆ ಅವಕಾಶವನ್ನೇ ಕೊಡುವುದಿಲ್ಲ. ಇಂಥ ದಿಗ್ಬಂಧನವು ಹಿರಿಯರಲ್ಲಿ ಇನ್ನಿಲ್ಲದ ಕಿರಿಕಿರಿ ಉಂಟುಮಾಡುತ್ತದೆ. ತಾನು ನಿರುಪಯುಕ್ತ, ತನ್ನಿಂದ ಇನ್ನು ಯಾವುದೇ ಪ್ರಯೋಜನವಿಲ್ಲ ಎನ್ನುವ ಭಾವನೆಯಿಂದ ಆರೋಗ್ಯ ಕ್ಷೀಣಿಸುವ ಸಾಧ್ಯತೆ ಇರುತ್ತದೆ. ವ್ಯಕ್ತಿ ಸಮಾಜದಲ್ಲಿ ತನ್ನ ಹಾಜರಿ ಮತ್ತು ಅಸ್ತಿತ್ವ ಕಾಯ್ದುಕೊಳ್ಳುವುದು ಬಹಳ ಅವಶ್ಯ. ಮನೆಯಿಂದ ಹೊರಗೆ ಹೋಗುವುದು ನಿಂತ ಮೇಲೆ ಭೇಟಿಯಾಗಲು ಬರುವವರ ಸಂಖ್ಯೆಯೂ ಕಡಿಮೆಯಾಗುತ್ತದೆ. ಹಾಗೆಯೇ ಕಾರ್ಯಕ್ರಮಕ್ಕೆ, ಸಮಾರಂಭಗಳಿಗೆ ಆಮಂತ್ರಿಸುವುದು ನಿಂತುಹೋಗುತ್ತದೆ.

ಅಂಚೆ ಇಲಾಖೆಯಿಂದ ನಿವೃತ್ತರಾದ ಸ್ನೇಹಿತರೊಬ್ಬರಿಗೆ ಫೋನ್ ಮಾಡಿ ಯೋಗಕ್ಷೇಮ ವಿಚಾರಿಸಿದೆ. ‘ಮನೆಯಿಂದ ಹೊರಗೆ ಬಿಡುತ್ತಿಲ್ಲ. ಪ್ರೀತಿಯಿಂದ ನಾನು ಬೆಳೆಸಿದ ನಮ್ಮ ಹೊಲದ ಗಿಡಮರಗಳನ್ನು ನೋಡುವ ಸಂತೋಷವೂ ಕಳೆದುಹೋಗಿದೆ. ಮಕ್ಕಳು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ, ನನ್ನನ್ನು ಅಲ್ಲ, ನನಗೆ ಬರುವ ಪಿಂಚಣಿಯನ್ನು’ ಎಂದರು. ಅವರ ಮಾತಿನಲ್ಲಿ ವ್ಯಂಗ್ಯ ಮತ್ತು ಸಿಟ್ಟು ತುಂಬಿತ್ತು.

ಇನ್ನೊಂದು ಗುಂಪಿನ ಹಿರಿಯ ನಾಗರಿಕರಿದ್ದಾರೆ. ಅವರು ತಮ್ಮಷ್ಟಕ್ಕೆ ತಾವೇ ನಿರ್ಬಂಧ ಹೇರಿಕೊಂಡು ಮನೆ ಬಿಟ್ಟು ಹೊರಗೆ ಹೋಗುವುದಿಲ್ಲ. ವಯಸ್ಸಾದವರು, ನಿವೃತ್ತರು ಕೆಲಸ ಮಾಡಬಾರದು, ಸುಖವಾಗಿ ಉಂಡು, ಹಾಯಾಗಿ ಮಲಗಿ ದಿನ ಕಳೆಯಬೇಕು ಎಂದು ಇವರು ಭಾವಿಸುತ್ತಾರೆ. ಇದು ಕುಟುಂಬದವರಿಗೂ ಇಷ್ಟವಾಗುತ್ತದೆ. ಆದರೆ ಆರೋಗ್ಯದ ದೃಷ್ಟಿಯಿಂದ ಅಪೇಕ್ಷಣೀಯ ನಡೆ ಅಲ್ಲ.

ಮನುಷ್ಯ ಸಮಾಜಜೀವಿ ಮತ್ತು ಸ್ವಭಾವದಿಂದ ಅಲೆಮಾರಿ. ಅವನು ಬಯಲಿನಲ್ಲಿದ್ದರೆ ಮಾತ್ರ ಚೆನ್ನಾಗಿ ಬದುಕಬಲ್ಲ. ಮನೆಯಿಂದ ಆಚೆ ಗೆಳೆಯರನ್ನು ಭೇಟಿಯಾಗಲು, ಕಾರ್ಯಕ್ರಮಗಳಲ್ಲಿ ಭಾಗವಹಿಸಲು, ಹೋಟೆಲ್‌ಗೆ ಹೋಗಿ ಗೆಳೆಯರೊಂದಿಗೆ ಚಹಾ ಕುಡಿಯಲು, ವಾಚನಾಲಯಕ್ಕೆ ಹೋಗಿ ಇಷ್ಟವಾದ ಪುಸ್ತಕ ತರುವಂತಹ ಕೆಲಸಗಳಿಗೆ ಹಿರಿಯ ನಾಗರಿಕರು ಸುತ್ತುತ್ತಲೇ ಇದ್ದರೆ ಒಳಿತು. ಇದರಿಂದ ಅವರ ಆರೋಗ್ಯ, ಆಯುಷ್ಯ ಹೆಚ್ಚುತ್ತದೆ ಮಾತ್ರವಲ್ಲ, ಕುಟುಂಬದ ಸಂತೋಷವೂ ಹೆಚ್ಚುತ್ತದೆ.



ಬಳ್ಳಾರಿ ಜಿಲ್ಲೆಯ ತೋರಣಗಲ್‌ನಲ್ಲಿನ ಉಕ್ಕು ಕಾರ್ಖಾನೆಯ ಉದ್ಯೋಗಿಗಳ ಪಾಲಕರು ಕಟ್ಟಿಕೊಂಡ ಹಿರಿಯ ನಾಗರಿಕರ ವೇದಿಕೆ ಮಾದರಿಯಾಗಿದೆ. ಅತ್ಯಂತ ಹೆಚ್ಚು ವಯಸ್ಸಾದ ವ್ಯಕ್ತಿ ಅಧ್ಯಕ್ಷ, ಕಿರಿಯನಾದ ವ್ಯಕ್ತಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಾರೆ. ಕಾರ್ಖಾನೆಯ ಉದ್ಯೋಗಿಗಳ ಕಾಲೊನಿಯಲ್ಲಿರುವ ಉಪವನದಲ್ಲಿ ಇವರು ಪ್ರತಿದಿನ ಸೇರುತ್ತಾರೆ. ತಾವು ಮೆಚ್ಚಿದ ಪುಸ್ತಕ, ಅಂದಿನ ಮಹತ್ವದ ಸುದ್ದಿ, ದೇಶದ ವಿಷಯಗಳನ್ನು ಚರ್ಚಿಸಿ ನಕ್ಕು ಸಂಭ್ರಮಿಸುತ್ತಾರೆ. ಸಂಜೆ ವಾಕಿಂಗ್, ವ್ಯಾಯಾಮ, ಯೋಗ ಮಾಡುತ್ತಾರೆ. ಹುಟ್ಟುಹಬ್ಬಗಳನ್ನು ಎಲ್ಲರೂ ಕೂಡಿ ಆಚರಿಸುತ್ತಾರೆ. ಪ್ರವಾಸಕ್ಕೆ ಹೋಗುತ್ತಾರೆ. ಇದರಿಂದಾಗಿ ಅವರು ಮುಪ್ಪು ಗೆದ್ದಿದ್ದಾರೆ.

ಮನೆಯಲ್ಲಿ ಏಕಾಂಗಿಯಾಗಿ ಕುಳಿತುಕೊಳ್ಳುವುದರಿಂದ ಮರೆವು, ಕಿವಿ, ದೃಷ್ಟಿ ಮಂದವಾಗುವಂತಹ ವಯೋಸಹಜ ತೊಂದರೆಗಳು ಬೇಗ ಕಾಣಿಸಿಕೊಳ್ಳುತ್ತವೆ. ಸಮಾಜದ ಕಣ್ಣೆದುರಿನಿಂದ ದೂರವಾದವರು ಕ್ರಮೇಣ ಜನರ ಮನಸ್ಸಿನಿಂದಲೂ ದೂರವಾಗುತ್ತಾರೆ ಎನ್ನುವ ಮಾತು ಇದೆ. ಹಿರಿಯರನ್ನು ಮನೆಯಲ್ಲಿ ಕಟ್ಟಿ ಹಾಕುವವರು ಈ ನುಡಿಯ ಸೂಕ್ಷ್ಮತೆ ಅರಿತುಕೊಳ್ಳುವುದು ಅವಶ್ಯ.

ವಾಚಕರ ವಾಣಿ

ಜಾಹೀರಾತು ಭಾಷೆಯಲ್ಲೇಕೆ ಆಭಾಸ?

ಕನ್ನಡದ ಸಿನಿಮಾ, ಸಾಹಿತ್ಯವನ್ನು ಪ್ರಚುರಪಡಿಸುವಲ್ಲಿ ಎಫ್.ಎಂ. ವಾಹಿನಿಗಳ ಪಾತ್ರ ಮಹತ್ತದ್ದು. ಈ ವಾಹಿನಿಗಳಲ್ಲಿ ಬರುವ ಜಾಹೀರಾತುಗಳ ಕನ್ನಡ ನಿರೂಪಣೆ ಸಮರ್ಪಕವಾಗಿಲ್ಲ. ಕನ್ನಡದವರಲ್ಲದವರಿಂದ ಧ್ವನಿ ನೀಡಿಸುವಾಗ ಇಂತಹ ಆಭಾಸಗಳು ಸಹಜ. ನ-ಣ, ಅ-ಹಗಳು ಕೆಲವೊಮ್ಮೆ ದ್ವಂದ್ವಾರ್ಥಗಳನ್ನು ಧ್ವನಿಸುವಷ್ಟು ಕೆಟ್ಟದಾಗಿರುತ್ತವೆ.

ಕೋಟ್ಯಂತರ ವಹಿವಾಟು ನಡೆಯುವ ಜಾಹೀರಾತು ಉದ್ಯಮಕ್ಕೆ ಕನ್ನಡ ಬಲ್ಲವರಿಂದ ಧ್ವನಿ, ಹಿನ್ನೆಲೆ ಧ್ವನಿ ಕೊಡಿಸುವುದು ಕಷ್ಟವೇನಲ್ಲ. ಈ ಉದಾಸೀನವನ್ನು ಸ್ವತಃ ಆಯಾ ಕಂಪನಿಯೇ ಸರಿಪಡಿಸಿಕೊಳ್ಳಬಹುದು. ಮೊದಲಿಗೆ ಸಮರ್ಪಕ ಅನುವಾದ, ನಂತರ ಸ್ವಚ್ಛ ಭಾಷೆಯ ಬಳಕೆಯನ್ನು ಜಾಹೀರಾತು ಏಜೆನ್ಸಿಗಳು ಮನಗಾಣಬೇಕಿದೆ.

ಶಾಂತರಾಜು, ಬೆಂಗಳೂರು

ಯಾರೇ ಅಧಿಕಾರಕ್ಕೆ ಬಂದರೂ...

ತೆಲಂಗಾಣದ ಸಿಂಗರೇಣಿ ಕಲ್ಲಿದ್ದಲು ಗಣಿ ಪ್ರದೇಶಕ್ಕೆ ಭೇಟಿ ನೀಡಿ, ಅಲ್ಲಿನ ಕಾರ್ಮಿಕರ ಜೊತೆ ನಡೆಸಿದ ಸಂವಾದದ ವಿಡಿಯೊವನ್ನು ಯುಟ್ಯೂಬ್‌ನಲ್ಲಿ ಹಂಚಿಕೊಂಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಕಲ್ಲಿದ್ದಲು ಗಣಿಗಳ ಖಾಸಗೀಕರಣಕ್ಕೆ ವಿರೋಧ ವ್ಯಕ್ತಪಡಿಸಿರುವುದು ವರದಿಯಾಗಿದೆ (ಪ್ರ.ವಾ., ನ. 2). 1991ರಲ್ಲಿ ಮನಮೋಹನ ಸಿಂಗ್ ಅವರು ಹಣಕಾಸು ಸಚಿವರಾಗಿದ್ದಾಗ ಭಾರತವು ವಿಶ್ವ ವಾಣಿಜ್ಯ ಒಪ್ಪಂದಕ್ಕೆ ತೆರೆದುಕೊಂಡಾಗಲೇ ದೇಶದ ಖಾಸಗೀಕರಣದ ಬಾಗಿಲು ತೆರೆದುಕೊಂಡಿತು. ನಂತರ 2004ರಿಂದ 2014ರವರೆಗೆ ಅವರು ಪ್ರಧಾನಿಯಾಗಿದ್ದಾಗ ಅದು ವೇಗ ಪಡೆದುಕೊಂಡಿತು. ಅದೇ ದಾರಿಯಲ್ಲಿ ಈಗಿನ ಬಿಜೆಪಿ ನೇತೃತ್ವದ ಸರ್ಕಾರವೂ ನಡೆಯುತ್ತಿದೆ.

ಹೆದ್ದಾರಿಗಳನ್ನು ನಿರ್ಮಿಸಲು ಖಾಸಗಿಯವರ ಜೊತೆ ಒಪ್ಪಂದ ಮಾಡಿಕೊಂಡು ಟೋಲ್‌ಗಳನ್ನು ನಿರ್ಮಿಸಿ, ದುಬಾರಿ ಶುಲ್ಕ ವಿಧಿಸಿ ಪ್ರಯಾಣಿಕರನ್ನು ಸುಲಿಯುವುದು ಕೂಡ ಕಾಂಗ್ರೆಸ್ ನೇತೃತ್ವದ ಸರ್ಕಾರದ ನಿರ್ಧಾರವೇ. ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇಲ್ಲದಿದ್ದಾಗ ಪಕ್ಷದ ಮುಖಂಡರು ಟೋಲ್‌ಗಳನ್ನು ವಿರೋಧಿಸಿದರು. ಜನರನ್ನು ಸುಲಿಯಲಾಗುತ್ತಿದೆ ಎಂದು ಆಪಾದಿಸುತ್ತಿದ್ದರು. ಇದೀಗ ತಾವೇ ಅಧಿಕಾರಕ್ಕೆ ಬಂದ ಮೇಲೆ, ಎಲ್ಲಾ ಪ್ರಮುಖ ರಸ್ತೆಗಳ ನಿರ್ವಹಣೆಗೆ ರಾಜ್ಯ ಹೆದ್ದಾರಿ ಪ್ರಾಧಿಕಾರ ರಚಿಸಿ, ಖಾಸಗಿ ಒಪ್ಪಂದದಲ್ಲಿ ರಸ್ತೆ ನಿರ್ಮಿಸಿ, ಶುಲ್ಕ ವಿಧಿಸಿ ನಿರ್ವಹಿಸಲು ನಿರ್ಧರಿಸಿರುವುದು ಪತ್ರಿಕೆಗಳಲ್ಲಿ ವರದಿಯಾಗಿತ್ತು. ಹೀಗೆ, ಇದು ಯಾರೇ ಅಧಿಕಾರಕ್ಕೆ ಬಂದರೂ ನಡೆಯುವ ಪ್ರಕ್ರಿಯೆಯಾಗಿದೆ. ಉಪದೇಶ ಹೇಳೋಕೆ, ಬದನೆಕಾಯಿ ತಿನ್ನೋಕೆ ಎನ್ನುವ ಗಾದೆ ಎಂದೆಂದಿಗೂ ಅನ್ವರ್ಥಕ!

ಮುಳ್ಳೂರು ಪ್ರಕಾಶ್, ಮೈಸೂರು

ಸ್ವಯಂ ಮಾರಾಟಕ್ಕೆ ಸಿದ್ಧ!

‘ನನ್ನನ್ನು ಖರೀದಿಸುವ ಶಕ್ತಿ ಕರ್ನಾಟಕದಲ್ಲಿ ಯಾರಿಗೂ ಇಲ್ಲ. ನನ್ನ ರೇಟ್ ಬೇರೆಯೇ ಇದೆ. ಕರ್ನಾಟಕ ರಾಜ್ಯವನ್ನು ನನ್ನ ಹೆಸರಿಗೆ ಬರೆದುಕೊಟ್ಟರೆ ಹೋಗುತ್ತೇನೆ. ಆದರೆ, ನನ್ನನ್ನು ಯಾರೂ ಸಂಪರ್ಕಿಸಿಲ್ಲ’ ಎಂದು ಕೋಲಾರದ ಶಾಸಕ ಕೊತ್ತೂರು ಮಂಜುನಾಥ್ ಹೇಳಿದ್ದಾರೆ. ಬರೆದುಕೊಡಲು ಕರ್ನಾಟಕ ಎಂಬುದು ಯಾರೋ ಒಬ್ಬರ ಸ್ವತ್ತಲ್ಲ. ಕನ್ನಡಿಗರ ನಾಡು. ತಾಯಿ ಭಾರತಾಂಬೆಯ ಮಗಳು. ಒಂದು ರಾಜ್ಯ ಹಾಗೂ ಭಾರತದ ಅವಿಭಾಜ್ಯ ಅಂಗ. ಅಂದರೆ, ಅವರು ಸ್ವಯಂ ಮಾರಾಟಕ್ಕೆ ತಯಾರಿದ್ದಾರೆ ಎಂಬ ಅರ್ಥ ಅಲ್ಲವೇ? ದುಬಾರಿ ಬೆಲೆ ಆದರೂ ಕೊಳ್ಳುವವರು ಬಂದರೆ ತಯಾರಿದ್ದಾರೆ. ಈ ಮಾತು ಇವರನ್ನು ಆರಿಸಿದ ಕೋಲಾರದ ಮತದಾರರಿಗೆ ಮಾಡಿದ ಅಪಮಾನ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಅಂತರ್ಜಲ: ತಪ್ಪು ಪುನರಾವರ್ತನೆ ಆಗದಿರಲಿ

ಬೆಂಗಳೂರಿನಲ್ಲಿರುವ 11,614 ಕೊಳವೆಬಾವಿಗಳ ಪೈಕಿ 800ಕ್ಕೂ ಹೆಚ್ಚು ಬತ್ತಿಹೋಗಿರುವ ಸುದ್ದಿ ಪ್ರಜೆಗಳಿಗೆ ಎಚ್ಚರಿಕೆಯ ಗಂಟೆಯಾಗಿದೆ. ಈ ವರ್ಷ ಮಳೆ ಪ್ರಮಾಣದಲ್ಲಿ ಆದ ಕುಸಿತದಿಂದಾಗಿ ಬೆಂಗಳೂರಿಗರಿಗೆ ಜಲಕ್ಷಾಮದ ಸ್ಥಿತಿ ಉಂಟಾಗಿದೆ. ಕೆಲವೆಡೆ ಪ್ರಸ್ತುತ ವಾರಕ್ಕೆ ಎರಡು- ಮೂರು ಬಾರಿ ಮಾತ್ರ ಕಾವೇರಿ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಟ್ಯಾಂಕರ್‌ನಿಂದ ನೀರು ತರಿಸಿಕೊಳ್ಳೋಣವೆಂದರೆ, ಅಂತರ್ಜಲ ಮಟ್ಟ ಕುಸಿತದಿಂದಾಗಿ ಬೋರ್‌ವೆಲ್‌ಗಳು ಬತ್ತಿಹೋಗುತ್ತಿವೆ. ಆದರೆ, ನಮ್ಮ ರಾಜಕೀಯ ನಾಯಕರಾಗಲೀ ಅಧಿಕಾರಿಗಳಾಗಲೀ ಈ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡಂತಿಲ್ಲ.

ಕೆಂಪೇಗೌಡರು ನಿರ್ಮಿಸಿದ ಬೆಂದಕಾಳೂರು ಯೋಜಿತ ನಗರವಾಗಿತ್ತು. ಕೆರೆಗಳನ್ನು ವ್ಯವಸ್ಥಿತವಾಗಿ ನಿರ್ಮಿಸಲಾಗಿತ್ತು. ಬೆಂದಕಾಳೂರು ಅಭಿವೃದ್ಧಿ ಹೊಂದಿ ಬೆಂಗಳೂರು ಆಗುತ್ತಿದ್ದಂತೆ ಉದ್ಯೋಗವನ್ನರಸಿ ಬರುವವರ ಸಂಖ್ಯೆ ಏರುತ್ತಲೇ ಹೋಯಿತು. ನೀರಿನ ಬಳಕೆಯೂ ಹೆಚ್ಚಾಗತೊಡಗಿತು. ನಂತರದ ವರ್ಷಗಳಲ್ಲಿ ಅಧಿಕಾರಕ್ಕೆ ಬಂದ ಪಕ್ಷಗಳು ವಸತಿ ಸಮಸ್ಯೆಯನ್ನು ನಿವಾರಿಸಲು ತಮ್ಮ ತಮ್ಮ ಅಧಿಕಾರಾವಧಿಯಲ್ಲಿ ಅವೈಜ್ಞಾನಿಕವಾಗಿ ಕೆರೆಗಳನ್ನು ಮುಚ್ಚಿಸಿ ಬಡಾವಣೆಗಳನ್ನಾಗಿಸಿದವು. ನೀರಿನ ಕೊರತೆಯುಂಟಾದಾಗ ಬೋರ್‌ವೆಲ್‌ಗಳನ್ನು ಕೊರೆಸತೊಡಗಿದವು. ನಾಯಿಕೊಡೆಗಳಂತೆ ತಲೆಯೆತ್ತಿರುವ ಬಹುಮಹಡಿ ವಸತಿ ಸಮುಚ್ಚಯಗಳೂ ಕೊಡುಗೆ ನೀಡಿವೆ. ಇವುಗಳನ್ನು ಬಹುತೇಕ ತಗ್ಗು ಪ್ರದೇಶದಲ್ಲೇ ನಿರ್ಮಿಸಿರುವುದು ಗಮನಾರ್ಹ. ತಗ್ಗು ಪ್ರದೇಶಗಳಲ್ಲಿ ಕಟ್ಟಡಗಳನ್ನು ನಿರ್ಮಿಸಿ ಮಳೆನೀರಿನ ಹರಿವಿಗೆ ಹಾಗೂ ಕೆರೆಗಳನ್ನು ಮುಚ್ಚಿಸಿ ಮಳೆನೀರಿನ ಸಂಗ್ರಹಕ್ಕೆ ಕಡಿವಾಣ ಹಾಕಿದ ಹಾಗೂ ಅತಿ ಹೆಚ್ಚು ಕೊಳವೆಬಾವಿಗಳನ್ನು ಕೊರೆಸಿದ ಪರಿಣಾಮವಾಗಿ ಅಂತರ್ಜಲ ಕುಸಿತ ಉಂಟಾಗಿ ಇಂದು ಕೊಳವೆಬಾವಿಗಳು ಬತ್ತಿಹೋಗುವ ಸ್ಥಿತಿ ತಲುಪಿವೆ. ಹಿಂದೆ ಆದ ತಪ್ಪನ್ನು ಸರಿಪಡಿಸಲು ಸರ್ಕಾರ ಮುಂದಾಗಬೇಕು, ಮುಂದೆ ಅಧಿಕಾರಕ್ಕೆ ಬರುವ ಯಾವುದೇ ಪಕ್ಷದ ನೇತೃತ್ವದ ಸರ್ಕಾರ ಇಂತಹ ತಪ್ಪುಗಳು ಪುನರಾವರ್ತನೆ ಆಗದಂತೆ ನೋಡಿಕೊಂಡು, ಮುಂದಿನ ಪೀಳಿಗೆಯ ಜನರಾದರೂ ನೆಮ್ಮದಿಯಿಂದ ಜೀವನ ನಡೆಸುವಂತೆ ನೋಡಿಕೊಳ್ಳಬೇಕು.

ಜಿ.ನಾಗೇಂದ್ರ ಕಾವೂರು, ಸಂಡೂರು

ಬೆಳಗಾವಿಯಲ್ಲಿ...

ನೆಲದ ಹಕ್ಕಿಗಾಗಿ ಹೋರಾಡಿದ
ಕಿತ್ತೂರು ಚೆನ್ನಮ್ಮನ
ಪ್ರತಿಮೆಯೆದುರು
ರಾಜ್ಯೋತ್ಸವದಂದು
ನೆಲದ ಹಕ್ಕು ಸ್ಥಾಪಿಸಿದ
ಸಹಸ್ರಾರು ಕನ್ನಡ ಕುವರರು,
ವೀರ ರಾಣಿಗೆ ಸೂಕ್ತ ಸಲಾಂ
ಸಲ್ಲಿಸಿದ ಕರುನಾಡಿನ ಧೀರರು.

ಎಚ್.ಆನಂದರಾಮ ಶಾಸ್ತ್ರೀ , ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಚಾಲಕರ ಲೋಪದಿಂದಲೇ ಹೆಚ್ಚಿನ ಅಪಘಾತಗಳು...

ಭಾರತದಲ್ಲಿ ರಸ್ತೆ ಅಪಘಾತಗಳು–2022 ವರದಿಯಲ್ಲಿ ತಜ್ಞರ ವಿಶ್ಲೇಷಣೆ

ಏರುತ್ತಲೇ ಇದೆ ಸಾವುಗಳ ಸಂಖ್ಯೆ



• ಜಯಸಿಂಹ ಆರ್.

ದೇಶದಲ್ಲಿ ಸಂಭವಿಸುತ್ತಿರುವ ಬಹುತೇಕ ರಸ್ತೆ ಅಪಘಾತಗಳಿಗೆ ಚಾಲಕನ ಲೋಪವೇ ಪ್ರಮುಖ ಕಾರಣ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಈಚೆಗಷ್ಟೇ ಬಿಡುಗಡೆ ಮಾಡಿರುವ 'ಭಾರತದಲ್ಲಿ ರಸ್ತೆ ಅಪಘಾತಗಳು–2022' ವರದಿಯಲ್ಲಿ ಹೇಳಿದೆ. 2022ರಲ್ಲಿ ದೇಶದಾದ್ಯಂತ 4.61 ಲಕ್ಷ ಅಪಘಾತಗಳು ಸಂಭವಿಸಿವೆ. ಈ ಅಪಘಾತಗಳಲ್ಲಿ ಒಟ್ಟು 1.68 ಲಕ್ಷ ಜನರು ಮೃತಪಟ್ಟಿದ್ದಾರೆ. ವರ್ಷವೊಂದರಲ್ಲಿ ರಸ್ತೆ ಅಪಘಾತಗಳಿಗೆ ಹೆಚ್ಚು ಜನರು ಬಲಿಯಾದ ಈವರೆಗಿನ ಗರಿಷ್ಠ ಸಂಖ್ಯೆ ಇದು. ರಸ್ತೆ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಮತ್ತು ವಾಹನಗಳ ಸುರಕ್ಷತಾ ಮಟ್ಟವನ್ನು ಹೆಚ್ಚಿಸುವಲ್ಲಿ ಮಹತ್ತರವಾದ ಕ್ರಮಗಳನ್ನು ತೆಗೆದುಕೊಂಡಿದ್ದರೂ ಅಪಘಾತಗಳ ಸಂಖ್ಯೆ ನಿರೀಕ್ಷಿತ ಪ್ರಮಾಣದಲ್ಲಿ ಇಳಿಕೆಯಾಗಿಲ್ಲ. ಬದಲಿಗೆ ಅಪಘಾತಗಳಲ್ಲಿ ಮೃತಪಡುವವರ ಪ್ರಮಾಣ ಭಾರಿ ಪ್ರಮಾಣದ ಏರಿಕೆ ಕಂಡಿದೆ.

2022ರಲ್ಲಿ ದೇಶದಾದ್ಯಂತ 4.61 ಲಕ್ಷ ಅಪಘಾತಗಳು ಸಂಭವಿಸಿದ್ದರೆ, ಅವುಗಳಲ್ಲಿ 3.33 ಲಕ್ಷ ಅಪಘಾತಗಳು ಅತಿವೇಗದ ಕಾರಣಕ್ಕೇ ಸಂಭವಿಸಿವೆ. ಒಟ್ಟು ಅಪಘಾತಗಳಲ್ಲಿ ಅತಿವೇಗದ ಕಾರಣಕ್ಕೆ ಸಂಭವಿಸಿದ ಅಪಘಾತಗಳ ಪ್ರಮಾಣ ಶೇ 72.3ರಷ್ಟು. ಒಟ್ಟು ಅಪಘಾತಗಳಲ್ಲಿ ಮೃತಪಟ್ಟವರ ಸಂಖ್ಯೆಗೆ (1.68 ಲಕ್ಷ) ಹೋಲಿಸಿದರೆ, ಅತಿವೇಗದ ಕಾರಣಕ್ಕೆ ಸಂಭವಿಸಿದ ಅಪಘಾತಗಳಲ್ಲಿ ಮೃತಪಟ್ಟವರ ಪ್ರಮಾಣ ಶೇ 72.8ರಷ್ಟು (1.19 ಲಕ್ಷ). ನಗರ ಪ್ರದೇಶದ ರಸ್ತೆಗಳು, ಗ್ರಾಮೀಣ ರಸ್ತೆಗಳು, ರಾಜ್ಯ ಹೆದ್ದಾರಿಗಳು, ರಾಷ್ಟ್ರೀಯ ಹೆದ್ದಾರಿಗಳು ಮತ್ತು ಎಕ್ಸ್‌ಪ್ರೆಸ್ ಹೆದ್ದಾರಿಗಳಲ್ಲಿ ವೇಗಮಿತಿ ಇದೆ. ವೇಗಮಿತಿ ಜಾರಿಯಲ್ಲಿದ್ದೂ ಅದನ್ನು ಮೀರಿದ ವೇಗದಲ್ಲಿ ವಾಹನ ಚಲಾಯಿಸಿದ್ದರಿಂದ ಈ ಅಪಘಾತಗಳು ಸಂಭವಿಸಿವೆ. ಇಂತಹ ಅಪಘಾತಗಳನ್ನು ಚಾಲಕನ ಲೋಪದಿಂದ ಸಂಭವಿಸಿದ್ದು ಎಂದೇ ಪರಿಗಣಿಸಲಾಗುತ್ತದೆ.

ಆ ವರ್ಷದಲ್ಲಿ ಸಂಭವಿಸಿದ ಒಟ್ಟು ಅಪಘಾತಗಳಲ್ಲಿ ಶೇ 68ರಷ್ಟು ಅಪಘಾತಗಳು ನೇರವಾದ ರಸ್ತೆಗಳಲ್ಲೇ ಸಂಭವಿಸಿವೆ. ಇನ್ನು ಅಪಘಾತಗಳಲ್ಲಿ ಸಂಭವಿಸಿದ ಒಟ್ಟು ಸಾವುಗಳಿಗೆ ಹೋಲಿಸಿದರೆ, ನೇರವಾದ ರಸ್ತೆಯಲ್ಲಿ ಸಂಭವಿಸಿದ ಅಪಘಾತಗಳಲ್ಲಿ ಸತ್ತವರ ಸಂಖ್ಯೆ 1.11 ಲಕ್ಷ (ಶೇ 67ರಷ್ಟು). ರಾತ್ರಿಯ ವೇಳೆ ಹೆಚ್ಚು ಅಪಘಾತಗಳು ಸಂಭವಿಸುತ್ತವೆ ಎಂಬ ಅಭಿಪ್ರಾಯ ದಟ್ಟವಾಗಿದೆ. ಆದರೆ ಇದು ಸುಳ್ಳು ಎಂಬುದನ್ನು ಈ ವರದಿಯ ದತ್ತಾಂಶಗಳು ಹೇಳುತ್ತವೆ. 2022ರಲ್ಲಿ ಸಂಭವಿಸಿದ ಒಟ್ಟು ಅಪಘಾತಗಳಲ್ಲಿ, ಬೆಳಗಿನ ಮತ್ತು ಸ್ಪಷ್ಟ ಗೋಚರತೆ ಇದ್ದ ಹೊತ್ತಿನಲ್ಲಿ ಸಂಭವಿಸಿದ ಅಪಘಾತಗಳ ಸಂಖ್ಯೆ 3.42 ಲಕ್ಷದಷ್ಟು. ಇನ್ನು ಇಂತಹ ಅಪಘಾತಗಳಲ್ಲಿ ಮೃತಪಟ್ಟವರ ಸಂಖ್ಯೆ 1.19 ಲಕ್ಷ.

ಅತಿವೇಗದ ಚಾಲನೆಯ ಹೊರತಾಗಿ ರಸ್ತೆ ಅಪಘಾತಗಳಿಗೆ ಕಾರಣವಾದ ಎರಡನೇ ಅಂಶವೆಂದರೆ ಪಥ ಶಿಸ್ತು ಇಲ್ಲದಿರುವುದು ಹಾಗೂ ವಿರುದ್ಧ ದಿಕ್ಕಿನಲ್ಲಿ ಚಾಲನೆ ಮಾಡುವುದು. ಈ ರೀತಿಯ ಚಾಲನೆಯ ಕಾರಣಕ್ಕೆ 2022ರಲ್ಲಿ 22,586 ಅಪಘಾತಗಳು ಸಂಭವಿಸಿದ್ದರೆ, ಈ ಅಪಘಾತಗಳಲ್ಲಿ 9,094 ಜನರು ಮೃತಪಟ್ಟಿದ್ದಾರೆ. ಈ ಎಲ್ಲಾ ಸ್ವರೂಪದ ಅಪಘಾತಗಳು ಚಾಲಕನ ಲೋಪದಿಂದಲೇ ಸಂಭವಿಸಿವೆ. ಅತಿವೇಗ, ಪಥ ಶಿಸ್ತು ಇಲ್ಲದಿರುವುದು, ವಿರುದ್ಧ ದಿಕ್ಕಿನಲ್ಲಿ ಚಾಲನೆ, ಮದ್ಯ ಕುಡಿದು ಚಾಲನೆ ಮಾಡುವುದು ಮತ್ತು ಚಾಲನೆ ವೇಳೆ ಮೊಬೈಲ್ ಬಳಸುವುದು... ಇವೆಲ್ಲವನ್ನೂ ಸಂಚಾರ ನಿಯಮಗಳ ಪ್ರಕಾರ ದಂಡಾರ್ಹ ಅಪರಾಧ ಎಂದು ಪರಿಗಣಿಸಲಾಗಿದೆ. ಈ ನಿಯಮಗಳನ್ನು ಉಲ್ಲಂಘಿಸುವುದು, ಅಪಘಾತಕ್ಕೆ ಆಹ್ವಾನ ನೀಡಿದಂತೆ. 2022ರಲ್ಲಿ ಸಂಭವಿಸಿದ ಒಟ್ಟು ಅಪಘಾತಗಳಲ್ಲಿ ಶೇ 88ರಷ್ಟು ಅಪಘಾತಗಳು ಚಾಲಕರ ಈ ಸ್ವರೂಪದ ಲೋಪದಿಂದಲೇ ಸಂಭವಿಸಿವೆ ಎನ್ನುತ್ತದೆ ಈ ವರದಿ. ಜತೆಗೆ ಸಂಚಾರ ನಿಯಮಗಳನ್ನು ಪಾಲಿಸಿದ್ದಿದ್ದರೆ, ಈ ಎಲ್ಲಾ ಅಪಘಾತಗಳನ್ನು ತಪ್ಪಿಸುವ ಅವಕಾಶವಿತ್ತು. ಹೀಗಾಗಿ ಸಂಚಾರ ನಿಯಮವನ್ನು ಉಲ್ಲಂಘಿಸುವಂತಹ ಚಾಲಕನ ಲೋಪವನ್ನು ತಡೆಗಟ್ಟುವುದಕ್ಕೆ ಒತ್ತು ನೀಡಬೇಕಿದೆ ಎನ್ನುತ್ತದೆ ಈ ವರದಿಯ ಮುನ್ನೋಟ.



ಪ್ರಜಾವಾಣಿ ಗ್ರಾಫಿಕ್ಸ್: ಕಣಕಾಲಮಠ

ಆಧಾರ: ಭಾರತದಲ್ಲಿ ರಸ್ತೆ ಅಪಘಾತಗಳು–2022 ವರದಿ

- 2021ಕ್ಕೆ ಹೋಲಿಸಿದರೆ 2022ರಲ್ಲಿ ರಸ್ತೆ ಅಪಘಾತಕ್ಕೆ ಬಲಿಯಾದವರ ಸಂಖ್ಯೆಯಲ್ಲಿ ಶೇ 9.80ರಷ್ಟು ಏರಿಕೆಯಾಗಿದೆ
- 2021ಕ್ಕೆ ಹೋಲಿಸಿದರೆ 2022ರಲ್ಲಿ ರಸ್ತೆ ಅಪಘಾತಗಳ ಸಂಖ್ಯೆಯಲ್ಲಿ ಶೇ 11.90ರಷ್ಟು ಏರಿಕೆಯಾಗಿದೆ
- ಅತಿಹೆಚ್ಚು ಅಪಘಾತ ಸಂಭವಿಸಿದ ರಾಜ್ಯಗಳ ಪಟ್ಟಿಯಲ್ಲಿ ತಮಿಳುನಾಡು ಮೊದಲ ಸ್ಥಾನದಲ್ಲಿದೆ. ಕರ್ನಾಟಕವು ಐದನೇ ಸ್ಥಾನದಲ್ಲಿದೆ
- ರಸ್ತೆ ಅಪಘಾತಗಳಲ್ಲಿ ಅತಿಹೆಚ್ಚು ಸಾವು ಸಂಭವಿಸಿದ ರಾಜ್ಯಗಳ ಪಟ್ಟಿಯಲ್ಲಿ ತಮಿಳುನಾಡು ಮೊದಲ ಸ್ಥಾನದಲ್ಲಿದ್ದರೆ, ಕರ್ನಾಟಕವು ಮೂರನೇ ಸ್ಥಾನದಲ್ಲಿದೆ
- ರಸ್ತೆ ಅಪಘಾತಗಳಲ್ಲಿ ಅತಿಹೆಚ್ಚು ಸಾವು ಸಂಭವಿಸಿದ ನಗರಗಳ ಪಟ್ಟಿಯಲ್ಲಿ ದೆಹಲಿ (1,461) ಸ್ಥಾನದಲ್ಲಿದ್ದರೆ, ಬೆಂಗಳೂರು (772) ಎರಡನೇ ಸ್ಥಾನದಲ್ಲಿದೆ

ಹೆಲ್ಮೆಟ್, ಸೀಟ್‌ಬೆಲ್ಟ್ ಧರಿಸದೇ ಇದ್ದುದಕ್ಕೆ ಹೆಚ್ಚು ಸಾವು

ದ್ವಿಚಕ್ರ ವಾಹನಗಳ ಚಾಲನೆ ವೇಳೆ ಸವಾರ ಮತ್ತು ಹಿಂಬದಿಯ ಸವಾರ ಹೆಲ್ಮೆಟ್ ಧರಿಸುವುದು ಕಡ್ಡಾಯ. ಆದರೆ, ದೇಶದ ಕೆಲವು ನಗರಗಳಲ್ಲಷ್ಟೇ ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗಿದೆ. ಬಹುತೇಕ ಕಡೆ ಈ ನಿಯಮ ಜಾರಿಯಲ್ಲಿಯೂ ಇಲ್ಲ. ಆದರೆ, ದೇಶದಲ್ಲಿ ಸಂಭವಿಸುತ್ತಿರುವ ಅಪಘಾತಗಳಲ್ಲಿ ಹೆಲ್ಮೆಟ್ ಧರಿಸಿದೇ ಇದ್ದ ಕಾರಣಕ್ಕೇ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂಬುದರತ್ತ ಈ ವರದಿ ಬೊಟ್ಟು ಮಾಡುತ್ತದೆ.

ದ್ವಿಚಕ್ರ ವಾಹನ ಚಾಲನೆ/ಸವಾರಿಯ ವೇಳೆ ಅಪಘಾತ ಸಂಭವಿಸಿದರೆ ಹೆಚ್ಚು ಪೆಟ್ಟು ಬೀಳುವುದು ತಲೆಗೆ. ಹಾಗೆ ಪೆಟ್ಟಾಗುವುದನ್ನು ಸುರಕ್ಷಿತವಾದ ಮತ್ತು ಸರಿಯಾದ ಅಳತೆಯ ಹೆಲ್ಮೆಟ್‌ಗಳು ತಡೆಯುತ್ತವೆ. ಇದರಿಂದ ತಲೆಗೆ ತೀವ್ರ ಪೆಟ್ಟಾಗುವುದು ಮತ್ತು ಅದರಿಂದ ಸಾವು ಸಂಭವಿಸುವುದನ್ನು ತಡೆಯಬಹುದು. ಆದರೆ 2022ರಲ್ಲಿ, ಹೆಲ್ಮೆಟ್ ಧರಿಸಿದೇ ಇದ್ದ ಕಾರಣಕ್ಕೆ ಅಪಘಾತದ ವೇಳೆ ತಲೆಗೆ ಪೆಟ್ಟಾಗಿ 50,000ಕ್ಕೂ ಹೆಚ್ಚು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.

ಕಾರುಗಳಲ್ಲಿ ಚಾಲಕ ಮತ್ತು ಎಲ್ಲಾ ಪ್ರಯಾಣಿಕರೂ ಸೀಟ್‌ಬೆಲ್ಟ್ ಧರಿಸುವುದು ಕಡ್ಡಾಯ. ಬೆಂಗಳೂರಿನಂತಹ ನಗರದಲ್ಲೂ ಚಾಲಕ ಸೀಟ್‌ಬೆಲ್ಟ್ ಧರಿಸುವುದನ್ನು ಕಟ್ಟುನಿಟ್ಟಾಗಿ ಜಾರಿ ಮಾಡಲಾಗಿದೆಯಷ್ಟೇ ಹೊರತು, ಪ್ರಯಾಣಿಕರು ಸೀಟ್‌ಬೆಲ್ಟ್ ಧರಿಸುವುದನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಿಲ್ಲ. ಅಪಘಾತದ ಸಂದರ್ಭದಲ್ಲಿ ಚಾಲಕನಿಗೆ ಮತ್ತು ಪ್ರಯಾಣಿಕನಿಗೆ ಪೆಟ್ಟಾಗದಂತೆ ನೋಡಿಕೊಳ್ಳುವ ಮತ್ತು ಆ ಮೂಲಕ ಪ್ರಾಣಾಪಾಯವನ್ನು ದೂರಮಾಡುವ ಪ್ರಾಥಮಿಕ ಸಾಧನ ಸೀಟ್‌ಬೆಲ್ಟ್. ಹೀಗಾಗಿ ಸೀಟ್‌ಬೆಲ್ಟ್ ಅನ್ನು ಧರಿಸಲೇಬೇಕು.

ಕಾರುಗಳಲ್ಲಿ ಎಷ್ಟೇ ಏರ್‌ಬ್ಯಾಗ್‌ಗಳಿದ್ದರೂ, ಸೀಟ್‌ಬೆಲ್ಟ್ ಧರಿಸದೇ ಇದ್ದರೆ ಅವು ಪ್ರಾಣಾಪಾಯದಿಂದ ಪಾರು ಮಾಡಲಾರವು. 2022ರಲ್ಲಿ ದೇಶದಲ್ಲಿ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ, ಸೀಟ್‌ಬೆಲ್ಟ್ ಧರಿಸದೇ ಇದ್ದ ಕಾರಣಕ್ಕೆ 16,000ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಇವು ಚಾಲಕ ಮತ್ತು ಪ್ರಯಾಣಿಕರ ಲೋಪ. ಚಾಲನೆ ಸಂದರ್ಭದಲ್ಲಿ ಸುರಕ್ಷತಾ ಸಾಧನಗಳನ್ನು ಕಡೆಗಣಿಸಿದ ಕಾರಣಕ್ಕೇ ಇಷ್ಟು ಮಂದಿ ಮೃತಪಟ್ಟಿದ್ದಾರೆ.



ಮೊಬೈಲ್ ಬಳಕೆಯಿಂದಲೂ ಅಪಾಯ

2022ರಲ್ಲಿ ಚಾಲನೆ ವೇಳೆ ಮೊಬೈಲ್ ಬಳಸುತ್ತಿದ್ದ ಕಾರಣಕ್ಕೆ ದೇಶದಾದ್ಯಂತ 7,558 ಅಪಘಾತಗಳು ಸಂಭವಿಸಿವೆ ಎನ್ನುತ್ತದೆ ವರದಿ. ದೇಶದಾದ್ಯಂತ ಸಂಭವಿಸಿದ ಒಟ್ಟು ರಸ್ತೆ ಅಪಘಾತಗಳಲ್ಲಿ ಈ ಕಾರಣದಿಂದ ಸಂಭವಿಸಿದ ಅಪಘಾತಗಳ ಪ್ರಮಾಣ ಶೇ 1.6ರಷ್ಟು.

ಚಾಲನೆ ವೇಳೆ ಮೊಬೈಲ್ ಬಳಕೆಯಿಂದ ಸಂಭವಿಸಿದ ಅಪಘಾತಗಳಲ್ಲಿ ಒಟ್ಟು 3,395 ಜನರು ಮೃತ್ಯಪಟ್ಟಿದ್ದಾರೆ. ರಸ್ತೆ ಅಪಘಾತದ ಒಟ್ಟು ಸಾವುಗಳಲ್ಲಿ ಇದರ ಪ್ರಮಾಣ ಶೇ 2ರಷ್ಟು.

ಚಾಲನೆ ವೇಳೆ ಮೊಬೈಲ್ ಬಳಸುವುದರಿಂದ ಏಕಾಗ್ರತೆ ಹೋಗಿ, ಅಪಘಾತ ಸಂಭವಿಸುವ ಅಪಾಯವೂ ಇರುತ್ತದೆ. ಹೀಗಾಗಿಯೇ ಚಾಲನೆ ವೇಳೆ ಮೊಬೈಲ್ ಬಳಕೆಯನ್ನು ನಿಷೇಧಿಸಲಾಗಿದೆ. ಇದನ್ನು ಉಲ್ಲಂಘಿಸುತ್ತಿರುವುದರಿಂದಲೇ ಹಲವು ಅಪಘಾತಗಳು ಸಂಭವಿಸುತ್ತಿವೆ.

ಹಿಟ್ ಆ್ಯಂಡ್ ರನ್ | ನಿಲುಗಡೆಯಲ್ಲಿದ್ದ ವಾಹನಕ್ಕೆ ಡಿಕ್ಕಿ ಹೊಡೆದದ್ದು | ಬೇರೊಂದು ವಾಹನದ ಹಿಂಬದಿಗೆ ಡಿಕ್ಕಿ ಹೊಡೆದದ್ದು | ಬೇರೊಂದು ವಾಹನಕ್ಕೆ ಪಕ್ಕದಿಂದ ಡಿಕ್ಕಿ ಹೊಡೆದದ್ದು | ರಸ್ತೆ ಬದಿಗೆ ಸರಿದು ಅಪಘಾತ | ರಸ್ತೆ ವಿಭಜಕ/ತಡೆಗೋಡೆಗಳಿಗೆ ಡಿಕ್ಕಿ ಹೊಡೆದದ್ದು | ವಾಹನ ಉರುಳಿ ಬಿದ್ದಿದ್ದು | ಮುಖಾಮುಖಿ ಡಿಕ್ಕಿ | ಇತರೆ ಸ್ವರೂಪದ ಅಪಘಾತಗಳು



ಹಿಂಬದಿಯಿಂದ ಡಿಕ್ಕಿಗೇ ಹೆಚ್ಚು ಬಲಿ



ಕ್ರಿಸ್‌ಮಸ್‌ಗೆ 'ಡಂಕಿ'

ಶಾರುಕ್ ಖಾನ್

ಬಾಲಿವುಡ್ ನಟ ಶಾರುಕ್ ಖಾನ್ ನಟನೆಯ 'ಡಂಕಿ' ಸಿನಿಮಾದ ಟೀಸರ್ ಬಿಡುಗಡೆಯಾಗಿದ್ದು, ಇದಕ್ಕೆ 'ಡ್ರಾಪ್–1' ಎಂಬ ಶೀರ್ಷಿಕೆ ಇಡುವುದರ ಮೂಲಕ ಕುತೂಹಲ ಹೆಚ್ಚಿಸಿದ್ದಾರೆ ನಿರ್ದೇಶಕ ರಾಜ್‌ಕುಮಾರ್ ಹಿರಾನಿ.

ಶಾರುಕ್ ಖಾನ್ ಜನ್ಮದಿನದಂದೇ(ನ.2) ಈ ಟೀಸರ್ ರಿಲೀಸ್ ಆಗಿದೆ. ನಾಲ್ಕು ರಾಷ್ಟ್ರಪ್ರಶಸ್ತಿ ಗೆದ್ದಿರುವ ನಿರ್ದೇಶಕ ರಾಜ್‌ಕುಮಾರ್ ಹಿರಾನಿ 'ಮುನ್ನಾ ಭಾಯಿ ಎಂಬಿಬಿಎಸ್', '3 ಈಡಿಯಟ್ಸ್', 'ಪಿಕೆ', 'ಸಂಜು'ನಂತಹ ಹಿಟ್ ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಈ ಬಾರಿ ಐದು ಜನ ಸ್ನೇಹಿತರ ಕಥೆ ಹೇಳುವುದಕ್ಕೆ ಸಜ್ಜಾಗಿದ್ದಾರೆ ಹಿರಾನಿ. ಒಂದೊಳ್ಳೆಯ ಸಂದೇಶದ ಜೊತೆಗೆ ಮನರಂಜನಾತ್ಮಕ ಅಂಶಗಳನ್ನು ಬೆರೆಸಿ 'ಡಂಕಿ' ಹೆಣೆಯಲಾಗಿದೆ ಎಂದಿದೆ ಚಿತ್ರತಂಡ.

ಚಿತ್ರದಲ್ಲಿ ಬೊಮನ್ ಇರಾನಿ, ತಾಪ್ಸಿ ಪನ್ನು, ವಿಕ್ಕಿ ಕೌಶಲ್, ಅನಿಲ್ ಗ್ರೋವರ್, ವಿಕ್ರಮ್ ಕೊಚ್ಚರ್ ಬಣ್ಣಹಚ್ಚಿದ್ದಾರೆ. ಜಿಯೋ ಸ್ಟುಡಿಯೋಸ್, ರೆಡ್ ಚಿಲ್ಲೀಸ್ ಎಂಟರ್‌ಟೈನ್ಮೆಂಟ್ ಮತ್ತು ರಾಜ್‌ಕುಮಾರ್ ಹಿರಾನಿ ಫಿಲ್ಮ್ಸ್‌ನಡಿ ರಾಜ್‌ಕುಮಾರ್ ಹಿರಾನಿ ಮತ್ತು ಗೌರಿ ಖಾನ್ ನಿರ್ಮಿಸಿದ್ದಾರೆ. ಅಭಿಜಾತ್ ಜೋಷಿ, ರಾಜ್‌ಕುಮಾರ್ ಹಿರಾನಿ ಮತ್ತು ಕನಿಕಾ ಧಿಲ್ಲೋನ್ ಚಿತ್ರಕ್ಕೆ ಕಥೆ ಬರೆದಿದ್ದಾರೆ. ಸಿನಿಮಾ ಇದೇ ಕ್ರಿಸ್‌ಮಸ್‌ಗೆ ವಿಶ್ವದಾದ್ಯಂತ ತೆರೆಕಾಣಲಿದೆ.

ಪ್ರಜ್ವಲ್ ಹೊಸ ಪ್ರಾಜೆಕ್ಟ್ 'ಚೀತಾ'

ನೃತ್ಯ ನಿರ್ದೇಶಕ ರಾಜ ಕಲೈ ಕುಮಾರ್ ಸಿನಿಮಾ ನಿರ್ದೇಶನದತ್ತ ಹೆಜ್ಜೆ ಇಟ್ಟಿದ್ದಾರೆ. ತಮ್ಮ ನಿರ್ದೇಶನದ ಚೊಚ್ಚಲ ಸಿನಿಮಾದಲ್ಲೇ ಪ್ರಜ್ವಲ್ ದೇವರಾಜ್‌ಗೆ ಆ್ಯಕ್ಷನ್ ಕಟ್ ಹೇಳಲು ರಾಜ ಕಲೈ ಸಜ್ಜಾಗಿದ್ದಾರೆ.

ಪ್ರಜ್ವಲ್ ದೇವರಾಜ್ ನಾಯಕರಾಗಿ ನಟಿಸುತ್ತಿರುವ ಈ ಚಿತ್ರಕ್ಕೆ 'ಚೀತಾ' ಎಂಬ ಶೀರ್ಷಿಕೆ ಇಡಲಾಗಿದೆ. ಕನ್ನಡ ರಾಜ್ಯೋತ್ಸವದಂದೇ ಚಿತ್ರದ ಶೀರ್ಷಿಕೆ ಅನಾವರಣಗೊಂಡಿದೆ. 'ಕಳೆದ 23 ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ಡ್ಯಾನ್ಸರ್ ಆಗಿ, ಡ್ಯಾನ್ಸ್ ಮಾಸ್ಟರ್ ಆಗಿ ಕಾರ್ಯ ನಿರ್ವಹಿಸಿದ್ದೇನೆ. ಪ್ರಜ್ವಲ್ ಅವರ 39ನೇ ಚಿತ್ರವನ್ನು ನಾನು ನಿರ್ದೇಶಿಸುತ್ತಿದ್ದೇನೆ. ಇದೊಂದು ಮಾರ್ಕೆಟ್‌ನಲ್ಲಿ ನಡೆಯುವ ಕಥೆ. ಮಾರ್ಕೆಟ್‌ನಲ್ಲಿನ ವ್ಯಾಪಾರ, ವಹಿವಾಟು ಹಾಗೂ ಅಲ್ಲಿ ಕೆಲಸ ಮಾಡುವವರು ಎಲ್ಲವುದಕ್ಕೂ ವೇಗವಿದೆ. ನಮ್ಮ ಚಿತ್ರದ ನಾಯಕ ಕೂಡ ಚಿರತೆಯಷ್ಟೇ ವೇಗದವನು. ಹೀಗಾಗಿ ಈ ಶೀರ್ಷಿಕೆ ಇಡಲಾಗಿದೆ. ಕಲಾ ನಿರ್ದೇಶಕ ಶಿವು ಅವರು ಅದ್ದೂರಿ ಮಾರ್ಕೆಟ್ ಸೆಟ್ ನಿರ್ಮಾಣ ಮಾಡುತ್ತಿದ್ದಾರೆ. ಆ ಸೆಟ್‌ನಲ್ಲೇ ಚಿತ್ರದ ಬಹುತೇಕ ಚಿತ್ರೀಕರಣ ನಡೆಯಲಿದೆ' ಎನ್ನುತ್ತಾರೆ ರಾಜ ಕಲೈ ಕುಮಾರ್.

ಪ್ರಜ್ವಲ್ ದೇವರಾಜ್

ಶ್ರುತಿ ಹರಿಹರನ್, ಗುರುರಾಜ್ ಜಗ್ಗೇಶ್, ಶಿವರಾಜ ಕೆ.ಆರ್ ಪೇಟೆ, ತೆಲುಗು ನಟ ಸುನೀಲ್, ಗೋವಿಂದೇಗೌಡ, ಅಭಯ್ ಪುನೀತ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ನ.6ರಿಂದ ಚಿತ್ರೀಕರಣ ಆರಂಭವಾಗಲಿದೆ ಎಂದಿದೆ ಚಿತ್ರತಂಡ.

ಗುಂಡಣ್ಣ

ಎಲ್ಲ ಸಮಸ್ಯೆಗಳಿಗೂ ಇದೆ ಸರಳ ಮುಖ

ನುಡಿ ಬೆಳಗು

ಪ್ರೊ.ಎಂ. ಕೃಷ್ಣೇಗೌಡ

ಒಂದು ದಿನ ಬೆಳಬೆಳಿಗ್ಗೆ ಮಾಸ್ತಿ ಅವರ ಮನೆಗೆ ಅಪರಿಚಿತ ಗೃಹಸ್ಥರೊಬ್ಬರು ಬಂದು ಮನೆಯ ಬಾಗಿಲು ತಟ್ಟಿದರು. ಮಾಸ್ತಿ ಅವರೇ ಬಂದು ಬಾಗಿಲು ತೆರೆದರು.

'ಇದು ಮಾಸ್ತಿಯವರ ಮನೆ...?'

'....ಹೌದು, ನಾನೇ ಮಾಸ್ತಿ. ಒಳಗೆ ಬನ್ನಿ.'

ಅವರು ಮನೆಯೊಳಗೆ ಬಂದು ಕುಳಿತು- 'ಮಹಾಸ್ವಾಮಿ, ನಾನು ತಮಗೆ ಪರಿಚಯವಿಲ್ಲ. ನನ್ನದೊಂದು ಸಮಸ್ಯೆ ಇದೆ. ಯಾರೋ ಹೇಳಿದರು, 'ಇಲ್ಲೇ ಗವಿಪುರಂನಲ್ಲಿ ಮಾಸ್ತಿ ಅವರಿದ್ದಾರೆ. ಅವರು ತುಂಬಾ ಲೋಕಜ್ಞಾನ ಇರುವ ಪುಣ್ಯಾತ್ಮರು. ಅವರನ್ನು ಕಂಡು ನಿಮ್ಮ ಸಂಕಟ ಹೇಳಿಕೊಳ್ಳಿ. ನೀವು ಏನು ಮಾಡಬೇಕೆಂದು ಅವರು ಹೇಳಿಯಾರು' ಅಂತ. ಅದಕ್ಕೇ ತಮ್ಮ ಸನ್ನಿಧಾನಕ್ಕೆ ಬಂದೆ ಸ್ವಾಮಿ' ಅಂದರು.

ಮಾಸ್ತಿಯವರು 'ಏನು ಹೇಳಿ' ಅಂದರು.

ಆ ಗೃಹಸ್ಥರು, 'ಸ್ವಾಮಿ, ನನಗೆ ಒಬ್ಬನೇ ಮಗ. ತುಂಬಾ ಪ್ರೀತಿಯಿಂದ ಸಾಕಿದೆವು. ನನ್ನ ಮಗ ಬಹಳ ಚೂಟಿ. ಓದಿನಲ್ಲಿ ಯಾವಾಗಲೂ ಕ್ಲಾಸಿಗೇ ಮೊದಲನೆಯವನು. ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲೆಲ್ಲಾ ರ‍್ಯಾಂಕ್ ಹೊಡೆದ. ಎಂಜಿನಿಯರಿಂಗ್ ಓದಿದ. ಒಳ್ಳೆ ಕೆಲಸವೂ ಸಿಕ್ಕಿತು. ನಮ್ಮ ಕಲ್ಪನೆಗೂ ನಿಲುಕದಷ್ಟು ದೊಡ್ಡ ಸಂಬಳ. ಎರಡು ವರ್ಷದ ಹಿಂದೆ ಮದುವೆಯೂ ಆಯಿತು. ಎಲ್ಲಾ ಸಂತೋಷವಾಗೇ ನಡೀತಾ ಇತ್ತು. ಆದರೆ ಈಗ ಒಂದು ವಾರದಿಂದ ನನಗೆ ಮುಖಕೊಟ್ಟೇ ಮಾತಾಡ್ತಾ ಇಲ್ಲ. ನಾನೇ ಮಾತಾಡಿಸಿದರೆ ಸಿಡುಕ್ತಾನೆ... ಇರುವ ಒಬ್ಬ ಮಗನ ಪ್ರೀತಿಯನ್ನೂ ಕಳೆದುಕೊಂಡು ನಾನು ಏಕಾದರೂ ಬದುಕಿರಬೇಕು ಅನ್ನಿಸಿದೆ...'.

ಮಾಸ್ತಿ ಮೃದುವಾಗಿ ಅವರ ಬೆನ್ನಮೇಲೆ ಕೈಯಾಡಿಸಿ, 'ಸಮಾಧಾನವಾಗಿರಿ, ನಾನು ನಿಮಗೆ ಒಂದು ಮಾತು ಹೇಳಬೇಕನ್ನಿಸ್ತಾ ಇದೆ. ನಿಮ್ಮ ಹುಡುಗ ಹುಟ್ಟಿದಾರಭ್ಯ ಇಲ್ಲಿಯವರೆಗೂ ಬರೀ ಸಂತೋಷವನ್ನೇ ಕೊಟ್ಟಿದ್ದಾನೆ. ಅದನ್ನು ನೀವು ಯಥೇಚ್ಛವಾಗಿ ಅನುಭವಿಸಿದ್ದೀರಿ, ಆನಂದಿಸಿದ್ದೀರಿ. ಈಗ ಅವನ ಕಷ್ಟ ತುಮುಲ ಏನಿದೆಯೋ, ಇಷ್ಟು ವರ್ಷ ಸುಖವನ್ನು ಕೊಟ್ಟವನು ಈಗ ಒಂದು ವಾರ ಕಷ್ಟ ಕೊಟ್ಟ ಎಂದು ಇಷ್ಟೊಂದು ಬೇಸರ ಮಾಡಿಕೊಂಡಿದ್ದೀರಲ್ಲ, ಹೇಗೆ ಲೆಕ್ಕ ಹಾಕಿದರೂ ಅವನು ನಿಮಗೆ ಕೊಟ್ಟ ಸಂತೋಷದ ಭಾಗವೇ ಅಧಿಕವಾಗುತ್ತಲ್ಲ, ಒಂದೆರಡು ದಿನ ಸಮಾಧಾನವಾಗಿರಿ. ಆಮೇಲೆ ಸಮಯ ನೋಡಿ ಮಗನೊಂದಿಗೆ ಮಾತಾಡಿ...'

ಈ ಸಮಸ್ಯೆಗೆ ಇಂಥದೊಂದು ಸರಳ ಮುಖವೂ ಇದೆಯಲ್ಲ ಅಂತ ಆ ಗೃಹಸ್ಥರಿಗೆ ಮನಸ್ಸು ಹಗುರವಾಯಿತು. ಮಾಸ್ತಿಯವರ ಪಾದ ಮುಟ್ಟಿ ನಮಸ್ಕರಿಸಿ ಹೊರಗೆ ಬಂದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ನವೆಂಬರ್ 3, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಷಷ್ಠಿ ಗಂ. 23-08 ನಕ್ಷತ್ರ: ಪುನರ್ವಸು ಅಹೋರಾತ್ರ ಯೋಗ: ಸಿದ್ಧ ಗಂ 12-53 ಕರಣ: ಗರ ಗಂ. 10-25, ತುಲಾ ಮಾಸದ 17 ನೇ ದಿನ, ಮಳೆನಕ್ಷತ್ರ: ಸ್ವಾತಿ 4. ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-29 ಸೂರ್ಯಾಸ್ತ : 05-59
ಮುಸ್ಲಿಂ ದಿನಾಂಕ : 18 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ : 9, 5

ಮೇಷ: ಪಾಲುದಾರಿಕೆಯ ವ್ಯವಹಾರದಲ್ಲಿ ಈ ದಿನ ಯಾವುದೇ ತೀರ್ಮಾನ ತೆಗೆದುಕೊಳ್ಳುವುದು ಸರಿಯಲ್ಲ. ಕೆಲಸದಲ್ಲಿ ಹೆಚ್ಚಿನ ಸ್ವಾತಂತ್ರ್ಯ ಸಿಗಲಿದೆ. ನೆರೆಹೊರೆಯವರ ವೈಷಮ್ಯ ಮನೋಭಾವಗಳು ಅನುಭವಕ್ಕೆ ಬರಲಿದೆ.

ವೃಷಭ: ಐಷಾರಾಮಿ ಮಟ್ಟದ ಜೀವನ ನಿರ್ವಹಣೆಯು ಆರ್ಥಿಕ ನಷ್ಟಕ್ಕೆ ಕಾರಣವಾಗುವುದು. ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸಿದ ಸಂತೋಷ ಸಿಗುವುದು. ಆಗಾಗ ಮನಸ್ಸಿನಲ್ಲಿ ಕಾಡುವ ಭಯಕ್ಕೆ ಹೆದರುವ ಅವಶ್ಯಕತೆ ಇಲ್ಲ.

ಮಿಥುನ: ಗ್ರಹದ ಚಲನೆಯು ಕೆಲಸದಲ್ಲಿದ್ದಂತಹ ಅಡೆತಡೆಗಳನ್ನು ನಿವಾರಣೆ ಮಾಡುವುದು. ಪ್ರಯತ್ನಕ್ಕೆ ಸರಿಯಾಗಿ ಸಂಪಾದನೆಯನ್ನು ಉಳಿಸಿಕೊಳ್ಳಲು ಅಸಾಧ್ಯವಾಗಲಿದೆ. ಅಕ್ಕಪಕ್ಕದವರ ವದಂತಿಗಳಿಗೆ ಕಿವಿಗೊಡದಿರಿ.

ಕರ್ಕಾಟಕ: ಸರ್ಕಾರಿ ವೃತ್ತಿಯವರಿಗೆ ಸ್ಥಾನ ಪಲ್ಲಟ ಯೋಗ ಅಥವಾ ನೂತನ ಕ್ಷೇತ್ರದ ಹೊಣೆಗಾರಿಕೆಯನ್ನು ವಹಿಸಬೇಕಾದ ಸ್ಥಿತಿ ಎದುರಾಗಲಿದೆ. ನಿಮ್ಮದೇ ಆದಂತಹ ಜವಾಬ್ದಾರಿಯುತ ಕಾರ್ಯಗಳ ಬಗ್ಗೆ ಗಮನವಿರಲಿ.

ಸಿಂಹ: ಒಂದು ವಿಚಾರದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳದೇ ಯಾವುದೇ ರೀತಿಯ ತೀರ್ಮಾನ ತೆಗೆದುಕೊಳ್ಳಬೇಡಿ. ಉದ್ಯೋಗದಲ್ಲಿ ಹೆಸರುಗಳಿಸುವ ಪ್ರಯತ್ನಕ್ಕೆ ಶುಭವಾಗುತ್ತದೆ. ಕೆಲಸದಲ್ಲಿ ಪ್ರಾಮಾಣಿಕ ಶ್ರಮವಿರಲಿ.

ಕನ್ಯಾ: ಹಲವಾರು ಆಸಕ್ತಿದಾಯಕ ವಿಚಾರಗಳು ನಿಮ್ಮ ಕಿವಿಗೆ ಬೀಳಲಿದೆ. ಕೋರ್ಟು ವಿಚಾರಗಳಿಗಾಗಿ ಪ್ರಯಾಣ ಬೆಳೆಸಬೇಕಾಗುವುದು. ಮಾನಸಿಕ ಕೊರಗು ನಿಮ್ಮ ಸಂತೋಷಕ್ಕೆ ಭಂಗ ಉಂಟುಮಾಡುವುದು.

ತುಲಾ: ಹಣಕಾಸಿನ ವಿಚಾರದಲ್ಲಿ ಮತ್ತೊಬ್ಬರಲ್ಲಿ ವ್ಯವಹರಿಸುವಾಗ ದಾಕ್ಷಿಣ್ಯಕ್ಕೆ ಸಿಕ್ಕಿಕೊಳ್ಳದೇ ಇರುವ ರೀತಿಯಲ್ಲಿ ವ್ಯವಹರಿಸಿ. ದುರಭ್ಯಾಸಗಳು ಹೊಂದಿದ ಸ್ನೇಹಿತರಿಂದ ಆಪತ್ತಿಗೆ ಸಿಲುಕುವಂತಾಗಿ ಅಶಾಂತಿ ಹೊಂದುವಿರಿ.

ವೃಶ್ಚಿಕ: ಕೆಲಸ ಕಾರ್ಯಗಳ ಬಗ್ಗೆ ನಿಗಾ ಕೊಡುವಂತೆ ಅಧಿಕಾರಿಗಳಿಂದ ತೀವ್ರ ಸಂದೇಶ ಬರಲಿದೆ. ಕನಸುಗಳು ಸಾಕಾರಗೊಳ್ಳಬೇಕಾದರೆ ಅವಿಶ್ರಾಂತ ದುಡಿಮೆ ಅಗತ್ಯ. ಪ್ರತಿಷ್ಠಿತ ಮತ್ತು ಪ್ರಭಾವಿ ವ್ಯಕ್ತಿಗಳ ಪರಿಚಯವಾಗಲಿದೆ.

ಧನು: ದಂಪತಿ ಮಧ್ಯೆ ಅನವಶ್ಯಕವಾದ ವಾದ ವಿವಾದವು ಸಂಬಂಧವನ್ನು ಹಾಳುಮಾಡಬಹುದು. ಕೈ ಬಿಟ್ಟಿರುವ ಯೋಜನೆಗಳನ್ನು ಮತ್ತೆ ಮುಂದುವರಿಸಲು ಒತ್ತಡ ಬರಬಹುದು. ಯಾವುದೇ ಚಿಂತೆ ಬೇಡ.

ಮಕರ: ಗೃಹ ನಿರ್ಮಾಣದಂತಹ ಕಾರ್ಯ ಕೈಗೊಂಡವರಿಗೆ ಆರ್ಥಿಕತೆ ಸ್ವಲ್ಪ ಮಟ್ಟಿನ ತೊಂದರೆ ಸೃಷ್ಟಿ ಮಾಡುವುದು. ಇಷ್ಟು ದಿನ ನಿಮ್ಮಲ್ಲಿದ್ದ ಅಭದ್ರತೆಯ ಭಾವ ಈ ದಿನದಿಂದ ಬಿಟ್ಟು ಹೋಗಲಿದೆ. ದೈಹಿಕ ಆಯಾಸ ಉಂಟಾಗುವುದು.

ಕುಂಭ: ಕೆಲಸ ನಿಧಾನವಾಗಿ ನಡೆದರೂ ಸಹಚರರು ಸಮರ್ಪಕವಾಗಿ ಪೂರೈಸಿ ಕೊಡುವರು. ಸದ್ಯದ ಪರಿಸ್ಥಿತಿಯಲ್ಲಿ ಇರುವ ಕೆಲಸ ಬಿಡುವ ಯೋಚನೆ ಸರಿಯೆನಿಸುವುದಿಲ್ಲ. ಶ್ರೀದೇವಿ ಸ್ತುತಿಯಿಂದ ಮನಸ್ಸಿಗೆ ನೆಮ್ಮದಿ ಇರುವುದು.

ಮೀನ: ಕೆಲಸಗಳ ಬಗ್ಗೆ ಪುನರಾವಲೋಕ ಮಾಡುವುದು, ಸಲಹೆಯನ್ನು ಸ್ವೀಕರಿಸುವುದು ಒಳ್ಳೆಯದು. ವೃತ್ತಿಯಲ್ಲಿ ಪ್ರತಿಸ್ಪರ್ಧಿಗಳ ಆಪಾದನೆಗಳಿಗೆ ತೀಕ್ಷ್ಣ ಪ್ರತಿಕ್ರಿಯೆಯನ್ನು ನೀಡುವಿರಿ. ರಫ್ತು ವ್ಯವಹಾರ ಲಾಭ ನೀಡುವುದು.

ಪದಬಂಧ 5489

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಶುರುವಾಗಿರುವ ಒಕ್ಕಲುತನ! (3)
4. ದೇಹವನ್ನು ನೋಡಿದಾಗಲೇ ಈ ಶಂಕೆ! (3)
6. ನಿಗದಿತ ಬೆಲೆಗಿಂತ ಹೆಚ್ಚು ಹಣವನ್ನು ಬಯಸುವವ (5)
7. ತರತಮ ಮಾಡುವಾಗಲೇ ಆವರಿಸಿದ ಕತ್ತಲು (2)
9. ತಡಬಡವೆಂದರೂ ಇದು ನಿಧಾನ (2)
10. ಸರಕ್ಕನೆ ಧರಿಸಿರುವ ಮಾಲೆ (2)
11. ಗುಗ್ಗುರಿ ತಿನ್ನುವತ್ತಲೇ ಲಕ್ಷ್ಯ (2)
16. ಒಳ್ಳೆತನದ ಸೋಗಿನಲ್ಲಿ ವಂಚನೆ ಮಾಡುವವನು (5)
17. ಮಧ್ಯದಲ್ಲೇ ಪ್ರಾರಂಭವಾದ ಕಂಪನ 3)
18. ಕೊನೆಗೆ ಸ್ಮೃತಿಯಿದ್ದರೂ ಇದು ಮರೆವೆ (3)

ಮೇಲಿಂದ ಕೆಳಕ್ಕೆ

1. ಕಾಂತನನ್ನು ಆಕರ್ಷಿಸಿದ ಸೂಜಿಗಲ್ಲು (4)
2. ಈತ ಬಲು ಶಕ್ತಿಶಾಲಿ (3)
3. ಮೂಗಿನಿಂದ ಸುರಿವ ಶ್ಲೇಷ್ಮ (3)
4. ವೆಂಕಟರಮಣನನ್ನು ನೆನೆವುದು ಹೀಗೆ ದುಃಖ ಬಂದಾಗ (3)
5. ಕಗ್ಗೊಲೆಯ ಘಟನೆ (4)
8. ಮರವನ್ನೇರಿರುವ ಕೇಕಿ (3)
9. ತರಗುಪೇಟೆಯ ಬಳಿ ಬಿದ್ದಿರುವ ಒಣಗಿದ ಎಲೆ (3)
10. ನೆಮ್ಮದಿ ಈ ರೀತಿ ಬಂದಿದೆ (4)
12. ಯತಿಗೆ ಸಿಗುತ್ತಿರುವ ಸೋಡಿ! (4)
13. ಮಂದಿಯ ಹತ್ತಿರ ತಂದೆ ನಿಂತಿದ್ದಾರೆ (3)
14. ಆತುರಕ್ಕೊಂದು ಪರ್ಯಾಯ ಪದ (3)
15. ಈತ ಅಧಮ ಕವಿ (3)



5488ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಕಿತಾಪತಿ 5.ಜಾಯಮಾನ
6.ಕುಡಿನೋಟ
8.ಮಡಿವಾಳ 12.ವನಸುಮ
14.ನಿರಾಯುಧ 15.ಅಂತರ್ವಾಣಿ
16.ಯಮಭಾರ

ಮೇಲಿಂದ ಕೆಳಕ್ಕೆ:
1.ಅಜಾತಶತ್ರು 2.ಸಮಾಗಮ
3.ಕಿರುಕುಳ 4.ತಿಕ್ಕಾಟ
7.ನೋವು
9.ವಾಮನ 10.ಮದುವಣಿಗ
11.ನೀರಾ 12.ವಧಕಾರ
13.ಮನೆತನ 14.ನಿಶ್ಚಯ

ಸುಡೊಕು 5875

4		7		8			2	
	3							8
6		5		9		4		
	2		6				3	5
5		3	2		1	8		9
	1				9		4	2
	6			2				
		8	9					7
	5			3	4		9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5874 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಷೇರುಪೇಟೆ ವಹಿವಾಟು ▲ 489



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,989
ಇಂದಿನ ಅಂತ್ಯ	19,133
▲	144
ದಿನದ ಗರಿಷ್ಠ	19,175

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹570

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1540)
ಸೋಯಾ (ರಿಫೈನ್ಡ್)	₹910 (915)
ಸೂರ್ಯಕಾಂತಿ (ರಿಫೈನ್ಡ್)	₹910 (915)
ಪಾಮೋಲಿನ್	₹820 (813)

ವಿನಿಮಯ ದರ

$ ಡಾಲರ್	83.27
£ ಪೌಂಡ್	101.44
€ ಯುರೊ	88.40
¥ ಯೆನ್ (100ಕ್ಕೆ)	55

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಕೆ.ಆರ್.ಪೇಟೆ	₹8300-8408
ತಿಪಟೂರು	₹8000-9000
ತುಮಕೂರು	₹4100-5500
ತುರುವೇಕೆರೆ	₹8600-8700

ಮುದ್ದಮನ ಕಾಫಿ (50 ಕೆಜಿಗೆ)

ಎಪಿ	₹10800
ಎಸಿ	₹6440
ಆರ್‌ಪಿ	₹9800
ಆರ್‌ಸಿ	₹5960

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148
ಆರ್‌ಎಸ್‌ಎಸ್-5	₹142.50
ಗುಡ್ ಲಾಟ್	₹131.50

ಕರ್ಣಾಟಕ ಬ್ಯಾಂಕ್ ಲಾಭ ಶೇ 20ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಕರ್ಣಾಟಕ ಬ್ಯಾಂಕ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 20ರಷ್ಟು ಇಳಿಕೆ ಕಂಡು ₹330 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಲಾಭವು ₹412 ಕೋಟಿಯಷ್ಟು ಇತ್ತು. ಒಟ್ಟು ವರಮಾನವು ₹2,031 ಕೋಟಿಯಿಂದ ₹2,276 ಕೋಟಿಗೆ ಏರಿಕೆ ಕಂಡಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ನಿವ್ವಳ ಬಡ್ಡಿ ವರಮಾನ ₹802 ಕೋಟಿಯಿಂದ ₹822 ಕೋಟಿಗೆ ಏರಿಕೆ ಕಂಡಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಎನ್‌ಪಿಎ) ಶೇ 3.36 ರಿಂದ ಶೇ 3.47ಕ್ಕೆ ಏರಿಕೆ ಕಂಡಿದೆ. ಆದರೆ, ನಿವ್ವಳ ಎನ್‌ಪಿಎ ಶೇ 1.72 ರಿಂದ ಶೇ 1.36ಕ್ಕೆ ಇಳಿಕೆ ಕಂಡಿದೆ ಎಂದು ಬ್ಯಾಂಕ್ ಹೇಳಿದೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹257-503
ದ್ವಿತಳಿ (ಬಿ.ವಿ)	₹250-622

ಅದಾನಿ ತೆಕ್ಕೆಗೆ ಕ್ವಿಂಟಿಲಿಯನ್ ಬಿಸಿನೆಸ್ ಮೀಡಿಯಾ

ನವದೆಹಲಿ (ಪಿಟಿಐ): ಬಿಕ್ಯು ಪ್ರೈಮ್ ಡಿಜಿಟಲ್ ಮೀಡಿಯಾವನ್ನು ನಡೆಸುತ್ತಿರುವ ಕ್ವಿಂಟಿಲಿಯನ್ ಬಿಸಿನೆಸ್ ಮೀಡಿಯಾ ಪ್ರೈವೇಟ್ ಲಿಮಿಟೆಡ್‌ನ (ಕ್ಯುಬಿಎಂಎಲ್) ಸಂಪೂರ್ಣ ಒಡೆತನ ಹೊಂದಲು ಅದಾನಿ ಸಮೂಹದ ಮುಂದಡಿ ಇಟ್ಟಿದೆ. ಈಗಾಗಲೇ ಶೇ 49ರಷ್ಟು ಷೇರುಪಾಲನ್ನು ಹೊಂದಿರುವ ಸಮೂಹವು ಇನ್ನುಳಿದ ಶೇ 51ರಷ್ಟು ಷೇರುಗಳನ್ನು ಸಹ ಖರೀದಿಸಲು ಒಪ್ಪಂದ ಮಾಡಿಕೊಂಡಿದೆ.

ಕ್ಯುಬಿಎಂಎಲ್‌ನಲ್ಲಿ ಇರುವ ಶೇ 51ರಷ್ಟು ಷೇರುಗಳನ್ನು ಖರೀದಿಸುವ ಒಪ್ಪಂದಕ್ಕೆ ಬರಲಾಗಿದೆ ಎಂದು ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್‌ನ ಅಂಗಸಂಸ್ಥೆ ಎಎಂಜಿ ಮೀಡಿಯಾ ನೆಟ್‌ವರ್ಕ್ ಲಿಮಿಟೆಡ್ ಗುರುವಾರ ಷೇರುಪೇಟೆಗೆ ಮಾಹಿತಿ ನೀಡಿದೆ. ಆದರೆ ಷೇರು ಖರೀದಿಯ ಮೊತ್ತವನ್ನು ಬಹಿರಂಗಪಡಿಸಿಲ್ಲ.

ಅದಾನಿ ಸಮೂಹವು ಕ್ಯುಬಿಎಂಎಲ್‌ನಲ್ಲಿ ಶೇ 49ರಷ್ಟು ಷೇರುಗಳನ್ನು ₹47.84 ಕೋಟಿಗೆ ಈ ಹಿಂದೆಯೇ ಖರೀದಿಸಿದೆ. ಬಿಕ್ಯು ಪ್ರೈಮ್‌ಗೆ ಈ ಮೊದಲು ಬ್ಲೂಮ್‌ಬರ್ಗ್ ಕ್ವಿಂಟ್ ಎನ್ನುವ ಹೆಸರಿತ್ತು. ಅಮೆರಿಕದ ಬ್ಲೂಮ್‌ಬರ್ಗ್ ಮೀಡಿಯಾ ಮತ್ತು ರಾಘವ್ ಬಹ್ಲ್ ಒಡೆತನದ ಕ್ವಿಂಟಿಲಿಯನ್ ಮೀಡಿಯಾದ ಜಂಟಿ ಸಂಸ್ಥೆ ಇದಾಗಿತ್ತು. ಆದರೆ, ಕಳೆದ ವರ್ಷದ ಮಾರ್ಚ್‌ನಲ್ಲಿ ಜಂಟಿ ಪಾಲುದಾರಿಕೆಯಿಂದ ಬ್ಲೂಮ್‌ಬರ್ಗ್ ಹೊರಬಂದಿದೆ.

ಕಳೆದ ಡಿಸೆಂಬರ್‌ನಲ್ಲಿ ಅದಾನಿ ಸಮೂಹವು ಎನ್‌ಡಿಟಿವಿಯ ಶೇ 65ರಷ್ಟು ಷೇರುಪಾಲನ್ನು ಖರೀದಸಿದೆ.

ಅದಾನಿ ಎಂಟರ್‌ಪ್ರೈಸಸ್ ಲಾಭ ಶೇ 50ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 50.5ರಷ್ಟು ಕುಸಿತ ಕಂಡು ₹222.82 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹461 ಕೋಟಿಯಷ್ಟು ನಿವ್ವಳ ಲಾಭ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. ಗಣಿ ವಹಿವಾಟಿನಲ್ಲಿ ನಷ್ಟ ಮತ್ತು ಕಾರ್ಯಾಚರಣಾ ವೆಚ್ಚ ಹೆಚ್ಚಾಗಿರುವ ಕಾರಣಗಳಿಂದಾಗಿ ಲಾಭದಲ್ಲಿ ಕುಸಿತ ಕಂಡುಬಂದಿದೆ ಎಂದು ಅದು ತಿಳಿಸಿದೆ.

ಕಾರ್ಯಾಚರಣಾ ವರಮಾನ ₹38,175 ಕೋಟಿಯಿಂದ ₹22,517 ಕೋಟಿಗೆ ಇಳಿಕೆ ಕಂಡಿದೆ. ಗಣಿ ವಹಿವಾಟಿನ ನಷ್ಟವು ₹132 ಕೋಟಿಯಿಂದ ₹340 ಕೋಟಿಗೆ ಏರಿಕೆ ಕಂಡಿದೆ. ಕಾರ್ಯಾಚರಣಾ ವೆಚ್ಚವು ಶೇ 8ರಷ್ಟು ಹೆಚ್ಚಾಗಿದೆ ಎಂದು ಕಂಪನಿ ಹೇಳಿದೆ.

ಟಾಟಾ ಮೋಟರ್ಸ್ ಲಾಭ ₹3,783 ಕೋಟಿ

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್ ಕಂಪನಿಯು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹3,783 ಕೋಟಿ ನಿವ್ವಳ ಲಾಭ ಗಳಿಸಿದೆ.

ಮುಖ್ಯವಾಗಿ, ಜಾಗ್ವರ್ ಲ್ಯಾಂಡ್ ರೋವರ್ ಮಾರಾಟ ಉತ್ತಮವಾಗಿ ಇರುವುದೇ ಈ ಲಾಭಕ್ಕೆ ಕಾರಣ ಎಂದು ಕಂಪನಿ ತಿಳಿಸಿದೆ. ಕಂಪನಿಯು ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹1,004 ಕೋಟಿ ಲಾಭ ಗಳಿಸಿತ್ತು.

ಕಾರ್ಯಾಚರಣಾ ವರಮಾನವು ₹79,611 ಕೋಟಿಯಿಂದ ₹1.05 ಲಕ್ಷ ಕೋಟಿಗೆ ಏರಿಕೆ ಕಂಡಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಾಗ್ವರ್ ಲ್ಯಾಂಡ್ ರೋವರ್‌ನ ವರಮಾನವು ಶೇ 30ರಷ್ಟು ಹೆಚ್ಚಾಗಿ ₹69,690 ಕೋಟಿಗೆ ತಲುಪಿದೆ.

ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ತಯಾರಿಕೆ ಮತ್ತು ಸಗಟು ಮಾರಾಟವು ಹೆಚ್ಚಾಗುವ ನಿರೀಕ್ಷೆ ಮಾಡಿರುವುದಾಗಿ ಕಂಪನಿ ತಿಳಿಸಿದೆ. ಪ್ರಸಕ್ತ ಹಣಕಾಸು ವರ್ಷಕ್ಕೆ ಗಳಿಕೆಯು (ಇಬಿಐಟಿ) ಶೇ 8ಕ್ಕೆ ಏರಿಕೆ ಆಗುವ ನಿರೀಕ್ಷೆ ಮಾಡಲಾಗಿದೆ. ಈ ಮೊದಲು ಶೇ 6ಕ್ಕಿಂತ ಹೆಚ್ಚಿರುವ ಅಂದಾಜು ಮಾಡಲಾಗಿತ್ತು ಎಂದು ಹೇಳಿದೆ.

‘ಅಂಚೆ ಮೂಲಕವೂ ₹2 ಸಾವಿರದ ನೋಟು ಆರ್‌ಬಿಐಗೆ ಕಳಿಸಿ’

ನವದೆಹಲಿ(ಪಿಟಿಐ): ಜನರು ₹2000 ಮುಖಬೆಲೆಯ ನೋಟುಗಳನ್ನು ಅಂಚೆ ಮೂಲಕವೂ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಪ್ರಾದೇಶಿಕ ಕಚೇರಿಗಳಿಗೆ ಕಳುಹಿಸಬಹುದು ಎಂದು ಆರ್‌ಬಿಐ ಗುರುವಾರ ಹೇಳಿದೆ.

ನೋಟು ವಿನಿಮಯಕ್ಕೆ ಸಾಲಿನಲ್ಲಿ ನಿಲ್ಲುವುದನ್ನು ತಪ್ಪಿಸಲು ಮತ್ತು ಆರ್‌ಬಿಐನ ಪ್ರಾದೇಶಿಕ ಕಚೇರಿಗಳಿಂದ ದೂರ ಇರುವವರಿಗೆ ಇದರಿಂದ ಅನುಕೂಲ ಆಗಲಿದೆ ಎಂದು ಹೇಳಿದೆ. ಸದ್ಯದ ಮಟ್ಟಿಗೆ ಆರ್‌ಬಿಐ ಕಚೇರಿಗಳಲ್ಲಿ ಈ ನೋಟು ಬದಲಿಸಿಕೊಳ್ಳಲು ಯಾವುದೇ ಗಡುವು ವಿಧಿಸಿಲ್ಲ.

ಶೇ 97ಕ್ಕೂ ಅಧಿಕ ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿದ್ದು, ಇನ್ನು ₹10 ಸಾವಿರ ಕೋಟಿ ಮೊತ್ತದ ನೋಟುಗಳು ಹಿಂದಿರುಗಬೇಕಿದೆ ಎಂದು ಆರ್‌ಬಿಐ ಮಾಹಿತಿ ನೀಡಿದೆ.

ದೇಶದ 119 ದಾನಿಗಳ ಪಟ್ಟಿ ಬಿಡುಗಡೆ ಮಾಡಿದ ಹುರೂನ್ ಇಂಡಿಯಾ

ಶಿವ ನಾಡಾರ್ ಮಹಾದಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಸಿಎಲ್ ಟೆಕ್ನಾಲಜೀಸ್ ಕಂಪನಿಯ ಸಂಸ್ಥಾಪಕ ಶಿವ ನಾಡಾರ್ ಅವರು ಸತತ 2ನೇ ಬಾರಿಯೂ ದೇಶದ ಮಹಾದಾನಿ ಆಗಿದ್ದಾರೆ. ಶಿವ ನಾಡರ್ ಅವರು ಒಂದು ವರ್ಷದ ಅವಧಿಯಲ್ಲಿ ಒಟ್ಟು ₹2,042 ಕೋಟಿ ದಾನ ಮಾಡಿದ್ದು, ದಾನಿಗಳ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದುಕೊಂಡಿದ್ದಾರೆ.

ಹುರೂನ್ ಇಂಡಿಯಾ ಸಂಸ್ಥೆಯು ಎಡೆಲ್‌ಗಿವ್ ಸಂಸ್ಥೆಯ ಜೊತೆ ಸೇರಿ ಬಿಡುಗಡೆ ಮಾಡಿರುವ ವರದಿಯಲ್ಲಿ ಈ ಮಾಹಿತಿ ಇದೆ. ₹ 5 ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತವನ್ನು ದಾನ ನೀಡಿರುವವರನ್ನು ಪರಿಗಣಿಸಲಾಗಿದೆ.

2022ರ ಏಪ್ರಿಲ್ 1 ರಿಂದ 2023ರ ಮಾರ್ಚ್ 31ರ ಅವಧಿಯಲ್ಲಿ ದೇಶದ 119 ಮಹಾದಾನಿಗಳು ಒಟ್ಟು ₹8,445 ಕೋಟಿ ದಾನ ನೀಡಿದ್ದಾರೆ. ಕಳೆದ ವರ್ಷ ನೀಡಿದ್ದ ದಾನದ ಮೊತ್ತಕ್ಕೆ ಹೋಲಿಸಿದರೆ ಶೇ 59ರಷ್ಟು ಏರಿಕೆ ಕಂಡುಬಂದಿದೆ.

ವಿಪ್ರೊ ಕಂಪನಿಯ ಸಂಸ್ಥಾಪಕ ಅಧ್ಯಕ್ಷ ಅಜೀಂ ಪ್ರೇಮ್‌ಜಿ ಅವರು ವಾರ್ಷಿಕ ₹1,774 ಕೋಟಿ ದಾನ ಮಾಡುವ ಮೂಲಕ ಎರಡನೇ ಸ್ಥಾನ ಪಡೆದುಕೊಂಡಿದ್ದಾರೆ.

₹100 ಕೋಟಿಗೂ ಅಧಿಕ ಮೊತ್ತವನ್ನು ದಾನವಾಗಿ ನೀಡುವವರ ಸಂಖ್ಯೆ 5 ವರ್ಷದಲ್ಲಿ 2 ರಿಂದ 14ಕ್ಕೆ ಏರಿಕೆ ಕಂಡಿದೆ. ₹50 ಕೋಟಿಗೂ ಅಧಿಕ ಮೊತ್ತ ದಾನ ನೀಡುವವರ ಸಂಖ್ಯೆಯೂ 2 ರಿಂದ 24ಕ್ಕೆ ಏರಿದೆ ಎಂದು ಹುರೂನ್ ಇಂಡಿಯಾ ಸಂಸ್ಥೆಯ ಮುಖ್ಯ ಸಂಶೋಧಕ, ವ್ಯವಸ್ಥಾಪಕ ನಿರ್ದೇಶಕ ಅನಸ್ ರಹಮಾನ್ ಜುನೈದ್ ಮಾಹಿತಿ ನೀಡಿದ್ದಾರೆ.

ಪರಿಸರ ಮತ್ತು ಸುಸ್ಥಿರ ಅಭಿವೃದ್ಧಿಯ ಉದ್ದೇಶಕ್ಕಾಗಿ ದಾನ ನೀಡುವ ಮೊತ್ತವು ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಶೇ 31ರಷ್ಟು ಹೆಚ್ಚಾಗಿ, ₹143 ಕೋಟಿಗೆ ತಲುಪಿದೆ. 2023ರ ವೇಳೆಗೆ ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಗೆ (ಎಸ್‌ಡಿಜಿ) ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯು (ಸಿಎಸ್‌ಆರ್) ಪ್ರಮುಖ ಪಾತ್ರ ವಹಿಸುವ ವಿಶ್ವಾಸ ಇದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ದಾನಿಗಳ ಪಟ್ಟಿಯಲ್ಲಿ ಮೊದಲ 10 ಸ್ಥಾನದಲ್ಲಿ ಇರುವವರು ಕಳೆದ ವರ್ಷ ಒಟ್ಟು ₹3,034 ಕೋಟಿ ದಾನ ನೀಡಿದ್ದರು. ಈ ವರ್ಷ ದಾನದ ಮೊತ್ತವು ₹5,806 ಕೋಟಿಗೆ ಏರಿಕೆ ಕಂಡಿದೆ.


ಶಿವ ನಾಡಾರ್

ಅಜೀಂ ಪ್ರೇಮ್‌ಜಿ

ಪ್ರಮುಖ 10 ದಾನಿಗಳ ವಿವರ (ಕೋಟಿಗಳಲ್ಲಿ)

ಶಿವ ನಾಡಾರ್ ಮತ್ತು ಕುಟುಂಬ	₹2,042
ಅಜೀಂ ಪ್ರೇಮ್‌ಜಿ ಮತ್ತು ಕುಟುಂಬ	₹1,774
ಮುಕೇಶ್ ಅಂಬಾನಿ ಮತ್ತು ಕುಟುಂಬ	₹376
ಕುಮಾರ ಮಂಗಲಂ ಬಿರ್ಲಾ ಮತ್ತು ಕುಟುಂಬ	₹287
ಗೌತಮ್ ಅದಾನಿ ಮತ್ತು ಕುಟುಂಬ	₹285
ಬಜಾಜ್ ಕುಟುಂಬ	₹264
ಅನಿಲ್ ಅಗರ್ವಾಲ್ ಮತ್ತು ಕುಟುಂಬ	₹241
ನಂದನ್ ನಿಲೇಕಣಿ	₹189
ಸೈರಸ್ ಎಸ್. ಪೂನಾವಾಲ ಮತ್ತು ಆದಾರ್ ಪೂನಾವಾಲ	₹179
ರೋಹಿಣಿ ನಿಲೇಕಣಿ	₹170

ಬೆಂಗಳೂರಿಗೆ ಮೂರನೇ ಸ್ಥಾನ

ಹೆಚ್ಚಿನ ಸಂಖ್ಯೆಯ ದಾನಿಗಳನ್ನು ಹೊಂದಿರುವ ನಗರಗಳ ಸಾಲಿನಲ್ಲಿ ಮುಂಬೈ (39) ಮೊದಲ ಸ್ಥಾನದಲ್ಲಿದೆ. ದೆಹಲಿಯಲ್ಲಿ 19 ದಾನಿಗಳಿದ್ದು ಎರಡನೇ ಸ್ಥಾನ ಪಡೆದುಕೊಂಡಿದೆ. ಬೆಂಗಳೂರು ನಗರದಲ್ಲಿ 13 ದಾನಿಗಳಿದ್ದು ಮೂರನೇ ಸ್ಥಾನದಲ್ಲಿದೆ.

ಬೆಂಗಳೂರಿನ ದಾನಿಗಳು

ಹೆಸರು	ಕಂಪನಿ
ನಂದನ್ ನಿಲೇಕಣಿ	ಇನ್ಫೊಸಿಸ್
ರೋಹಿಣಿ ನಿಲೇಕಣಿ	ರೋಹಿಣಿ ನಿಲೇಕಣಿ ಫಿಲಾಂತ್ರಪೀಸ್
ಸುಶ್ಮಿತಾ ಮತ್ತು ಸುಬ್ರತೋ ಬಗಚಿ	ಮೈಂಡ್‌ಟ್ರೀ
ನಿತಿನ್ ಕಾಮತ್ ಮತ್ತು ನಿಕಿಲ್ ಕಾಮರ್	ಜೆರೋದಾ
ಎಸ್. ಗೋಪಾಲಕೃಷ್ಣನ್ ಮತ್ತು ಕುಟುಂಬ	ಇನ್ಫೊಸಿಸ್
ರಂಜನ್ ಪೈ ಮತ್ತು ಕುಟುಂಬ	ಮಣಿಪಾಲ್ ಎಜುಕೇಷನ್ ಆ್ಯಂಡ್ ಮೆಡಿಕಲ್
ದಿಲೀಪ್ ಮತ್ತು ಆನಂದ್ ಸುರಾನಾ	ಮೈಕ್ರೊ ಲ್ಯಾಬ್ಸ್
ಕೆ. ದಿನೇಶ್	ಇನ್ಫೊಸಿಸ್
ಎಸ್.ಡಿ. ಶಿಬುಲಾಲ್ ಮತ್ತು ಕುಟುಂಬ	ಇನ್ಫೊಸಿಸ್
ಅಶೋಕ್ ಸೂಟಾ	ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜೀಸ್
ಕಿರಣ್ ಮಜುಂದಾರ್ ಶಾ	ಬಯೋಕಾನ್
ಮಹಮ್ಮದ್ ಮಜೀದ್	ಸಮಿ–ಸಬಿನ್ಸಾ ಸಮೂಹ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	15000-27500
ಹೊಸತು	27500-36500
ಹಳತು	43500-48500
ಚಿತ್ರದುರ್ಗ	
ಅಪಿ	46619-47029
ಬೆಟ್ಟೆ	36110-36559
ಕೆಂಪುಗೋಟು	30200-30600
ರಾಶಿ	46139-46569
ಕಾರ್ಕಳ	
ಹೊಸತು	25000-36500
ಹಳತು	30000-48500
ಕುಮಟ	
ಹೊಸಚಾಲಿ	38069-39999
ಚಿಪ್ಪು	27799-34669
ಕೋಕ	17060-33669
ಸಾಗರ	
ಬಿಳಿಗೋಟು	14109-34899
ಚಾಲಿ	23409-38901
ಕೋಕ	14109-34899
ಕೆಂಪುಗೋಟು	30199-35369
ರಾಶಿ	35899-47711
ಸಿಪ್ಪೆಗೋಟು	14699-21301
ಶಿವಮೊಗ್ಗ	
ಬೆಟ್ಟೆ	47007-53589
ಗೊರಬಾಲು	28599-38579
ಹೊಸತು	44888-46699
ರಾಶಿ	36369-48389
ಸರಕು	50677-83396
ಸಿದ್ದಾಪುರ	
ಬಿಳಿಗೋಟು	31899-34869
ಚಾಲಿ	37189-40440
ಕೋಕ	28899-33699
ಕೆಂಪುಗೋಟು	27099-33789
ರಾಶಿ	43609-46299
ಶಿರಸಿ	
ಬೆಟ್ಟೆ	38899-42599
ಬಿಳಿಗೋಟು	28111-36369
ಚಾಲಿ	37500-41311
ಕೆಂಪುಗೋಟು	30009-30009
ರಾಶಿ	45608-47808
ಯಲ್ಲಾಪುರ	
ಅಪಿ	57675-65779
ಬಿಳಿಗೋಟು	27099-35900
ಚಾಲಿ	36009-41080
ಕೋಕ	18090-30899

‘ಮಂಥನ–2024’ಕ್ಕೆ ಆಹ್ವಾನ

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ನಿಯೋಗವು ದೆಹಲಿಯಲ್ಲಿ ಗುರುವಾರ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು ಭೇಟಿ ಮಾಡಿತು. ಈ ವೇಳೆ 16ನೇ ಆವೃತ್ತಿಯ ‘ಮಂಥನ–2024’ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಭಾಗವಹಿಸುವಂತೆ ಆಹ್ವಾನ ನೀಡಿದೆ. ಮಹಾಸಂಘದ ಹಿರಿಯ ಉಪಾಧ್ಯಕ್ಷ ಎಂ.ಜಿ. ಬಾಲಕೃಷ್ಣ, ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ ಮತ್ತು ಉಪಾಧ್ಯಕ್ಷೆ ಉಮಾ ರೆಡ್ಡಿ ಇದ್ದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

In Loving Memory
Smt. Asha G
01/08/1969 - 24/10/2023
Vaikunta Samaradhane will be held on
Friday the 3rd of November 2023, 9am onwards
at Agashwa Dhare, Kunigal (Farmhouse)
Deeply mourned by Family and Friends

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Accounts & Finance

ACCOUNTANT WANTED with Minimum One year Experience For Jewellery Shop Basaveswarnagar (Tally Knowledge Must): 9008052173

Call Centre

ಗಯಾ, ಬಿಹಾರದಲ್ಲಿ ಕೆಲಸ ಮಾಡಲು ಟೆಲಿಕಾಲರ್ ಗಳು ಬೇಕಾಗಿದ್ದಾರೆ.ವೇತನ ತಿಂಗಳಿಗೆ 12000/- ಊಟ -ವಸತಿ ಉಚಿತ. ಕನ್ನಡ, ಮಲಯಾಳಂ, ತೆಲುಗು, ತಮಿಳು ಭಾಷೆಗಳನ್ನು ತಿಳಿದಿರಬೇಕು. ಸಂಪರ್ಕಿಸಿ: ಮೊಬೈಲ್ - 09540509611

General

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 17,000- 65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Wanted

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ 12,000- 17,000. 8951315839, 9141634619

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

Multiple Vacancy

REQUIRED EXPERIENCED Telecaller& Field Executive For BankLoan collection. Direct Recruitment to Company Contact:- 7899040499, 9620206756.

Marketing & Sales

SALES STAFF Wanted with Experience in Retail Jewellery Store Basaveswarnagar Bangalore. More Details Contact: 9008052173

ಪ್ರವಾಸ

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 16/11 ಹೈದರಬಾದ್ 20/11 ಪುರಿ ಜಗನ್ನಾಥ್. 23/11 ಶಿರಡಿ, ಪಂಢರಪುರ. 21/12ಗುಜರಾತ್, ಮಧ್ಯಪ್ರದೇಶ 4ಜ್ಯೋತಿರ್ಲಿಂಗ 9591017782, 9964527782

ರಾಜಸ್ಥಾನ್ ಪ್ರವಾಸ 9ದಿನಗಳು 18/11/23. ಕಾಶಿ ಪ್ರವಾಸ ಎರಡು ಜ್ಯೋತಿರ್ಲಿಂಗದೊಂದಿಗೆ 7ದಿನಗಳು.24/11/23 ನೇಪಾಳ ಪ್ರವಾಸ ಹಾಗೂ ಕಾಶಿ ಸೇರಿ 10ದಿನಗಳು 28/11/23. ಸುವರ್ಣ ಯಾತ್ರ 9019462508, 9480843945

Travel

ವಿಮಾನ/ AC ಬಸ್ಸು/ AC ರೂಮ್ ವ್ಯವಸ್ಥೆಗಳೊಂದಿಗೆ: 17.11.2023 23.11.2023 ಸೋಮನಾಥ್,ದ್ವಾರಕ ನಿಷ್ಕಳಂಕ ಮಹಾದೇವ ಮಹಾಕಾಳೇಶ್ವರ,ಓಂಕಾರೇಶ್ವರ. 20.11.2023 14.02.2024 ಕಾಶಿ,ಬುದ್ಧಗಯಾ ನೈಮಿಶಾರಣ್ಯ,ಜಾರ್ಖಂಡ ಬೈದ್ಯನಾಥ್. 29.11.2023 ನೇಪಾಳ,ಮುಕ್ತಿನಾಥ ಪೋಕ್ರ,ಲುಂಬಿನಿ ದಕ್ಷಿಣ/ಮಧ್ಯ ಭಾರತ ಪ್ರವಾಸಗಳಿಗೆ ಸಂಪರ್ಕಿಸಿ. ಏಷ್ಯನ್ ಟ್ರಾವೆಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು-4. 26574131 7204173686 8431888138 9686708171

★23.11.2023 9ದಿನಗಳು★ ಆಂಧ್ರ ಪ್ರವಾಸ,04.12.2023 5ದಿನಗಳು ಶ್ರೀಶೈಲಂ,ಅಹೋಬಲಂ, 12.12.2023 10ದಿನಗಳು ಗುಜರಾತ್,ಉಜ್ಜೈನ್ ಯಾತ್ರಾ, 03.01.2024 11ದಿನಗಳು ರಾಯಲ್ ರಾಜಸ್ಥಾನ, 10.01.2024 4ದಿನಗಳು ಉಜ್ಜೈನ್,ಓಂಕಾರ ಪ್ರವಾಸ, 16.01.2023 12ದಿನಗಳು ಕಾಶಿ ಯಾತ್ರಾ.ಆರ್.ಗಾಂಧಿ ಟೂರ್ಸ್. 9945445809/ 9902433500

ಅಂಡಮಾನ್ ಹವಳದ್ವೀಪ ಪ್ರತಿ ಗುರುವಾರ 5/8ದಿನಗಳು ಹಡಗು/ವಿಮಾನದಲ್ಲಿ Royal Package 27.11.2023 ಮಾತು11.12.2023 ರಿಯಾಯಿತಿ ದರದಲ್ಲಿ 6ದಿನಗಳು ಕಾಶಿ ಗಯಾ ಅಲಹಾಬದ್ ಅಯೋಧ್ಯ(ಕೆಲವೇ ಸೀಟುಗಳಿವೆ) ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9739847429/ 9845560219

DH Classifieds More value, more impact
NAME CHANGE
ಪ್ರಜಾವಾಣಿ
Tell us your New Name!
Book your AD WITH US NOW!
www.dhclassifieds.com
BOOK NOW
For more details contact:
9886213331 | 9901641752
9845114560 | 9900428036
9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರಾಜಕೀಯ ಪಕ್ಷಕ್ಕೆ ಬಂದಿರುವ ದೇಣಿಗೆ ವಿವರ ಸಲ್ಲಿಸಲು ಸೂಚನೆ

ತೀರ್ಪು ಕಾಯ್ದಿರಿಸಿದ ಸುಪ್ರೀಂ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜಕೀಯ ಪಕ್ಷಗಳಿಗೆ ಈ ವರ್ಷದ ಸೆಪ್ಟೆಂಬರ್ 30ರವರೆಗೆ ಬಂದಿರುವ ದೇಣಿಗೆಯ ಕುರಿತ ವಿವರ ನೀಡುವಂತೆ ಸುಪ್ರೀಂ ಕೋರ್ಟ್, ಚುನಾವಣಾ ಆಯೋಗಕ್ಕೆ ಸೂಚಿಸಿದೆ. ಚುನಾವಣಾ ಬಾಂಡ್‌ಗಳ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ಕುರಿತ ತೀರ್ಪನ್ನು ಕೋರ್ಟ್ ಕಾಯ್ದಿರಿಸಿದೆ.

ಈಗಿನ ವ್ಯವಸ್ಥೆಯಲ್ಲಿ ಇರುವಂತಹ ಲೋಪಗಳಿಂದ ಅತೀತವಾದ ಬೇರೊಂದು ವ್ಯವಸ್ಥೆಯನ್ನು ಕೇಂದ್ರವು ರೂಪಿಸಬಹುದು ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ನ್ಯಾಯಮೂರ್ತಿಗಳ ಪೀಠವು ಹೇಳಿದೆ.

ಚುನಾವಣಾ ಬಾಂಡ್ ಯೋಜನೆಯು ಚುನಾವಣಾ ಪ್ರಕ್ರಿಯೆಯಲ್ಲಿ ನಗದು ಹಣದ ಪ್ರಮಾಣವನ್ನು ತಗ್ಗಿಸಿದೆ, ಬ್ಯಾಂಕಿಂಗ್ ವ್ಯವಸ್ಥೆಯ ಬಳಕೆಯನ್ನು ಉತ್ತೇಜಿಸಿದೆ, ಆದರೆ ಈ ಯೋಜನೆಯಲ್ಲಿ ಪಾರದರ್ಶಕತೆಯ ಅಗತ್ಯ ಇದೆ ಎಂದು ಹೇಳಿದೆ. ಲಂಚವನ್ನು ಕಾನೂನುಬದ್ಧಗೊಳಿಸುವಂತೆ ಇರಬಾರದು ಎಂದು ಕೂಡ ಹೇಳಿದೆ.

ರಾಜಕೀಯ ಪಕ್ಷಗಳು ಪಡೆದಿರುವ ದೇಣಿಗೆ ಕುರಿತ ವಿವರವನ್ನು ಚುನಾವಣಾ ಆಯೋಗವು ಎರಡು ವಾರಗಳಲ್ಲಿ ತನಗೆ ನೀಡಬೇಕು ಎಂದು ಕೂಡ ಕೋರ್ಟ್ ಹೇಳಿದೆ. ದೇಣಿಗೆಯ ವಿಚಾರದಲ್ಲಿ ಸಮತೋಲನವನ್ನು ಕಾಯ್ದುಕೊಳ್ಳುವ ಹೊಣೆಯು ಶಾಸಕಾಂಗ ಹಾಗೂ ಕಾರ್ಯಾಂಗದ ಮೇಲೆ ಇದೆ ಎಂದು ಪೀಠ ಹೇಳಿತು. ‘ಅದನ್ನು ಹೇಗೆ ಮಾಡಬೇಕು ಎಂಬ ವಿಚಾರದಲ್ಲಿ ನಾವು ಮಧ್ಯಪ್ರವೇಶ ಮಾಡುವುದಿಲ್ಲ’ ಎಂದು ತಿಳಿಸಿತು.

ಮಹಿಳೆಯಾಗಿ ಬದಲಾದವರಿಗೆ ಜೀವನಾಂಶ: ವಿಚಾರಣೆಗೆ ಸುಪ್ರೀಂಕೋರ್ಟ್ ಒಪ್ಪಿಗೆ

ನವದೆಹಲಿ (ಪಿಟಿಐ): ಲಿಂಗ ಬದಲಾವಣೆ ಶಸ್ತ್ರಚಿಕಿತ್ಸೆಗೆ ಒಳಗಾಗಿ, ಮಹಿಳೆಯಾಗಿ ಬದಲಾಗುವ ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಯು, ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯ ಅಡಿಯಲ್ಲಿ ನ್ಯಾಯ ಕೋರಬಹುದೇ ಎಂಬ ಬಗ್ಗೆ ಪರಿಶೀಲಿಸಲು ಸುಪ್ರೀಂ ಕೋರ್ಟ್ ಒಪ್ಪಿದೆ.

ಬಾಂಬೆ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಮೇಲ್ಮನವಿಯ ವಿಚಾರಣೆಗೆ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ ಒಪ್ಪಿದೆ. ಇದರ ವಿಚಾರಣೆಯು 2025ರಲ್ಲಿ ನಡೆಯಲಿದೆ. ಶಸ್ತ್ರಚಿಕಿತ್ಸೆಯ ನಂತರದಲ್ಲಿ ಮಹಿಳೆಯಾಗಿ ಬದಲಾಗುವ ವ್ಯಕ್ತಿಯು ಈ ಕಾಯ್ದೆಯ ಅಡಿಯಲ್ಲಿ ನ್ಯಾಯ ಕೋರಬಹುದು ಎಂದು ಬಾಂಬೆ ಹೈಕೋರ್ಟ್ ಆದೇಶದಲ್ಲಿ ಹೇಳಲಾಗಿದೆ. ಪತಿಯು ತನ್ನ ಮಾಜಿ ಪತ್ನಿಗೆ ಜೀವನಾಂಶ ನೀಡಬೇಕು ಎಂದು ಅಧೀನ ನ್ಯಾಯಾಲಯವು ಆದೇಶಿಸಿತ್ತು. ಈ ಆದೇಶವನ್ನು ಬಾಂಬೆ ಹೈಕೋರ್ಟ್ ಎತ್ತಿ ಹಿಡಿದಿದೆ.

ಪತ್ನಿಯು ಮೊದಲು ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಯಾಗಿದ್ದರು. ಶಸ್ತ್ರಚಿಕಿತ್ಸೆಯ ನಂತರ ಮಹಿಳೆಯಾಗಿ ಬದಲಾಗಿದ್ದರು. ಆ ನಂತರದಲ್ಲಿ ಅವರ ವಿವಾಹ ಆಗಿತ್ತು. ಬಾಂಬೆ ಹೈಕೋರ್ಟ್ ಆದೇಶ ಪ್ರಶ್ನಿಸಿ ಪತಿಯು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಕೇರಳ: ರಾಜ್ಯಪಾಲರ ವಿರುದ್ಧ ‘ಸುಪ್ರೀಂ’ಗೆ ಮೊರೆ

ನವದೆಹಲಿ (ಪಿಟಿಐ): ರಾಜ್ಯ ವಿಧಾನಸಭೆಯಲ್ಲಿ ಅಂಗೀಕರಿಸಿದ ಮಸೂದೆಗಳಿಗೆ ಒಪ್ಪಿಗೆ ನೀಡಲು ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ವಿಳಂಬ ಮಾಡುತ್ತಿದ್ದು, ಜನರ ಹಕ್ಕುಗಳನ್ನು ಮೊಟಕುಗೊಳಿಸುತ್ತಿದ್ದಾರೆ ಎಂದು ಆರೋಪಿಸಿ ಕೇರಳ ಸರ್ಕಾರವು ಸುಪ್ರೀಂ ಕೋರ್ಟ್ ಮೊರೆ ಹೋಗಿದೆ.

ಈ ಹಿಂದೆ ತಮಿಳುನಾಡು ಮತ್ತು ಪಂಜಾಬ್ ರಾಜ್ಯ ಸರ್ಕಾರಗಳು, ವಿಧಾನಸಭೆಯಲ್ಲಿ ಅಂಗೀಕರಿಸಿದ ಮಸೂದೆಗಳಿಗೆ ರಾಜ್ಯಪಾಲರು ಒಪ್ಪಿಗೆ ನೀಡುವಲ್ಲಿ ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದವು. ಮಸೂದೆಗಳನ್ನು ದೀರ್ಘ ಮತ್ತು ಅನಿರ್ದಿಷ್ಟ ಅವಧಿಗೆ ಬಾಕಿ ಇರಿಸಿಕೊಂಡಿರುವ ರಾಜ್ಯಪಾಲರ ನಡವಳಿಕೆಯು ಸಂವಿಧಾನದ 14ನೇ ವಿಧಿಯ ಸ್ಪಷ್ಟ ಉಲ್ಲಂಘನೆಯೂ ಆಗಿದೆ ಎಂದು ಅರ್ಜಿಯಲ್ಲಿ ಕೇರಳ ಸರ್ಕಾರ ಪ್ರತಿಪಾದಿಸಿದೆ.‘ರಾಜ್ಯ ಶಾಸಕಾಂಗವು ಅಂಗೀಕರಿಸಿರುವ ಎಂಟು ಮಸೂದೆಗಳಿಗೆ ಒಪ್ಪಿಗೆ ನೀಡಲು ರಾಜ್ಯಪಾಲರು ಯಾವುದೇ ಕ್ರಮಕೈಗೊಂಡಿಲ್ಲ. ಈ ಮಸೂದೆಗಳು ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ್ದು, ಸೌಲಭ್ಯ ವಂಚಿತ ಜನರ ಕಲ್ಯಾಣದ ಉದ್ದೇಶವನ್ನೂ ಹೊಂದಿವೆ.

‘71 ಲಕ್ಷ ಭಾರತೀಯರ ವಾಟ್ಸ್‌ಆ್ಯಪ್ ಖಾತೆಗಳ ನಿಷೇಧ’

ನವದೆಹಲಿ (ಪಿಟಿಐ): ಸೆಪ್ಟೆಂಬರ್ ತಿಂಗಳಿನಲ್ಲಿ ಮಾಹಿತಿ ತಂತ್ರಜ್ಞಾನ ನಿಯಮಗಳನ್ನು ಪಾಲಿಸದ 71.1 ಲಕ್ಷ ಖಾತೆಗಳನ್ನು ಭಾರತದಲ್ಲಿ ನಿಷೇಧಿಸಲಾಗಿದೆ ಎಂದು ಮೆಟಾ ಒಡೆತನದ ವಾಟ್ಸ್‌ಆ್ಯಪ್ ಸಂಸ್ಥೆ ಬಿಡುಗಡೆ ಮಾಡಿದ ಮಾಸಿಕ ವರದಿಯಲ್ಲಿ ತಿಳಿಸಿದೆ.

2023ರ ಸೆಪ್ಟೆಂಬರ್ 1ರಿಂದ 30ರ ಅವಧಿಯಲ್ಲಿ ಈ ಖಾತೆಗಳನ್ನು ನಿಷೇಧಿಸಲಾಗಿದೆ. ಇದರಲ್ಲಿ 25.71 ಲಕ್ಷ ಖಾತೆಗಳನ್ನು ಬಳಕೆದಾರರಿಂದ ವರದಿ ಬರುವ ಮುನ್ನವೇ ನಿಷೇಧಿಸಲಾಗಿದೆ ಎಂದು ವಾಟ್ಸ್‌ಆ್ಯಪ್ ಸಂಸ್ಥೆ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ 02-11-2023

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1550)
ಒಂದು ವಾರದ ಡೆಲಿವರಿ	1545 (1545)
ಸೋಯಾ ಕಚ್ಚಾ	870 (860)
ಪಾಮ್ ವಾರದ ಡೆಲಿವರಿ	822 (815)
ಸೂರ್ಯಕಾಂತಿ ಎಣ್ಣೆ ಕಚ್ಚಾ	845 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 60,750 (60,700) ಬೆಳ್ಳಿ ಕೆ.ಜಿ 71,650 (70,950)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಈ ತಿಂಗಳಲ್ಲಿ 2+2 ಸಚಿವರ ಮಾತುಕತೆ

ವಾಷಿಂಗ್ಟನ್ (ಪಿಟಿಐ): ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಮತ್ತು ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರ ಜೊತೆಗೆ 2 + 2 ಸಚಿವರ ಹಂತದ ಮಾತುಕತೆ ನಡೆಸಲು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಹಾಗೂ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಅವರು ಈ ತಿಂಗಳಲ್ಲಿ ಭಾರತ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ಅಮೆರಿಕ ತಿಳಿಸಿದೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ವಿದೇಶಾಂಗ ಸಚಿವಾಲಯದ ವಕ್ತಾರ ಮ್ಯಾಥ್ಯೂ ಮಿಲ್ಲರ್, ‘ಬ್ಲಿಂಕನ್ ನವೆಂಬರ್ 2ರಿಂದ 10 ರವರೆಗೆ ಇಸ್ರೇಲ್ ಮತ್ತು ಜೋರ್ಡಾನ್ ಪ್ರವಾಸ ಕೈಗೊಳ್ಳಲಿದ್ದಾರೆ. ಆ ಬಳಿಕ ಜಪಾನ್, ದಕ್ಷಿಣ ಕೊರಿಯಾ, ಭಾರತ ಪ್ರವಾಸ ಕೈಗೊಳ್ಳಲಿದ್ದಾರೆ’ ಎಂದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಸಂಕ್ಷಿಪ್ತ ಸುದ್ದಿ

ಹಣ ಅಕ್ರಮ ವರ್ಗಾವಣೆ: ಸಚಿವ ಆನಂದ್ ಮನೆ ಮೇಲೆ ಇ.ಡಿ ದಾಳಿ

ನವದೆಹಲಿ(ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ದೆಹಲಿ ಸರ್ಕಾರದ ಸಂಪುಟ ದರ್ಜೆ ಸಚಿವ, ಎಎಪಿ ನಾಯಕ ರಾಜ್ ಕುಮಾರ್ ಆನಂದ್ ಮತ್ತು ಇತರ ಕೆಲವರ ಮನೆಗಳಲ್ಲಿ ಗುರುವಾರ ಶೋಧ ನಡೆಸಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಸಿಆರ್‌ಪಿಎಫ್ ಬೆಂಗಾವಲಿನಲ್ಲಿ ಇ.ಡಿ ಅಧಿಕಾರಿಗಳ ತಂಡಗಳು, ರಾಷ್ಟ್ರ ರಾಜಧಾನಿಯ ಸಿವಿಲ್ ಲೈನ್ಸ್ ಪ್ರದೇಶದಲ್ಲಿನ ಸಚಿವರ ನಿವಾಸ ಮತ್ತು ಇತರರಿಗೆ ಸೇರಿದ ಹಲವು ಸ್ಥಳಗಳಲ್ಲಿ ಬೆಳಿಗ್ಗೆ 7.30ರಿಂದ ಶೋಧನೆ ನಡೆಸಿದವು ಎಂದು ಮೂಲಗಳು ಹೇಳಿವೆ.

ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಅಡಿ ರಾಜ್ ಕುಮಾರ್ ಆನಂದ್ ವಿರುದ್ಧ ತನಿಖೆ ನಡೆಸಲಾಗುತ್ತಿದೆ. ಪಟೇಲ್ ನಗರದ ಶಾಸಕರೂ ಆದ ಆನಂದ್ ಅವರು ಅರವಿಂದ ಕೇಜ್ರಿವಾಲ್ ನೇತೃತ್ವದ ಎಎಪಿ ಸರ್ಕಾರದಲ್ಲಿ ಸಮಾಜ ಕಲ್ಯಾಣ ಮತ್ತು ಎಸ್‌ಸಿ/ಎಸ್‌ಟಿ ಕಲ್ಯಾಣ ಸಚಿವರಾಗಿದ್ದಾರೆ. ಸುಮಾರು ₹7 ಕೋಟಿ ಅಬಕಾರಿ ಸುಂಕ ವಂಚಿಸಿದ ಆರೋಪದ ಮೇಲೆ ಕಂದಾಯ ಗುಪ್ತಚರ ನಿರ್ದೇಶನಾಲಯ ಸಲ್ಲಿಸಿದ ಚಾರ್ಜ್‌ಶೀಟ್ ಆಧರಿಸಿ ಆನಂದ್ ವಿರುದ್ಧ ತನಿಖೆ ನಡೆಯುತ್ತಿದೆ.

ಪಾಕಿಸ್ತಾನದಲ್ಲಿ ಫೆ.8ಕ್ಕೆ ಚುನಾವಣೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದಲ್ಲಿ 2024ರ ಫೆಬ್ರುವರಿ 8ರಂದು ಸಾರ್ವತ್ರಿಕ ಚುನಾವಣೆ ನಡೆಯಲಿದೆ. ಇದರೊಂದಿಗೆ, ಚುನಾವಣೆ ಕುರಿತು ಕೆಲ ತಿಂಗಳಿಂದ ಇದ್ದ ಅನಿಶ್ಚಿತತೆ ಅಂತ್ಯಗೊಂಡಿತು.

ಸುಪ್ರೀಂ ಕೋರ್ಟ್‌ನ ನಿರ್ದೇಶನದಂತೆ ಚುನಾವಣಾ ಆಯೋಗದ ಅಧಿಕಾರಿಗಳು ಅಧ್ಯಕ್ಷ ಆರಿಫ್ ಅಲ್ವಿ ಅವರನ್ನು ಭೇಟಿಯಾದ ಬಳಿಕ ಚುನಾವಣಾ ದಿನಾಂಕವನ್ನು ಪ್ರಕಟಿಸಲಾಯಿತು.

ಇದಕ್ಕೂ ಮೊದಲು ಚುನಾವಣಾ ಆಯೋಗದ ಪರ ವಕೀಲರು ಸುಪ್ರೀಂ ಕೋರ್ಟ್‌ಗೆ ಸಾರ್ವತ್ರಿಕ ಚುನಾವಣೆಯು ಫೆ. 11ರಂದು ನಡೆಯಲಿದೆ ಎಂದು ತಿಳಿಸಿದ್ದರು. ತದನಂತರ ಆಯೋಗದ ಅಧಿಕಾರಿಗಳು ಅಧ್ಯಕ್ಷ ಅಲ್ವಿ ಅವರನ್ನು ಭೇಟಿಯಾದ ಬಳಿಕ ಪರಿಷ್ಕೃತ ದಿನಾಂಕವನ್ನು ಪ್ರಕಟಿಸಲಾಯಿತು.

ರೋಹಿತ್ ಬಳಗದ ಅಬ್ಬರಕ್ಕೆ ಕೊಚ್ಚಿಹೋದ ಲಂಕಾ • ಕೊಹ್ಲಿ, ಗಿಲ್, ಅಯ್ಯರ್ ಅರ್ಧಶತಕ • ಸಿರಾಜ್‌ಗೆ ಮೂರು ವಿಕೆಟ್

ಮೆರೆದ ಶಮಿ, ಸೆಮಿಗೆ ಭಾರತ

ಐದು ವಿಕೆಟ್ ಪಡೆದ ಭಾರತ ತಂಡದ ಮೊಹಮ್ಮದ್ ಶಮಿ –ಎಎಫ್‌ಪಿ ಚಿತ್ರ

ಅರ್ಧಶತಕ ಗಳಿಸಿದ ಭಾರತ ತಂಡದ ವಿರಾಟ್ ಕೊಹ್ಲಿ, ಶುಭಮನ್ ಗಿಲ್ ಮತ್ತು ಶ್ರೇಯಸ್ ಅಯ್ಯರ್ ಅವರ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರಗಳು

ಪ್ರಜಾವಾಣಿ ವಾರ್ತೆ

ಮುಂಬೈ: ಅರಬ್ಬೀ ಸಮುದ್ರದ ತಟದಲ್ಲಿರುವ ವಾಂಖೆಡೆ ಕ್ರೀಡಾಂಗಣದಲ್ಲಿ ಗುರುವಾರ ಭಾರತದ ಬ್ಯಾಟರ್‌ಗಳು ರನ್‌ಪ್ರವಾಹ ಹರಿಸಿದರೆ, ಬೌಲರ್‌ಗಳು ಬೆಂಕಿ ಚೆಂಡು ಎಸೆದರು. ವಿಶ್ವಕಪ್ ಟೂರ್ನಿಯಲ್ಲಿ ಸತತ ಏಳನೇ ಪಂದ್ಯ ಗೆದ್ದ ರೋಹಿತ್ ಶರ್ಮಾ ಬಳಗವು ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟಿತು.

ರೌಂಡ್ ರಾಬಿನ್ ಲೀಗ್ ಪಂದ್ಯದಲ್ಲಿ ಶುಭಮನ್ ಗಿಲ್, ವಿರಾಟ್ ಕೊಹ್ಲಿ ಮತ್ತು ಶ್ರೇಯಸ್ ಅಯ್ಯರ್ ಅವರ ಬ್ಯಾಟಿಂಗ್ ಮುಂದೆ ಲಂಕಾ ಬೌಲರ್‌ಗಳು ಬಸವಳಿದರು.

358 ರನ್‌ಗಳ ಗುರಿ ಬೆನ್ನಟ್ಟಿದ ಲಂಕಾ ಪಡೆಯು ಮೊಹಮ್ಮದ್ ಶಮಿ (18ಕ್ಕೆ5), ಮೊಹಮ್ಮದ್ ಸಿರಾಜ್ (16ಕ್ಕೆ3) ಮತ್ತು ಜಸ್‌ಪ್ರೀತ್ ಬೂಮ್ರಾ (8ಕ್ಕೆ1) ಅವರ ಬೌಲಿಂಗ್ ಮುಂದೆ ದೂಳೀಪಟವಾಯಿತು.

ಶ್ರೀಲಂಕಾ ಕೇವಲ 55 ರನ್ ಗಳಿಸಿ ಎಲ್ಲ ವಿಕೆಟ್ ಕಳೆದು ಕೊಂಡಿತು. ಇದರೊಂದಿಗೆ 302 ರನ್‌ಗಳ ಬೃಹತ್ ಅಂತರದಿಂದ ಸೋತಿತು. ಇನಿಂಗ್ಸ್‌ನಲ್ಲಿ 30.2 ಓವರ್‌ಗಳು ಬಾಕಿಯಿದ್ದವು!

ಶಮಿ ದಾಖಲೆ: ಈ ವಿಶ್ವಕಪ್ ಟೂರ್ನಿಯಲ್ಲಿ ಮೂರನೇ ಪಂದ್ಯ ಆಡಿದ ಮಧ್ಯಮವೇಗಿ ಮೊಹಮ್ಮದ್ ಶಮಿ ಎರಡನೇ ಬಾರಿ ಐದು ವಿಕೆಟ್‌ಗಳ ಗೊಂಚಲು ಗಳಿಸಿದರು. ಇದರೊಂದಿಗೆ ಟೂರ್ನಿಯಲ್ಲಿ ಅವರು ಗಳಿಸಿದ ವಿಕೆಟ್ ಸಂಖ್ಯೆಯು 14ಕ್ಕೇರಿತು.

ವಿಶ್ವಕಪ್ ಕ್ರಿಕೆಟ್‌ನಲ್ಲಿ ಒಟ್ಟು ಮೂರು ಬಾರಿ ಪಂಚಗುಚ್ಛ ಗಳಿಸಿದ ಅವರು ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್ ದಾಖಲೆ ಸರಿಗಟ್ಟಿದರು. ಒಟ್ಟು 45 ವಿಕೆಟ್‌ಗಳನ್ನು ಗಳಿಸಿದ ಅವರು, ಜಾವಗಲ್ ಶ್ರೀನಾಥ್ ಹಾಗೂ ಜಹೀರ್ ಖಾನ್ ದಾಖಲೆಯನ್ನೂ ಮುರಿದರು.

ತಮ್ಮ ಶಿಸ್ತುಬದ್ಧ ಲೈನ್ ಮತ್ತು ಲೆಂಗ್ತ್ ಜೊತೆಗೆ ಸ್ವಿಂಗ್ ಮಿಶ್ರಣ ಮಾಡಿ ಬ್ಯಾಟರ್‌ಗಳನ್ನು ಕಂಗೆಡಿಸಿದರು. ಇಲ್ಲಿ ಬೂಮ್ರಾ ಮತ್ತು ಸಿರಾಜ್ ಬೌಲಿಂಗ್ ಮುಂದೆ ಮೊದಲೇ ಹೈರಾಣಾಗಿದ್ದ ಬ್ಯಾಟರ್‌ಗಳು ಶಮಿಯ ಎಸೆತಗಳನ್ನು ಅಂದಾಜು ಮಾಡಲಾಗದೇ ಶರಣಾದರು.

ಬೂಮ್ರಾ ಮತ್ತು ಸಿರಾಜ್ ದಾಳಿಗೆ ಮೊದಲ ಎರಡು ಓವರ್‌ಗಳಲ್ಲಿ ಕೇವಲ ಎರಡು ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿತು.

ಇನಿಂಗ್ಸ್‌ನ ಮೊದಲ ಎಸೆತದಲ್ಲಿ ಬೂಮ್ರಾ ಬೀಸಿದೆ ಎಲ್‌ಬಿಡಬ್ಲ್ಯು ಬಲೆಗೆ ಪಥುಮ್ ನಿಸಾಂಕ ಬಿದ್ದರು. ಸಿರಾಜ್ ಹಾಕಿದ ಎರಡನೇ ಓವರ್ ಮೊದಲ ಎಸೆತ ಮತ್ತು ಕೊನೆಯ ಎಸೆತದಲ್ಲಿ ಕ್ರಮವಾಗಿ ದಿಮುತ ಕರುಣರತ್ನೆ ಹಾಗೂ ಸದೀರ ಸಮರವಿಕ್ರಂ ಔಟಾದರು. ನಾಲ್ಕನೇ ಓವರ್‌ನಲ್ಲಿ ಕುಸಾಲ ಮೆಂಡಿಸ್ ವಿಕೆಟ್ ಎಗರಿಸಿದ ಸಿರಾಜ್ ಕುಣಿದಾಡಿದರು. ಸ್ಪಿನ್ನರ್ ರವೀಂದ್ರ ಜಡೇಜ ಲಂಕಾದ ಕೊನೆಯ ವಿಕೆಟ್ ಉರುಳಿಸಿದರು.

ಐವರು ಸೊನ್ನೆ: ಶ್ರೀಲಂಕಾದ ಐವರು ಬ್ಯಾಟರ್‌ಗಳು ಈ ಪಂದ್ಯದಲ್ಲಿ ಸೊನ್ನೆ ಸುತ್ತಿದರು. ಅದರಲ್ಲಿ ಆರಂಭಿಕ ಬ್ಯಾಟರ್‌ಗಳಿಬ್ಬರು ಸೇರಿದ್ದರು. ಏಂಜೆಲೊ ಮ್ಯಾಥ್ಯೂಸ್ (12), ಮಹೀಷ ತೀಕ್ಷಣ (ಔಟಾಗದೆ 12) ಮತ್ತು ಕಸುನ್ ರಜಿತಾ (14) ಅವರನ್ನು ಬಿಟ್ಟರೆ ಉಳಿದವರು ಎರಡಂಕಿ ಮುಟ್ಟಲಿಲ್ಲ. ಬೌಲರ್ ದಿಲ್ಶಾನ್ ಮಧುಶಂಕ ಅವರು ಐದು ವಿಕೆಟ್ ಗೊಂಚಲು ಗಳಿಸಿದ್ದಷ್ಟೇ ಲಂಕಾ ತಂಡಕ್ಕೆ ಸಮಾಧಾನ ನೀಡಿದ ಸಾಧನೆ.

ನೂರರ ಸನಿಹ ಎಡವಿದ ಮೂವರು: ಬ್ಯಾಟಿಂಗ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರ ಏಕದಿನ ಶತಕಗಳ ದಾಖಲೆಯನ್ನು ಅವರ ತವರಿನಂಗಳದಲ್ಲಿಯೇ ಸರಿಗಟ್ಟುವ ಅವಕಾಶ ವಿರಾಟ್ ಕೊಹ್ಲಿಗೆ ಇತ್ತು. ಆದರೆ ಅವರು ಕೇವಲ 12 ರನ್‌ಗಳ ಅಂತರದಿಂದ ಈ ಅವಕಾಶ ಕೈಚೆಲ್ಲಿದರು. 94ಎಸೆತಗಳಲ್ಲಿ 88 ರನ್ ಗಳಿಸಿ ಔಟಾದರು.

ಯುವ ಬ್ಯಾಟರ್ ಶುಭಮನ್ ಗಿಲ್ (92; 92ಎ) ಕೂಡ ಎಂಟು ರನ್‌ಗಳಿಂದ ಶತಕ ತಪ್ಪಿಸಿಕೊಂಡರು. ಗಣ್ಯರ ಗ್ಯಾಲರಿಯಲ್ಲಿದ್ದ ಸಚಿನ್ ತೆಂಡೂಲ್ಕರ್ ಅವರ ಎದುರು ಶತಕ ಗಳಿಸಿ ಬೀಗುವ ಅವಕಾಶ ಅವರಿಂದ ತಪ್ಪಿತು.

ಆದರೆ ಗಿಲ್ ಮತ್ತು ಕೊಹ್ಲಿ ಎರಡನೇ ವಿಕೆಟ್ ಜೊತೆಯಾಟದಲ್ಲಿ 189 ರನ್ ಸೇರಿಸಿದರು. ಮೊದಲ ಓವರ್‌ನಲ್ಲಿಯೇ ರೋಹಿತ್ ಶರ್ಮಾ (4 ರನ್) ನಿರ್ಗಮನದಿಂದ ಉಂಟಾಗಿದ್ದ ಆತಂಕವನ್ನೂ ದೂರ ಮಾಡಿದರು.

ಶ್ರೇಯಸ್ ಬೀಸಾಟ: ಕಳೆದ ಕೆಲವು ಪಂದ್ಯಗಳಲ್ಲಿ ಲಯ ಕಂಡುಕೊಳ್ಳುವಲ್ಲಿ ವಿಫಲರಾಗಿದ್ದ ಶ್ರೇಯಸ್ ಅಯ್ಯರ್ (82; 56ಎ) ತಮ್ಮ ತವರಿನಂಗಳದಲ್ಲಿ ಅಬ್ಬರಿಸಿದರು. ಅರ್ಧ ಡಜನ್ ಸಿಕ್ಸರ್ ಸಿಡಿಸಿದ ಅವರು ಅಭಿಮಾನಿಗಳ ಗ್ಯಾಲರಿಯಲ್ಲಿ ಮಿಂಚಿನ ಸಂಚಲನ ಮೂಡಿಸಿದರು. 146.43ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು. ಅವರು ಕೆ.ಎಲ್. ರಾಹುಲ್ ಜೊತೆಗೆ 60 ರನ್ ಸೇರಿಸಿದರು. ಕೊನೆಯ ಹಂತದ ಓವರ್‌ನಲ್ಲಿ ರವೀಂದ್ರ ಜಡೇಜ (35; 24ಎ) ಮಿಂಚಿದರು.

ವಿಕೆಟ್ ಪಡೆದ ಸಂಭ್ರಮದಲ್ಲಿ ಮೊಹಮ್ಮದ್ ಸಿರಾಜ್

ವಿಶ್ವಕಪ್: ಹೆಚ್ಚು ವಿಕೆಟ್ ಪಡೆದ ಭಾರತದ ಬೌಲರ್‌ಗಳು

ವಿಕೆಟ್	ಬೌಲರ್
45	ಮೊಹಮ್ಮದ್ ಶಮಿ
44	ಜಹೀರ್ ಖಾನ್
44	ಜಾವಗಲ್ ಶ್ರೀನಾಥ್
33	ಜಸ್‌ಪ್ರೀತ್ ಬೂಮ್ರಾ
31	ಅನಿಲ್ ಕುಂಬ್ಳೆ

ವಿಶ್ವಕಪ್: ಪೂರ್ಣ ಸದಸ್ಯ ರಾಷ್ಟ್ರಗಳ ಕನಿಷ್ಠ ಮೊತ್ತ

ಮೊತ್ತ	ಪಂದ್ಯ	ಸ್ಥಳ	ವರ್ಷ
55	ಶ್ರೀಲಂಕಾ–ಭಾರತ	ವಾಂಖೆಡೆ	2023
58	ಬಾಂಗ್ಲಾ–ವೆಸ್ಟ್ ಇಂಡೀಸ್	ಮೀರ್‌ಪುರ್	2011
74	ಪಾಕಿಸ್ತಾನ–ಇಂಗ್ಲೆಂಡ್	ಅಡಿಲೇಡ್	1992

ಏಕದಿನ ವಿಶ್ವಕಪ್: ಹೆಚ್ಚು ಪಂಚಗುಚ್ಛಗಳು

ಆಟಗಾರ	ದೇಶ	ಐದು ವಿಕೆಟ್
ಮಿಚೆಲ್ ಸ್ಟಾರ್ಕ್	ಆಸ್ಟ್ರೇಲಿಯಾ	3
ಮೊಹಮ್ಮದ್ ಶಮಿ	ಭಾರತ	3

ಏಕದಿನ ಕ್ರಿಕೆಟ್‌ನಲ್ಲಿ ದೊಡ್ಡ ಅಂತರದ ಜಯ

ರನ್	ಪಂದ್ಯ	ತಾಣ	ವರ್ಷ
317	ಭಾರತ–ಶ್ರೀಲಂಕಾ	ತಿರುವನಂತಪುರ	2023
309	ಆಸ್ಟ್ರೇಲಿಯಾ–ನೆದರ್ಲೆಂಡ್ಸ್	ದೆಹಲಿ	2023 (ವಿಶ್ವಕಪ್)
304	ಜಿಂಬಾಬ್ವೆ–ಯುಎಇ	ಹರಾರೆ	2023
302	ಭಾರತ–ಶ್ರೀಲಂಕಾ	ವಾಂಖೆಡೆ	2023 (ವಿಶ್ವಕಪ್)
290	ನ್ಯೂಜಿಲೆಂಡ್–ಐರ್ಲೆಂಡ್	ಅಬೆರ್‌ಡೀನ್	2008
275	ಆಸ್ಟ್ರೇಲಿಯಾ–ಅಫ್ಗಾನಿಸ್ತಾನ	ಪರ್ತ್	2015 (ವಿಶ್ವಕಪ್)

ಸ್ಕೋರ್ ಕಾರ್ಡ್

ಭಾರತ 8ಕ್ಕೆ357 (50 ಓವರ್‌ಗಳಲ್ಲಿ)
ರೋಹಿತ್ ಬಿ ಮಧುಶಂಕಾ 4 (2ಎ, 4X1)
ಗಿಲ್ ಸಿ ಮೆಂಡಿಸ್ ಬಿ ಮಧುಶಂಕಾ 92 (92ಎ, 4X11, 6X2)
ಕೊಹ್ಲಿ ಸಿ ಪಥುಮ್ ಬಿ ಮಧುಶಂಕಾ 88 (94ಎ, 4X11)
ಶ್ರೇಯಸ್ ಸಿ ತೀಕ್ಷಣ ಬಿ ಮಧುಶಂಕಾ 82 (56ಎ, 4X3, 6X6)
ರಾಹುಲ್ ಸಿ ಹೇಮಂತ ಬಿ ಚಾಮಿರಾ 21 (19ಎ, 4X2)
ಸೂರ್ಯಕುಮಾರ್ ಸಿ ಮೆಂಡಿಸ್ ಬಿ ಮಧುಶಂಕಾ 12 (9ಎ, 4X2)
ಜಡೇಜ ರನ್‌ಔಟ್ (ಸಮರವಿಕ್ರಮ/ಮೆಂಡಿಸ್) 35 (24ಎ, 4X1, 6X1)
ಶಮಿ ರನ್ ಔಟ್ (ಮೆಂಡಿಸ್) 2 (4ಎ)
ಬೂಮ್ರಾ ಔಟಾಗದೆ 1 (1ಎ)
ಇತರೆ: 20 (ಬೈ 5, ಲೆಗ್‌ಬೈ 6, ವೈಡ್ 8, ನೋಬಾಲ್ 1)
ವಿಕೆಟ್ ಪತನ: 1–4 (ರೋಹಿತ್ ಶರ್ಮಾ; 0.2), 2–193 (ಶುಭಮನ್ ಗಿಲ್; 29.6), 3–196 (ವಿರಾಟ್ ಕೊಹ್ಲಿ; 31.3), 4–256 (ಕೆ. ಎಲ್. ರಾಹುಲ್;39.2), 5– 276 (ಸೂರ್ಯಕುಮಾರ್ ಯಾದವ್; 41.3), 6–333 (ಶ್ರೇಯಸ್ ಅಯ್ಯರ್; 47.3), 7–355 (ಮೊಹಮ್ಮದ್ ಶಮಿ; 49.3), 8–357 (ರವೀಂದ್ರ ಜಡೇಜ; 49.6).
ಬೌಲಿಂಗ್: ದಿಲ್ಶಾನ್ ಮಧುಶಂಕಾ 10–0–80–5, ದುಷ್ಮಂತ ಚಮೀರಾ 10–2–71–1, ಕಸುನ್ ರಜಿತಾ 9–0–66–0, ಏಂಜೆಲೊ ಮ್ಯಾಥ್ಯೂಸ್3–0–11–0, ಮಹೀಷ್ ತೀಕ್ಷಣ 10–0–67–0, ದುಶಾನ್ ಹೇಮಂತ 8–0–52–0

ಶ್ರೀಲಂಕಾ 55 (19.4 ಓವರ್‌ಗಳಲ್ಲಿ)
ಪಥುಮ್ ಎಲ್‌ಬಿಡಬ್ಲ್ಯು ಬಿ ಬೂಮ್ರಾ 0 (1ಎ)
ಕರುಣರತ್ನೆ ಎಲ್‌ಬಿಡಬ್ಲ್ಯು ಬಿ ಸಿರಾಜ್ 0 (1ಎ)
ಮೆಂಡಿಸ್ ಬಿ ಸಿರಾಜ್ 1 (10ಎ)
ಸಮರವಿಕ್ರಮ 0 (4ಎ)
ಅಸಲಂಕಾ ಸಿ ಜಡೇಜ ಬಿ ಶಮಿ 1 (24ಎ)
ಮ್ಯಾಥ್ಯೂಸ್ ಬಿ ಶಮಿ 12 (25ಎ, 4X1)
ಹೇಮಂತ ಸಿ ರಾಹುಲ್ ಬಿ ಶಮಿ 0 (1ಎ)
ಚಮೀರಾ ಸಿ ರಾಹುಲ್ ಬಿ ಶಮಿ 0 (5ಎ)
ಮಹೀಷ ಔಟಾಗದೆ 12 (23ಎ, 4X2)
ರಜಿತಾ ಸಿ ಗಿಲ್ ಬಿ ಶಮಿ 14 (17ಎ, 4X2)
ಮಧುಶಂಕಾ ಸಿ ಶ್ರೇಯಸ್ ಬಿ ಜಡೇಜ 5 (6ಎ, 4X1)
ಇತರೆ: 10 (ಬೈ 5, ಲೆಗ್‌ಬೈ 1, ವೈಡ್ 4)
ವಿಕೆಟ್ ಪತನ: 0–1 (ಪಥುಮ್ ನಿಸಾಂಕ; 0.1), 2–2 (ಕರುಣರತ್ನೆ; 1.1), 2–3 (ಸದೀರ ಸಮರವಿಕ್ರಮ; 1.5), 3–4 (ಕುಸಲ ಮೆಂಡಿಸ್; 3.1), 5–14 (ಚರಿತ ಅಸಲಂಕಾ; 9.3), 6–14 (ದುಶಾನ್ ಹೇಮಂತ; 9.4),7–22 (ದುಷ್ಮಂತ ಚಮೀರಾ; 11.3), 8–29 (ಏಂಜೆಲೊ ಮ್ಯಾಥ್ಯೂಸ್; 13.1), 9–49 (ಕಸುನ್ ರಜಿತಾ; 17.6), 10–55 (ದಿಲ್ಶಾನ್ ಮಧುಶಂಕಾ; 19.4)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 5–1–8–1, ಮೊಹಮ್ಮದ್ ಸಿರಾಜ್ 7–2–15–3, ಮೊಹಮ್ಮದ್ ಶಮಿ 5–1–18–5, ಕುಲದೀಪ್ ಯಾದವ್ 2–0–3–0, ರವೀಂದ್ರ ಜಡೇಜ 0.4–0–4–1

ಫಲಿತಾಂಶ: ಭಾರತಕ್ಕೆ 302 ರನ್‌ಗಳ ಜಯ ಮತ್ತು 2 ಅಂಕ

ಸಚಿನ್ ದಾಖಲೆ ಮೀರಿದ ವಿರಾಟ್

ವಿರಾಟ್ ಕೊಹ್ಲಿ ಅವರು ಒಂದು ಕ್ಯಾಲೆಂಡರ್ ವರ್ಷದಲ್ಲಿ ಒಂದು ಸಾವಿರ ರನ್ ಗಳಿಸಿದ ಸಾಧನೆ ಮಾಡಿದರು. ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ಎಂಟನೇ ಬಾರಿ ಈ ಸಾಧನೆ ಮಾಡಿದರು.

ಸಚಿನ್ ತೆಂಡೂಲ್ಕರ್ ಅವರ ದಾಖಲೆಯನ್ನು ಕೊಹ್ಲಿ ಮೀರಿ ನೀತರು. ತೆಂಡೂಲ್ಕರ್ ಏಳು ಬಾರಿ ಮಾಡಿದ್ದ ದಾಖಲೆಯನ್ನು ಕೊಹ್ಲಿ ಮುರಿದರು. ವಿರಾಟ್ 2011, 2012, 2013, 2014, 2017, 2018 ಮತ್ತು 2019ರಲ್ಲಿ ಕ್ರಮವಾಗಿ ಸಾವಿರ ರನ್‌ಗಳನ್ನು ಕಲೆಹಾಕಿದ್ದರು. ತೆಂಡೂಲ್ಕರ್ 1994, 1996, 1997, 1998, 2000, 2003 ಮತ್ತು 2007ರಲ್ಲಿ ಈ ಸಾಧನೆ ಮಾಡಿದ್ದರು.

ಮನೆಗೆ ಮರಳಿದ ಮಾರ್ಷ್

ಅಹಮದಾಬಾದ್ (ಪಿಟಿಐ): ಆಸ್ಟ್ರೇಲಿಯಾ ತಂಡದ ಆಲ್‌ರೌಂಡರ್ ಮಿಚೆಲ್ ಮಾರ್ಷ್ ವೈಯಕ್ತಿಕ ಕಾರಣಗಳಿಗಾಗಿ ತಂಡದಿಂದ ಬಿಡುವು ಪಡೆದು ಸ್ವದೇಶಕ್ಕೆ ಮರಳಿದ್ದಾರೆ.

ಗ್ಲೆನ್ ಮ್ಯಾಕ್ಸ್‌ವೆಲ್ ಗಾಯಗೊಂಡು ಅಲಭ್ಯರಾಗಿರುವ ಬೆನ್ನಲ್ಲಿಯೇ ಮಾರ್ಷ್ ಗೈರುಹಾಜರಿಯು ತಂಡವನ್ನು ಕಾಡುವ ಸಾಧ್ಯತೆ ಇದೆ. ಮಾರ್ಷ್ ಅವರು ಟೂರ್ನಿಯ ಉಳಿದ ಪಂದ್ಯಗಳಿಗೆ ಲಭ್ಯರಾಗುವ ಕುರಿತ ಯಾವುದೇ ಮಾಹಿತಿಯನ್ನೂ ಕ್ರಿಕೆಟ್ ಆಸ್ಟ್ರೇಲಿಯಾ (ಸಿಎ) ನೀಡಿಲ್ಲ. ಇದರಿಂದಾಗಿ ಮುಂದಿನ ಪಂದ್ಯಗಳಿಗೆ ಮಾರ್ಷ್ ಬದಲು ಕ್ಯಾಮರಾನ್ ಗ್ರೀನ್ ಸ್ಥಾನ ಪಡೆಯುವ ಸಾಧ್ಯತೆ ಇದೆ.

ಕಿವೀಸ್ ತಂಡಕ್ಕೆ ಜೆಮಿಸನ್

ನವದೆಹಲಿ (ಪಿಟಿಐ): ವೇಗದ ಬೌಲರ್ ಕೈಲ್ ಜೆಮಿಸನ್ ಅವರನ್ನು ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡುತ್ತಿರುವ ನ್ಯೂಜಿಲೆಂಡ್ ಕ್ರಿಕೆಟ್ ತಂಡಕ್ಕೆ ಸೇರ್ಪಡೆ ಮಾಡಲಾಗಿದೆ.

ತಂಡದಲ್ಲಿದ್ದ ವೇಗಿ ಮ್ಯಾಟ್ ಹೆನ್ರಿ ಅವರು ಮುಂದಿನ ಪಂದ್ಯಗಳಿಗೆ ಲಭ್ಯ ರಾಗುವುದು ನಿಶ್ಚಿತವಿಲ್ಲ. ಆದ್ದರಿಂದ ಕೈಲ್ ಅವರನ್ನು ತಂಡವು ಕರೆಸಿಕೊಂಡಿದೆ.

6.8 ಅಡಿ ಎತ್ತರದ ಕೈಲ್ ಅವರು ಗುರುವಾರ ಬೆಂಗಳೂರಿಗೆ ಆಗಮಿಸಿದರು. ಅವರು ಶನಿವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಪಾಕಿಸ್ತಾನ ಎದುರು ಕಣಕ್ಕಿಳಿಯುವ ಸಾಧ್ಯತೆ ಇದೆ. ಇದೇ 9ರಂದು ಬೆಂಗಳೂರಿನಲ್ಲಿಯೇ ಕಿವೀಸ್ ತಂಡವು ಶ್ರೀಲಂಕಾ ಎದುರು ಆಡುವುದು.

ಲಖನೌನಲ್ಲಿ ಸ್ಕಾಟ್ ಎಡ್ವರ್ಡ್–ಶಹೀದಿ ಬಳಗಗಳ ಹಣಾಹಣಿ ಇಂದು

ಡಚ್ ಪಡೆಗೆ ಅಫ್ಗನ್ ಸವಾಲು

ಲಖನೌ (ಪಿಟಿಐ): ಈ ಬಾರಿಯ ವಿಶ್ವಕಪ್ ಟೂರ್ನಿಯಲ್ಲಿ ಘಟಾನುಘಟಿಗಳಿಗೆ ಆಘಾತ ನೀಡಿರುವ ಎರಡು ತಂಡಗಳಾದ ಅಫ್ಗಾನಿಸ್ತಾನ ಮತ್ತು ನೆದರ್ಲೆಂಡ್ಸ್ ಶುಕ್ರವಾರ ಮುಖಾಮುಖಿಯಾಗಲಿವೆ.

ಏಕನಾ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಉತ್ತಮ ಸ್ಪಿನ್ನರ್‌ಗಳು ಇರುವ ಅಫ್ಗಾನಿಸ್ತಾನ ತಂಡವು ಗೆಲುವಿನ ನೆಚ್ಚಿನ ತಂಡವಾಗಿದೆ. ಆದರೆ ದಕ್ಷಿಣ ಆಫ್ರಿಕಾದಂತಹ ಬಲಿಷ್ಠ ತಂಡವನ್ನೇ ಮಣಿಸಿರುವ ನೆದರ್ಲೆಂಡ್ಸ್ ತಂಡವೂ ಗೆಲ್ಲುವ ಛಲದಲ್ಲಿದೆ.

ಹಷ್ಮತ್‌ವುಲ್ಲಾ ಶಹೀದಿ ನಾಯಕತ್ವದ ಅಫ್ಗನ್ ತಂಡವು ಆಡಿರುವ 6 ಪಂದ್ಯಗಳಲ್ಲಿ ಮೂರರಲ್ಲಿ ಗೆದ್ದು, ಮೂರರಲ್ಲಿ ಸೋತಿದೆ. ಇದರಿಂದಾಗಿ ಆರನೇ ಸ್ಥಾನದಲ್ಲಿದೆ. ಸೆಮಿಫೈನಲ್‌ಗೆ ಪ್ರವೇಶಿಸುವ ಅಲ್ಪ ಅವಕಾಶ ಇನ್ನೂ ಈ ತಂಡಕ್ಕೆ ಇದೆ.

ಹಾಲಿ ಚಾಂಪಿಯನ್ ಇಂಗ್ಲೆಂಡ್, ಪಾಕಿಸ್ತಾನ ಮತ್ತು ಶ್ರೀಲಂಕಾ ತಂಡಗಳನ್ನು ಮಣಿಸಿ ಅಪಾರ ಆತ್ಮವಿಶ್ವಾಸದಲ್ಲಿ ಅಫ್ಗನ್ ತಂಡವಿದೆ. ಇಬ್ರಾಹಿಂ ಜದ್ರಾನ್, ರೆಹಮ್ ಶಾ, ನಾಯಕ ಶಹೀದಿ ಮತ್ತು ಅಜ್ಮತ್‌ವುಲ್ಲಾ ಒಮರ್‌ಝೈ ಅವರು ಅಮೋಘ ಲಯದಲ್ಲಿದ್ದಾರೆ. ಅದ್ದರಿಂದ ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ಉತ್ತಮವಾಗಿದೆ.

ಎಲ್ಲಕ್ಕಿಂತ ಪ್ರಮುಖವಾಗಿ ತಂಡದ ಅನುಭವಿ ಸ್ಪಿನ್ನರ್ ರಶೀದ್ ಖಾನ್, ಮೊಹಮ್ಮದ್ ನಬಿ ಹಾಗೂ ವೇಗಿ ಫಜಲ್ ಹಕ್ ಫರೂಕಿ ಅವರು ಜೊತೆಯಾಟಗಳನ್ನು ಮುರಿಯುವ ಸಮರ್ಥರಾಗಿದ್ದಾರೆ. ಆದ್ದರಿಂದ ನೆದರ್ಲೆಂಡ್ಸ್ ಬ್ಯಾಟರ್‌ಗಳಿಗೆ ಇವರಿಂದ ಕಠಿಣ ಸವಾಲು ಎದುರಾಗುವ ಸಾಧ್ಯತೆ ಇದೆ.

ದಕ್ಷಿಣ ಆಫ್ರಿಕಾ ಮತ್ತು ಬಾಂಗ್ಲಾದೇಶ ಎದುರು ಜಯಿಸಿರುವ ನೆದರ್ಲೆಂಡ್ಸ್ ತಂಡವು ಎಂಟನೇ ಸ್ಥಾನದಲ್ಲಿದೆ. ನಾಲ್ಕರ ಘಟ್ಟಕ್ಕೆ ಹೋಗುವ ಅವಕಾಶ ಈ ತಂಡಕ್ಕೆ ಕಡಿಮೆ ಇದೆ. ಆದರೆ ನಾಯಕ ಸ್ಕಾಟ್ ಎಡ್ವರ್ಡ್ಸ್, ಸೈಬ್ರ್ಯಾಂಡ್, ವಿಕ್ರಂಜೀತ್ ಸಿಂಗ್ ಅವರು ಬ್ಯಾಟಿಂಗ್ ವಿಭಾಗದ ಪ್ರಮುಖರಾಗಿದ್ದಾರೆ.

ತಂಡದ ವೇಗಿ ಪಾಲ್ ವ್ಯಾನ್ ಮೀಕಿರನ್ ಅವರು ಏಕನಾ ಕ್ರೀಡಾಂಗಣದ ಪಿಚ್ ಮರ್ಮ ಅರಿತು ಬೌಲಿಂಗ್ ಮಾಡಿದರೆ ಅಫ್ಗನ್ ಬ್ಯಾಟರ್‌ಗಳಿಗೆ ಕಠಿಣ ಸವಾಲು ಎದುರಾಗಬಹುದು. ಈ ತಂಡದ ಆಟಗಾರರು ಇದು ವರೆಗೆ ಉತ್ತಮ ಫೀಲ್ಡಿಂಗ್ ಪ್ರದರ್ಶಿಸಿದ್ದಾರೆ. ಇದು ಕೂಡ ಎದುರಾಳಿ ಬ್ಯಾಟರ್‌ಗಳ ಒತ್ತಡ ಹೆಚ್ಚಿಸಬಹುದು.

ಪಂದ್ಯ ಆರಂಭ: ಮಧ್ಯಾಹ್ನ 2
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಅಫ್ಗಾನಿಸ್ತಾನ ತಂಡದ ನವೀನ್ ಉಲ್ ಹಕ್ ಮತ್ತು ರಶೀದ್ ಖಾನ್ ಬೌಲಿಂಗ್ ಅಭ್ಯಾಸ ನಡೆಸಿದರು (ಎಡ) ನೆದರ್ಲೆಂಡ್ಸ್ ತಂಡದ ಸ್ಕಾಟ್ ಎಡ್ವರ್ಡ್ಸ್ ಮತ್ತು ಸಹ ಆಟಗಾರರು –ಎಎಫ್‌ಪಿ ಚಿತ್ರ

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ಭಾರತ	7	7	0	0	14	2.102
ದಕ್ಷಿಣ ಆಫ್ರಿಕಾ	7	6	1	0	12	2.290
ಆಸ್ಟ್ರೇಲಿಯಾ	6	4	2	0	8	0.970
ನ್ಯೂಜಿಲೆಂಡ್	7	4	3	0	8	0.484
ಪಾಕಿಸ್ತಾನ	7	3	4	0	6	-0.024
ಅಫ್ಗಾನಿಸ್ತಾನ	6	3	3	0	6	-0.718
ಶ್ರೀಲಂಕಾ	7	2	5	0	4	-1.162
ನೆದರ್ಲೆಂಡ್ಸ್	6	2	4	0	4	-1.277
ಬಾಂಗ್ಲಾದೇಶ	7	1	6	0	2	-1.446
ಇಂಗ್ಲೆಂಡ್	6	1	5	0	2	-1.652

ರಾಷ್ಟ್ರೀಯ ಕ್ರೀಡಾಕೂಟದ ಈಜು ಸ್ಪರ್ಧೆ: ಶ್ರೀಹರಿ, ನೀನಾ ಕೂಟ ದಾಖಲೆ

ಶ್ರೀಹರಿ

ನೀನಾ

ಬೆಂಗಳೂರು: ಕರ್ನಾಟಕದ ಶ್ರೀಹರಿ ನಟರಾಜ್ ಮತ್ತು ನೀನಾ ವೆಂಕಟೇಶ್ ಅವರು ಗೋವಾದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದ ಈಜು ಸ್ಪರ್ಧೆಯಲ್ಲಿ ಕ್ರಮವಾಗಿ ಪುರುಷರ 100 ಮೀ. ಬ್ಯಾಕ್‌ಸ್ಟ್ರೋಕ್ ಮತ್ತು ಮಹಿಳೆಯರ 50 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ತಮ್ಮದೇ ಹೆಸರಿನಲ್ಲಿದ್ದ ಕೂಟ ದಾಖಲೆಯನ್ನು ಉತ್ತಮಪಡಿಸುವ ಜತೆಗೆ ಚಿನ್ನದ ಸಾಧನೆಗೆ ಪಾತ್ರರಾದರು. ಕರ್ನಾಟಕದ ಈಜುಪಟುಗಳು ಗುರುವಾರವೂ ಪದಕ ಬೇಟೆ ಮುಂದುವರಿಸಿದರು.

ಬೆಂಗಳೂರಿನ ಶ್ರೀಹರಿ ಅವರು 55.59 ಸೆಕೆಂಡ್‌ನಲ್ಲಿ ಗುರಿ ತಲುಪಿ 2022ರ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ತಮ್ಮದೇ ಹೆಸರಿನಲ್ಲಿದ್ದ 55.80 ಸೆ.ಗಳ ದಾಖಲೆಯನ್ನು ಉತ್ತಮಪಡಿಸಿದರು. ಮಹಾರಾಷ್ಟ್ರದ ರಿಷಭ್ ದಾಸ್ (57.37ಸೆ), ಕರ್ನಾಟಕದ ಎಸ್. ಶಿವ (57.41) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.

ನೀನಾ ವೆಂಕಟೇಶ್ ಅವರು 27.70 ಸೆಕೆಂಡ್‌ನಲ್ಲಿ ಗುರಿ ಮುಟ್ಟಿ, ಕಳೆದ ವರ್ಷದ ಕೂಟದಲ್ಲಿ ತಾವೇ ಸ್ಥಾಪಿಸಿದ್ದ (28.39 ಸೆ) ದಾಖಲೆಯನ್ನು ಸುಧಾರಿಸಿದರು. ಅವರು ಈ ಕೂಟದಲ್ಲಿ ನಾಲ್ಕನೇ ಚಿನ್ನವನ್ನು ತಮ್ಮದಾಗಿಸಿಕೊಂಡರು. ಕರ್ನಾಟಕದ ಮಾನವಿ ವರ್ಮಾ (27.90ಸೆ) ಬೆಳ್ಳಿ ಪದಕ ಗೆದ್ದರೆ, ಮಹಾರಾಷ್ಟ್ರದ ರುಜುತಾ ಖಾಡೆ (28.38 ಸೆ) ಕಂಚಿನ ಪಡೆದರು.

ಮಹಿಳೆಯರ 1,500 ಮೀ ಫ್ರೀಸ್ಟೈಲ್‌ನಲ್ಲಿ ದೆಹಲಿಯ ಭವ್ಯಾ ಸಚದೇವ (17ನಿ.40.82ಸೆ) ಅವರು ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು. 2015ರ ಕೂಟದಲ್ಲಿ ಮಹಾರಾಷ್ಟ್ರದ ಆಕಾಂಕ್ಷಾ ವೋರಾ (17ನಿ.42.44 ಸೆ) ನಿರ್ಮಿಸಿದ್ದ ದಾಖಲೆಯನ್ನು ಮುರಿದರು. ತೆಲಂಗಾಣದ ವೃತ್ತಿ ಅಗರ್‌ವಾಲ್ ಮತ್ತು ಕರ್ನಾಟಕ ಶಿರಿನ್ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಪುರುಷರ 800 ಫ್ರೀಸ್ಟೈಲ್‌ನಲ್ಲಿ ದೆಹಲಿಯ ಅನುಭವಿ ಈಜುಪಟು ಕುಶಾಗ್ರ ರಾವತ್ (8 ನಿ.07.43) ಕೂಟ ದಾಖಲೆಯ ಜತೆಗೆ ಚಿನ್ನದ ಸಾಧನೆ ಮಾಡಿದರು. ಕಳೆದ ವರ್ಷದ ಕೂಟದಲ್ಲಿ ಮಧ್ಯಪ್ರದೇಶದ ಅದ್ವೈತ್ ಪಾಗೆ (8 ನಿ. 12.24 ಸೆ) ನಿರ್ಮಿಸಿದ್ದ ದಾಖಲೆಯನ್ನು ಸರಿಸಿದರು. ಕೇರಳದ ಸಜನ್ ಪ್ರಕಾಶ್, ಅದ್ವೈತ್ ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದರು. ಕರ್ನಾಟಕದ ಅನೀಶ್ ಎಸ್. ಗೌಡ ನಾಲ್ಕನೇ ಸ್ಥಾನ ಗಳಿಸಿದರು.

ಟೇಬಲ್ ಟೆನಿಸ್: ಅರ್ಚನಾಗೆ ಚಿನ್ನ

ಕರ್ನಾಟಕದ ಅರ್ಚನಾ ಕಾಮತ್ ರಾಷ್ಟ್ರೀಯ ಕ್ರೀಡಾಕೂಟದ ಟೇಬಲ್ ಟೆನಿಸ್‌ನ ಮಹಿಳೆಯರ ಸಿಂಗಲ್ಸ್‌ನಲ್ಲಿ ಚಿನ್ನ ಗೆದ್ದಿದ್ದಾರೆ. ಅವರು ಫೈನಲ್‌ನಲ್ಲಿ ಮಹಾರಾಷ್ಟ್ರದ ದಿಯಾ ಚಿತಳೆ ಅವರನ್ನು 11-4, 11-7, 11-6, 7-11, 12-10 ರಿಂದ ಮಣಿಸಿ ಚಾಂಪಿಯನ್ ಆದರು.

ಹಾಕಿ: ಭಾರತಕ್ಕೆ ಮಣಿದ ಕೊರಿಯಾ

ರಾಂಚಿ (ಪಿಟಿಐ): ಮಹಿಳಾ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಈಗಾಗಲೇ ಸೆಮಿಫೈನಲ್ ಪ್ರವೇಶಿಸಿರುವ ಭಾರತ ತಂಡವು ಗುರುವಾರ ದಕ್ಷಿಣ ಕೊರಿಯಾ ತಂಡವನ್ನು 5–0 ಗೋಲುಗಳಿಂದ ಸುಲಭವಾಗಿ ಮಣಿಸಿತು. ಈ ಮೂಲಕ ಲೀಗ್ ಹಂತದ ಎಲ್ಲ ಐದೂ ಪಂದ್ಯಗಳಲ್ಲಿ ಭಾರತ ಜಯ ದಾಖಲಿಸಿತು.

ಭಾರತದ ಪರ ಸಲೀಮಾ (6ನೇ ಮತ್ತು 36ನೇ ನಿ), ನವನೀತ್ ಕೌರ್ (36ನೇ) ವಂದನಾ ಕಟಾರಿಯಾ (49ನೇ) ಮತ್ತು ನೇಹಾ (60ನೇ) ಗೋಲು ಗಳಿಸಿದರು.

ಭಾರತ ತಂಡವು 15 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿದ್ದು, ಶನಿವಾರ ನಡೆಯುವ ಸೆಮಿಫೈನಲ್‌ನಲ್ಲಿ ಮತ್ತೆ ದಕ್ಷಿಣ ಕೊರಿಯಾ ತಂಡವನ್ನು ಎದುರಿಸಲಿದೆ. ಕೊರಿಯಾ ಏಳು ಅಂಕಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ.

ಮತ್ತೊಂದು ಪಂದ್ಯದಲ್ಲಿ ಚೀನಾವು 1–0 ಯಿಂದ ಜಪಾನ್ ತಂಡವನ್ನು ಮಣಿಸಿತು. ಪಾಯಿಂಟ್ ಪಟ್ಟಿಯಲ್ಲಿ ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನದಲ್ಲಿರುವ ಚೀನಾ ಮತ್ತು ಜಪಾನ್ ಶನಿವಾರ ನಡೆಯುವ ಮತ್ತೊಂದು ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಚೆಸ್: ಗೆಲುವಿನೊಡನೆ ಅಗ್ರಸ್ಥಾನಕ್ಕೇರಿದ ವಿದಿತ್

ವಿದಿತ್ ಗುಜರಾತಿ

ಐಲ್ ಆಫ್ ಮ್ಯಾನ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ವಿದಿತ್ ಗುಜರಾತಿ ಅವರು ಅತ್ಯುತ್ತಮ ಆಟ ಮುಂದುವರಿಸಿ ಏಳನೇ ಸುತ್ತಿನಲ್ಲಿ ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್ ಅವರನ್ನು ಮಣಿಸಿದರು. ಆ ಮೂಲಕ ಫಿಡೆ ಗ್ರ್ಯಾಂಡ್ ಸ್ವಿಸ್ ಟೂರ್ನಿಯಲ್ಲಿ ಐದೂವರೆ ಪಾಯಿಂಟ್ಸ್ ಸಂಗ್ರಹಿಸಿ ಏಕಾಂಗಿಯಾಗಿ ಅಗ್ರಸ್ಥಾನಕ್ಕೇರಿದರು.

ಮಹಿಳೆಯರ ವಿಭಾಗದಲ್ಲಿ ಆರ್.ವೈಶಾಲಿ ಜಂಟಿ ಅಗ್ರಸ್ಥಾನಕ್ಕೇರಿದ್ದಾರೆ.

ಮೂರನೇ ಬೋರ್ಡ್‌ನಲ್ಲಿ ವಿದಿತ್ ಎದುರು ರೂಕ್ ಪಡೆಯಲು ಉಜ್ಬೇಕ್ ಆಟಗಾರ ಎರಡು 'ಮೈನರ್ ಪೀಸ್'ಗಳನ್ನು (ನೈಟ್, ಬಿಷಪ್‌ಗಳಿಗೆ ಈ ಪದ ಬಳಸುತ್ತಾರೆ) ಕಳೆದುಕೊಂಡರು. ನಂತರ ವಿದಿತ್ ಎದುರಾಳಿಯ ಮೇಲೆ ಒತ್ತಡ ಹೇರಿ 57 ನಡೆಗಳಲ್ಲಿ ಜಯಶಾಲಿಯಾದರು. ಮೊದಲ ಸುತ್ತಿನಲ್ಲಿ ಸೋತ ನಂತರ ವಿದಿತ್, ಐದು ಗೆಲುವು, ಒಂದು ಡ್ರಾ ಫಲಿತಾಂಶದೊಡನೆ ಅಜೇಯರಾಗಿ ಉಳಿದಿದ್ದಾರೆ.

ಈ ಗೆಲುವಿನೊಡನೆ ಮಹಾರಾಷ್ಟ್ರದ ಆಟಗಾರನಿಗೆ ಕ್ಯಾಂಡಿಡೇಟ್ಸ್ ಟೂರ್ನಿಗೆ ಇರುವ ಎರಡು ಸ್ಥಾನಗಳಲ್ಲಿ ಒಂದನ್ನು ಪಡೆಯುವ ಅವಕಾಶ ಉಜ್ವಲವಾಗಿದೆ. ಇನ್ನು ನಾಲ್ಕು ಸುತ್ತಿನ ಆಟಗಳು ಬಾಕಿವುಳಿದಿವೆ.

ಮೊದಲ 5 ಬೋರ್ಡ್‌ಗಳಲ್ಲಿ ಉಳಿದ ನಾಲ್ಕು ಪಂದ್ಯಗಳು ಡ್ರಾ ಆದವು. ಭಾರತದ ಇನ್ನೊಬ್ಬ ಆಟಗಾರ ಅರ್ಜುನ್ ಇರಿಗೇಶಿ ನಾಲ್ಕನೇ ಬೋರ್ಡ್‌ನಲ್ಲಿ ಆ್ಯಂಡ್ರಿ ಇಸಿಪೆಂಕೊ (ರಷ್ಯಾ) ಎದುರು 'ಡ್ರಾ' ಮಾಡಿಕೊಂಡರು. ಅವರು ಐದು ಪಾಯಿಂಟ್ಸ್ ಸಂಗ್ರಹಿಸಿದ್ದು ಇತರ 10 ಆಟಗಾರರೊಂದಿಗೆ ಎರಡನೆ ಸ್ಥಾನದಲ್ಲಿದ್ದಾರೆ.

ಅರ್ಜುನ್, ಇಸಿಪೆಂಕೊ ಜೊತೆ ಪೋಲೆಂಡ್‌ನ ರಾಡೊಸ್ಲಾವ್ ವೊಯ್ತಾಷೆಕ್, ಅಮೆರಿಕದ ಫ್ಯಾಬಿಯಾನೊ ಕರುವಾನ, ಹಿಕಾರು ನಕಾಮುರಾ, ಸರ್ಬಿಯಾದ ಅಲೆಕ್ಸಾಂಡರ್ ಪ್ರಾಡ್ಕೆ, ಫ್ರಾನ್ಸ್‌ನ ಎಟಿನೆ ಬ್ಯಾಕ್ರೊಟ್, ಜರ್ಮನಿಯ ವಿನ್ಸೆಂಟ್ ಕೀಮರ್, ರುಮೇನಿಯಾದ ಡೇನಿಯಲ್ ಬೊಗ್ದಾನ್ ಡೇಕ್, ಉಕ್ರೇನ್‌ನ ಯೂರಿ ಕುಝುಬೋವ್ ಮತ್ತು ರಷ್ಯಾದ ವ್ಲಾದಿಮಿರ್ ಫೆಡೊಸೀವ್ ತಲಾ ಐದು ಅಂಕ ಗಳಿಸಿದ್ದಾರೆ.

ಮೊದಲ ಬೋರ್ಡ್‌ನಲ್ಲಿ ವೊಯ್ತಾಷೆಕ್, ಕರುವಾನ ಜೊತೆ, ಎರಡನೇ ಬೋರ್ಡ್‌ನಲ್ಲಿ ನಕಾಮುರಾ, ಸರ್ಬಿಯಾದ ಅಲೆಕ್ಸಾಂಡರ್ ಪ್ರಾಡ್ಕೆ ಜೊತೆ ಡ್ರಾ ಮಾಡಿಕೊಂಡರು. ಆರರಿಂದ ಹತ್ತರವರೆಗಿನ ಬೋರ್ಡ್‌ಗಳಲ್ಲಿ ನಿರ್ಣಾಯಕ ಫಲಿತಾಂಶಗಳು ಬಂದು ಬಿಳಿ ಕಾಯಿಗಳಲ್ಲಿ ಆಡಿದ ಆಟಗಾರರೇ ವಿಜಯಿಯಾದರು.

ಇರಾನ್‌ನ ಪರ್ಹಾಮ್ ಮಘಸುಡ್ಲೂ (4.5), ಭಾರತದ ಅರವಿಂದ ಚಿದಂಬರಂ (3.5)ಅವರನ್ನು, ಲೆವೊನ್ ಅರೋನಿಯನ್ (ಅಮೆರಿಕ) ಅವರು ಭಾರತದ ಎಸ್.ಎಲ್. ನಾರಾಯಣನ್ ಅವರನ್ನು ಸೋಲಿಸಿದರು. ಪ್ರಜ್ಞಾನಂದ (4) ಮತ್ತು ಗುಕೇಶ್ (3) ಮೊದಲ ಜಯ ದಾಖಲಿಸಿದರೆ, ರೋನಕ್ ಸಾಧ್ವಾನಿ ಸೋಲನುಭವಿಸಿದರು.

ಮಹಿಳೆಯರ ವಿಭಾಗದಲ್ಲಿ ವೈಶಾಲಿ, ಕಜಕಸ್ತಾನದ ಬಿಬಿಸಾರಾ ಅಸೌಬಯೇವಾ ಅವರನ್ನು ಸೋಲಿಸಿದರು. ಐದೂವರೆ ಪಾಯಿಂಟ್ಸ್ ಸಂಗ್ರಹಿಸಿರುವ ಅವರು ಉಕ್ರೇನ್‌ನ ಅನ್ನಾ ಮುಝಿಚುಕ್ ಮತ್ತು ಬಲ್ಗೇರಿಯಾದ ಅಂಟೊನೇಟಾ ಸ್ಟೆಫಾನೊವಾ ಜೊತೆ ಅಗ್ರಸ್ಥಾನಕ್ಕೇರಿದರು.

THE QUEEN'S COLLECTION
ಹ್ಯಾಂಡ್ ಕ್ರಾಫ್ಟೆಡ್ ಡಿಸೈನರ್
ಪ್ಯೂರ್ ರೇಷ್ಮೆ ಸೀರೆಗಳು
TANEIRA
A TATA PRODUCT
*Terms and conditions apply
ನಿಮ್ಮ ಖರೀದಿಯೊಂದಿಗೆ ಪಡೆಯಿರಿ ತನಿಷ್ಕ್ ಗೋಲ್ಡ್ ಕಾಯಿನ್ ಮತ್ತು ಇತರ ಆಕರ್ಷಕ ಕೊಡುಗೆಗಳು*
ಸೀರೆಗಳು | ಬ್ಲೌಸ್‌ಗಳು | ಕುರ್ತಾ ಸೆಟ್‌ಗಳು
Shop online at TANEIRA.com
+91 8147349464
Shop on call 1800 266 0123
BANGALORE: Indiranagar: 283, 100 Feet Road, HAL 2nd Stage, Ph: 080-48540026 | Jayanagar: 3rd Block, 11th Main Road, Ph: 080-48528312 | Malleshwaram: 116/5, 11th Cross, Margosa Road, Ph: 080-49703080 | Orion Mall: 116, 2nd Floor, Dr. Rajkumar Road, Ph: 080-22682310 | Phoenix Market City Mall: LG-28 Lower Ground Floor, Mahadevpura, Ph: 080-49626263 | HSR layout: No.818, 27th Main Road, 1st Sector, Ph: 080-29913275 | Kammanahalli: 401/B, Kammanahalli Main Road, HRBR Layout 2nd Block, Near Tanishq Showroom, Ph: 080-46014779 | Banashankari 3rd Stage: 298, 7th Block, 100 Ft Ring Road, Ph: 8904431212 | Now open in Phoenix Mall of Asia: S-10, Second Floor, Ph: 080-68572624 | Now open in Sarjapur Road: No.60, Plot No.1, Doddakanneli Village, Varthur Road, Ph: 9591934592
HDFC BANK
FESTIVE TREATS
Avail 10% Instant Discount*
Valid on HDFC Bank
Credit Cards & Easy EMI
Scan QR code to shop this collection online. Visit taneira.com

ಕಲ್ಯಾಣ್
ದೀಪಾವಳಿ
1 GRAM
GOLD COIN FREE
WITH EVERY ₹50K PURCHASE
T&C Apply
APPLICABLE ON MINIMUM PURCHASE VALUE OF ₹1 LAKH
GRAMMAGE OF FREE GOLD COINS WILL VARY AS PER THE MAKE OF THE ORNAMENT
FOR MORE DETAILS CONTACT US ON TOLL FREE NUMBER: 1800 425 7333 | WWW.KALYANJEWELLERS.NET | FOLLOW US ON
BUY ONLINE @ WWW.CANDERE.COM | FOR INSTITUTIONAL REQUIREMENTS, WRITE TO B2BINDIA@KALYANJEWELLERS.NET

YAMAHA
RACING
The call of the BLUE
ಕಡಿಮೆ ಡೌನ್ ಪೇಮೆಂಟ್
₹7999*
ಈ ಹಬ್ಬದ ಸಮಯವನ್ನು
ಹೊಸ ಬಣ್ಣಗಳೊಂದಿಗೆ
ಸಂಭ್ರಮಿಸಿ
FZ-S FI
VERSION 4.0
*Offer applicable on FZSFI V3 & FZSFI V4 (selected colors) only. Other T&C apply.
TRACTION CONTROL SYSTEM
YAMAHA MOTORCYCLE CONNECT
ಈಗ ಎರಡು ಹೊಸ
ಬಣ್ಣಗಳಲ್ಲಿ ಲಭ್ಯ.
Dark Matte Blue
Matte Black
Bangalore: Garuda Wheels, Hoskote - 9035040171 | Whitefield Yamaha, Whitefield - 9606061054 | Mahadevapura - 9148086668 | Motoworld, Bommanahalli - 08069643030 | Chandapura - 08069643030 | Bangalore Wheels, Rajajinagar - 9964156618 | Vijayanagar - 9611920002 | Malathahalli - 9916610017 | Kengeri - 9916610022 | Perfect Riders, Lalbagh Road - 8497816000 | Jayanagar - 8497816000 | Pacer Yamaha, Hebbal - 6360237411 | Kalyan Nagar - 9902607629 | RR. Nagar - 7624818307 | Vidyaranyapura - 9036690334 | Vinayak Motors, Domlur - 9591072222 | Kormangala - 9035961010 | Laxmi International, Bannerghatta Road - 9739364819 | Chandan Motors, Banashankari - 9606861911 | Geetha Motors, Nelamangala - 7619628882 | Peenya - 8951954565 | Panache Enterprises - Indiranagar - 9844011961 | Marathahalli - 9844011961 | Yamaha Automotives, K R Puram - 8088448844 | Srijaya Motors, Yalahanka - 7406622213/18 | Anurag Motors, Bull Temple Road - 9845151508 | Sree Geetha Motors, Tumkur - 6364885726 | Sri Rv Advent Ride, Kolar - 9071374827 | Xtreme Motors, Chikaballapur - 9353279001 | Yamaha Bike Corner: Varthur, Touch Yamaha - 9986547353 | Anekal, Anekal Yamaha Motors - 9972909455 | Devanahalli, Nandi Bikes - 9739030606 | Magadi, Sri Narashima Motors - 9482090890 | Tiptur, Jenukallu Yamaha - 7892862641 | Mulbagal, Sri Rv Advent Ride - 9071374830 | Kunigal, Manjunathaswamy Yamaha - 7411979755 | Chintamani, Xtreme Motors - 9353279001 | Attibele, Moto World - 8884452700 | Dommasandra, Moto World - 8884452899.

JOS ALUKKAS
ಆಹಾ... ದೀಪಾವಳಿ
ದೀಪಾವಳಿ ಸ್ಪೆಷಲ್ ಎಡಿಷನ್ ವಜ್ರದ ನೆಕ್ಲೆಸ್
ಉಚಿತ ಬೆಳ್ಳಿ ಚಿನ್ನದ ಖರೀದಿಯೊಂದಿಗೆ
ರೂ.1,77,777 ರಿಂದ ಪ್ರಾರಂಭ
ರೂ.1,04,999 ರಿಂದ ಪ್ರಾರಂಭ
ಉಚಿತ ಚಿನ್ನದ ನಾಣ್ಯ ವಜ್ರದ ಪೆಂಡೆಂಟ್ ವಜ್ರದ ನೆಕ್ಲೆಸ್ ವಜ್ರದ ಖರೀದಿಯೊಂದಿಗೆ
ವಜ್ರಗಳ ಮೇಲೆ 20% ರಿಯಾಯಿತಿ
ಪ್ಲಾಟಿನಂ ಆಭರಣಗಳಿಗೆ 7% ರಿಯಾಯಿತಿ
100% HUID ಆಭರಣಕ್ಕೆ ಎಕ್ಸ್‌ಚೇಂಜ್ ಮಾಡಿಕೊಳ್ಳಿ
Conditions apply
THE JEWELLERS' ASSOCIATION BENGALURU
*ಬಂಪರ್ ಬಹುಮಾನಗಳು *1 ಕೆಜಿ ಚಿನ್ನ *5 ಕೆಜಿ ಬೆಳ್ಳಿ *ಹುಂಡೈ ಗ್ರಾಂಡ್ i10 ನಿಯೋಸ್
ಜೊತೆಗೆ 4 ಸಾಪ್ತಾಹಿಕ ಡ್ರಾಗಳು, *1.5 ಕೆಜಿ ಚಿನ್ನ ಮತ್ತು *40 ಕೆಜಿ ಬೆಳ್ಳಿ ಮೌಲ್ಯದ ಬಹುಮಾನಗಳು
3rd Block, JAYANAGAR, Ph: 080-41539802 | DICKENSON ROAD, Ph: 080-25552281 | RAJAJINAGAR 1ST BLOCK, Ph: 080-23192319
Forum Mall, KANAKAPURA ROAD, Ph: 080-6836 5475 | KAMMANAHALLI MAIN ROAD, Ph: 080-22204916 | Old Madras Road,
K.R.PURAM, Ph: 080-22440916 | HOSUR: Nethaji Road. Ph: 04344 - 227491. Shop online at www.josalukkasonline.com
KARNATAKA | ANDHRA PRADESH | TELANGANA | TAMIL NADU | PUDUCHERRY | KERALA
ಜೋಸ್ ಆಲುಕ್ಕಾಸ್
A TRADITION OF FINE JEWELLERY